ಅಧ್ಯಾಯ ೧೭

# ಪ್ರೇಕ್ಷಣೀಯ ಸ್ಥಳಗಳು

**ಪೀಠಿಕೆ:** ಕರ್ನಾಟಕದ ಪಶ್ಚಿಮಭಾಗದಲ್ಲಿ ದಕ್ಷಿಣೋತ್ತರವಾಗಿ ಹರಡಿಕೊಂಡಿರುವ ಕರಾವಳಿ ಪ್ರದೇಶದ ದಕ್ಷಿಣ ಭಾಗವಾಗಿರುವ ದಕ್ಷಿಣ ಕನ್ನಡ ಜಿಲ್ಲೆಯು ಭೌಗೋಳಿಕವಾಗಿ, ಚಾರಿತ್ರಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ವೈವಿಧ್ಯತೆಯಿಂದ ಕೂಡಿದ್ದು ಶ್ರೀಮಂತವಾಗಿದೆ. ನೀಲಿ ಆಗಸವನ್ನು ಸದಾ ಪ್ರತಿಬಿಂಬಿಸುವ ನೀಲ್ಗಡಲು ಪಶ್ಚಿಮದಲ್ಲಿದ್ದರೆ, ಸಮೃದ್ಧ ವನಸಿರಿಯಿಂದ ಸದಾ ಕಂಗೊಳಿಸುವ ಮಲೆನಾಡ ಐಸಿರಿಯು ಪೂರ್ವದಲ್ಲಿದೆ. ಇದರಿಂದಾಗಿ, ಕರಾವಳಿ ಪ್ರದೇಶವನ್ನು "ನೀಲಿ–ಹಸಿರುಗಳ ಚೆನ್ನಾಡು" ಎಂದೂ ವರ್ಣಿಸಲಾಗುತ್ತಿದ್ದು, ಇದು ದಕ್ಷಿಣ ಕನ್ನಡ ಜಿಲ್ಲೆಗೂ  ಅನ್ವಯಿಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯು ಭೌಗೋಳಿಕವಾಗಿ ನಿಸರ್ಗದತ್ತ ಗಿರಿಧಾಮಗಳಿಂದಾಗಿ, ಕಡಲಂಚಿನ ಬೀಚುಗಳಿಂದಾಗಿ, ಚಾರಿತ್ರಿಕ ಹಿರಿಮೆಯ ತಾಣಗಳಿಂದಾಗಿ, ಧಾರ್ಮಿಕ ಮಹಿಮೆಯ ತೀರ್ಥಕ್ಷೇತ್ರಗಳಿಂದಾಗಿ, ವಾಣಿಜ್ಯ ಪ್ರಾಮುಖ್ಯತೆಯ ನಗರಗಳಿಂದಾಗಿ, ಶೈಕ್ಷಣಿಕ ಮಹತ್ವದ ಪಟ್ಟಣಗಳಿಂದಾಗಿ ಹಾಗೂ ಸಾಂಸ್ಕೃತಿಕ ಮಹತ್ವದ ಕೇಂದ್ರಗಳಿಂದಾಗಿ, ವಿವಿಧ ವರ್ಗಕ್ಕೆ ಸೇರಿದ ವಿಭಿನ್ನ ಅಭಿರುಚಿಯ ಪ್ರವಾಸಿಗರನ್ನು ಸದಾಕಾಲ ಸೂಜಿಗಲ್ಲಂತೆ ಸೆಳೆಯುತ್ತಿದೆ.

ಪ್ರಾಚೀನ ಕಾಲದಿಂದಲೂ ದಕ್ಷಿಣ ಕನ್ನಡ ಜಿಲ್ಲೆಯನ್ನು ಒಳಗೊಂಡ ಕರಾವಳಿ ಪ್ರದೇಶವನ್ನು, ಪೌರಾಣಿಕವಾಗಿ ಪರಶುರಾಮಕ್ಷೇತ್ರ ಶಾಂತಿಕ ಕ್ಷೇತ್ರ, ಶೂರ್ಪಾರಿಕ ಕ್ಷೇತ್ರ ಎಂತಲೂ, ಚಾರಿತ್ರಿಕವಾಗಿ ಅಳುಪರ ಆಡಳಿತಾವಧಿಯಲ್ಲಿ ತುಳುನಾಡು, ತುಳು ವಿಷಯ, ಆಳ್ವಖೇಡ–೬೦೦೦ ಎಂತಲೂ ಕರೆಯಲಾಗುತ್ತಿತ್ತು. ವಿಜಯನಗರದರಸರ ಕಾಲದಲ್ಲಿ ಇದನ್ನು 'ಮಂಗಳೂರು ರಾಜ್ಯ' ಎಂದು ಕರೆಯಲಾಗುತ್ತಿದ್ದು, ಪೋರ್ಚುಗೀಸರ ಆಗಮನದೊಂದಿಗೆ ಕೆನರಾ ಎಂಬ ಹೆಸರು ಬಳಕೆಗೆ ಬಂದಿತು. ಮುಂದೆ, ಸ್ಥಳೀಯ ಸಾಮಂತರಸರು, ಕೆಳದಿ ನಾಯಕರು ಹಾಗೂ ಹೈದರ್–ಟಿಪ್ಪು ಆಡಳಿತವನ್ನೂ ವೀಕ್ಷಿಸಿದ ಈ ಜಿಲ್ಲೆಯು ೧೭೯೯ರಲ್ಲಿ ಬ್ರಿಟಿಷರ ನಿಯಂತ್ರಣಕ್ಕೊಳಪಟ್ಟು, ೧೯೪೭ರವರೆಗೆ ಮದ್ರಾಸ್ ಪ್ರಾಂತಾಡಳಿತಕ್ಕೂ, ಸ್ವಾತಂತ್ರ್ಯಾನಂತರ ೧೯೫೬ರವರೆಗೆ ಮದ್ರಾಸ್ ರಾಜ್ಯದ ವ್ಯಾಪ್ತಿಗೂ ಒಳಪಟ್ಟಿತ್ತು. ಹೀಗೆ ಶ್ರೀಮಂತವೂ ವೈವಿಧ್ಯವೂ ಆದ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿರುವ ಈ ಜಿಲ್ಲೆಯ ಇತಿಹಾಸ, ಸಂಸ್ಕೃತಿ, ವಾಸ್ತು, ಮೂರ್ತಿಶಿಲ್ಪಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ, ಪೆರ್ಸಿಬ್ರೌನ್, ಫರ್ಗುಸನ್, ವಾಲ್‌ಹೌಸ್ ಮುಂತಾದ ಪಾಶ್ಚಿಮಾತ್ಯ ವಿದ್ವಾಂಸರು; ಪೊಳಲಿ ಶೀನಪ್ಪ ಹೆಗ್ಡೆ, ಎನ್.ಎಸ್.ಕಿಲ್ಲೆ ಎಂ. ಗಣಪತಿರಾವ್ ಐಗಲ್, ಎಂ. ಗೋವಿಂದಪೈ, ಕೇಶವ ಕೃಷ್ಣಕುಡ್ವ, ಬಿ.ಎ. ಸಾಲೆತ್ತೂರು, ಕೆ. ಶಿವರಾಮಕಾರಂತ,

ಪಿ. ಗುರುರಾಜಭಟ್, ವಸಂತ ಶೆಟ್ಟಿ, ಸೂರ್ಯನಾಥ ಕಾಮತ್, ಕೆ.ವಿ. ರಮೇಶ್, ವಸಂತ ಮಾಧವ, ಪಿ. ಎನ್. ನರಸಿಂಹಮೂರ್ತಿ ಮುಂತಾದ ಅಸಂಖ್ಯಾತ ಸ್ಥಳೀಯ ವಿದ್ವಾಂಸರು ಸಾಕಷ್ಟುಸಂಶೋಧನಾ ಕಾರ್ಯವೆಸಗಿದ್ದಾರೆ. ಅದರಲ್ಲೂ, ಕೆ. ಅನಂತರಾಮು ಅವರ 'ದಕ್ಷಿಣ ಸಿರಿ ನಾಡು' ಕೃತಿ, ಜಿಲ್ಲೆಯ ಬಗ್ಗೆ ಸಮೃದ್ಧ ಮಾಹಿತಿಯನ್ನು ಒದಗಿಸುವ ಶ್ರೀಮಂತ ಗಣಿಯಾಗಿದೆ.

ಜಿಲ್ಲೆಯಲ್ಲಿರುವ ಕುಮಾರಧಾರ ಪರ್ವತ, ನರಹರಿ ಬೆಟ್ಟ, ಬೀರಮಲೆ ಬೆಟ್ಟ, ಜಮಾಲಬಾದ್ ದುರ್ಗ ಮುಂತಾದವು ಚಾರಣಕ್ಕೆ ಪ್ರಶಸ್ತವಾಗಿವೆ. ಜಿಲ್ಲೆಯಲ್ಲಿ ಹರಿಯುವ ನೇತ್ರಾವತಿ, ಕುಮಾರಧಾರ ಮುಂತಾದ ನದಿಗಳು ರೂಪಿಸಿರುವ ನಿಸರ್ಗದತ್ತ ಜಲಪಾತಗಳು ಜಿಲ್ಲೆಯ ಕುಕ್ಕುಜೆ, ಬಂಡಾಜೆ, ದಿಡುಪೆ, ದೇವರಗುಂಡಿ ಮುಂತಾದೆಡೆಗಳಲ್ಲಿವೆ. ದಕ್ಷಿಣ ಭಾರತದಲ್ಲೇ ವಿಶಿಷ್ಟವೆನ್ನಲಾಗುವ ಬಿಸಿನೀರಬುಗ್ಗೆಗಳು ಬೇಂದ್ರ್‌ತೀರ್ಥ ಹಾಗೂ ಅಂಕದಮಜಲುಗಳಲ್ಲಿವೆ. ಗುಹಾಂತರ ತೀರ್ಥಗಳು ನೆಲ್ಲಿತೀರ್ಥ(ಮಂಗಳೂರು ತಾ.), ಸುಲ್ಲಮಲೆ ನೆಲ್ಲಿತೀರ್ಥ (ಬಂಟ್ವಾಳ ತಾ.) ಕೊಣಂಜೆಕಲ್ಲು, ಬಿಲದ್ವಾರ (ಕುಕ್ಕೆಸುಬ್ರಹ್ಮಣ್ಯ), ಸವಣಾಲು ಮುಂತಾದೆಡೆಗಳಲ್ಲಿವೆ. ಕಡಲಂಚಲ್ಲಿರುವ ಪಣಂಬೂರು, ತಣ್ಣಿರುಭಾವಿ, ಸುರತ್ಕಲ್, ಸಸಿಹಿತ್ಲು, ಮುಕ್ಕಾ, ಉಳ್ಳಾಲ, ಸೋಮೇಶ್ವರ ಮುಂತಾದ ಬೀಚುಗಳು ವಿದೇಶಿಯರನ್ನೂ ಆಕರ್ಷಿಸುತ್ತಿವೆ. ಶಿರಾಡಿ ನಿಸರ್ಗಧಾಮ, ಪಿಲಿಕುಳ(ಲ) ನಿಸರ್ಗಧಾಮ, ಕಾರಂತರ ಬಾಲವನ, ಸಮ್ಮರ್‌ಸ್ಯಾಂಡ್ ಬೀಚ್ ರಿಸಾರ್ಟ್ ಮುಂತಾದ ವಿಹಾರ ತಾಣಗಳು ಜಿಲ್ಲೆಯಲ್ಲಿವೆ.

ಚಾರಿತ್ರಿಕ ಹಿರಿಮೆಯನ್ನು ಸಾರುವ ಜಮಾಲಬಾದ್, ಹಾಗೂ ಬೆಳ್ತಂಗಡಿ ತಾಲೂಕಿಗೆ ಹೊಂದಿಕೊಂಡಂತಿರುವ ಬಲ್ಲಾಳರಾಯನದುರ್ಗ (ಚಿಕ್ಕಮಗಳೂರು ಜಿಲ್ಲೆ) ಕೋಟೆಗಳು, ಟಿಪ್ಪು ನಿರ್ಮಿಸಿರುವ ಸುಲ್ತಾನ್‌ಬತ್ತೇರಿ; ಬಂಗಾಡಿ, ಅಳದಂಗಡಿ, ಪುತ್ತಿಗೆ, ಮೂಡಬಿದ್ರೆ ಬೆಳ್ಳಾರೆ ಮುಂತಾದೆಡೆಗಳಲ್ಲಿರುವ ಸ್ಥಳೀಯ ಸಾಮಂತ ಅರಸರ ಕಾಲದ ಕೋಟೆ–ಅರಮನೆಗಳು; ಬೌದ್ಧಧರ್ಮಕ್ಕೆ ಸಂಬಂಧಿಸಿದ ಕುರುಹುಗಳಿರುವ ಕದ್ರಿ, ಮೂಳೂರು ಮುಂತಾದ ಸ್ಥಳಗಳು; ನಾಥ ಪಂಥದ ಪ್ರಮುಖ ಕೇಂದ್ರಗಳಾದ ಕದ್ರಿ, ವಿಟ್ಲ, ಮುಂತಾದವು; ಜೈನ ಕೇಂದ್ರಗಳಾದ ಮೂಡಬಿದ್ರೆ, ವೇಣೂರು, ಮೂಲ್ಕಿ ಮುಂತಾದೆಡೆಗಳಲ್ಲಿರುವ ಪ್ರಾಚೀನ ಬಸದಿಗಳು; ವೇಣೂರಿನಲ್ಲಿರುವ ಪ್ರಾಚೀನ ಕಾಲದ ಬಾಹುಬಲಿ ಮೂರ್ತಿ (೧೬೦೪), ಧರ್ಮಸ್ಥಳದಲ್ಲಿರುವ ಆಧುನಿಕ ಬಾಹುಬಲಿ ಮೂರ್ತಿ (೧೯೮೨); ಕದ್ರಿ, ಬಂಟ್ರಕೊಕ್ಕಡ, ಕುಂಜಾರು, ವಿಟ್ಲ, ಕಾರಿಂಜೇಶ್ವರ, ಪುತ್ತೂರು, ಪಂಜ, ಎಡಮಂಗಲ, ಇನ್ನವಳ್ಳಿ, ಪುನರೂರು, ಪೊಳಲಿ, ಉಳ್ಳಾಲ, ಮುಂತಾದೆಡೆಗಳಲ್ಲಿರುವ ಗಜಪೃಷ್ಠಾಕಾರ ತಳವಿನ್ಯಾಸದ ಪುರಾತನ ದೇವಾಲಯಗಳು; ಧರ್ಮಸ್ಥಳ, ಶಿಶಿಲ, ಕಾರಿಂಜಾ ಮುಂತಾದ ಶೈವಕ್ಷೇತ್ರಗಳು; ಶಕ್ತಿ ಆರಾಧನಾ ಕೇಂದ್ರಗಳಾದ ಕಟೀಲು, ಪೊಳಲಿ, ಬಪ್ಪ, ಮಂಗಳೂರು, ಮೂಲ್ಕಿ ಮುಂತಾದ ಕ್ಷೇತ್ರಗಳು; ಮೂಲ್ಕಿ, ಬಂಟ್ವಾಳ, ಉಪ್ಪಿನಂಗಡಿ, ಮಂಗಳೂರು ಮುಂತಾದೆಡೆಗಳಲ್ಲಿರುವ ವೆಂಕಟರಮಣ ದೇವಾಲಯಗಳು; ಕುಕ್ಕೆ ಸುಬ್ರಹ್ಮಣ್ಯ, ಕುಡುಪು, ಕಡಂದಲೆ ಮುಂತಾದ ಸ್ಕಂಧ ಆರಾಧನಾ ಕೇಂದ್ರಗಳು; ಎಣ್ಮೂರು, ಪಂಜ, ಕವತ್ತಾರು, ಜಾಲ್ಸೂರು, ಪಡುಮಲೆ, ಮುಂತಾದೆಡೆಗಳಲ್ಲಿರುವ ಭೂತಾರಾಧನಾ ದೈವಸ್ಥಾನಗಳು; ಉಳ್ಳಾಲ, ಕಾಜೂರು, ಗುರುವಾಯನಕೆರೆ, ಮಂಗಳೂರು, ಅಜಲಮೊಗರು, ಬೆಳ್ತಂಗಡಿ ಮುಂತಾದೆಡೆಗಳಲ್ಲಿರುವ ಇಸ್ಲಾಂ ಧರ್ಮೀಯರ ಸ್ಮಾರಕಗಳು; ಮಂಗಳೂರು, ಫರಂಗಿಪೇಟೆ, ಕಲ್ಲುಗುಂಡಿ, ಪಾರೆಂಕಿ, ಮಡಂತ್ಯಾರ್, ಬಜಪೆ, ಬೆಳ್ತಂಗಡಿ, ಕುಲಶೇಖರ ಮುಂತಾದೆಡೆಗಳಲ್ಲಿರುವ ಕ್ರೈಸ್ತ ಇಗರ್ಜಿಗಳು; ಬಗೆ ಬಗೆಯ ಪ್ರವಾಸಿಗರನ್ನು ಜಿಲ್ಲೆಯತ್ತ ಆಕರ್ಷಿಸುವ ಆಯಸ್ಕಾಂತಗಳಾಗಿವೆ.

ಧಾರ್ಮಿಕ ಹಿನ್ನೆಲೆಯಲ್ಲಿ ಆರಂಭಗೊಂಡು, ಕೃಷಿ ಅಭಿವೃದ್ಧಿಗೆ ಪೂರಕವಾಗಿ ವೃದ್ಧಿ ಹೊಂದಿ, ಮನರಂಜನೆ ನೀಡುವ ಕ್ರೀಡೆಯಾಗಿ ವಾಣಿಜ್ಯ ಸ್ವರೂಪವನ್ನೂ ಪಡೆದಿರುವ ಪರಂಪರಾಗತವಾದ 'ಕಂಬಳ'ವು ನಡೆಯುವ ಮೂಲ್ಕಿ, ಉಪ್ಪಿನಂಗಡಿ, ಪಡುಪಣಂಬೂರು ಮುಂತಾದ ಸ್ಥಳಗಳು ಉಲ್ಲೇಖಾರ್ಹವಾಗಿವೆ. ಮಂಗಳೂರು, ಕದ್ರಿ, ಪುತ್ತೂರು ಮುಂತಾದೆಡೆಗಳಲ್ಲಿ ಜರುಗುವ ದಸರಾ ಮೆರವಣಿಗೆ; ಪೊಳಲಿ, ಕುಕ್ಕೆಸುಬ್ರಹ್ಮಣ್ಯ, ಕಟೀಲು, ಧರ್ಮಸ್ಥಳ, ಪುತ್ತೂರು ಮುಂತಾದೆಡೆಗಳಲ್ಲಿ ನಡೆಯುವ ಜಾತ್ರೆಗಳು; ವಿವಿಧೆಡೆ ದೈವಗಳಿಗೆ ಜರುಗುವ ನೇಮೋತ್ಸವಗಳು; ಉಳ್ಳಾಲ, ಕಾಜೂರು, ಗುರುವಾಯನಕೆರೆಯ ಉರುಸುಗಳು; ಫರಂಗಿಪೇಟೆ, ಕುಲಶೇಖರ, ಮಂಗಳೂರು ಮುಂತಾದೆಡೆಯಿರುವ ಇಗರ್ಜಿಗಳಲ್ಲಿ ನಡೆಯುವ ವಾರ್ಷಿಕ ದಿನಾಚರಣೆಗಳು ಆಕರ್ಷಕವಾಗಿದ್ದು, ಅನುಯಾಯಿಗಳನ್ನು ಸೆಳೆಯುತ್ತಿವೆ. ಧಾರ್ಮಿಕ ಹಿನ್ನೆಲೆಯಲ್ಲಿ ರೂಪುಗೊಂಡ ಯಕ್ಷಗಾನವು ಇಂದು ಮನರಂಜನಾ ಸಾಧನವಾಗಿ ಜನಪ್ರಿಯಗೊಂಡು ಜಿಲ್ಲೆಯ ಕಟೀಲು, ಧರ್ಮಸ್ಥಳ ಮುಂತಾದೆಡೆಗಳಲ್ಲಿ ಸಾರ್ವಜನಿಕ ಪ್ರದರ್ಶನಗಳಾಗಿ ಸಾಂಸ್ಕೃತಿಕ ಸಮಾರಂಭಗಳಲ್ಲಿ ಪ್ರದರ್ಶಿಸಲ್ಪಡುತ್ತಿದ್ದು, ಇಂದು ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದಿದೆ. ಅದರಲ್ಲೂ ಕಟೀಲಿನ ಯಕ್ಷಗಾನ ಮೇಳವೂ ಸೇರಿದಂತೆ ಹಲವಾರು ಯಕ್ಷಗಾನ ಮೇಳಗಳಿಗೆ ವಿಶಿಷ್ಟ ಸ್ಥಾನವಿದೆ. ಮಂಗಳೂರು, ಸುರತ್ಕಲ್, ಉಜಿರೆ, ಧರ್ಮಸ್ಥಳ, ಅಳಿಕೆ ಮುಂತಾದ ಸ್ಥಳಗಳು ಶೈಕ್ಷಣಿಕ ಮಹತ್ವವನ್ನು ಹೊಂದಿರುವ ಪಟ್ಟಣಗಳಾಗಿವೆ. ಜಿಲ್ಲೆಯು ಬ್ಯಾಂಕಿಂಗ್ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅಭೂತಪೂರ್ವದ್ದಾಗಿದ್ದು, ರಾಷ್ಟ್ರೀಕರಣಗೊಂಡಿರುವ ಒಟ್ಟು ೨೦ ಬ್ಯಾಂಕುಗಳಲ್ಲಿ

ನಾಲ್ಕು, ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದುದು ಉಲ್ಲೇಖಾರ್ಹ. ಮಂಗಳೂರಿನಲ್ಲಿರುವ ಹಳೆಯ ಬಂದರು ಹಾಗೂ ಪಣಂಬೂರಿನಲ್ಲಿರುವ ನವಬಂದರುಗಳಿಂದಾಗಿ ಕರ್ನಾಟಕ ರಾಜ್ಯವು ಸಾಗರೋತ್ತರ ಸಂಪರ್ಕವನ್ನು ಹೊಂದುವುದರ ಜೊತೆಗೆ, ರಾಷ್ಟ್ರದ ಆರ್ಥಿಕಾಭಿವೃದ್ಧಿಯಲ್ಲೂ ಕೈಜೋಡಿಸುವಂತಾಗಿದೆ. ಜಿಲ್ಲಾ ಕೇಂದ್ರ ಮಂಗಳೂರು ಪಟ್ಟಣವೂ ಸೇರಿದಂತೆ ಧರ್ಮಸ್ಥಳ, ಬಂಟ್ವಾಳ ಮುಂತಾದೆಡೆಗಳಲ್ಲಿರುವ ಸರ್ಕಾರಿ ಹಾಗೂ ಖಾಸಗಿ ವಸ್ತುಸಂಗ್ರಹಾಲಯಗಳು ಉಲ್ಲೇಖಾರ್ಹವಾಗಿವೆ. ಹೀಗೆ ಭೌಗೋಳಿಕವಾಗಿ, ಚಾರಿತ್ರಿಕವಾಗಿ, ಭಾಷಿಕವಾಗಿ, ಧಾರ್ಮಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ವೈವಿಧ್ಯತೆಯ ಆಗರವಾಗಿರುವ ಜಿಲ್ಲೆಯು, ಪ್ರವಾಸಿಗರನ್ನು ನಿರಂತರವಾಗಿ ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ. ಈ ಹಿನ್ನೆಲೆಯಲ್ಲಿ, ಜಿಲ್ಲೆಯಲ್ಲಿರುವ ಐತಿಹಾಸಿಕ, ಚಾರಿತ್ರಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವದ ಸ್ಥಳಗಳನ್ನು ಇಲ್ಲಿ 'ಅ'ಕಾರಾದಿಯಲ್ಲಿ ಸಂಯೋಜಿಸಿ, ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ. ಆಯಾ ಸ್ಥಳಗಳೊಂದಿಗೆ ಕಂಸದಲ್ಲಿ ನೀಡಿರುವ ಸಂಖ್ಯೆಯು ೨೦೦೧ರ ಜನಗಣತಿಯನ್ನಾಧರಿಸಿದ ಆಯಾ ಸ್ಥಳದ ಜನಸಂಖ್ಯೆಯಾಗಿದೆ. ಇಲ್ಲಿ ನೀಡಲ್ಪಟಿರುವ ಕೆಲವು ಸ್ಥಳಗಳು, ಸ್ವತಂತ್ರ್ಯ ಕಂದಾಯ ಗ್ರಾಮಗಳಾಗಿರದೆ, ಗ್ರಾಮದ ವ್ಯಾಪ್ತಿಯಲ್ಲಿರುವ ಜಾಗೆ (ಉಪಗ್ರಾಮ)ಗಳಾಗಿವೆ. ಅಂತಹ ಸಂದರ್ಭದಲ್ಲಿ ಆಯಾ ಜಾಗೆ ಇರುವ ಕಂದಾಯ ಗ್ರಾಮವನ್ನು ಜನಸಂಖ್ಯೆಯೊಂದಿಗೆ ಅಲ್ಲಲ್ಲೇ ಸೂಚಿಸಲಾಗಿದೆ.

**ಅಂಕದಮಜಲು ಬಿಸಿನೀರ ಬುಗ್ಗೆ:** ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ದಕ್ಷಿಣಕ್ಕೆ ಹಾಗೂ ಉಪ್ಪಿನಂಗಡಿ (ಪುತ್ತೂರು ತಾ.) ಯಿಂದ ವಾಯವ್ಯಕ್ಕೆ, ಸುಮಾರು ೨೩ಕಿಮೀ ದೂರದಲ್ಲಿರುವ ಬಂದಾರು (೩,೭೯೬) ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿರುವ ಸ್ಥಳ. ದಕ್ಷಿಣ ಭಾರತದಲ್ಲೇ ಅಪೂರ್ವವೆಂದು ಹೇಳಲಾಗುವ ಪುತ್ತೂರಿನ ಬೇಂದ್ರ್‌ತೀರ್ಥದಂತೆ ಇಲ್ಲಿರುವ ಬಿಸಿನೀರು ಬುಗ್ಗೆಯಿಂದಾಗಿ ಇದೂ ಇತ್ತೀಚೆಗೆ ಪ್ರಸಿದ್ಧಿ ಹೊಂದುತ್ತಿದೆ. ಅದರಲ್ಲೂ ಬೇಂದ್ರತೀರ್ಥ ನಶಿಸಿಹೋಗುತ್ತಿರುವ ಹಿನ್ನೆಲೆಯಲ್ಲಿ ಇದಕ್ಕೆ ಹೆಚ್ಚಿನ ಮಹತ್ವ ಬಂದಿದೆ. ಬೆಳ್ತಂಗಡಿಯಿಂದ ಪದ್ಮುಂಜ–ಬಂದಾರು ಮಾರ್ಗವಾಗಿ ಕಾಡುಹಾದಿಯಲ್ಲಿ ಪಯಣಿಸಿ, ಅಂಕದಮಜಲು ತಲುಪುತ್ತಿದ್ದಂತೆ, ಎದುರಾಗುವುದೇ ಈ ಬಿಸಿಬುಗ್ಗೆ. ಇಬ್ರಾಹಿಂಸಾಹೇಬರ ಮನೆಯಂಗಳದಲ್ಲಿರುವ ಐದಡಿ ಆಳ, ೧೨ ಅಡಿ ಉದ್ದ ಹಾಗೂ ಏಳಡಿ ಅಗಲದ ಈ ಬಿಸಿನೀರ ಚಿಲುಮೆಯ ನೀರು ಸುಮಾರು ೩೦ ರಿಂದ ೪೦ ಡಿಗ್ರಿ ಸೆಲ್ಸಿಯಸ್‌ನಷ್ಟು ಬಿಸಿ ಇರುತ್ತದೆ. ಬರೀ ಬಂಡೆಕಲ್ಲುಗಳಿಂದ ಕೂಡಿದ ಇದನ್ನು ಕೊಳವನ್ನಾಗಿಸಿದ್ದು, ಅದಕ್ಕೆ ಮೇಲ್ಭಾಗದಲ್ಲಿರುವ ಒಂದು ಇಂಚಿನ ಪಿ.ವಿ.ಸಿ. ಪೈಪಿನಿಂದ ಬೀಸಿನೀರು ಬೀಳುತ್ತದೆ. ಸದಾಕಾಲ ನೀರಿನಿಂದ ತುಂಬಿರುವ ಈ ಕೊಳದ ನೀರನ್ನು ಪ್ರತೀ ದಿನ ಖಾಲಿ ಮಾಡಲಾಗುತ್ತದೆ. ಗಂಧಕಯುಕ್ತವಾಗಿರುವ ಈ ಬೀಸಿನೀರ ಬುಗ್ಗೆಯು, ನೇತ್ರಾವತಿಗೆ ಕೆಳದಂಡೆಯಲ್ಲಿ ನಿರ್ಮಿಸಲಿರುವ ಆಣೆಕಟ್ಟೆಯಿಂದಾಗಿ ಕಣ್ಮರೆಯಾಗಲಿದೆ ಎಂಬ ಆತಂಕ ಸ್ಥಳೀಕರಲ್ಲಿದೆ.

**ಅಜಲಮೊಗರು :** ತಾಲೂಕು ಕೇಂದ್ರ ಬಂಟ್ವಾಳದಿಂದ ಆಗ್ನೇಯಕ್ಕಾದಂತೆ ೨೦ ಕಿ.ಮೀ. ದೂರದಲ್ಲಿ ನೇತ್ರಾವತಿ ನದಿ ತೀರದ ಮೇಲಿನ ಮಣಿನಾಲ್ಕೂರು (೪,೬೪೭) ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿರುವ ವಸತಿ ನೆಲೆ. ಇಲ್ಲಿಗೆ ನೇತ್ರಾವತಿಯ ಆಚೆದಡದಲ್ಲಿರುವ ಕಡೆಶ್ವಾಲ್ಯ (ಕಡೆಶಿವಾಲಯ ೪,೭೭೪) ದ ಹಾಯ್ಗಡದಿಂದ ದೋಣಿ ಮೂಲಕವೂ ತಲುಪಬಹುದಾಗಿದೆ. ನೇತ್ರಾವತಿ ನದಿಯ ದಂಡೆಯ ಮೇಲಿರುವ, ಪರ್ಷಿಯನ್ ಮೂಲದ ಸಂತ ಹಝ್ರತ್ ಸೈಯದ್ ಬಾಬಾ ಫಕ್ರುದ್ದೀನನ ಮಸೀದಿಯು ಬಹಳ ಪ್ರಸಿದ್ಧಿ ಪಡೆದಿದೆ. ಮೂಲತಃ ಸುಲ್ತಾನನಾಗಿದ್ದ ಇವನು, ಬಹು ಹಿಂದೆ ಇಂದಿನ ಇರಾನ್–ಆಫ್‌ಘಾನಿಸ್ಥಾನ ಪ್ರದೇಶದಲ್ಲಿನ ಸಿಸ್ಥಾನವೆಂಬ ರಾಜ್ಯವನ್ನು ಆಳುತ್ತಿದ್ದು, ಕ್ರಮೇಣ ಲೌಕಿಕ ವ್ಯಾಮೋಹವನ್ನು ತ್ಯಜಿಸಿ, ದೇಶಾಂತರ ಹೊರಟು ಧರ್ಮಬೋಧೆ ಮಾಡುತ್ತ ಭಾರತಕ್ಕೆ ಬಂದನು. ಇವನು ಸ್ವಲ್ಪಕಾಲ ನೇತ್ರಾವತಿ ತೀರದ ಈ ಸ್ಥಳದಲ್ಲಿ ತಂಗಿದ್ದು, ಶಿಷ್ಯರನ್ನೂ ಸಂಪಾದಿಸಿದನು. ಆ ಸಂದರ್ಭದಲ್ಲಿ ಈ ಸೀಮೆಯನ್ನು ಆಳುತ್ತಿದ್ದ ಅಜಿಲರ ಅರಸನೊಬ್ಬನಿಗೆ ಕುಷ್ಠರೋಗವಿದ್ದು, ಅದನ್ನು ಸಂತನು ಗುಣಪಡಿಸಿದ್ದರಿಂದ ಪ್ರಭಾವಿತನಾದ ಅಜಿಲರಸನು ಸಂತನಿಗೆ ಬೆಂಬಲವಾಗಿ ನಿಂತು ಮಸೀದಿ ನಿರ್ಮಿಸಿಕೊಳ್ಳಲು ಬೇಕಾದ ಭೂಮಿ ಮತ್ತಿತರ ಸಲಕರಣೆಗಳನ್ನು ನೀಡಿ ಸಹಕರಿಸಿದನೆಂದು ಹೇಳಲಾಗುತ್ತದೆ. ಅಲ್ಲಿ ಮಸೀದಿಯೊಂದನ್ನು ನಿರ್ಮಿಸಿ, ಶಿಷ್ಯನೊಬ್ಬನಿಗೆ ಇಮಾಮ ಪದವಿ ನೀಡಿದ ಸಂತನು ಆಂಧ್ರದತ್ತ ಮುನ್ನಡೆದು ಪೆನುಗೊಂಡೆಯಲ್ಲಿ ಗತಿಸಿದನೆಂದು ತಿಳಿದುಬರುತ್ತದೆ. ಆ ಸಂತನ ಸಂಸ್ಮರಣೆಗಾಗಿ ಅವನ ಶಿಷ್ಯರು ಹಾಗೂ ಭಕ್ತರೂ ಕೂಡಿ ದರ್ಗಾ ನಿರ್ಮಿಸಿ ವಾರ್ಷಿಕ ಉರುಸನ್ನು ಆರಂಭಿಸಿದರೆಂದು ತಿಳಿದುಬರುತ್ತದೆ. ಇಲ್ಲಿಯ ಮಸೀದಿ ಹಾಗೂ ದರ್ಗಾಗಳು ಮುಸ್ಲಿಂ ಶೈಲಿಯ ಆಕರ್ಷಕ ರಚನೆಗಳಾಗಿವೆ. ಧಾರ್ಮಿಕ ಸಾಮರಸ್ಯಕ್ಕೆ ಹೆಸರಾಗಿರುವ ಈ ಸಂತನ ಉರುಸು ವರ್ಷಂಪ್ರತಿ ಜಮಾದಿಲ್ ಆಖಿಲ್‌ಚಾಂದ್ ಮಾಹೆಯ ೧೩ ರಿಂದ ೧೫ರವರೆಗೆ ಜರುಗುತ್ತಿದ್ದು, ಜಿಲ್ಲೆಯಾದ್ಯಂತ ಪ್ರಸಿದ್ಧವಾಗಿದೆ. ಇಲ್ಲಿರುವ ಫಕ್ರುದ್ದೀನ್ ಬಾಬಾನ ಸಮಾಧಿಗೆ ಚಿತ್ತಾಕರ್ಷಕವಾದ ಅಲಂಕಾರದಿಂದ ಕೂಡಿದ ಬಣ್ಣದ ಗೌಸನ್ನು ಹೊದಿಸಲಾಗಿದೆ. ದೊಡ್ಡಗಾತ್ರದ ಮರದ ಕಂಬಗಳನ್ನು ಬಳಸಿ ನಿರ್ಮಿಸಿರುವ ಇಲ್ಲಿನ ಮಸೀದಿಯೂ ಆಕರ್ಷಕ ರಚನೆಯಾಗಿದೆ. ಉರುಸಿನ ಸಂದರ್ಭದಲ್ಲಿ ಭಕ್ತರಿಗೆ ಪ್ರಸಾದವಾಗಿ ವಿತರಿಸಲ್ಪಡುವ 'ಮಾಲಿದಾ' ಇಲ್ಲಿನ ವಿಶೇಷವಾಗಿದೆ.

**ಅಟ್ಟೂರು (೧,೩೧೦);** ಜಿಲ್ಲಾ ಕೇಂದ್ರ ಮಂಗಳೂರಿನಿಂದ ೨೫ ಕಿ.ಮೀ. ಉತ್ತರಕ್ಕೆ ಹಾಗೂ ಕಿನ್ನಿಗೋಳಿಯಿಂದ ಮೂರು ಕಿ.ಮೀ. ಪಶ್ಚಿಮಕ್ಕೂ ಇರುವ ಯಾತ್ರಾಸ್ಥಳ, ಸ್ವಲ್ಪ ಎತ್ತರದ ಸ್ಥಳದಲ್ಲಿರುವ ಸುರಗಿರಿ ಮಹಾಲಿಂಗೇಶ್ವರ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಇತ್ತೀಚೆಗೆ ಸ್ಥಳೀಕರು ಈ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದ್ದಾರೆ. ಈ ದೇವಾಲಯದ ಗರ್ಭಗೃಹವನ್ನು ತಾಮ್ರದ ಹಲಗೆಗಳಿಂದ ಅಚ್ಚುಕಟ್ಟುಗೊಳಿಸಲಾಗಿದೆ.

**ಅಳಿಕೆ (೫,೭೬೬):** ತಾಲೂಕು ಕೇಂದ್ರ ಬಂಟ್ವಾಳದಿಂದ ದಕ್ಷಿಣಕ್ಕೆ ೨೫ ಕಿ.ಮೀ.ದೂರದಲ್ಲಿರುವ ಇದು ಅಲ್ಲಿರುವ 'ಸತ್ಯಸಾಯಿ ವಿಹಾರ'ದಿಂದಾಗಿ ಪ್ರಸಿದ್ಧವಾಗಿದೆ. ಬೆಟ್ಟಗುಡ್ಡಗಳಿಂದ ಸುತ್ತುವರಿದು ಪ್ರಕೃತಿಯ ರಮ್ಯ ಮಡಿಲಲ್ಲಿ ಸಾಕಾರಗೊಂಡಿರುವ ಈ ಜ್ಞಾನದೇಗುಲ ಸಂಕೀರ್ಣವು ಸುಮಾರು ೮೦ ಎಕರೆ ಪ್ರದೇಶದಲ್ಲಿ ರೂಪುಗೊಂಡಿದ್ದು, ಆರಂಭದಲ್ಲಿ (೧೯೬೦) ಲೋಕಸೇವಾವೃಂದ ಎಂಬ ಹೆಸರನ್ನು ಹೊಂದಿದ್ದು, ಅನಂತರ 'ಸತ್ಯಸಾಯಿ ಲೋಕಸೇವಾ ಟ್ರಸ್ಟ್' ಆಗಿ ಮಾರ್ಪಟ್ಟು 'ಸತ್ಯಸಾಯಿ ವಿಹಾರ'ಎಂದೇ ಪ್ರಸಿದ್ಧವಾಗಿದೆ. ಶಾಲಾಕಾಲೇಜು ಕಟ್ಟಡ, ವಿದ್ಯಾರ್ಥಿನಿಲಯ, ಅನಾಥಾಶ್ರಮ, ಗ್ರಂಥಾಲಯ, ಸಭಾಂಗಣ, ಪ್ರೇಮಕುಟೀರ, ಅತಿಥಿಗೃಹ, ಸತ್ಯಸಾಯಿಮಂದಿರ, ಧರ್ಮಸತ್ರ, ಮುದ್ರಣಾಲಯ, ಪ್ರಕಟಣಾಲಯ ಮೊದಲಾದವುಗಳಿಂದ ಕೂಡಿದ ಈ ವಿದ್ಯಾಕೇಂದ್ರ ಸಂಕೀರ್ಣವು ಪ್ರಾಚೀನ ಗುರುಕುಲಗಳನ್ನು ನೆನಪಿಸುತ್ತದೆ. ಇಲ್ಲಿಯ ಸತ್ಯಸಾಯಿಮಂದಿರವು ಅತ್ಯಾಧುನಿಕವೂ ಭವ್ಯವೂ ಆದ ಭವನ. ಮಹಿಳೆಯರಿಗೆಂದೇ ಪ್ರತ್ಯೇಕವಾದ ಶಾರದಾ ವಿಹಾರವೂ ಅದೇ ಆವರಣದಲ್ಲಿದೆ. ಈ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಎರಂಬುವಿನ ಶಂಕರನಾರಾಯಣ ಮತ್ತು ವಿಷ್ಣುಮೂರ್ತಿ, ಮಡಿಯಾಲದ ಗೋಪಾಲಕೃಷ್ಣ, ನೆಕ್ಕಿತಪುಣಿ ಸುಬ್ರಾಯ ದೇವಾಲಯಗಳು ಉಲ್ಲೇಖಾರ್ಹವಾಗಿವೆ.

**ಅಳದಂಗಡಿ;** ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ೧೨ ಕಿ.ಮೀ. ಉತ್ತರಕ್ಕೆ ಫಲ್ಗುಣಿ ನದಿ ತೀರದ **ಬಡಗ ಕರಂದೂರು (೨,೨೨೫)** ಕಂದಾಯಗ್ರಾಮದ ವ್ಯಾಪ್ತಿಯಲ್ಲಿರುವ ವಸತಿ ನೆಲೆ(ಉಪಗ್ರಾಮ). ಇದೂ ಕೂಡ ಹಿಂದೆ ಸ್ಥಳೀಯ ಅಜಿಲ ಅರಸು ಮನೆತನದ ಉಪರಾಜಧಾನಿ ಪಟ್ಟಣವಾಗಿ ವೇಣೂರಿಗೆ ಸರಿಸಾಟಿಯಾಗಿ ಮೆರೆದ ಊರು. ಸುಮಾರು ೧೪೧೫ರ ಶಾಸನವೊಂದರಲ್ಲಿ ಈ ಊರು ಆಳುವಪುರ ಎಂದು ಉಲ್ಲೇಖಿಸಲ್ಪಟ್ಟಿದೆ. ಆದರೆ ೧೫೦೪ರ ಇನ್ನೊಂದು ಶಾಸನದಲ್ಲಿ ಈ ಊರನ್ನು 'ಅಜಿಲರ ಆಳುವದಂಗಡಿ' ಎಂದೇ ಹೆಸರಿಸಲಾಗಿದೆ. ಈ ಮನೆತನಕ್ಕೆ ಸೇರಿದ ಅಳದಂಗಡಿಯ ಪಾರ್ಶ್ವನಾಥ ಬಸದಿಯ ೧೬೮೫ರ ಶಾಸನ ಹಾಗೂ ಸೂಳಬೆಟ್ಟು ಗೋಪಾಲಕೃಷ್ಣ ದೇವಾಲಯದ ೧೭೨೦ರ ಶಾಸನಗಳನ್ನು ಬೆಳಕಿಗೆ ತಂದಿರುವ ಪುಂಡಿಕ್ಕಾಯ್ ಗಣಪಯಭಟರು ಅವುಗಳನ್ನು ಆಧರಿಸಿ ಅಜಿಲರ ಆಳ್ವಿಕೆಯು ೧೮ನೆಯ ಶತಮಾನದವರೆಗೂ ಅಸ್ತಿತ್ವದಲ್ಲಿದ್ದ ಅಂಶವನ್ನು ಮುಂದಿಟ್ಟಿದ್ದು, ಆ ಪರಂಪರೆಯ ಅರಸರು ಈಗಲೂ ಅಳದಂಗಡಿಯಲ್ಲಿದ್ದಾರೆ. ಸುಮಾರು ೧೧೮೬–೧೨೦೪ರ ಕಾಲಾವಧಿಯಲ್ಲಿ ಇಲ್ಲೊಂದು ಅರಮನೆ ಹಾಗೂ ಕೆಲವು ದೇವಾಲಯಗಳು ಅಜಿಲರಿಂದ ನಿರ್ಮಾಣಗೊಂಡಿದ್ದವೆಂದು ಪರಂಪರಾಗತವಾಗಿ ಹೇಳಲಾಗುತ್ತದೆ.

ಫಲ್ಗುಣಿ ನದಿ ಸೇತುವೆಯಿಂದ ಸ್ವಲ್ಪ ದೂರದಲ್ಲಿರುವ ಅಜಿಲರಸರ ಅರಮನೆ ಸುಮಾರು ೧೯೦೪ರಲ್ಲಿ ನಿರ್ಮಾಣಗೊಂಡಿದ್ದಾಗಿದೆ. ಪುರಾತನ ಅರಮನೆಯು ಸೋಮನಾಥೇಶ್ವರಿ ದೇವಾಲಯದ ದಕ್ಷಿಣ ಭಾಗದಲ್ಲಿತ್ತೆಂದು ತಿಳಿದು ಬರುತ್ತಿದ್ದು, ಈಗ ಅದರ ಕುರುಹುಗಳಷ್ಟೇ ಉಳಿದಿವೆ. ಈ ಅರಸರಿಗೆ ಸಂಬಂಧಿಸಿದ ಅರಮನೆಗಳು ಕೇಳ ಹಾಗೂ ಬರಾಯ ಎಂಬ ಸ್ಥಳಗಳಲ್ಲಿದ್ದು, ಕೇಳದ ಅರಮನೆಯಲ್ಲಿ ಅರಸರ ವಂಶಸ್ಥರು ವಾಸಿಸುತ್ತಿದ್ದರೆ, ಬರಾಯದ ಅರಮನೆಯನ್ನು ಪಿತೃಕಾರ್ಯ ಹಾಗೂ ದೈವಕಾರ್ಯಗಳಿಗೆ ಮಾತ್ರ ಇಂದು ಬಳಸಲಾಗುತ್ತಿದೆ. ಅಳದಂಗಡಿಯ ಅರಮನೆಯಲ್ಲಿ ಹತ್ತು ದಿನಗಳ ನವರಾತ್ರಿ ಹಬ್ಬವನ್ನು ಈ ಅರಸರು ಸಾಂಪ್ರದಾಯಿಕವಾಗಿ ಈಗಲೂ ಆಚರಿಸುತ್ತಾರೆ. ಅಳದಂಗಡಿಯಲ್ಲಿಂದು ಪಾರ್ಶ್ವನಾಥ ಬಸದಿ, ಬೆಟ್ಟದ ಬ್ರಹ್ಮದೇವರ ಬಸದಿ ಹಾಗೂ ಸೋಮನಾಥೇಶ್ವರಿಯ ಪುರಾತನ ದೇವಾಲಯಗಳಿವೆ. ಅಲ್ಲದೇ ಕೇಳದ ಪಂಚಲಿಂಗೇಶ್ವರ ದೇವಾಲಯ ಹಾಗೂ ಚಂದ್ರನಾಥ ಬಸದಿ; ಬರಾಯದ ಸೂಳಬೆಟ್ಟು ಗೋಪಾಲಕೃಷ್ಣ ದೇವಾಲಯಗಳು ಅಜಿಲರಸರ ನಿರ್ಮಿತಿಗಳೇ ಆಗಿದ್ದು, ಸುಸ್ಥಿತಿಯಲ್ಲಿದ್ದು, ಇಂದಿಗೂ ಆರಾಧಿಸಲ್ಪಡುತ್ತಿವೆ.

ಅಳದಂಗಡಿಯ ಅರಮನೆಯ ಬದಿಯಲ್ಲೇ ಇರುವ ವಿಶಾಲವಾದ ದೊಡ್ಡ ಬಸದಿಯ ಮುಂದೆ ಎತ್ತರವೂ, ಆಕರ್ಷಕವೂ ಆದ ಮಾನಸ್ತಂಭವಿದೆ. ಸುಮಾರು ೧೫ನೆಯ ಶತಮಾನದ ಪೂರ್ವಾರ್ಧದಲ್ಲಿ ನಿರ್ಮಾಣಗೊಂಡಿರಬಹುದಾದ ಈ ಬಸದಿಯ ಗರ್ಭಗೃಹದಲ್ಲಿರುವ ನಾಲ್ಕು ಅಡಿ ಎತ್ತರದ ಪಾರ್ಶ್ವನಾಥ ಬಿಂಬವು ಮನಮೋಹಕವಾಗಿದೆ. ಅಲ್ಲದೇ ಧರಣೇಂದ್ರ, ಪದ್ಮಾವತಿ, ಬ್ರಹ್ಮ, ಜ್ವಾಲಾಮಾಲಿನಿ, ಗಣಧರವಲಯ ಯಂತ್ರ, ಷೋಡಷಭಾವನಾಯಂತ್ರ, ಪಂಚಪರಮೇಷ್ಠಿ ಮುಂತಾದ ವಿಗ್ರಹಗಳ ಜೊತೆಗೆ ಅನೇಕ ಲೋಹಬಿಂಬಗಳೂ ಇಲ್ಲಿವೆ. ಬಸದಿಯ ಮೇಲಿರುವ ಕೋಷ್ಟದಲ್ಲಿ ಆದಿನಾಥ ಸ್ವಾಮಿಯಿದ್ದು, ಭಿತ್ತಿಯ ಮೇಲೆ ಪ್ರಾಚೀನ ಕಾಲಕ್ಕೆ ಸೇರಿದ

ಭಿತ್ತಿಚಿತ್ರಗಳಿದ್ದು, ಪ್ರದಕ್ಷಿಣಪಥದಲ್ಲಿ ಕ್ಷೇತ್ರಪಾಲನಿದ್ದಾನೆ. ಅಲ್ಲದೇ ಇತ್ತೀಚಿನದಾದ ಹೊಸಬಸದಿಯಲ್ಲಿ ಆದಿನಾಥನನ್ನು ಆರಾಧಿಸಲಾಗುತ್ತದೆ. ಗುಡ್ಡದ ಬ್ರಹ್ಮದೇವರ ಕ್ಷೇತ್ರ ಇನ್ನೊಂದು ಪ್ರಮುಖ ಸ್ಥಳವಾಗಿದ್ದು, ಊರಿಂದ ಸ್ವಲ್ಪ ದೂರದಲ್ಲಿದೆ. ಇಲ್ಲಿಯ ಸೋಮನಾಥೇಶ್ವರಿ ದೇವಾಲಯವು ಗಾತ್ರದಲ್ಲಿ ಕಿರಿದಾಗಿದ್ದರೂ ಗರ್ಭಗೃಹದಲ್ಲಿ ಆರಾಧನೆಗೊಳಪಟ್ಟಿರುವ ದೇವಿಯು ಬಹಳ ವಿಶಿಷ್ಟವಾಗಿದ್ದಾಳೆ. ಸಾಮಾನ್ಯ ಗಾತ್ರದ ಪಂಚಲೋಹದ ಕೊಡಪಾನವೊಂದಕ್ಕೆ ದೇವಿಯ ಆಕಾರವನ್ನು ನೀಡಲಾಗಿದೆ. ಶಿರೋಭಾಗವನ್ನು ಪ್ರತ್ಯೇಕವಾಗಿ ರೂಪಿಸಲಾಗಿದ್ದು, ಅದಕ್ಕೆ ಕಣ್ಣು–ಕಿವಿ–ಮೂಗು ಬಾಯಿಗಳನ್ನು ಅಂದವಾಗಿ ಎರಕ ಹೊಯ್ಯಲಾಗಿದೆ. ಅದನ್ನು ಮುಚ್ಚಳದಂತೆ ತೆರೆಯಲು, ಜೋಡಿಸಲು ಸೌಕರ್ಯವಿದೆ. ಕೊಡದಂತಿರುವ ಭಾಗದಲ್ಲಿ ದೇವಿಯ ಸ್ತನಗಳಿದ್ದು, ಅವನ್ನು ಬೆನ್ನ ಹಿಂದಿನಿಂದ ಎರಡು ಸರ್ಪಗಳು ಹೆಡೆಯಿಂದ ಒತ್ತಿಹಿಡಿದಿರುವಂತೆ ರೂಪಿಸಲಾಗಿದೆ. ಆದರೆ ದೇವಿಗೆ ಕೈಕಾಲುಗಳನ್ನು ತೋರಿಸಿಲ್ಲ. ಸದಾ ಜಲದಿಂದ ತುಂಬಿರುವ ಈ ಕೊಡವನ್ನು ಎತ್ತರದ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಪ್ರತಿ ಶುಕ್ರವಾರ ಕೊಡದ ಜಲವನ್ನು ಬದಲಾಯಿಸಲಾಗುತ್ತದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಸ್ಥಳೀಯ ಅರಸರ ನೇತೃತ್ವದಲ್ಲಿ ಏಳು ದಿನಗಳ ಕಾಲ ಜರುಗುವ ವಾರ್ಷಿಕ ಜಾತ್ರೆಯಲ್ಲಿ ನಡೆಯುವ ಅಂಕಂಬೋಡಿ, ಚೆಂಡು, ಸೂಟೆದಾರ ಎಂಬ ವಿನೋದಾವಳಿಗಳು ಚೇತೋಹಾರಿಯಾಗಿರುತ್ತವೆ.

ಈ ದೇವಾಲಯದಲ್ಲಿ ಮೂಜುಲ್ನಾಯ ಹಾಗೂ ಕಲ್ಲುರ್ಟಿ ದೈವಗಳ ನೆಲೆಗಳೂ ಇದ್ದು, ಎದುರಿನ ಬಯಲಿನಲ್ಲಿ ಕಲ್ಲುರ್ಟಿ ಹಾಗೂ ಕೊಡಮಣಿತ್ತಾಯರ ಸ್ಥಾನಗಳಿವೆ. ಅಲ್ಲದೇ ಇದೇ ಪರಿಸರದಲ್ಲಿ ಮುರುಕಲ್ಲಿನ ವಿಶಿಷ್ಟವಾದೊಂದು ಸ್ಮಾರಕವಿದೆ. ಜೈನಮುನಿಗಳ ನೆನಪಾಗಿ ಇದನ್ನು ಬಹಳ ಹಿಂದೆ ನಿರ್ಮಿಸಲಾಗಿದೆಯೆಂಬ ಸ್ಥಳೀಯ ಅಭಿಪ್ರಾಯವಿದೆ. **ಬರಾಯ:** ಅಳದಂಗಡಿಯಿಂದ ಸುಮಾರು ಮೂರು ಕಿ.ಮೀ. ದೂರದಲ್ಲಿರುವ ಇದು **ಪಿಲ್ಯ (೧,೨೪೭)** ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿದ್ದು, ಶಿಥಿಲಾವಸ್ಥೆಯಲ್ಲಿರುವ ಅಜಿಲರಸರ ಅರಮನೆಯಿಂದಾಗಿ ಖ್ಯಾತಿ ಪಡೆದಿದೆ. ಚಾವಡಿ, ಭಂಡಾರದ ಕೋಣೆ, ಪಾಕಶಾಲೆ ಮುಂತಾದ ಭಾಗಗಳನ್ನೊಳಗೊಂಡ ಅರಮನೆಯಲ್ಲಿರುವ ಭಾರೀ ಗಾತ್ರದ ಮರದ ಕಂಬಗಳ ಮೇಲಿನ ಕೆತ್ತನೆಯ ಕಾರ್ಯ ಗಮನಾರ್ಹವಾಗಿದ್ದು, ವಾದ್ಯಮೇಳ, ಆನೆಗಳನ್ನು ಹೊತ್ತು ಹಾರುತ್ತಿರುವ ಗಂಡಭೇರುಂಡ, ಹುಲಿಬೇಟೆ, ಗಜಲಕ್ಷ್ಮೀ, ಆಂಜನೇಯ ಮುಂತಾದ ಕೆತ್ತನೆಗಳು ಉಲ್ಲೇಖಾರ್ಹವಾಗಿದೆ. ಅಲ್ಲದೇ ಇಲ್ಲಿರುವ ಮಂಚ, ತೂಗುಮಂಚ, ಚಕ್ರವುಳ್ಳ ಪೆಠಾರಿ, ಕೆಲೆಂಬಿ, ಮುಂತಾದವು ಅಲ್ಲಿನ ಪ್ರಾಚೀನ ವೈಭವವನ್ನು ಸಾರುವ ಕುರುಹುಗಳಾಗಿವೆ. ಮೂಜಿಲ್ನಾಯ, ಪಿಲಿಚಾವುಂಡಿ, ಕೊಡಮಣಿತ್ತಾಯ ದೈವಗಳಿಗೆ ಈ ಅರಮನೆಯ ಮುಂದೆ ನೇಮ ನಡೆಯುತ್ತದೆ. ಪುರುಷರಾಯ, ನೆತ್ತರಮುಗಳಿ ದೈವಗಳಿಗೆ ಮೂಡ್ತರೆ ಮಾಡದಲ್ಲಿ ನೇಮ ನಡೆಯುತ್ತದೆಂದು ತಿಳಿದುಬರುತ್ತದೆ. ಪಿಲ್ಯ ಗ್ರಾಮದ ಕುಬಳಾಜೆ ಬಳಿ ಪದ್ಮಾವತಿ ಯಕ್ಷಿಯ ಗುಡಿ ಇದೆ.

**ಉಜಿರೆ (೧೨,೪೭೪)** : ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ಪೂರ್ವಕ್ಕೆ ಎಂಟು ಕಿ.ಮೀ. ದೂರದಲ್ಲಿರುವ ಸ್ಥಳ. ರಾಜ್ಯ ಹೆದ್ದಾರಿ ೬೪ರ ಬದಿಯಲ್ಲಿರುವ ಶೈಕ್ಷಣಿಕ ಕೇಂದ್ರ. ಇಲ್ಲಿಗೆ ಸುಮಾರು ಎಂಟು ಕಿ.ಮೀ. ದೂರದಲ್ಲಿರುವ ಧರ್ಮಸ್ಥಳದಿಂದಾಗಿ ಉಜಿರೆಯು ಪ್ರಮುಖ ಪಟ್ಟಣವಾಗಿ ಬೆಳೆಯುತ್ತಿದೆ. ಉಜಿರೆಯ ೧೪೬೮ರ ಶಾಸನ, ಮಂಗಳೂರು ರಾಜ್ಯದ ರಾಜ್ಯಪಾಲನಾಗಿದ್ದ ವಿಠರಸ ಒಡೆಯನು ಕೊಡಿಯಾಲ ಹಾಗೂ ನೀರುಮಾರ್ಗಗಳಲ್ಲಿದ್ದ ಅರಮನೆಗಳನ್ನು ಸುಟ್ಟುಹಾಕಿದ ಕಾಮಿರಾಜ ಅರಸನಿಗೆ ಉಜಿರೆ ಗ್ರಾಮವನ್ನು ಉಂಬಳಿಯಾಗಿ ನೀಡಿದ ಕುತೂಹಲಕರ ಅಂಶವನ್ನು ನೀಡುತ್ತದೆ. ಇಲ್ಲಿರುವ ಸಂತ ಅಂತೋನಿ ಇಗರ್ಜಿಯು (೧೯೬೩) ನಕ್ಷತ್ರಾಕಾರದಲ್ಲಿ ನಿರ್ಮಿಸಿರುವ ಅಪರೂಪದ ವಾಸ್ತುರಚನೆಯಾಗಿದೆ. ಉಜಿರೆಯ ಹಳೆಪೇಟೆಯಲ್ಲಿದ್ದ ಹಳೆಯ ಮಸೀದಿ ಜೊತೆಗೆ ನೂತನ ಮಸೀದಿಯೊಂದನ್ನೂ ನಿರ್ಮಿಸಲಾಗಿದೆ. ಅದಕ್ಕೆ ಸೇರಿದಂತೆ ಹಯಾತುಲ್ ಅರೇಬಿಕ್ ಮದ್ರಸಾ ಸ್ಥಾಪಿಸಲಾಗಿದೆ. ಹಳೆಯ ಉಜಿರೆಯಲ್ಲಿ ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಕ್ಷಯರೋಗ ನಿವಾರಣಾ ಆಸ್ಪತ್ರೆ ಇದೆ. ಉಜಿರೆಯ ಹಳೆಪೇಟೆಯಲ್ಲಿರುವ ನೂರಕ್ಕೂ ಹೆಚ್ಚು ಕುಂಬಾರ ಕುಟುಂಬಗಳು ಸಿದ್ಧಪಡಿಸುವ ವಿವಿಧ ಬಗೆಯ ಮಣ್ಣಿನ ಆಧುನಿಕ ಅಲಂಕರಣ ಸಾಮಗ್ರಿಗಳು ಬೇರೆ ಊರುಗಳಿಗೆ ರವಾನೆಯಾಗುತ್ತವೆ.

ಉಜಿರೆಯಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥ ಶಿಕ್ಷಣ ಟ್ರಸ್ಟ್ ರೂಪಿಸಿರುವ ಶಾಲಾಕಾಲೇಜುಗಳು ಗಮನಾರ್ಹವಾಗಿವೆ. ಇಲ್ಲಿರುವ ಶಾಂತಿವನ ಟ್ರಸ್ಟಿನ ಆಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನ ಕಾಲೇಜು (೧೯೮೯) ಅಪರೂಪದ ವಿದ್ಯಾಕೇಂದ್ರವಾಗಿದೆ. ಇಲ್ಲಿರುವ ಶ್ರೀ ಧರ್ಮಸ್ಥಳ ರತ್ನವರ್ಮ ಹೆಗ್ಗಡೆ ಕ್ರೀಡಾಂಗಣವು ವಿಶಾಲವಾಗಿದ್ದು, ಒಳಾಂಗಣ ಕ್ರೀಡೆಗೂ ಸೌಕರ್ಯ ಕಲ್ಪಿಸಲಾಗಿದೆ. ಬಂಕ್ ಮಿನಿಸ್ಟಪುಲ್ಲರ್ ಎಂಬ ವಾಸ್ತುತಜ್ಞ ರೂಪಿಸಿರುವ 'ಜಿಯೋಡೆಸಿಕ್' ಎಂದು ಕರೆಯಲಾಗುವ ಗೋಪುರ ವಿನ್ಯಾಸದ ವಾಸ್ತುರಚನೆಯನ್ನು ಅನುಸರಿಸಿ, ಉಜಿರೆಯಲ್ಲಿರುವ ವಿವಿಧೋದ್ದೇಶ ಕಲಾಭವನ(೧೯೯೪)ವನ್ನು ನಿರ್ಮಿಸಲಾಗಿದೆ. ಅಷ್ಟಭುಜಾಕೃತಿಯಲ್ಲಿರುವ ಈ ಕಟ್ಟಡಕ್ಕೆ ಅಲ್ಯೂಮಿನಿಯಂ, ರಾಕ್‌ವುಲ್ ಮತ್ತು ಚಿಪ್‌ಬೋರ್ಡುಗಳನ್ನೊಳಗೊಂಡ ಮೂರು ಪದರಗಳ ಛಾವಣಿಯನ್ನು ಒದಗಿಸಲಾಗಿದೆ. ಇದು ಹೊರನೋಟಕ್ಕೆ ಪಿರಮಿಡ್‌ನಂತೆ ತೋರುತ್ತಿದ್ದು, ಒಳಗೆ ಸಂಪೂರ್ಣ ಕಂಬರಹಿತವಾಗಿದೆ. ಎಸ್.ಡಿ.ಎಂ.ಇ.ಟ್ರಸ್ಟಿನ ಆಶ್ರಯದಲ್ಲಿ

ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯು ಕಾರ್ಯನಿರ್ವಹಿಸುತ್ತಿದ್ದು, ಯುವನಿರುದ್ಯೋಗಿಗಳಿಗೆ ಸ್ಫೂರ್ತಿಯ ಚಿಲುಮೆಯಾಗಿದೆ. ಧರ್ಮಸ್ಥಳದ ಗ್ರಾಮಾಭಿವೃದ್ಧಿ ಸಂಸ್ಥೆಯು ರೂಪಿಸಿರುವ ಸಸ್ಯಾಗಾರವೊಂದು ಈ ಪರಿಸರದಲ್ಲಿದ್ದು, ಕೃಷಿಕರಿಗೆ ಉಚಿತವಾಗಿ ಒದಗಿಸಲಾಗುವ ತೆಂಗು, ಬಾಳೆ, ಕರಿಮೆಣಸು, ಮುಂತಾದ ಸಸಿಗಳನ್ನು ಇಲ್ಲಿಂದ ಸರಬರಾಜು ಮಾಡಲಾಗುತ್ತದೆ.

**ಉಪ್ಪಿನಂಗಡಿ (೭,೧೨):** ತಾಲೂಕು ಕೇಂದ್ರ ಪುತ್ತೂರಿನಿಂದ ೧೩ ಕಿ.ಮೀ. ಈಶಾನ್ಯಕ್ಕೆ ಇರುವ ಹೋಬಳಿ ಕೇಂದ್ರ. ಆದರೆ ೧೯೨೭ರವರೆಗೆ ಇದೇ ಹೆಸರಿನಲ್ಲಿದ್ದ ತಾಲೂಕಿನ ಕೇಂದ್ರವೂ ಆಗಿತ್ತು. ಧರ್ಮಸ್ಥಳದ ಕಡೆಯಿಂದ ಬರುವ ನೇತ್ರಾವತಿ, ಹಾಗೂ ಕುಕ್ಕೆ ಸುಬ್ರಹ್ಮಣ್ಯ ಕಡೆಯಿಂದ ಬರುವ ಕುಮಾರಧಾರ ನದಿಗಳ ಸಂಗಮಕ್ಷೇತ್ರ ಇದಾಗಿದ್ದು, ಇದು ಹಿಂದೆ ಮಂಗಳೂರಿನಿಂದ ಉಪ್ಪನ್ನೂ ಘಟ್ಟದ ಮೇಲಿನಿಂದ ಸಾಂಬಾರು ಪದಾರ್ಥಗಳನ್ನೂ ತಂದು ಪರಸ್ಪರ ಬದಲಾವಣೆ ಮಾಡಿಕೊಳ್ಳುತ್ತಿದ್ದ ಕೇಂದ್ರವಾಗಿದ್ದು ಅದರಿಂದಾಗಿ ಇದಕ್ಕೆ ತುಳುವಿನಲ್ಲಿ 'ಉಬರ್' ಎಂದು ಕರೆಯಲಾಗುತ್ತದೆಂಬ ಅಭಿಪ್ರಾಯವಿದೆ. ಮಂಗಳೂರಿನಿಂದ ತಂದ ಉಪ್ಪನ್ನು ಇಲ್ಲಿಂದ ವಿವಿಧೆಡೆಗಳಿಗೆ ವಿತರಿಸುತ್ತಿದ್ದುದರಿಂದಾಗಿ ಉಬಾರ್ ಉಪ್ಪಿನ ಅಂಗಡಿ ಎಂದು ಹೆಸರು ಪಡೆದು, ಮುಂದೆ ಅದೇ ಉಪ್ಪಿನಂಗಡಿ ಆಯಿತೆಂಬ ಅಭಿಪ್ರಾಯವೂ ಇದೆ. ವಾದಿರಾಜಯತಿ ಹಾಗೂ ಮಧ್ವಾಚಾರ್ಯರು ಈ ಕ್ಷೇತ್ರವನ್ನು ಸಂದರ್ಶಿಸಿದ್ದರೆಂಬ ಐತಿಹ್ಯವಿದೆ. ಪೌರಾಣಿಕವಾಗಿ ಇದು ದಕ್ಷಿಣ ಕಾಶಿ, ಗಯಾ, ಪ್ರಯಾಗ, ಮುಕ್ತಿಕ್ಷೇತ್ರ ಎಂದೆಲ್ಲ ಕರೆಯಲ್ಪಟ್ಟಿದ್ದು, ಮರಣೋತ್ತರ ಸದ್ಗತಿಕರ್ಮಗಳಿಗೆ ಅತ್ಯಂತ ಪ್ರಶಸ್ತವಾದ ಸ್ಥಳ. ಇಲ್ಲಿ ಅಸ್ಥಿವಿಸರ್ಜನೆ, ಪಿಂಡಪ್ರದಾನ, ಪೂಜೆ ಪುಣ್ಯಾಹ, ಸಮಾರಾಧನಾದಿ ಕಾರ್ಯ ಎಲ್ಲಾ ದಿನಗಳಲ್ಲೂ ನಡೆದೇ ಇರುತ್ತವೆ.

ಬಹಳ ಹಿಂದೆ ಸಾಮಂತರಸರಾಳಿದ ರಾಜಧಾನಿ ಪಟ್ಟಣವಾಗಿದ್ದ ಇದು ನದಿಗಳ ಸಂಗಮಸ್ಥಳದಲ್ಲಿರುವುದರಿಂದ ಪ್ರವಾಹದ ಭೀತಿಯನ್ನು ಹೊಂದಿದ್ದು ೧೯೨೩ ಹಾಗೂ ೧೯೭೪ರಲ್ಲಿ ಪ್ರವಾಹದ ಹೊಡೆತಕ್ಕೆ ಸಿಲುಕಿ ನಲುಗಿತ್ತು. ಊರ ಬಳಿಯ ನೇತ್ರಾವತಿ ನದಿಯಲ್ಲಿರುವ ಸ್ವಯಂಭು ಸಹಸ್ರಲಿಂಗಕ್ಕೆ ಹಿಂದೆ ಸಣ್ಣ ಗುಡಿಯೊಂದು ಇದ್ದಿರಬೇಕೆಂಬುದಕ್ಕೆ ಅಲ್ಲಿ ಕುರುಹುಗಳಿವೆ. ಮಳೆಗಾಲದಲ್ಲಿ ಅದು ಜಲಸಮಾಧಿಯಾಗುವುದರಿಂದ ದಡದ ಮೇಲಿರುವ ಗುಡಿಯಲ್ಲಿ ಬೇರೊಂದು ಶಿವಲಿಂಗವನ್ನು ಪ್ರತಿಷ್ಠಾಪಿಸಿ ಆರಾಧಿಸಲಾಗುತ್ತಿದೆ. ಬೇಸಿಗೆಯಲ್ಲಿ ಜಾತ್ರೆ ನಡೆಯುವ ಸಂದರ್ಭದಲ್ಲಿ ಮೂಲಲಿಂಗದ ದರ್ಶನ ಪಡೆಯಬಹುದಾಗಿದೆ. ಕಡೇಶ್ವಾಲದಿಂದ ಉಪ್ಪಿನಂಗಡಿಯವರೆಗೆ ನೇತ್ರಾವತಿಯಲ್ಲಿರುವ ಶಿಲೆಗಳೆಲ್ಲವೂ ಶಿವಲಿಂಗಗಳೆಂಬ ಅಭಿಪ್ರಾಯವೂ ಈ ಭಾಗದಲ್ಲಿದೆ. ಸಹಸ್ರಲಿಂಗಗುಡಿ ಸನಿಹದಲ್ಲಿ ಮಾರಿಕಾಳಿಯ ಗುಡಿ ಇದೆ. ಹಿಂದೆ, ಅಲ್ಲಿದ್ದ ಕಾಷ್ಠ ಬಿಂಬದ ಬದಲಿಗೆ ಶಿಲಾಪ್ರತಿಮೆಯನ್ನಿಂದು ಇರಿಸಲಾಗಿದೆ. ಹಿಂದೆ, ನದಿಗೆ ಸೇತುವೆಗಳಿಲ್ಲದ ಸಮಯದಲ್ಲಿ ಇಲ್ಲಿ ನದಿ ದಾಟಲು ಕಡವುಗಳನ್ನು ಉಪಯೋಗಿಸಲಾಗುತ್ತಿದ್ದು, ಕಲ್ಕುಡ ದೈವದ ಮೂಲಸ್ಥಾನ ಇದು ಎಂಬ ನಂಬಿಕೆಯೂ ಇಲ್ಲಿದೆ. ಅದಕ್ಕೆ ಸಂಬಂಧಿಸಿದಂತೆ ಕಲ್ಕುಡ ದೈವವು ಹೊಳೆ ದಾಟಲು ಜನರಿಗೆ ನೀಡುತ್ತಿದ್ದ ನೆರವು ಇಲ್ಲಿ ಜನಜನಿತವಾಗಿದೆ. ಇಲ್ಲಿ ಕಂಬಳ ಸ್ಪರ್ಧೆಯೂ ನಡೆಯುತ್ತದೆ.

ಇಲ್ಲಿಯ ಸಹಸ್ರಲಿಂಗೇಶ್ವರನ ಸನ್ನಿಧಿಯಲ್ಲಿ ಕುಂಭಮಾಸದಲ್ಲಿ ಒಂದರ ಮೇಲೊಂದರಂತೆ ನಡೆಯುವ 'ಮಖೆಕೂಟ' ಎಂದು ಕರೆಯಲ್ಪಡುವ ಮೂರು ಜಾತ್ರೆಗಳು ಇಲ್ಲಿನ ವಿಶೇಷ. ಪೌರ್ಣಮಿ ಮಖೆಕೂಟ ಜಾತ್ರೆಯು ಎಂಟು ದಿನಗಳದ್ದಾದರೆ, ಅಷ್ಟಮಿ ಮಖೆಕೂಟ ಮತ್ತು ಮಹಾಶಿವರಾತ್ರಿ ಮಖೇಕೂಟಗಳು ಎರಡೆರಡು ದಿನ ನಡೆಯುವ ಸಣ್ಣ ಜಾತ್ರೆಗಳು. ಆ ಸಂದರ್ಭಗಳಲ್ಲಿ ಉತ್ಸವ–ರಥೋತ್ಸವಗಳಿರುತ್ತವೆ. ಇಲ್ಲಿಯ ಲಕ್ಷ್ಮೀವೆಂಕಟರಮಣ ದೇವಾಲಯವು ಗೌಡಸಾರಸ್ವತರ ಪ್ರಾಚೀನ ದೇವಾಲಯಗಳಲ್ಲೊಂದಾಗಿದೆ. ಪ್ರತ್ಯೇಕ ಗರ್ಭಗೃಹಗಳಲ್ಲಿರುವ ವೆಂಕಟೇಶ ಹಾಗೂ ಲಕ್ಷ್ಮೀದೇವಿಯ ಶಿಲಾಮೂರ್ತಿಗಳಿಗೆ ನವರಾತ್ರಿಯಲ್ಲಿ ನಡೆಯುವ ಮಖರಾದೇವಿ ಅರ್ಚನೆಯು ವಿಶಿಷ್ಟವಾಗಿದ್ದು, ಮಾಧ್ವನವಮಿಯಂದು ಜರುಗುವ ಬ್ರಹ್ಮರಥೋತ್ಸವ ಪ್ರಮುಖವಾದುದಾಗಿದೆ. ಇಲ್ಲಿ ಚಂದ್ರನಾಥ ಬಸದಿ ಹಾಗೂ ದೀನರ ಕನ್ಯಾ ಮಾತೆಗೆ ಅರ್ಪಿತವಾದ ಕ್ರೈಸ್ತ ಇಗರ್ಜಿಗಳಿವೆ. ಅಲ್ಲದೇ ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಉಳ್ಳಾಲ (೪೯,೮೫):** ಜಿಲ್ಲಾ ಕೇಂದ್ರ ಮಂಗಳೂರಿನಿಂದ ಎಂಟು ಕಿ.ಮೀ. ದೂರದಲ್ಲಿ ನೇತ್ರಾವತಿಯ ದಕ್ಷಿಣ ದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಪಟ್ಟಣ ಪಂಚಾಯತಿಯ ನಿಯಂತ್ರಣಕ್ಕೊಳಪಟ್ಟಿರುವ ಪಟ್ಟಣ. ಕಡಲಂಚಿನ ಕಿನಾರೆ (ಬೀಚು)ಯಿಂದಾಗಿ ಪ್ರವಾಸಿಗರನ್ನು ಆಕರ್ಷಿಸುತ್ತಿರುವ ಪ್ರವಾಸಿ ತಾಣ. ಅಲ್ಲಿರುವ ಸಂತ ಸೈಯದ್ ಮದನಿ ದರ್ಗಾದಿಂದಾಗಿ ಮುಸ್ಲಿಮರಿಗೆ ಪವಿತ್ರ ತಾಣ. ಮಂಗಳೂರು–ಕಾಸರಗೋಡು–ಕಲ್ಲಿಕೋಟೆ ಬ್ರಾಡ್‌ಗೇಜ್ ಮಾರ್ಗದಲ್ಲಿ, ಉಳ್ಳಾಲ ಪಟ್ಟಣದಿಂದ ಎರಡು ಕಿ.ಮೀ. ದೂರದಲ್ಲಿ ಉಳ್ಳಾಲ ರೈಲು ನಿಲ್ದಾಣವಿದೆ. ಹಿಂದೆ ಪುತ್ತಿಗೆಯ ಚೌಟರಸರ ಶಾಖಾ ಮನೆತನವೊಂದು ಉಳ್ಳಾಲದಿಂದ ರಾಜ್ಯಭಾರ ಮಾಡುತ್ತಿದ್ದು, ಉಳ್ಳಾಲದ ನೆರೆಯ ಸೋಮೇಶ್ವರದ ಸೋಮನಾಥ ಅವರ ಕುಲದೇವರಾಗಿತ್ತು. ಮಿಗಿಲಾಗಿ ಈ ಮನೆತನಕ್ಕೆ ಸೇರಿದ ರಾಣಿ ಅಬ್ಬಕದೇವಿಯು

ಸುಮಾರು ೧೫೫೦ರಲ್ಲಿ ಆಳ್ವಿಕೆ ನಡೆಸಿದ್ದು ಇಲ್ಲಿಂದಲೇ. ಅವಳ ಧೈರ್ಯ–ಶೌರ್ಯಗಳು ಪೋರ್ಚುಗೀಸರಲ್ಲೂ ದಿಗಿಲುಂಟು ಮಾಡಿದ್ದು ಮಹತ್ವದ ಸಂಗತಿಯಾಗಿತ್ತು. ಆದರೆ ೧೬೫೦ರ ವೇಳೆಗೆ ಇದು ಕೆಳದಿ ನಾಯಕರ ನಿಯಂತ್ರಣಕ್ಕೊಳಪಟ್ಟಿತು. ಆದರೂ ಚೌಟರಸರ ಕಾಲದ ಕೋಟೆ ಹಾಗೂ ಅರಮನೆಯ ಅವಶೇಷಗಳನ್ನು ಈಗಲೂ ಇಲ್ಲಿ ಗುರುತಿಸಬಹುದಾಗಿದೆ. ಇಲ್ಲಿರುವ ಸೋಮನಾಥ ದೇವಾಲಯವು ಇಟಲಿಯ ಶಿಲ್ಪಕಲಾ ಮಾದರಿಯ ಸುಂದರ ಶಿಲ್ಪಗಳನ್ನು ಹೊಂದಿದೆ. ಸುಮಾರು ೧೬ನೆಯ ಶತಮಾನದಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಫ್ಲಾರೆನ್‌ಟೈನ್ ಶಿಲ್ಪಿಗಳ ಪ್ರಭಾವದಿಂದಾಗಿ ಆ ಮಾದರಿಯು ಈ ಭಾಗದಲ್ಲೂ ರೂಢಿಗೆ ಬಂದಿರಬಹುದೆಂದು ಹೇಳಲಾಗುತ್ತದೆ. ಇದರ ಸನಿಹದಲ್ಲೇ ಒಂಭತ್ತು ಕಿ.ಮೀ. ದಕ್ಷಿಣದಲ್ಲಿರುವ ಉಚಿಲಕೋಟೆಯು ಉಳ್ಳಾಲದ ರಾಣಿ ಅಬ್ಬಕ್ಕದೇವಿಯ ನಿಯಂತ್ರಣಕ್ಕೊಳಪಟ್ಟಿದ್ದ ಬಲಿಷ್ಠ ರಕ್ಷಣಾ ನೆಲೆಯಾಗಿದ್ದು, ಅಲ್ಲೊಂದು ಅರಮನೆ ಕೂಡ ಇದೆ. ಅಲ್ಲದೇ ಭೈರರಸರೊಡೆಯರ ಅರಮನೆಯೂ ಇತ್ತೆಂದು ತಿಳಿದುಬರುತ್ತವೆ. ಅದನ್ನು ಫೆರ್ರಿ ಮೂಲಕ ತಲುಪಬಹುದಾಗಿದೆ. ಉಳ್ಳಾಲದಲ್ಲಿರುವ ಸೈಯದ್ ಮಹಮದ್ ಷರಿಫುಲ್ ಮದನಿ ತಂಗಳೆ ದರ್ಗಾವು ಉಳ್ಳಾಲದ ಪ್ರಮುಖ ಯಾತ್ರಾಸ್ಥಳವಾಗಿದೆ. ಮುಸ್ಲಿಮರಿಗೆ ಪವಿತ್ರ ನೆಲೆಯಾದ ಇದು ದಕ್ಷಿಣದ ಅಜ್ಮೀರ್ ಎಂದೇ ಖ್ಯಾತಿ ಪಡೆದಿದೆ. ಸುಮಾರು ೪೦೦ ವರ್ಷಗಳ ಹಿಂದೆ ಮದೀನಾದಿಂದ ಉಳ್ಳಾಲದ ಮೇಲಂಗಡಿಗೆ ಬಂದು ನೆಲೆಸಿದ ಮದನಿಯು ಇದೇ ಊರಿನ ಹೊಳಲ್ಕೆರೆಯಲ್ಲಿ ವಾಸಿಸುತ್ತಿದ್ದ ಕುಟುಂಬವೊಂದರ ಹೆಣ್ಣನ್ನು ವಿವಾಹವಾದನು. ಹಲವಾರು ಪವಾಡಗಳನ್ನು ಮೆರೆಯುವ ಮೂಲಕ ಜನಮೆಚ್ಚುಗೆಗೆ ಪಾತ್ರನಾದನು. ಕಾಲಾಂತರದಲ್ಲಿ ನಿಧನ ಹೊಂದಿದ ಅವನನ್ನು ಇಲ್ಲೇ ಸಮಾಧಿ ಮಾಡಲಾಯಿತು. ನಂತರದಲ್ಲಿ ಅವನ ದರ್ಗಾದಲ್ಲಿ ಪ್ರತೀ ಐದು ವರ್ಷಗಳಿಗೊಮ್ಮೆ ಉರುಸನ್ನು ಆಚರಿಸಲು ಅವನ ಅನುಯಾಯಿಗಳು ಮುಂದಾದರು. ಅದೇ ಪರಂಪರೆ ಈಗಲೂ ರೂಢಿಯಲ್ಲಿದೆ. ಸುಮಾರು ಒಂದು ತಿಂಗಳು ನಡೆಯುವ ಈ ಉರುಸಿನಲ್ಲಿ ಭಾಗವಹಿಸಲೆಂದೇ ದೂರದ ಊರುಗಳಿಂದ ಲಕ್ಷಾಂತರ ಜನ ಬರುತ್ತಾರೆ. ಆ ಸಂದರ್ಭದಲ್ಲಿ ಹರಕೆ ರೂಪದಲ್ಲಿ ಸಲ್ಲಿಸಲ್ಪಡುವ ಆಡು–ಹೋತಗಳನ್ನು ಹರಾಜು ಹಾಕುವುದರಿಂದಲೇ ಲಕ್ಷಾಂತರ ರೂಪಾಯಿ ಸಂಗ್ರಹವಾಗುತ್ತದೆ.

ಸಂತನು ಮಡಿದ ಬೆನ್ನಲ್ಲೇ ನಿರ್ಮಾಣಗೊಂಡ ಈ ದರ್ಗಾವನ್ನು ಈವರೆಗೆ ನಾಲ್ಕು ಬಾರಿ ಮಾರ್ಪಡಿಸಿ ಸಾಕಷ್ಟು ವಿಸ್ತರಿಸಲಾಗಿದೆ. ಹಾಲಿ ಇರುವ ರಚನೆಯ ವಿನ್ಯಾಸವನ್ನು ೧೯೭೦ರಲ್ಲಿ ಹೈದರಾಬಾದಿನ ವಾಸ್ತುತಜ್ಞ ಘಿಯಾಸುದ್ದಿನ್ ಅಹ್ಮದ್ ರೂಪಿಸಿದ್ದು, ಇದೊಂದು ಸುಂದರ ರಚನೆಯಾಗಿದೆ. ಸುಂದರ ಗುಮ್ಮಟವನ್ನುಳ್ಳ ನಯನ ಮನೋಹರವಾದ ಈ ದರ್ಗಾಕ್ಕೆ ಸೇರಿದಂತೆ ಇರುವ ಮಸೀದಿಯೂ ಅಷ್ಟೇ ಆಕರ್ಷಕವಾಗಿದೆ. ದರ್ಗಾದೊಳಗಿರುವ ಬಾವಿಗೆ ಅಮೃತಶಿಲೆಯ ಕಟ್ಟೆ ನಿರ್ಮಿಸಿದ್ದು, ೧೯೪೫ರ ಬರಗಾಲದಲ್ಲಿ ಅಲ್ಲಿ ಜಲ ಉಕ್ಕಿತ್ತೆಂದು ಹೇಳಲಾಗುತ್ತದೆ. ಈ ದರ್ಗಾದ ಸಯ್ಯದ್ ಮದನಿ ಟ್ರಸ್ಟ್‌ನ ಅಧೀನದಲ್ಲಿ ಅರೆಬಿಕ್ ಕಾಲೇಜು, ಪ್ರೌಢಶಾಲೆ ಹಾಗೂ ವಸತಿನಿಲಯಗಳಿವೆ. ಅಲ್ಲದೇ ವಿವಿಧೆಡೆಗಳಲ್ಲಿ ಅನೇಕ ಅರೆಬಿಕ್ ಶಾಲೆಗಳು ಕಾರ್ಯಪ್ರವೃತ್ತವಾಗಿವೆ. ಉಳ್ಳಾಲದ ಥೋಟಾಮಂಗಳೂರು ಪ್ರದೇಶದಲ್ಲಿ ಮದನಿ ಕೇಂದ್ರದ ಸಂಸ್ಥೆಗಳು ಹರಡಿಕೊಂಡಿವೆ. ಉಳ್ಳಾಲ–ಸೋಮೇಶ್ವರಗಳ ನಡುವಣ ಸುಮಾರು ಎರಡು ಕಿ.ಮೀಗಳ ಕಡಲತೀರದ ನೀಳ ಬೀಚಿನ ಮರಳುದಂಡೆಯ ವಿಹಾರ ವಿಶಿಷ್ಟವಾಗಿರುತ್ತದೆ. ಇಲ್ಲಿರುವ ಸಮ್ಮರ್‌ಸ್ಯಾಂಡ್ಸ್ ಬೀಚ್ ರಿಸಾರ್ಟ್ ಅಷ್ಟೇ ಆಕರ್ಷಕವಾಗಿದ್ದು, ಅಲ್ಲಿ ಪ್ರವಾಸಿಗರಿಗೆ ಬೇಕಾದ ಎಲ್ಲ ಸೌಕರ್ಯಗಳೂ ಲಭ್ಯವಿದೆ.

**ಎಡಮಂಗಲ (೩,೭೫೬) :** ತಾಲೂಕು ಕೇಂದ್ರ ಸುಳ್ಯದಿಂದ ೨೫ ಕಿ.ಮೀ. ಉತ್ತರಕ್ಕೆ ಇರುವ ಚಾರಿತ್ರಿಕ ಮಹತ್ವದ ಸ್ಥಳ. ಮಂಗಳೂರು–ಹಾಸನ ರೈಲು ಮಾರ್ಗದಲ್ಲಿರುವ ಒಂದು ನಿಲ್ದಾಣ. ಪ್ರಾಚೀನ ಶಾಸನಗಳಲ್ಲಿ ಎಡೆಮಂಗಲ, ಇಡೆಮಂಗಲ ಎಂದೆಲ್ಲ ಉಲ್ಲೇಖಿತಗೊಂಡಿರುವ ಈ ಊರು ಗಜಪೃಷ್ಠಾಕಾರದಲ್ಲಿರುವ ಪಂಚಲಿಂಗೇಶ್ವರ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಸುಮಾರು ೧೯೮೩ರಲ್ಲಿ ಜೀರ್ಣೋದ್ಧಾರಗೊಂಡಿರುವ ಈ ಗುಡಿಯ ಗರ್ಭಗೃಹದಲ್ಲಿ ಏಕ ಪೀಠದ ಮೇಲೆ ಐದು ಶಿವಲಿಂಗಗಳಿದ್ದು, ಅವನ್ನು ಶಿವನ ಪಂಚಮುಖಗಳೆಂದು ಭಾವಿಸಲಾಗುತ್ತದೆ. ಆ ಐದು ಲಿಂಗಗಳಲ್ಲಿ ಮಧ್ಯದ ಶಿವಲಿಂಗವು ದೊಡ್ಡದಾಗಿದ್ದರೆ, ಉಳಿದವು ಕಿರಿದಾಗಿವೆ. ಈ ದೇವಾಲಯ ಪರಿಸರದಲ್ಲೇ ಲಭಿಸಿರುವ ಎರಡು ಶಿಲಾಶಾಸನಗಳಿಂದ (೧೪೩೨) ವಿಜಯನಗರದ ಅರಸರ ಆಡಳಿತಾವಧಿಯಲ್ಲಿ, ದೇವರಾಯ ಒಡೆಯನು ಮಂಗಳೂರು ರಾಜ್ಯವನ್ನು ಆಳುತ್ತಿದ್ದಾಗ, ಕಡಬ (ಪುತ್ತೂರು ತಾ.)ದ ಅಧಿಕಾರಿ ರಾಮರಸನು ಈ ದೇವಾಲಯಕ್ಕೆ ದತ್ತಿಬಿಟ್ಟ ಅಂಶ ವೇದ್ಯವಾಗುತ್ತದೆ. ಈ ದೇವರ ವಾರ್ಷಿಕ ಜಾತ್ರೆಯು ಕುಂಭ ಮಾಸದಲ್ಲಿ ಜರುಗುತ್ತದೆ. ಈ ಗ್ರಾಮಕ್ಕೆ ಸೇರಿದ **ಬೀಡು** ಎಂಬಲ್ಲಿ ಪ್ರಾಚೀನ ಪಟ್ಟಣವೊಂದರ ಕುರುಹುಗಳಿವೆ. ಈ ಗುಡಿಯ ಎದುರಲ್ಲಿರುವ ದುರ್ಗಾಪರಮೇಶ್ವರಿಯ ಗುಡಿಯಲ್ಲಿ ದೇವಿಯ ಮೃಣ್ಮಯಮೂರ್ತಿ ಇದೆ. ಎಡಮಂಗಲಕ್ಕೆ ಸಮೀಪದಲ್ಲೇ ಹರಿಯುವ ಕುಮಾರಧಾರಾ ನದಿಯಲ್ಲಿ ಆಳವಾದ ಮಡುವೊಂದಿದ್ದು,

ಅದನ್ನು 'ನಾಕೂರುಗಯ' ಎಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಈ ಮಡುವು ಎಡಮಂಗಲದಿಂದ ಮೂರು ಕಿ.ಮೀ. ದೂರದಲ್ಲಿ ಕುಮಾರಧಾರಾ ನದಿಗೆ ಕಟ್ಟಿರುವ ರೈಲು ಸೇತುವೆಯ ಮಗ್ಗುಲಲ್ಲೇ ಇದ್ದು, ರುದ್ರರಮಣೀಯವಾಗಿದೆ. ಪುತ್ತೂರು, ಸುಳ್ಯ ಭಾಗದ ರೈತರು, ದನಕರುಗಳಿಗೆ ಸಂಬಂಧಿಸಿದಂತೆ ನಾಕೂರುಗಯಕ್ಕೆ, ಹಾಲೆರೆಯುವ ಹರಕೆ ಹೊರುವುದು ಈಗಲೂ ರೂಢಿಯಲ್ಲಿದೆ.

**ಎಣ್ಮೂರು(೧೫೮೧):** ತಾಲೂಕು ಕೇಂದ್ರ ಸುಳ್ಯದಿಂದ ೨೬ ಕಿ.ಮೀ. ಉತ್ತರಕ್ಕಿರುವ ಇದು ಕೋಟಿ ಚನ್ನಯ ಅವಳಿ ಸೋದರ ದೈವಗಳ ಸಮಾಧಿಯಿಂದಾಗಿ ಪ್ರಸಿದ್ಧವಾಗಿದೆ. ತುಳು ಜನಪದ ಸಾಹಿತ್ಯದ ಜನಪ್ರಿಯ ನಾಯಕರಾಗಿರುವ ಇವರ ಜನ್ಮಸ್ಥಳ ಬಡಗನ್ನೂರು (೩,೧೨೫) ಗ್ರಾಮದ ಪಡುಮಲೆ (ಪುತ್ತೂರು ತಾ.)ಯಾಗಿದ್ದು, ಅವರಿಗೆ ಸಂಬಂಧಿಸಿದ ಕೆಲವು ಸ್ಮಾರಕಗಳು ಅಲ್ಲೂ ಇವೆ. ಕೋಟಿ–ಚೆನ್ನಯರ ಬದುಕಿಗೆ ಸಂಬಂಧಿಸಿದಂತೆ ಜನಪದ ಸಾಹಿತ್ಯದಲ್ಲಿ ಲಭಿಸುವ ಮಾಹಿತಿಯನ್ನು ವಿದ್ವಾಂಸರು ಈ ರೀತಿ ಸಂಕ್ಷೇಪಿಸಿದ್ದಾರೆ. ಆ ಪ್ರಕಾರ ಪಡುಮಲೆ ಸೀಮೆಯನ್ನಾಳುತ್ತಿದ್ದ ಪೆರುಮಾಳ ಬಲ್ಲಾಳನ ಕಾಲಿಗೆ ಬೇಟೆ ಸಂದರ್ಭದಲ್ಲಿ ಮುಳ್ಳು ಚುಚ್ಚಿ ಸಂಕಟಪಡುತ್ತಿದ್ದಾಗ ತುಂಬು ಗರ್ಭಿಣಿಯಾಗಿದ್ದ ಬಿಲ್ಲವತಿ ದೇಯಿಬೈದಿತಿಯು ಚಿಕಿತ್ಸೆ ನೀಡಿ ಗುಣಪಡಿಸಿ ಬಲ್ಲಾಳನ ಕೃಪೆಗೆ ಪಾತ್ರಳಾದಳು. ಆನಂತರ ಕೋಟಿ–ಚನ್ನಯರೆಂಬ ಅವಳಿ ಮಕ್ಕಳನ್ನು ಹಡೆದು ಗತಿಸಿದಳು. ಸೋದರಮಾವ ಸಾಇನಬೈದ್ಯನ ಆಶ್ರಯದಲ್ಲಿ ಬೆಳೆದು ವಯಸ್ಕರಾದ ಇವರು, ತಮ್ಮ ತಾಯಿಗೆ ಹಿಂದೆ ಬಲ್ಲಾಳನು ನೀಡಿದ್ದ ವಾಗ್ದಾನದಂತೆ, ತಮಗೆ ಬಳುವಳಿ ನೀಡಲು ಪಡುಮಲೆಯ ಬಲ್ಲಾಳನನ್ನು ಒತ್ತಾಯಿಸಿ, ವಿಫಲರಾದಾಗ ಅದಕ್ಕಾಗಿ ಬಲ್ಲಾಳನಿಗೆ ಆರು ವರ್ಷ ಗಡುವನ್ನು ನೀಡುವ ಮೂಲಕ ಅವನ ಆಕ್ರೋಶಕ್ಕೆ ತುತ್ತಾಗಿ, ಪಡುಮಲೆ ಸೀಮೆಯನ್ನು ತ್ಯಜಿಸಿ ನೆರೆಯ ಪಂಜಸೀಮೆಗೆ ಬಂದು ಸೇರಿದರು. ಅಲ್ಲಿ ಅಕ್ಕ ಕಿನ್ನಿದಾರು ಹಾಗೂ ಭಾವ ಪಯ್ಯಬೈದ್ಯನನ್ನೂ ಸಂಧಿಸಿ ಸಂಭ್ರಮಿಸಿದರು. ಇತ್ತ ಪಡುಮಲೆ ಬಲ್ಲಾಳನು, ಕೋಟಿ ಚೆನ್ನಯರನ್ನು ಸಿಕ್ಕಲ್ಲಿ ಕೊಲ್ಲುವಂತೆ ತನ್ನ ಭಟರಿಗೆ ಆಜ್ಞೆ ವಿಧಿಸಿದನು. ಸಾಕು ತಂದೆ ಸಾಯಿನ ಬೈದ್ಯನು ಬಲ್ಲಾಳನ ಕೈಗೆ ಸಿಲುಕಿ ಹಿಂಸೆಗೆ ಗುರಿಯಾದರೆ, ಸಾಕುತಾಯಿ ಸಾಯಿಬೈದಿತಿಯು ಎಣ್ಮೂರು ಸೀಮೆಗೆ ತಲೆಮರೆಸಿಕೊಂಡು ಹೋಗಿ ಸಂಬಂಧಿ ತಿಮ್ಮಣ್ಣ ಬೈದ್ಯನ ಮನೆಯಲ್ಲಿ ಆಶ್ರಯಪಡೆದಳು. ಅಲ್ಲದೆ, ಸಾಕುಮಕ್ಕಳಾದ ಕೋಟಿ ಚೆನ್ನಯರ ಸಾಹಸವನ್ನು ವರ್ಣಿಸುವ ಮೂಲಕ ಅವರ ಸಾಹಸ ಎಣ್ಮೂರು ಸೀಮೆಯಲ್ಲಿ ಮನೆಮಾತಾಗುವಂತೆ ಮಾಡಿದಳು. ಏತನ್ಮಧ್ಯೆ ಪಡುಮಲೆ ಬಲ್ಲಾಳನು ಪಂಜದ ಬಲ್ಲಾಳನಿಗೆ ಪತ್ರ ಬರೆದು, ಕೋಟಿ–ಚೆನ್ನಯರನ್ನು ಸೆರೆ ಹಿಡಿದು ಒಪ್ಪಿಸುವಂತೆ ಕೋರಿದನು. ಅದರಂತೆ ಯತ್ನಗಳು ನಡೆದವಾದರೂ ಅವು ವಿಫಲಗೊಂಡು, ವೀರ ಸೋದರರು ಪಂಜ ಸೀಮೆಯಿಂದ ತಪ್ಪಿಸಿಕೊಂಡು ಎಣ್ಮೂರು ಸೀಮೆಯನ್ನು ತಲುಪಿದರು. ಎಣ್ಮೂರು ಸೀಮೆಯ ದೇವಬಲ್ಲಾಳ ಹಾಗೂ ಪಂಜದ ಕೇಮರ ಬಲ್ಲಾಳನ ನಡುವೆ ಗಡಿ ವಿವಾದವಿದ್ದು, ಪಂಜದ ಬಲ್ಲಾಳನು ಎಣ್ಮೂರಿನ ಗಡಿಯನ್ನು ಒತ್ತರಿಸಿ, ಗಡಿಕಲ್ಲು ನೆಟ್ಟಿದ್ದನು. ಇದನ್ನು ಕೋಟಿ ಚೆನ್ನಯರು ಯಾರ ಪ್ರೇರಣೆಯೂ ಇಲ್ಲದೇ ಕಿತ್ತು ಸರಿಪಡಿಸುವ ಮೂಲಕ ಎಣ್ಮೂರಿನ ಬಲ್ಲಾಳನ ವಿಶ್ವಾಸಕ್ಕೆ ಪಾತ್ರರಾದರು. ಅಲ್ಲದೆ ಎಣ್ಮೂರಿನಲ್ಲಿ ಮರಣಶಯ್ಯೆಯಲ್ಲಿದ್ದ ಸಾಕುತಾಯಿ ಸಾಯಿಬೈದಿತಿಯನ್ನು ಸಂಧಿಸಿದರು. ಸಾಕು ಮಕ್ಕಳ ಕೈಯಿಂದ ಹಾಲನ್ನು ಸೇವಿಸಿ ಅವಳು ಅಸುನೀಗಿದಳು. ಏತನ್ಮಧ್ಯೆ, ದೇವಬಲ್ಲಾಳನು ಸೀಮೆಯ ವಿವಾದಗ್ರಸ್ತ ಭಾಗದಲ್ಲಿದ್ದ ಅಯ್ಯನೂರು ಗುತ್ತನ್ನು ಅವರ ವಾಸಕ್ಕೆಂದು ಬಿಟ್ಟುಕೊಟ್ಟನು. ಅಲ್ಲೇ ಸುಖದಿಂದ ಜೀವಿಸುತ್ತಾ ಶತ್ರುಸೀಮೆಯ ಬಂಟಮಲೆ ಕಾಡಲ್ಲಿ ಬೇಕೆಂದಾಗ ಬೇಟೆಯಾಟಿಕೊಂಡಿದ್ದರು. ಇದು ಸಹಜವಾಗಿ ಪಡುಮಲೆ ಹಾಗೂ ಪಂಜ ಸೀಮೆಯ ಬಲ್ಲಾಳರನ್ನು ಕೆರಳಿಸಿತು. ಅವರು ಕ್ರಮವಾಗಿ ಕೋಟಿ ಚೆನ್ನಯರ ಸಾಕುತಂದೆ ಸಾಯಿನಬೈದ್ಯ ಹಾಗೂ ಅಕ್ಕ ಕಿನ್ನಿದಾರುವನ್ನು ಕ್ರೂರಹಿಂಸೆಗೆ ಒಳಪಡಿಸಿದರು.

ಏತನ್ಮಧ್ಯೆ ಕೋಟಿ ಚೆನ್ನಯ ಸೋದರರು ತುಪ್ಪೆಕಲ್ಲು ಮಲೆಗೆ ಬೇಟೆಯ ನೇಪದಲ್ಲಿ ಹೋಗಿ, ಶತ್ರುಗಳು ಯುದ್ಧಕ್ಕೆ ಬಂದರೆ, ಅವರನ್ನು ಕೊಂದು ರುಂಡ ತಂದು ಅರ್ಪಿಸುವುದಾಗಿ, ಎಣ್ಮೂರಿನ ಬಲ್ಲಾಳನಿಂದ ಅಪ್ಪಣೆಯ ವೀಳ್ಯ ಪಡೆದರು. ಅದರಂತೆ ಅವರು ಬೇಟೆಯಾಡಿದ ಕಾಡುಹಂದಿಯೊಂದು ಪಂಜಸೀಮೆಗೆ ನುಗ್ಗಿತು. ಅದರ ಬೆನ್ನಟ್ಟಿ ಹೋಗಿ ಅದನ್ನು ಚೆನ್ನಯನು ಕೊಂದನು. ಹಂದಿಯ ಹಕ್ಕಿಗಾಗಿ, ಪಂಜದ ಭಟರೊಂದಿಗೆ ಘರ್ಷಣೆಯುಂಟಾಯಿತು. ಅದನ್ನೇ ಮುಂದಿಟ್ಟುಕೊಂಡು ಪಡುಮಲೆ ಹಾಗೂ ಪಂಜದ ಬಲ್ಲಾಳರು ಒಂದಾಗಿ ಎಣ್ಮೂರಿಗೆ ಮುತ್ತಿಗೆ ಹಾಕಿದರು. ಆದರೆ ಕೋಟಿ ಚೆನ್ನಯರ ಶೌರ್ಯದಿಂದಾಗಿ ಪಂಜದ ಬಲ್ಲಾಳ ಯುದ್ಧರಂಗದಿಂದ ಕಾಲ್ಕಿತ್ತರೆ, ಪಡುಮಲೆ ಬಲ್ಲಾಳನು ಶರಣಾಗತನಾದನು. ಏತನ್ಮಧ್ಯೆ, ರಣರಂಗದಲ್ಲಿ ಅಂಬೊಂದರ ಹೊಡೆತಕ್ಕೆ ಸಿಲುಕಿದ ಕೋಟಿ ಜರ್ಝರಿತನಾದರೂ, ಎಣ್ಮೂರಿನ ದೇವಬಲ್ಲಾಳನಿಗೆ ಗೆಲುವು ಲಭಿಸಿ ಅವನ ಪ್ರಶಂಸೆಗೆ ಸೋದರರು ಪಾತ್ರರಾದರು. ಆದರೆ ಸೋದರ ಕೋಟಿಯ ಸಾವಿನ ಅಗಲಿಕೆಯ ವೇದನೆಯನ್ನು ತಾಳಲಾರದ ಚೆನ್ನಯನು ತನ್ನ ತಲೆಯನ್ನು ಕಲ್ಲಿಗೆ ಚಚ್ಚಿಕೊಳ್ಳುವ ಮೂಲಕ ಪ್ರಾಣಾರ್ಪಣೆ ಮಾಡಿಕೊಂಡನು. ಈ ಸೋದರರ ಸಲುವಾಗಿ ದೇವಬಲ್ಲಾಳನು ಎಣ್ಮೂರಿನಲ್ಲಿ ಸಮಾಧಿ ನಿರ್ಮಿಸಿ, ಗರಡಿಗಳನ್ನು ಏರ್ಪಡಿಸಿದನು. ಎಣ್ಮೂರಿನಿಂದ ಹಿಂತಿರುಗಿದ

ಪಡುಮಲೆಯ ಬಲ್ಲಾಳನೂ ತನ್ನೂರಲ್ಲಿ ಕೋಟಿ–ಚೆನ್ನಯರ ಹೆಸರಲ್ಲಿ ಕಂಬಳಗದ್ದೆ ರೂಪಿಸಿ, ಬಳಿಯಲ್ಲಿ ಚೆಂದದ ಗುಡಿಗಳನ್ನು ರಚಿಸಿ, ನಿತ್ಯಪೂಜೆಗೆ ಏರ್ಪಾಡು ಮಾಡಿದನೆಂದು ತಿಳಿದುಬರುತ್ತದೆ. ಕೋಟಿಚೆನ್ನಯರು ೬೪ ವಿದ್ಯೆಗಳನ್ನು ಬಲ್ಲವರಾಗಿದ್ದು, ತಮ್ಮ ದೇಹಾವಸಾನ ಕಾಲದಲ್ಲಿ ಅವರು ಅಷ್ಟೇ ಸಂಖ್ಯೆಯಲ್ಲಿ ಗರಡಿಗಳನ್ನು ನಾಡಿನಲ್ಲಿ ಸ್ಥಾಪಿಸಬೇಕೆಂದು ಆಸೆಪಟ್ಟರಂತೆ. ಅದರಂತೆ ದೇಮಬಲ್ಲಾಳನು ತುಳುನಾಡಿನ ಇತರ ಬಲ್ಲಾಳ ರಾಜರ ನೆರವಿನೊಂದಿಗೆ ೬೪ ಗರಡಿಗಳನ್ನು ಸ್ಥಾಪಿಸಿದ್ದು, ಅವುಗಳಲ್ಲಿ ಎಣ್ಮೂರು, ಪಡುಮಲೆ, ನಾರಾವಿ ಮುಂತಾದೆಡೆಗಳಲ್ಲಿರುವ ಗರಡಿಗಳನ್ನು ಹೆಸರಿಸಬಹುದಾಗಿದೆ. ಎಣ್ಮೂರಿನಲ್ಲಿ ಸ್ವಲ್ಪ ಒಳಕ್ಕಾದಂತೆ ಇರುವ ಕೋಟಿ ಚೆನ್ನಯರ ಸಮಾಧಿ ಹಾಗೂ ಗರಡಿ ಸ್ಥಳವು ಪ್ರಶಾಂತವಾಗಿದೆ. ಅಲ್ಲಿರುವ ಸಮಾಧಿಗಳು ವಿಶಿಷ್ಟಾಕಾರದಿಂದ ಕೂಡಿದ್ದು, ಗಮನ ಸೆಳೆಯುತ್ತವೆ. ಸಮಾಧಿಗಳಿಗೆ ನಿತ್ಯ ಪೂಜೆಯಾಗಬೇಕೆಂಬ ನಿಯಮವಿಲ್ಲ. ಸಿಂಹಮಾಸದಲ್ಲಿ ಭಕ್ತರು ನಿತ್ಯವೂ ಇಲ್ಲಿಗೆ ಬಂದು ಬಲಿವಾಡು ಅರ್ಪಿಸಿ, ಅಡಿಗೆ ಊಟ ಮಾಡಿಕೊಂಡು ಹೋಗುತ್ತಾರೆ. ಇದೇ ರೀತಿ ಪ್ರತಿ ಸಂಕ್ರಮಣಕ್ಕೆ ಬಂದು ಪೂಜೆ ಮಾಡಿಸಿಕೊಂಡು ಹೋಗುತ್ತಾರೆಂದು ತಿಳಿದುಬರುತ್ತದೆ. ಕೋಟಿ ಚೆನ್ನಯ್ಯರ ಗೌರವಾರ್ಥ ಇಲ್ಲಿ ಪ್ರತೀ ವರ್ಷ ಸಂಕ್ರಮಣ ಸಂದರ್ಭದಲ್ಲಿ ಸಾಂಪ್ರದಾಯಿಕ ನೃತ್ಯೋತ್ಸವ ಜರುಗುತ್ತದೆ. ಆ ಸಂದರ್ಭದಲ್ಲಿ ವರ್ಣರಂಜಿತ ಪೋಷಾಕು ಧರಿಸಿದ ಖಡ್ಗಧಾರಿ ನರ್ತಕರು ರಾತ್ರಿಯಿಡಿ ಸಾಂಪ್ರದಾಯಕ ನೃತ್ಯದಲ್ಲಿ ತೊಡಗಿರುವುದೊಂದು ವಿಶೇಷವಾಗಿರುತ್ತದೆ.

**ಏರ್ಕಾಲ (೬,೨೭೦) :** ಜಿಲ್ಲಾ ಕೇಂದ್ರ ಮಂಗಳೂರಿನಿಂದ ಆಗ್ನೇಯಕ್ಕೆ ಸುಮಾರು ೧೦ ಕಿಮೀ. ದೂರದಲ್ಲಿ ನೇತ್ರಾವತಿಯ ಎಡದಂಡೆಯ ಮೇಲಿರುವ ಧಾರ್ಮಿಕ ಸ್ಥಳ. ಅದರ ಬಳಿಯಿರುವ ನರಹರಿಪರ್ವತದ ಮೇಲೆ ನರಸಿಂಹ ಹಾಗೂ ಶಾರದಾಂಬ ದೇವಾಲಯಗಳಿವೆ. ಇಲ್ಲಿರುವ ನರಸಿಂಹನ ಕಿರುಶಿಲ್ಪವು, ಹಂಪೆಯ ನರಸಿಂಹ ಶಿಲ್ಪದ ಪ್ರತಿರೂಪದಂತಿದ್ದರೆ, ಶಾರದ ಶಿಲ್ಪವು ಶೃಂಗೇರಿಯ ಶಾರದಾಂಬೆಯ ಶಿಲ್ಪವನ್ನು ಹೋಲುತ್ತದೆ.

**ಕಟೀಲು :** ಜಿಲ್ಲಾ ಕೇಂದ್ರ ಮಂಗಳೂರಿನಿಂದ ೩೩ ಕಿ.ಮೀ. ಹಾಗೂ ಸುರತ್ಕಲ್‌ನಿಂದ ೧೩ ಕಿ.ಮೀ. ಈಶಾನ್ಯಕ್ಕೆ **ಕೊಂಡೇಮೂಲೆ (೨,೦೨೯)** ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿ, ನಂದಿನಿ ಹೊಳೆ ದಂಡೆಯಲ್ಲಿರುವ ಯಾತ್ರಾಸ್ಥಳ. ಇಲ್ಲಿ ಬಂಡೆಗಳ ನಡುವೆ ಹರಿಯುವ ನದಿಯು ಕವಲೊಡೆದು ನಿರ್ಮಿಸಿರುವ ನಡುಗಡ್ಡೆಯ ಕಟಿ ಭಾಗದಲ್ಲಿರುವ ದುರ್ಗಾಪರಮೇಶ್ವರಿ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಅದರಿಂದಾಗಿ ದೇವಿಗೆ ಕಟಿಲಾ ಎಂದೂ ಸ್ಥಳಕ್ಕೆ ಕಟೀಲು ಎಂದೂ ಹೆಸರಾಯಿತೆಂದು ಹೇಳಲಾಗುತ್ತದೆ. ಗರ್ಭಗೃಹದಲ್ಲಿ ದುರ್ಗಿಯು ಸ್ವಯಂಭುಲಿಂಗ ರೂಪದಲ್ಲಿ ಆರಾಧಿಸಲ್ಪಡುತ್ತಿದ್ದಾಳೆ. ಸುಮಾರು ೧೦ನೆಯ ಶತಮಾನದಷ್ಟು ಪುರಾತನ ಶಕ್ತಿಕೇಂದ್ರವಿದಾಗಿದ್ದು, ಕಾಲಕಾಲಕ್ಕೆ ಅಭಿವೃದ್ಧಿ ಹೊಂದಿದೆ. ಆದರೆ, ನಂದಿನಿ ನದಿಯ ಪ್ರವಾಹದಿಂದ ಹಳೆಗುಡಿಯು ಹಾಳಾದ ಪರಿಣಾಮವಾಗಿ ಹಾಲಿ ಇರುವ ವಿಶಾಲ ದೇಗುಲವನ್ನು ೧೯೪೪ರಲ್ಲಿ ಪುನರ್‌ನಿರ್ಮಾಣ ಮಾಡಲಾಗಿದೆ. ಇದು ಆಕರ್ಷಕ ದ್ವಾರಗೋಪುರವನ್ನು ಹೊಂದಿದ್ದು, ನೂತನವಾಗಿ ನಿರ್ಮಿಸಿರುವ ಸಭಾಮಂಟಪದ ಕೆಲವು ಕಂಬಗಳ ಮೇಲಿನ ಸುಂದರ ಮೂರ್ತಿ–ಶಿಲ್ಪಗಳು ಕಾರ್ಕಳದ ಶಿಲ್ಪಿ ಗೋಪಾಲಶೆಣೈ ಅವರ ಕೃತಿಗಳಾಗಿವೆ. ಪ್ರದಕ್ಷಿಣಪಥದಲ್ಲಿ ವಸಂತಮಂಟಪವಿದೆ. ಪ್ರಾಂಗಣದಲ್ಲಿ ಮಹಾಗಣಪತಿ, ವನಶಾಸ್ತಾರ ಮತ್ತು ನಾಗದೇವರ ಪ್ರತ್ಯೇಕ ಸನ್ನಿಧಿಗಳಿವೆ. ಸಭಾಮಂಟಪದ ಅಂಚಲ್ಲಿ ಕಕ್ಷಾಸನವಿದ್ದು, ಮೇಲೆ ದೇವಿಯ ಮಹಿಮೆಯನ್ನು ಸಾರುವ ವರ್ಣಚಿತ್ರಗಳಿವೆ. ಇಲ್ಲಿ ದೇವಿಯು ಮಹಾಕಾಳಿ, ಮಹಾಲಕ್ಷ್ಮಿ, ಮಹಾಸರಸ್ವತಿ ಎಂಬ ಮೂರು ಸ್ವರೂಪಗಳಲ್ಲಿಯೂ ಪೂಜಿಸಲ್ಪಡುತ್ತಾಳೆ. ಮೇಷ ಸಂಕ್ರಮಣದಿಂದ ನಡೆಯುವ ಎಂಟು ದಿನಗಳ ಜಾತ್ರೆಯಲ್ಲಿ ಕೊನೆಯ ದಿನ ದೇವಿಯು ಮೂರು ಕಿ.ಮೀ. ದೂರದ **ಎಕ್ಕಾರು** ಗ್ರಾಮಕ್ಕೆ ಮೆರವಣಿಗೆಯಲ್ಲಿ ಹೋಗಿ, ಹಿಂತಿರುಗುತ್ತಿದ್ದಂತೆ ಶಿಬರೂರಿನ ಕೊಡಮಣಿತ್ತಾಯ ದೈವವು ದೇವಿಯನ್ನು ಸ್ವಾಗತಿಸುತ್ತದೆ. ಇದರ ಬೆನ್ನಲ್ಲೇ ದೇವಿಯ ಅಗ್ನಿರಥೋತ್ಸವ ಅವಭೃತೋತ್ಸವಗಳು ನಡೆದು ನಂತರ ಅತ್ತೂರು–ಕೊಡತ್ತೂರು ಹುರಿಯಾಳುಗಳ ನಡುವೆ 'ಸೂಟೆದಾರ' ಎಂಬ ಮೂರು ಸುತ್ತಿನ ವಿಶೇಷ ಅಗ್ನಿಕ್ರೀಡೆಯು ನಡೆಯುತ್ತದೆ.

**ಕಡಂದಲೆ (೩,೮೭೬) :** ತಾಲೂಕು ಕೇಂದ್ರ ಮಂಗಳೂರಿನಿಂದ ಸುಮಾರು ೩೦ ಕಿ.ಮೀ. ಈಶಾನ್ಯಕ್ಕೆ ಇರುವ ಚಾರಿತ್ರಿಕ ಮಹತ್ವದ ಸ್ಥಳ. ತುಳುನಾಡಿನ ಅತಿ ಪ್ರಾಚೀನ ಸ್ಕಂಧಕ್ಷೇತ್ರಗಳಲ್ಲಿ ಒಂದು. ಇಲ್ಲೇ ದೊರೆತಿರುವ ಸುಮಾರು ೯ನೆಯ ಶತಮಾನಕ್ಕೆ ಸೇರಿದ ತೇದಿರಹಿತ ಶಾಸನವನ್ನು ಆಧರಿಸಿ, ಅಲ್ಲಿಯ ಸುಬ್ರಹ್ಮಣ್ಯ ದೇವಾಲಯವೂ ಅಷ್ಟೇ ಪ್ರಾಚೀನವೆಂಬ ಅಭಿಪ್ರಾಯವನ್ನು ಪಿ.ಗುರುರಾಜಭಟ್ ಬಹಳ ಹಿಂದೆಯೇ ವ್ಯಕ್ತಪಡಿಸಿದ್ದಾರೆ. ತುಳುನಾಡಿನ ಸ್ಕಂದಾರಾಧನೆಗೆ ಸಂಬಂಧಿಸಿದ ಮೊದಲ ಉಲ್ಲೇಖ ಇದೆಂಬ ಅಭಿಪ್ರಾಯವೂ ಇದೆ. ಈ ಶಾಸನದಲ್ಲಿ ಉಕ್ತವಾಗಿರುವ ಕಂದಾಫಲವು ಸ್ಕಂದಪುರದ ರೂಪಾಂತರವಾಗಿದ್ದು, ಕಡಂದಲೆಯನ್ನು ಸೂಚಿಸುತ್ತದೆಂದೂ ಭಾವಿಸಲಾಗಿದೆ. ಸುಬ್ರಹ್ಮಣ್ಯ ದೇವಾಲಯದ ಗರ್ಭಗೃಹದಲ್ಲಿರುವ ಸುಮಾರು ಮೂರು ಅಡಿ ಎತ್ತರದ ಸ್ಕಂದಮೂರ್ತಿಯು

ಶಿಲ್ಪಕಲಾದೃಷ್ಟಿಯಿಂದ ಅತಿ ಪ್ರಾಚೀನದ್ದೆಂಬ ಅಭಿಪ್ರಾಯವಿದೆ. ಕಡಂದಲೆಯು 'ಕಡಂದಕಲ್ಲು' ಎಂಬುದರ ಸವಕಲು ರೂಪವಾಗಿದ್ದು, ಕಡಂದಕಲ್ಲು ಎಂದರೆ ಒರಳಕಲ್ಲು ಎಂಬ ಅರ್ಥವಿದ್ದು, ಹಿಂದಿನ ದಾಖಲೆಗಳಲ್ಲಿ ಗ್ರಾಮದ ಹೆಸರನ್ನು ಕಡಂದಕಲ್ಲೆಂದೇ ದಾಖಲಿಸಲಾಗಿದೆ. ಶಿಥಿಲಾವಸ್ಥೆಯಲ್ಲಿದ್ದ ಸ್ಕಂದನ ದೇವಾಲಯವನ್ನು ೧೯೭೧ರಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಇಲ್ಲಿ ಸುಬ್ರಹ್ಮಣ್ಯಷಷ್ಠಿ ಹಾಗೂ ಕಿರುಷಷ್ಠಿ ಸಮಾರಂಭಗಳು ಅತ್ಯಂತ ವಿಜೃಂಭಣೆಯಿಂದ ನಡೆಯುತ್ತವೆ. ಕಡಂದಲೆಯಲ್ಲಿ ಚೌಟರಸರ ಅರಮನೆ ಇತ್ತೆಂಬ ಅಭಿಪ್ರಾಯವಿದ್ದು, 'ಕಡಂದಲೆಪರಾರಿ' ಎಂಬಲ್ಲಿ ಅದರ ಕುರುಹುಗಳನ್ನೂ ತೋರಿಸಲಾಗುತ್ತದೆ. **ಪಾಲಡ್ಕ :** ಕಡಂದಲೆ ಮಾರ್ಗದಲ್ಲಿರುವ ಪವಿತ್ರ ಕ್ರೈಸ್ತ ಕೇಂದ್ರ. ಅಲ್ಲಿರುವ 'ಇಗ್ನೇಶಿಯಸ್ ಲೊಯಲ್ಲಾ' ಇಗರ್ಜಿಯು ೧೯೧೩ರಲ್ಲಿ ನಿರ್ಮಾಣಗೊಂಡಿದ್ದು, ಆಕರ್ಷಕವಾಗಿದೆ.

**ಕಡಬ (೩,೧೯೦):** ತಾಲೂಕು ಕೇಂದ್ರ ಪುತ್ತೂರಿನಿಂದ ೪೫ ಕಿ.ಮೀ. ಈಶಾನ್ಯಕ್ಕೆ ಇರುವ ಐತಿಹಾಸಿಕ ಮಹತ್ವದ ಸ್ಥಳ. ಬೆಟ್ಟಗುಡ್ಡಗಳಿಂದ ಆವರಿಸಲ್ಪಟ್ಟಿರುವ ಇದು ಆಯಕಟ್ಟಾದ ಪರಿಸರವನ್ನು ಹೊಂದಿದೆ. ಅದರಿಂದಾಗಿ ವಿಜಯನಗರದರಸರ ಆಡಳಿತಾವಧಿಯಲ್ಲಿ 'ಕಡಬಸ್ಥಲ' ಎಂಬ ಆಡಳಿತ ಘಟಕದ ಕೇಂದ್ರವಾಗಿ ರಾಜಕೀಯ ಪ್ರಾಮುಖ್ಯತೆ ಗಳಿಸಿತ್ತು. ಅಲ್ಲದೆ, ಬಲ್ಲಾಳರೆಂಬ ಸ್ಥಳೀಯ ಸಾಮಂತರಸರ ರಾಜಧಾನಿ ಪಟ್ಟಣವೂ ಆಗಿದ್ದು, ಅವರ ಆಳ್ವಿಕೆಯಡಿ ನಿರ್ಮಿಸಲ್ಪಟ್ಟಿದ್ದ ಅರಮನೆಯು ೧೮ನೆಯ ಶತಮಾನದಲ್ಲಿ ನಡೆದ ನಿರಂತರ ಧಾಳಿಯಿಂದಾಗಿ ನಾಶವಾಯಿತೆಂದು ತಿಳಿದುಬರುತ್ತದೆ. ಊರಲ್ಲಿರುವ ಗಣೇಶ ಹಾಗೂ ನೀಲಕಂಠ ದೇವಾಲಯಗಳು ಪುರಾತನ ರಚನೆಗಳಾಗಿದ್ದು, ಸ್ಥಳೀಯರಿಂದಾಗಿ ಇತ್ತೀಚೆಗೆ ದುರಸ್ತಿಗೊಂಡು ಆರಾಧಿಸಲ್ಪಡುತ್ತಿವೆ.

**ಕಡೆಶ್ವಾಲ್ಯ (೪,೭೭೪)** : ತಾಲೂಕು ಕೇಂದ್ರ ಬಂಟ್ವಾಳದಿಂದ ಸುಮಾರು ೧೫ ಕಿ.ಮೀ. ಆಗ್ನೇಯಕ್ಕೆ, ನೇತ್ರಾವತಿ ನದಿಯ ಎಡದಂಡೆಯ ಮೇಲಿರುವ ಪ್ರಮುಖ ಸ್ಥಳ. ಈ ಗ್ರಾಮದ ಹೆಸರು 'ಕಡೇ ಶಿವಾಲಯ' ಆಗಿದ್ದು,. ನಂತರದಲ್ಲಿ ಕಡೆಶ್ವಾಲ ಎಂಬ ವಿಚಿತ್ರ ರೂಪವನ್ನು ಪಡೆದಿದೆ. ಊರಾಚೆ ಹೊಳೆಯಂಚಲ್ಲಿರುವ ಚಿಂತಾಮಣಿ ನರಸಿಂಹ ದೇವಾಲಯವು ರಮ್ಯ ಸ್ಥಳದಲ್ಲಿದೆ. ಗುಡಿಯು ವಿಷ್ಣುನಾಮವನ್ನು ಹೊಂದಿದ್ದರೂ ಗರ್ಭಗೃಹದಲ್ಲಿರುವುದು ಶಿವಲಿಂಗವಾಗಿದೆ. ಚತುರ್ಯುಗಗಳಲ್ಲೂ ಪೂಜಿಸಲ್ಪಟ್ಟಿದ್ದೆಂದು ಹೇಳಲಾಗುವ ಈ ಶಿವಲಿಂಗದ ಪ್ರತಿಷ್ಠಾಪನೆಗೆ ಸಂಬಂಧಿಸಿದಂತೆ ಹಲವಾರು ಐತಿಹ್ಯಗಳಿವೆ. ಈ ಗುಡಿಯ ಗೋಡೆಯ ಮೇಲೆ ಇತ್ತೀಚಿನದಾದ ವಿಷ್ಣುವಿನ ದಶಾವತಾರಾದಿ ವರ್ಣಚಿತ್ರಗಳಿವೆ. ಉಪ್ಪಿನಂಗಡಿಯಿಂದ ಕಡೇಶ್ವಾಲದವರೆಗೆ ಇರುವ ನೇತ್ರಾವತಿಯ ಶಿಲೆಗಳೆಲ್ಲ ಶಿವಲಿಂಗಗಳೆಂಬ ಪೌರಾಣಿಕ ಐತಿಹ್ಯವು ಈ ಭಾಗದಲ್ಲಿ ರೂಢಿಯಲ್ಲಿದೆ. ಈ ದೇವಾಲಯ ಪರಿಸರದಲ್ಲೇ ಸುಂದರವಾದೊಂದು ವಾಪಿ (ಬಾವಿ) ಇದೆ. ಈ ದೇವರಿಗೆ 'ಮಹತೊಭಾರ' ಎಂಬ ಬಿರುದಿದ್ದು, ೧೯೭೧–೯೨ರ ಅವಧಿಯಲ್ಲಿ ಈಗಿರುವ ಗುಡಿಯನ್ನು ಜೀರ್ಣೋದ್ಧಾರ ಮಾಡಲಾಗಿದೆ. ಆ ಸಂದರ್ಭದಲ್ಲಿ ಕುಡಿಕೆಯೊಂದರಲ್ಲಿ ಬಗೆಬಗೆಯ ತಾಮ್ರದ ನಾಣ್ಯಗಳು ಪತ್ತೆಯಾಗಿದ್ದವೆಂದು ತಿಳಿದುಬರುತ್ತದೆ. ಹಿಂದೆ ಇದೊಂದು ಅಗ್ರಹಾರವಾಗಿದ್ದು, ೧೯೨೩ರ ನೇತ್ರಾವತಿಯ ಮಾರಿಬೆಳ್ಳ ಪ್ರವಾಹದಲ್ಲಿ ಕೊಚ್ಚಿ ಹೋಯಿತೆಂಬ ಅಭಿಪ್ರಾಯವಿದೆ. ನದಿಯ ಮಧ್ಯದಲ್ಲಿ ಶಿವಲಿಂಗವೊಂದನ್ನು ಸ್ಥಾಪಿಸಿದ್ದು, ಅದೇ ಕಡೇಶಿವಾಲಯ ಎಂಬ ಅಭಿಪ್ರಾಯವಿದೆ. ಈ ದೇವರ ವಾರ್ಷಿಕ ಜಾತ್ರೆಯು ಮೀನಮಾಸದಲ್ಲಿ ಜರುಗುತ್ತದೆ. ನದಿಯ ಆಚೆ ದಡದಲ್ಲಿ ಕಂಡುಬರುವ ಸ್ಥಳವೇ ಅಜಲಮೊಗರು ಆಗಿದ್ದು, ಮುಸ್ಲಿಂ ಸಂತನ ದರ್ಗಾ ಹಾಗೂ ಮಸೀದಿಗಳಿರುವುದು ಅಲ್ಲೇ.

**ಕ್ಯಾಡಿ (೧೮೦೭):** ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ೧೦ ಕಿ.ಮೀ. ಈಶಾನ್ಯದಲ್ಲಿರುವ ಈ ಗ್ರಾಮಕ್ಕೆ ಸೇರಿದ ಲಂಕೆಲೋಕನಾಡು ಪ್ರದೇಶದಲ್ಲಿರುವ ಲೋಕನಾಥೇಶ್ವರ ದೇವಾಲಯದಲ್ಲಿ ಸ್ವಯಂಭುಲಿಂಗವಿದ್ದು, ಏಕ ಪೀಠದ ಮೇಲೆ ಮೂರು ಶಿವಲಿಂಗಗಳಿವೆ. ಇಲ್ಲಿ ಸೇಮಕಲ್ಲು ಪಂಜುರ್ಲಿ, ನಾಗಬ್ರಹ್ಮರ ಪ್ರತ್ಯೇಕ ಸ್ಥಾನಗಳಿವೆ. ಅಲ್ಲದೆ ಸಿರಿಕುಮಾರ ಗುಂಡ, ಅಬ್ಬಗ ದಾರಗುಂಡ ಎಂಬ ಕಿರು ಪ್ರಮಾಣದ ಆಕರ್ಷಕ ಗುಡಿಗಳೂ ಇಲ್ಲಿವೆ. ಲೋಕನಾಥೇಶ್ವರನ ಸನ್ನಿಧಿಯಲ್ಲಿ ಚೈತ್ರಮಾಸದಲ್ಲಿ ಐದು ದಿನಗಳ ಕಾಲ ಜರುಗುವ ವಾರ್ಷಿಕ ಜಾತ್ರೆಯು ಆಕರ್ಷಕವಾಗಿರುತ್ತದೆ. ಅದರಲ್ಲೂ ಮೂರನೆಯ ದಿನದಂದು ರಾತ್ರಿ ನಡೆಯುವ ಉತ್ಸವ ಹಾಗೂ ಸಿರಿದರ್ಶನಗಳು ವಿಶಿಷ್ಟವಾಗಿವೆ. 'ದಳ್ಯಕ್ಕೆ ನಿಲ್ಲುವುದು' ಎಂದು ಹೇಳಲಾಗುವ ಈ ಆಚರಣೆಯಲ್ಲಿ, ಏಳು ಸ್ಥಳೀಯ ದೈವಗಳಲ್ಲಿ ಯಾವುದಾದರೊಂದು ದೈವ ಭಕ್ತರ ಮೈಮೇಲೆ ಬರುವುದಕ್ಕೆ 'ಸಿರಿದರ್ಶನ' ಎಂದು ಹೇಳಲಾಗುತ್ತದೆ.

**ಕುವೆತ್ತಾರ (೧,೪೫೯) :** ಜಿಲ್ಲಾ ಕೇಂದ್ರ ಮಂಗಳೂರಿನಿಂದ ೪೫ ಕಿ.ಮೀ. ಉತ್ತರಕ್ಕೆ ಇರುವ ಧಾರ್ಮಿಕ ಸ್ಥಳ. ಅಬ್ಬಗೆ ಹಾಗೂ ದಾರಗೆ ಎಂಬ ಸಿರಿದೈವಗಳ ಪ್ರಾಚೀನ ಆರಾಧನಾ ಕೇಂದ್ರ ಇದಾಗಿದ್ದು, 'ಆದಿ ಆಲಡೆ' ಎಂಬ ಹೆಗ್ಗಳಿಕೆಗೂ ಇದು ಪಾತ್ರವಾಗಿದೆ. ಇಲ್ಲಿ ಈ

ಸಿರಿದೈವಗಳು ಮಹಾಲಿಂಗೇಶ್ವರನೊಡನೆ ಪೂಜಿಸಲ್ಪಡುತ್ತಿವೆ. ಆಲಡೆಯಲ್ಲಿ ಅಬ್ಬಗೆ ದಾರಗೆ, ಸೊನ್ನೆ ಹಾಗೂ ಗಿಂಡೆಯರ ಮಣ್ಣಿನ ಮೂರ್ತಿಗಳಿವೆ. ಚಾವಡಿಯಲ್ಲಿ ನಂದಿಕೋಣದ ಕಾಷ್ಠಮೂರ್ತಿ ಇದೆ. ಪಗು ಹುಣ್ಣಿಮೆಯಂದು ಇಲ್ಲಿ ನಡೆಯುವ 'ಸಿರಿ'ದರ್ಶನವೇ ವಾರ್ಷಿಕ ಜಾತ್ರೆಯ ವೈಶಿಷ್ಟ್ಯವಾಗಿರುತ್ತದೆ.

**ಕಾಜೂರು :** ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ೨೦ ಕಿ.ಮೀ. ಈಶಾನ್ಯಕ್ಕೆ **ಮಿತ್ತಬಾಗಿಲು (೩,೩೪೧)** ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿರುವ ಸ್ಥಳ. ಮುಸಲ್ಮಾನರಿಗೆ ಪರಮಪವಿತ್ರವಾದ ಕ್ಷೇತ್ರ ಇಲ್ಲಿರುವ ಹಯಾತುಲ್ಲಾ ವಲೀವುಲ್ಲಾ ದರ್ಗಾ ಷರೀಫ್‌ನಿಂದಾಗಿ ಪ್ರಸಿದ್ಧವಾಗಿದ್ದು, ಉಳ್ಳಾಲ, ಅಜಲಮೊಗರು, ಗುರುವಾಯನಕೆರೆಗಳ ಉರುಸಿನಂತೆ ಲಕ್ಷಾಂತರ ಅನುಯಾಯಿಗಳನ್ನು ಇದೂ ಕೂಡ ಆಕರ್ಷಿಸುತ್ತದೆ. ನೇತ್ರಾವತಿ ದಡದಂಚಲ್ಲಿ ದರ್ಗಾ, ಪರ್ವತದ ಇಳಿಜಾರಲ್ಲಿ ಮಸೀದಿ ಹಾಗೂ ಮದ್ರಸಾಗಳು ಇವೆ. ದರ್ಗಾದ ನಾಲ್ಕು ಮೂಲೆಗಳಲ್ಲೂ ಎತ್ತರದ ಮಿನಾರುಗಳ ನಡುವೆ ಸುಂದರವಾದ ಗುಮ್ಮಟವಿದೆ. ದರ್ಗಾದ ಒಳಗೆ ವೇದಿಕೆಯ ಮೇಲೆ ಸುಮಾರು ೧೫ ಅಡಿ ಉದ್ದದ ಎರಡು ಸಮಾಧಿಗಳಿವೆ. ಸುಮಾರು ೮೦೦ ವರ್ಷಗಳ ಹಿಂದೆ ಆಗಮಿಸಿದ ನಾಲ್ವರು ಖ್ವಾಜಾಗಳು ಇಲ್ಲಿ ನೆಲೆಸಿದ ಕಾರಣ ಖ್ವಾಜೂರು ಎಂಬ ಹೆಸರು ಊರಿಗೆ ಬಂದು ಮುಂದೆ ಅದೇ ಕಾಜೂರು ಆಯಿತೆಂಬ ಹೇಳಿಕೆ ಇದೆ. ಇವರು ಅರೇಬಿಯಾದಿಂದ ಬಂದಿದ್ದ ಖ್ವಾಜಾ ಮೊಹಿಯುದ್ದೀನ್ ಚಿಸ್ತಿಯಾ ಎಂಬ ಸಂತನ ಶಿಷ್ಯರಾಗಿದ್ದರೆಂದು ಹೇಳಲಾಗುತ್ತದೆ. ಇಲ್ಲಿ ಶವ್ವಾಲ್ ತಿಂಗಳ ಚಾಂದ್ ೨೨ರಂದು ಆರಂಭವಾಗುವ ಉರುಸು ಹತ್ತು ದಿನಗಳ ಕಾಲ ನಡೆಯುತ್ತದೆ. ಆ ಸಂದರ್ಭದಲ್ಲಿ ಪ್ರತಿದಿನ ಸಂಜೆ ಧಾರ್ಮಿಕ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತದೆ. ಈ ದರ್ಗಾಕ್ಕೆ ಭಕ್ತರು ಕಾಣಿಕೆಯ ರೂಪದಲ್ಲಿ ಬೆಳ್ಳಿಯ ವಸ್ತುಗಳನ್ನು ದೊಡ್ಡ ಪ್ರಮಾಣದಲ್ಲಿ ಸಲ್ಲಿಸುತ್ತಾರೆ. ಲಕ್ಷಾಂತರ ಜನ ಭಾಗವಹಿಸುವ ಈ ಉರುಸ್‌ನಲ್ಲಿ ಸಂತನಿಗೆ ಅರ್ಪಿಸುವ ಪ್ರಾಣಿಗಳ ಹರಕೆಯ ಏಲಂ (ಹರಾಜಿ)ನಿಂದಲೇ ದರ್ಗಾಕ್ಕೆ ಲಕ್ಷಾಂತರ ರೂಪಾಯಿ ಸಂಗ್ರಹವಾಗುತ್ತದೆ.

**ಕಾರಿಂಜ ಕ್ಷೇತ್ರ :** ಬಂಟ್ವಾಳ ಕ್ರಾಸ್‌ನಿಂದ ೧೬ ಕಿ.ಮೀ. ಪೂರ್ವಕ್ಕೆ **ಕಾವಳಮೂಡೂರು(೪,೩೬೧)** ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿರುವ ಪುಣ್ಯಕ್ಷೇತ್ರ ಅಲ್ಲಿರುವ ಕಾರಿಂಜಪರ್ವತವು ಪುರಾಣ ಪ್ರಸಿದ್ಧವಾಗಿದ್ದು, ದಕ್ಷಿಣಕೈಲಾಸವೆನಿಸಿದೆ. ಈ ಪರ್ವತಾಗ್ರದಲ್ಲಿ ಶಿವನು ಸ್ವಯಂಭುಲಿಂಗವಾಗಿ ಚತುರ್ಯುಗಗಳಲ್ಲೂ ಪೂಜಿಸಲ್ಪಟ್ಟಿದ್ದು, ಹಿಂದಿನ ಮೂರು ಯುಗಗಳಲ್ಲಿ ಈ ಬೆಟ್ಟವು ಕ್ರಮವಾಗಿ ರೌದ್ರಗಿರಿ, ಗಜರಾಜಗಿರಿ, ಭೀಮಗಿರಿ ಎಂದು ಕರೆಯಲ್ಪಟ್ಟಿದ್ದು, ಪ್ರಸ್ತುತ ಕಲಿಯುಗದಲ್ಲಿ ಕಾರಿಂಜಶೈಲ ಎಂದು ಕರೆಯಲ್ಪಟ್ಟಿದೆ ಎಂಬ ನಂಬಿಕೆ ಇದೆ. ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಾಕಷ್ಟು ಪೌರಾಣಿಕ ಐತಿಹ್ಯಗಳಿದ್ದು, ರಾಮಲಕ್ಷ್ಮಣ, ಪಾಂಡವರಿಂದ ಶಿವನು ಇಲ್ಲಿ ಪೂಜಿಸಲ್ಪಟ್ಟಿರುವನೆಂಬ ಅಭಿಪ್ರಾಯವಿದೆ. ಅಲ್ಲದೇ ಕಾರಿಂಜಪರ್ವತವು ಚಾರಣಾಸಕ್ತರಿಗೂ ಹೇಳಿ ಮಾಡಿಸಿದ ತಾಣವಾಗಿದೆ.

ಕಾರಿಂಜ ಪರ್ವತದ ಮೇಲಿರುವ ಕಾರಿಂಜೇಶ್ವರ ದೇವಾಲಯವು ಗಜಪೃಷ್ಠಾಕಾರದಲ್ಲಿರುವ ಶಿವಾಲಯವಾಗಿದ್ದು, ಸರಳ ಗೋಪುರವನ್ನು ಹೊಂದಿದ್ದು, ನಿರಾಡಂಬರವಾಗಿದೆ. ಬೆಟ್ಟದ ನೆತ್ತಿಯನ್ನು ತಲುಪುವ ಮಾರ್ಗಮಧ್ಯದಲ್ಲಿ ಬಂಡೆಯ ಮೇಲೆ ರೇಖಿಸಿರುವ ಬಟ್ಟೆ ವಿನಾಯನಿದ್ದಾನೆ. ಪರ್ವತದ ಅರ್ಧದಷ್ಟು ಭಾಗ ಏರಿದ ಮೇಲೆ ಎದುರಾಗುವ ವಿಶಾಲವಾದ ಬಯಲಿನಲ್ಲಿ ಪಾರ್ವತಿ ದೇವಿಯ ದೊಡ್ಡ ಆಲಯವಿದೆ. ಅಲ್ಲಿ ಚತುರ್ಭುಜೆ ಪಾರ್ವತಿಯ ಶಿಲ್ಪವಿದೆ. ಮಧ್ವಾಚಾರ್ಯರು ಈ ಕ್ಷೇತ್ರಕ್ಕೆ ಬಂದಿದ್ದರೆಂಬ ಪ್ರತೀತಿ ಇದ್ದು, ಅವರೇ ಈ ವೈಷ್ಣವ ಶಕ್ತಿಯನ್ನು ಇಲ್ಲಿ ಪ್ರತಿಷ್ಠಾಪಿಸಿದರೆಂಬ ಹೇಳಿಕೆ ಇದ್ದು, ವೈಷ್ಣವ ಸಂಪ್ರದಾಯದಂತೆ ಇಲ್ಲಿ ಪೂಜೆ ನಡೆಯುತ್ತದೆ. ಕಪಿಗಳಿಂದ ಸಮೃದ್ಧವಾಗಿರುವ ಈ ಪರ್ವತದಲ್ಲಿ ಕಾರಿಂಜೇಶ್ವರನಿಗೆ ಅರ್ಪಿಸಿದ ನೈವೇದ್ಯವನ್ನು ವಾನರಾನ್ನವೆಂದು ಮಂಗನಕಲ್ಲಿನ ಮೇಲೆ ಕಪಿಗಳಿಗೆಂದೇ ಹಾಕುವ ಸಂಪ್ರದಾಯವಿದೆ. ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಕೆಲವು ಗುಹೆಗಳನ್ನಿಲ್ಲಿ ಪುರಾತತ್ವಜ್ಞರು ಈಗಾಗಲೇ ಪತ್ತೆಹಚ್ಚಿರುವ ಹಿನ್ನೆಲೆಯಲ್ಲಿ ಈ ಕ್ಷೇತ್ರದ ಪೌರಾಣಿಕ ಐತಿಹ್ಯವನ್ನು ಪರಿಶೀಲಿಸುವ ಅಗತ್ಯವಿದೆ. ಮಹಾಶಿವರಾತ್ರಿಯಂದು ಜರುಗುವ ಮಹಾಪರ್ವವೇ ಇಲ್ಲಿನ ವಾರ್ಷಿಕ ಜಾತ್ರೆಯಾಗಿದ್ದು, ಏಳು ದಿನ ನಡೆಯುತ್ತದೆ. ಕಾರಿಂಜಕ್ಕೆ ೧೦ ಕಿ.ಮೀ. ದೂರದಲ್ಲಿರುವ ಸರಪಾಡಿಗೆ, ಕದಿರೋತ್ಸವದ ಅಂಗವಾಗಿ ಕನ್ಯಾ ಸಂಕ್ರಮಣ ಸಮಯದಲ್ಲಿ ಕಾರಿಂಜೇಶ್ವರದ ಉತ್ಸವವು ಬಿಜಯಂಗೈಯ್ದು, ಪೂಜಾವಿಧಿ ಮುಗಿಸಿಕೊಂಡು ಮರಳಿ ಬರುವಾಗ ಹಲ್ಲಂಗಾರು ಗದ್ದೆಗಿಳಿದು ಒಂದಷ್ಟು ಭತ್ತದ ತೆನೆಯೊಂದಿಗೆ ಉತ್ಸವವು ಕಾರಿಂಜಕ್ಕೆ ಮರಳುವ ಸಂಪ್ರದಾಯವಿದೆ. **ಸರಪಾಡಿ**ಯಲ್ಲಿ ಕಲ್ಲುಗಳಿಂದಲೇ ನಿರ್ಮಿಸಿದನೆನ್ನಲಾಗುವ ಶರಭೇಶ್ವರ ದೇವಾಲಯವಿದೆ.

**ಕುಕ್ಕಜೆ ಜಲಪಾತ :** ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ವಾಯವ್ಯಕ್ಕೆ ಸುಮಾರು ೧೨ ಕಿ.ಮೀ. ದೂರದಲ್ಲಿರುವ ರಮಣೀಯ ಸ್ಥಳ. ಅಲ್ಲಿರುವ ಜಲಪಾತದಿಂದಾಗಿ ಪ್ರವಾಸಿ ತಾಣವಾಗಿ ಮಹತ್ವ ಪಡೆದಿದೆ.

**ಕುಕ್ಕೆ ಸುಬ್ರಹ್ಮಣ್ಯ (೩,೪೪೭) :** ತಾಲೂಕು ಕೇಂದ್ರ ಸುಳ್ಯದಿಂದ ೪೪ ಕಿ.ಮೀ. ಈಶಾನ್ಯಕ್ಕಾದಂತೆ ಕುಮಾರಧಾರ ನದಿಯ ಉಪನದಿಯಾದ ದರ್ಪಣ ತೀರ್ಥದ ದಂಡೆಯ ಮೇಲಿರುವ ಪ್ರಸಿದ್ಧ ಯಾತ್ರಾಸ್ಥಳ. ಕುಮಾರಪರ್ವತ ಹಾಗೂ ಶೇಷಪರ್ವತಗಳ ನಡುವೆ ಇರುವ ಇದನ್ನು ೩೩ ಕಿ.ಮೀ. ದೂರದಲ್ಲಿರುವ ಪುತ್ತೂರಿನಿಂದಲೂ ತಲುಪಬಹುದಾಗಿದ್ದು, ಜಿಲ್ಲಾ ಕೇಂದ್ರ ಮಂಗಳೂರಿನಿಂದ ೧೦೪ಕಿ.ಮೀ. ಅಂತರದಲ್ಲಿದೆ. ರಾಜಧಾನಿ ಬೆಂಗಳೂರಿನಿಂದ ೨೯೦ ಕಿ.ಮೀ. ದೂರದಲ್ಲಿರುವ ಈ ಕ್ಷೇತ್ರದಿಂದ ೨೨ ಕಿ.ಮೀ. ಅಂತರದಲ್ಲಿ ರಾಷ್ಟ್ರೀಯ ಹೆದ್ದಾರಿ ೪೮ ಹಾದುಹೋಗಿದ್ದು, ಅದನ್ನು ಶಿರಾಡಿ ನಿಸರ್ಗಧಾಮ ಮಾರ್ಗವಾಗಿ ತಲುಪಬಹುದಾಗಿದೆ. ಮೂಲತಃ 'ಕುಕ್ಕೆ' ಗ್ರಾಮದ ವ್ಯಾಪ್ತಿಯಲ್ಲಿ 'ಸುಬ್ರಹ್ಮಣ್ಯ'ವು ಇದ್ದುದರಿಂದ, ಅದಕ್ಕೆ ಈ ಹೆಸರು ಬಂದಿದೆ. ಅಲ್ಲದೇ ಪುಷ್ಪಗಿರಿ ಎಂಬ ಹೆಸರೂ ಇದಕ್ಕಿದೆ. ಮಂಗಳೂರು–ಹಾಸನ ಬ್ರಾಡ್‌ಗೇಜ್ ರೈಲು ಮಾರ್ಗದಲ್ಲಿರುವ 'ಸುಬ್ರಹ್ಮಣ್ಯ ರಸ್ತೆ' ರೈಲು ನಿಲ್ದಾಣವು ,ಕ್ಷೇತ್ರದಿಂದ ೧೨ ಕಿ.ಮೀ. ದೂರದಲ್ಲಿದೆ.

ಕುಮಾರಪರ್ವತದಿಂದ ಪಶ್ಚಿಮಭಾಗಕ್ಕೆ ಇರುವ ಕುಕ್ಕೆ ಸುಬ್ರಹ್ಮಣ್ಯಕ್ಕೆ ಕ್ರಿ.ಶ. ಎಂಟನೆಯ ಶತಮಾನದಲ್ಲಿ ಆದಿಶಂಕರರು ಭೇಟಿ ನೀಡಿದ್ದರೆಂಬ ಐತಿಹ್ಯದ ಹಿನ್ನೆಲೆಯಲ್ಲಿ ಆ ವೇಳೆಗಾಗಲೇ ಇದೊಂದು ಪ್ರಸಿದ್ಧ ಕ್ಷೇತ್ರವಾಗಿತ್ತೆಂಬ ಅಭಿಪ್ರಾಯವಿದೆ. ಸುಮಾರು ಒಂಭತ್ತನೆಯ ಶತಮಾನಕ್ಕೆ ಸೇರಿದ ಭಂಟ್ರ ಶಾಸನದಲ್ಲಿ 'ಕುಕ್ಕೆ' ಗ್ರಾಮದ ಮೊದಲ ಉಲ್ಲೇಖ ಲಭಿಸುತ್ತದೆ. ಆ ಪ್ರಾಂತ್ಯವನ್ನು ಆಳುತ್ತಿದ್ದ ನಾಲ್ವರು ಸ್ಥಳೀಯ ಅರಸರ ನಡುವಣ ಯುದ್ಧನಿಷೇದ ಒಡಂಬಡಿಕೆ ದಾಖಲೆ ಇದಾಗಿದ್ದು, ಕುಕ್ಕೆಯ ವಿಶ್ವರು ಮತ್ತು ಕಣಕ(?)ರನ್ನು ಅದು ಹೆಸರಿಸುತ್ತದೆ. ದೇವಾಲಯದ ಆವರಣದಲ್ಲಿರುವ ಶಿಲಾಶಾಸನವೂ ಸೇರಿದಂತೆ ಹೊರ ಅಂಗಳದ ಹಾಸುಗಲ್ಲುಗಳ ಮೇಲೆ ಅನೇಕ ಕಿರುಶಾಸನಗಳಿದ್ದು. ಅವುಗಳನ್ನು ಅಭ್ಯಸಿಸುವ ಅಗತ್ಯವಿದೆ. ಕುಕ್ಕೆ ಸುಬ್ರಹ್ಮಣ್ಯಕ್ಕೆ ಸಂಬಂಧಿಸಿದಂತೆ ಆರು ತಾಮ್ರ ಶಾಸನಗಳಿವೆ. ಅವುಗಳಲ್ಲಿ ವಿಜಯನಗರದ ಅರಸ ಇಮ್ಮಡಿ ಬುಕ್ಕನ ಕಾಲದ ತಾಮ್ರಶಾಸನದಿಂದ ಕುಕ್ಕೆ ಪಟ್ಟಣವು ಬಂಗರಸರ ನಿಯಂತ್ರಣಕ್ಕೊಳಪಟ್ಟಿದ್ದ ಅಂಶ ವೇದ್ಯವಾಗುತ್ತದೆ. ಮಂಗಳೂರು ರಾಜ್ಯವನ್ನು ಆಳುತ್ತಿದ್ದ ಬಾಚಪ್ಪವೊಡೆಯನು ಸುಬ್ರಹ್ಮಣ್ಯದ ಬ್ರಾಹ್ಮಣರಿಗೆ ೨೭೦ ಕಾಟಿಗದ್ಯಾಣವನ್ನು ದಾನ ನೀಡಿದ ಅಂಶ ೧೪೦೭ರ ಈ ಶಾಸನದಿಂದ ಮನವರಿಕೆಯಾಗುತ್ತದೆ. ಕುಕ್ಕೆ ಸುಬ್ರಹ್ಮಣ್ಯಕ್ಕೆ ಸೇರಿದ ೧೬೬೩ರ ಶಾಸನ, ಕೊಲ್ಲಿಮೊಗರ ಶಂಕರದೇವಿ ಬಲ್ಲಾಳ್ತಿಯ ದಾನವನ್ನು ಉಲ್ಲೇಖಿಸುತ್ತದೆ. ಇಲ್ಲಿರುವ ತಾಮ್ರಶಾಸನಗಳಲ್ಲಿ ೧೬೬೫ರ ಶಾಸನ, ಮೈಸೂರರಸ ದೇವರಾಜ ಒಡೆಯರ ಕಾಲಕ್ಕೆ ಸೇರಿದ್ದು, ನಾನಾಜಿಯ ಮೊಮ್ಮಗನಾದ ಧನೋಜಯ್ಯನು ಕುಕ್ಕೆಲಿಂಗದ ಸುಬ್ರಹ್ಮಣ್ಯೇಶ್ವರದ ಭಂಡಾರಕ್ಕೆ ದಾನ ನೀಡಿದ್ದನ್ನು ದಾಖಲಿಸಿದೆ. ಈ ಶಾಸನದಲ್ಲಿ ಹೋಬಳಿಯ ಉಲ್ಲೇಖವಿರುವುದು ಗಮನಾರ್ಹ. ಬೇಲೂರು ಪಾಳೆಯಗಾರರಿಗೆ ಸೇರಿದ ೧೬೬೬ರ ಎರಡು ತಾಮ್ರ ಶಾಸನಗಳಲ್ಲೊಂದು ಶ್ರೀರಂಗರಾಯನ ದತ್ತಿಯನ್ನು ದಾಖಲಿಸಿದೆ. ಇದೇ ಪಾಳೇಗಾರರಿಗೆ ಸೇರಿದ ೧೬೮೧ರ ಶಾಸನದಿಂದ ವೆಂಕಟಾದ್ರಿ ನಾಯಕರು ಸುಬ್ರಹ್ಮಣ್ಯದೇವರಿಗೆ ದತ್ತಿ ಬಿಟ್ಟ ಅಂಶ ವೇದ್ಯವಾಗುತ್ತದೆ.

ನಾಗಾರಾಧನೆಯು ಅನಾದಿಕಾಲದಿಂದಲೂ ರೂಢಿಯಲ್ಲಿದ್ದು, ಈ ಕ್ಷೇತ್ರದಲ್ಲಿ ಕಾರ್ತಿಕೇಯ, ಷಣ್ಮುಖ, ಮುರುಗ ಎಂದೆಲ್ಲ ಕರೆಯಲ್ಪಡುವ ಕುಮಾರ (ಸುಬ್ರಹ್ಮಣ್ಯ)ನನ್ನು ನಾಗರೂಪದಲ್ಲೇ ಆರಾಧಿಸಲಾಗುತ್ತಿದ್ದು, ನಾಗ ಹಾಗೂ ಸುಬ್ರಹ್ಮಣ್ಯರು ಅಭಿನ್ನರೆಂಬ ಅಂಶ ಇದರಿಂದ ಸ್ಪಷ್ಟವಾಗುತ್ತದೆ. ಪೌರಾಣಿಕವಾಗಿ ತಾರಕ, ಪದ್ಮಾ ಮುಂತಾದ ಅಸುರರನ್ನು ವಧಿಸಿದ ಸುಬ್ರಹ್ಮಣ್ಯನಿಗೆ ಪಟ್ಟಾಭಿಷೇಕ ಮಾಡಿದ ಜಲವೇ ಕುಮಾರಧಾರ ನದಿಯಾಗಿ ಹರಿಯತೆಂಬ ಅಭಿಪ್ರಾಯವಿದೆ. ವಿಜಯಿಯಾದ ಇವನಿಗೆ ದೇವೇಂದ್ರನು ತನ್ನ ಪುತ್ರಿ ದೇವಸೇನೆಯನ್ನು ಮಾರ್ಗಶಿರ ಶುದ್ಧ ಷಷ್ಠಿಯಂದು ಬ್ರಹ್ಮಾದಿ ದೇವತೆಗಳ ಸಮ್ಮುಖದಲ್ಲಿ ವಿವಾಹ ಮಾಡಿಕೊಟ್ಟ ಸ್ಥಳ ಕುಮಾರಪರ್ವತವೆಂಬ ನಂಬಿಕೆಯೂ ಇದೆ. ಗರುಡನ ಭಯದಿಂದಾಗಿ ಗುಹೆಯೊಂದರಲ್ಲಡಗಿ ಕುಳಿತು ಹಲವಾರು ವರ್ಷ ತಪವನ್ನಾಚರಿಸಿ ಶಿವದರ್ಶನವನ್ನು ಪಡೆದು ಕೃತಾರ್ಥನಾದ ವಾಸುಕಿಯು, ಶಿವನ ಆಣತಿಯಂತೆ ಸುಬ್ರಹ್ಮಣ್ಯನ ದರ್ಶನ ಪಡೆದ ವಾಸುಕಿಯಲ್ಲೇ ಸುಬ್ರಹ್ಮಣ್ಯನು ಐಕ್ಯವಾಗುವ ಮೂಲಕ ಭಕ್ತಾದಿಗಳ ಪೂಜೆ–ಹರಕೆಗಳನ್ನು ಸ್ವೀಕರಿಸುವಂತಹ ಅನುಗ್ರಹಕ್ಕೆ ವಾಸುಕಿಯು ಪಾತ್ರನಾದನೆಂಬ ಐತಿಹ್ಯವಿದೆ. ಅಂದಿನಿಂದ ಈ ಕ್ಷೇತ್ರವು ವಾಸುಕಿ–ನಾಗ ಸಹಿತ ಸ್ಕಂದನ ಆರಾಧನಾ ಕ್ಷೇತ್ರವಾಗಿ ಪ್ರಸಿದ್ಧವಾಗಿದೆ ಎಂಬ ಪೌರಾಣಿಕ ನಂಬಿಕೆ ಇದೆ. ಕ್ಷೇತ್ರದೇವನಾದ ಸುಬ್ರಹ್ಮಣ್ಯನ ವಿಶಾಲವಾದ ಆಲಯವು, ಕುಮಾರಬೆಟ್ಟದ ಹಿನ್ನೆಲೆಯಿಂದ ಕೂಡಿದ ಸುಂದರ ಪರಿಸರದಲ್ಲಿದೆ. ಎತ್ತರವಾದ ಗೋಪುರವನ್ನು ಹೊಂದಿರುವ ಈ ದೇವಾಲಯ ಸಂಕೀರ್ಣದ ಪ್ರಾಕಾರದೊಳಗೆ ಸುಬ್ರಹ್ಮಣ್ಯ, ಲಕ್ಷ್ಮೀನರಸಿಂಹ ಹಾಗೂ ಉಮಾ ಮಹೇಶ್ವರರ ಪ್ರತ್ಯೇಕ ದೇಗುಲಗಳಿವೆ. ಇಲ್ಲಿಗೆ ಪ್ರಧಾನವಾದ ಸುಬ್ರಹ್ಮಣ್ಯ ದೇವಾಲಯದ ಗರ್ಭಗೃಹದಲ್ಲಿ ಶೇಷನಾದ ವಾಸುಕಿ ಹಾಗೂ ಸುಬ್ರಹ್ಮಣ್ಯರ ವಿಗ್ರಹಗಳು ಪೀಠದ ಮೇಲಿವೆ. ಗುಡಿಯ ಉತ್ತರ ಭಾಗದಲ್ಲಿ ಕುಕ್ಕೆಲಿಂಗಗಳೆಂದು ಕರೆಯಲಾಗುವ ಶಿವಲಿಂಗಗಳಿವೆ. ಅದನ್ನೂ ಕುಕ್ಕೆಸುಬ್ರಹ್ಮಣ್ಯ ಗುಡಿ ಎಂದು ಈಗಲೂ ಕರೆಯುವುದೂ ವಾಡಿಕೆಯಲ್ಲಿದೆ. ಮಕರ ಸಂಕ್ರಮಣದಂದು ಕುಕ್ಕೆಲಿಂಗನ ಜಾತ್ರೆಯಾಗುತ್ತದೆ.

ಇದೇ ಸಂಕೀರ್ಣದ ಆವರಣದ ಆಗ್ನೇಯ ಭಾಗದಲ್ಲಿರುವ ಲಕ್ಷ್ಮೀನರಸಿಂಹನ ದೇವಾಲಯದ ಉಸ್ತುವಾರಿಯನ್ನು ಅಲ್ಲೇ ಇರುವ ಮಧ್ವಮಠವು ನಿರ್ವಹಿಸುತ್ತಿದೆ. ಈ ಮಠವನ್ನು ಮಧ್ವಾಚಾರ್ಯರ ಸೋದರರಾದ ವಿಷ್ಣುತೀರ್ಥಾಚಾರ್ಯರು ಸ್ಥಾಪಿಸಿದರೆಂಬ ಅಭಿಪ್ರಾಯವಿದೆ. ವೇದವ್ಯಾಸರಿಂದ ಮಧ್ವಾಚಾರ್ಯರಿಗೆ ದತ್ತವಾದ ವೇದವ್ಯಾಸ ಸಂಪುಟ ಹಾಗೂ ಲಕ್ಷ್ಮೀನರಸಿಂಹದೇವರ ವಿಗ್ರಹಗಳು ಇವೆಂಬ ನಂಬಿಕೆ ಇದೆ. ವೈಶಾಖ ಮಾಸದಲ್ಲಿ ನರಸಿಂಹ ಜಯಂತಿ ಸಂದರ್ಭದಲ್ಲಿ ಮೂರು ದಿನಗಳ ಉತ್ಸವವು ಇಲ್ಲಿ ಜರುಗುತ್ತದೆ. ಇದೇ ಸಂಕೀರ್ಣದ ಈಶಾನ್ಯ ಭಾಗದಲ್ಲಿರುವ ಉಮಾಮಹೇಶ್ವರ ಗುಡಿಯಲ್ಲಿ ಕುಮಾರನ ಜನ್ಮದಾತರಾದ ಉಮಾ–ಮಹೇಶ್ವರರು ಆರಾಧಿಸಲ್ಪಡುತ್ತಾರೆ. ಅಲ್ಲದೇ ಸೂರ್ಯ, ಅಂಬಿಕಾ, ವಿಷ್ಣು ಹಾಗೂ ಗಣನಾಥ ವಿಗ್ರಹಗಳೂ ಇಲ್ಲಿವೆ. ರಥೋತ್ಸವವು ಉಮಾಮಹೇಶ್ವರರಿಗೆ ಶಿವರಾತ್ರಿಯಂದು ಜರುಗಿದರೆ ಸೂರ್ಯನಿಗೆ ರಥಸಪ್ತಮಿಯಂದು ನಡೆಯುತ್ತದೆ. ಸುಬ್ರಹ್ಮಣ್ಯ ಗುಡಿಯ ಹೊರಪ್ರಾಕಾರದ ಈಶಾನ್ಯ ಮೂಲೆಯಲ್ಲಿನ ಶೃಂಗೇರಿ ಮಠದಲ್ಲಿ ಚಂದ್ರಮೌಳೀಶ್ವರನ ಸನ್ನಿಧಿ ಇದ್ದು, ಹೊಸಳಿಗಮ್ಮ ಹಾಗೂ ಪುರುಷರಾಯ ದೈವಗಳ ಸ್ಥಾನವೂ ಇದೆ. ಪ್ರಾಕಾರದ ದಕ್ಷಿಣದಲ್ಲಿ ಭೈರವನಿದ್ದಾನೆ. ಇದು ಶೈವಕ್ಷೇತ್ರವಾದರೂ ಸುಬ್ರಹ್ಮಣ್ಯ ದೇವಾಲಯದಲ್ಲಿ ವೈಖಾನಸಾಗಮದ ಪ್ರಕಾರ ಪೂಜಾವಿಧಿಗಳು ಜರುಗುತ್ತವೆ. ಈ ದೇವರ ವಾರ್ಷಿಕ ಜಾತ್ರೆಯು ಮಾರ್ಗಶಿರ ಶುದ್ಧ ಒಂದರಿಂದ ಮಾರ್ಗಶಿರ ಶುದ್ಧ ೧೫ರವರೆಗೆ ನಡೆಯುತ್ತದೆ. ಅದರಲ್ಲೂ ಮಾರ್ಗಶಿರ ಶುದ್ಧ ಚಂಪ ಷಷ್ಠಿಯಂದು ಬೆಳಗ್ಗೆ ಜರುಗುವ ಮಹಾರಥೋತ್ಸವವು ಈ ಜಾತ್ರೆಯ ವಿಶೇಷ ಆಕರ್ಷಣೆಯಾಗಿರುತ್ತದೆ. ಇದೇ ರೀತಿ ಪುಷ್ಯಶುದ್ಧ ಕಿರುಷಷ್ಠಿಯಂದು ರಾತ್ರಿ ಜರುಗುವ ಚಿಕ್ಕರಥೋತ್ಸವೂ ಅಷ್ಟೇ ಆಕರ್ಷಕವಾಗಿರುತ್ತದೆ. ಕಾರ್ತಿಕ ಮಾಸದ ಕೊನೆಯ ದಿನದಂದು ಜರುಗುವ ಲಕ್ಷದೀಪೋತ್ಸವ ಇಲ್ಲಿನ ಇನ್ನೊಂದು ವಿಶೇಷವಾಗಿದ್ದು, ಅಂದು ರಾತ್ರಿ ನಡೆಯುವ ಚಂದ್ರಮಂಡಲೋತ್ಸವ ಉಲ್ಲೇಖಾರ್ಹವಾಗಿದೆ. ಹಿಂದೆ ಈ ಪ್ರದೇಶವು ಬಲ್ಲಾಳರೆಂಬ ಸ್ಥಳೀಯ ಸಾಮಂತರಸರ ಆಡಳಿತಕ್ಕೆ ಒಳಪಟ್ಟಿದ್ದು, ಅವರ ಅರಮನೆಯ ಅವಶೇಷಗಳು ಕುಲ್ಕುಂದ ಪರಿಸರದಲ್ಲಿ ಕಂಡುಬರುತ್ತದೆ. ಸ್ಥಳೀಯ ಬಲ್ಲಾಳ ರಾಜರ ಆಳ್ವಿಕೆಯ ಸಮಯದಲ್ಲಿ, ದೇಗುಲ ಸಂಕೀರ್ಣದ ಮಹಾದ್ವಾರದ ಬಳಿಯಿರುವ ಬಲ್ಲಾಳರಾಯನ ವಿಗ್ರಹವು, ಭಕ್ತಶಿಲ್ಪವಾಗಿ ಸ್ಥಾಪಿತವಾಗಿರಬೇಕೆಂದು ತೋರುತ್ತದೆ. **ಆದಿ ಸುಬ್ರಹ್ಮಣ್ಯ** : ಸುಬ್ರಹ್ಮಣ್ಯ ದೇವಾಲಯದ ಹಿಂಭಾಗದಲ್ಲಿ, ಸುಮಾರು ೨೦೦ ಮೀ. ಅಂತರದಲ್ಲಿ ಹರಿದಿರುವ ದರ್ಪಣ ತೀರ್ಥದ ದಂಡೆಯ ಮೇಲಿರುವ ಆದಿಸುಬ್ರಹ್ಮಣ್ಯ ದೇವಾಲಯದಲ್ಲಿ ವಲ್ಮೀಕ (ಹುತ್ತ)ವನ್ನೇ ಮೂಲದೇವರಾಗಿ ಆರಾಧಿಸಲಾಗುತ್ತಿದ್ದು, ಅಲ್ಲೇ ವಿನಾಯಕನ ಕಿರುಗುಡಿಯೂ ಇದೆ. **ಉತ್ತರಾದಿ ಮಠ:** ಇಲ್ಲಿರುವ ದ್ವೈತ ಸಂಪ್ರದಾಯದ ಉತ್ತರಾದಿ ಮಠವು ತೇರುಬೀದಿಯ ಉತ್ತರ ಭಾಗದಲ್ಲಿದೆ. ಅಲ್ಲಿ ಆಂಜನೇಯನ ವಿಗ್ರಹವಿದೆ. **ರುದ್ರಪಾದ** : ಆದಿಸುಬ್ರಹ್ಮಣ್ಯ ಗುಡಿಯ ಸಮೀಪದಲ್ಲಿರುವ ಈ ಸ್ಥಳದಲ್ಲಿ 'ಶಿಲಾ ರುದ್ರಪಾದ' ಹಾಗೂ ಶಿಲಾಲೇಖಗಳಿವೆ. ಅಲ್ಲಿದ್ದ ಗರ್ಭಗೃಹವಿಂದು ಸಂಪೂರ್ಣ ನಾಶವಾಗಿದೆ. **ಕಾಶಿಕಟ್ಟೆ** : ಗುಡಿಗೆ ಹೋಗುವ ರಾಜಬೀದಿಯಲ್ಲಿ ಅಶ್ವತ್ಥಮರ, ಕಟ್ಟೆ ಗಣಪತಿ ಹಾಗೂ ಆಂಜನೇಯ ಗುಡಿಗಳಿವೆ. ಕುಕ್ಕೆ ಸುಬ್ರಹ್ಮಣ್ಯದಲ್ಲಿ ವಾಚನಾಲಯ ಹಾಗೂ ವಸ್ತುಸಂಗ್ರಹಾಲಯಗಳಿವೆ. ದೇವಾಲಯದ ವತಿಯಿಂದ 'ಕುಮಾರಕೃಪಾ' ಸೇರಿದಂತೆ ವಸತಿಗೃಹ, ಛತ್ರಗಳಿದ್ದು, ಮಧ್ಯಾಹ್ನ ಹಾಗೂ ರಾತ್ರಿ ಭಕ್ತರಿಗೆ ಅನ್ನ ಸಂತರ್ಪಣೆ ನಡೆಯುತ್ತದೆ. **ಬಿಲದ್ವಾರ** : ಕುಮಾರಧಾರಾ ಹೊಳೆಗೆ ಹೋಗುವ ಮಾರ್ಗದಲ್ಲಿ ದಕ್ಷಿಣಕ್ಕಾದಂತೆ ಇರುವ ಗುಹೆ (ಬಿಲದ್ವಾರ)ಯು ಪ್ರಾಚೀನ ಕಾಲದಲ್ಲಿ ವಾಸುಕಿಯು ತಪಸ್ಸು ಮಾಡಿ, ಶಿವನನ್ನು ಒಲಿಸಿಕೊಂಡ ತಾಣ ಎಂಬ ಐತಿಹ್ಯವಿದೆ. ಗುಹೆಯಲ್ಲಿ ಉತ್ತರ–ದಕ್ಷಿಣಕ್ಕೆ ಎರಡು ಮಾರ್ಗಗಳಿವೆ. ದಕ್ಷಿಣ ಮಾರ್ಗವು ಒಂದು ಫರ್ಲಾಂಗು ಸಾಗುತ್ತಿದ್ದು, ನಡುವೆ ಗೋಗರ್ಭ ಹಾಗೂ ತೀರ್ಥಗಳಿವೆ. ಕಾರ್ತಿಕ ಮಾಸದಲ್ಲಿ ಇಲ್ಲಿಗೆ ಬರುವ ಯಾತ್ರಿಕರು ಬಿಲದ್ವಾರ ಪ್ರವೇಶಿಸಿ ಗೋಗರ್ಭಕ್ಕೆ ಬಂದು, ತೀರ್ಥ ಪಡೆದು ಬ್ರಾಹ್ಮಣರಿಗೆ ದಕ್ಷಿಣೆ ನೀಡಿ ಕೃತಾರ್ಥರಾಗುತ್ತಾರೆ. **ಮತ್ಸ್ಯತೀರ್ಥ:** ಇದು ಸುಬ್ರಹ್ಮಣ್ಯ ದೇವಸ್ಥಾನದಿಂದ ಸುಮಾರು ಎರಡೂವರೆ ಕಿ.ಮೀ. ದೂರದಲ್ಲಿದ್ದು, ದರ್ಪಣ ತೀರ್ಥ ಹಾಗೂ ಕುಮಾರಧಾರಾ ನದಿಗಳ ಸಂಗಮ ಸ್ಥಾನ. ಈ ತೀರ್ಥವು ಬಹಳ ಆಳವಾಗಿದ್ದು, ಅದರಲ್ಲಿ ದೊಡ್ಡಗಾತ್ರದ ಮೀನುಗಳು ಸದಾ ಇರುವುದರಿಂದ 'ಮತ್ಸ್ಯತೀರ್ಥ' ಎಂಬುದು ಅದಕ್ಕೆ ಅನ್ವರ್ಥನಾಮವಾಗಿದೆ. ಅಲ್ಲದೆ ಇದು ಸುಬ್ರಹ್ಮಣ್ಯದೇವರ ಅವಭೃತ ಸ್ಥಳವೂ ಆಗಿರುವುದರಿಂದ ಭಕ್ತಾದಿಗಳು ಇಲ್ಲಿ ತೀರ್ಥಸ್ನಾನ ಮಾಡುತ್ತಾರೆ. **ಕುಮಾರಪರ್ವತ:** ಸುಮಾರು ೪೦೦೦ ಅಡಿ ಎತ್ತರವಿರುವ ಈ ಪರ್ವತವು ದೇವಸ್ಥಾನದಿಂದ ೨೭ ಕಿ.ಮೀ. ಪೂರ್ವಕ್ಕಾದಂತಿದೆ. ಮಾರ್ಗಮಧ್ಯದಲ್ಲಿ ಗಿರಿಮಠವೆಂಬ ಪಾಳು ವಸತಿನೆಲೆ ಇದೆ. ಮುಂದೆ ಶೇಷಪರ್ವತ–ಸಿದ್ಧಪರ್ವತಗಳನ್ನು ಏರಿ ಕುಮಾರಪರ್ವತವನ್ನು ತಲುಪಬೇಕಾಗುತ್ತದೆ. ಗಿರಿಯುತ್ತುಂಗದಲ್ಲಿ ಎಕರೆಯಷ್ಟು ವಿಶಾಲವಾದ ಬಯಲಿನಲ್ಲಿ ಕುಮಾರಸ್ವಾಮಿಯು ಪಟ್ಟಾಭಿಷಿಕ್ತನಾದನೆಂದು ಹೇಳಲಾಗುವ ಸ್ಥಳದಲ್ಲಿ ಶಿಲೆಯ ಮೇಲೆ ಪಾದಮುದ್ರಿಕೆ ಇದೆ. ಇಲ್ಲಿಂದ ಕುಮಾರಧಾರಾ ನದಿಯು ಉಭಯಧಾರೆಯಾಗಿ ಹರಿದು ಮುಂದೆ ಒಂದಾಗುತ್ತದೆ. **ಅಗ್ರಹಾರ ಸೋಮನಾಥ ದೇವಸ್ಥಾನ (ಪಂಚಮಿ ತೀರ್ಥ):** ಇದು ಕೂಡಾ ಕುಮಾರಧಾರಾ ನದಿಗೆ ಹೋಗುವ ಮಾರ್ಗದಲ್ಲಿದ್ದು, ಅಲ್ಲಿ ಸೋಮನಾಥ ದೇಗುಲ, ಮಠ ಹಾಗೂ ಮೂವತ್ತಕ್ಕೂ ಹೆಚ್ಚು ವೃಂದಾವನಗಳಿವೆ.

**ತಾಮ್ರಶಾಸನಗಳು:** ಸುಬ್ರಹ್ಮಣ್ಯ ದೇವಾಲಯಕ್ಕೆ ಸಂಬಂಧಿಸಿದಂತೆ ಇರುವ ವಿವಿಧ ಕಾಲದ ತಾಮ್ರ ಶಾಸನಗಳು (೧೪೦೭, ೧೬೬೫, ೧೬೬೬, ೧೬೮೧, ೧೬೭೩) ಸಂಗಮರು, ಅರವೀಡು, ಮೈಸೂರು ಅರಸರು ಹಾಗೂ  ಬೇಲೂರು ನಾಯಕರ  ಕಾಲಕ್ಕೆ ಸೇರಿದ ದಾನ ಶಾಸನಗಳಾಗಿವೆ.  ಅಲ್ಲದೇ ಕೊಡಗು, ಇಂದೂರು, ಸಂಸ್ಥಾನದವರೂ ಉಂಬಳಿ ನೀಡಿದ್ದಕ್ಕೆ ದಾಖಲೆಗಳಿವೆ. **ಕುಲ್ಕುಂದ :** ಉಪ್ಪಿನಂಗಡಿ–ಬಿಸ್ಲೆಘಾಟ್ ಹಾಗೂ ಸುಳ್ಯ–ಕುಕ್ಕೆಸುಬ್ರಹ್ಮಣ್ಯ ರಸ್ತೆಗಳು ಕೂಡುವ ಸ್ಥಳದಲ್ಲಿರುವ ಇದು ಕುಕ್ಕೆ ಸುಬ್ರಹ್ಮಣ್ಯದಿಂದ ಸುಮಾರು ಮೂರು ಕಿ.ಮೀ. ದೂರದಲ್ಲಿರುವ ಉಪಗ್ರಾಮ.  ಕುಕ್ಕೆ ಸುಬ್ರಹ್ಮಣ್ಯದಲ್ಲಿ ಕಾರ್ತಿಕ ಪೂರ್ಣಿಮೆಯಿಂದ  ಆರಂಭಗೊಂಡು ೧೫ ದಿನ ನಡೆಯುವ ವಾರ್ಷಿಕ ಜಾತ್ರೆ ಸಂದರ್ಭದಲ್ಲಿ ಇಲ್ಲೂ ಜಾತ್ರೆಯಾಗುತ್ತದೆ. ಆ ಸಂದರ್ಭದಲ್ಲಿ ಇಲ್ಲಿ ಜರುಗುವ ದನಗಳ ಜಾತ್ರೆಯು ಪ್ರಸಿದ್ಧವಾಗಿದ್ದು, ಘಟ್ಟದ ಮೇಲಿನ ಜಾನುವಾರುಗಳು ಅಧಿಕ ಸಂಖ್ಯೆಯಲ್ಲಿ ಇಲ್ಲಿ ಮಾರಾಟವಾಗುತ್ತವೆ.

**ಕುಡುಪು (೨,೫೫೨) :** ಜಿಲ್ಲಾ ಕೇಂದ್ರ ಮಂಗಳೂರು ನಗರದಲ್ಲಿಂದು ಅಂತರ್ಗತವಾಗಿರುವ ಇದು, ನಗರದಿಂದ ಒಂಭತ್ತು ಕಿ.ಮೀ. ಪೂರ್ವಕ್ಕಾದಂತೆ ಇದೆ.  ರಸ್ತೆ ಬದಿಯ ಆಳವಾದ ಕಣಿವೆಯಲ್ಲಿರುವ ಅನಂತಪದ್ಮನಾಭನ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಪ್ರತಿವರ್ಷ ಇಲ್ಲಿ ಜರುಗುವ ರಥೋತ್ಸವವೂ ಖ್ಯಾತಿ ಪಡೆದಿದೆ.  ಈ ದೇವಾಲಯವು ಪ್ರಕೃತಿಯ ಮಡಿಲಲ್ಲಿದ್ದು, ಮಾರ್ಗಮಧ್ಯದಲ್ಲಿರುವ ಆಕರ್ಷಕ ಕಮಾನು, ಬದಿಯಲ್ಲಿರುವ ಭದ್ರಾ–ಸರಸ್ವತಿ ಸರೋವರ, ಮುಂದಿರುವ ಉನ್ನತ ಧ್ವಜಸ್ಥಂಭ; ನಾಗಬನದಲ್ಲಿರುವ ಅಷ್ಟಕುಲ ನಾಗಮಂಟಪ ಮತ್ತು ವಾಸುಕಿ ನಾಗರಾಜ ಮಂಟಪಗಳಲ್ಲಿರುವ ವೈವಿಧ್ಯಮಯ ನಾಗಬಿಂಬಗಳು ಕಲಾತ್ಮಕವಾಗಿದ್ದು, ಆಕರ್ಷಕವಾಗಿವೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಾಗಬಿಂಬಗಳಿರುವ ಅಂತಹ ಇನ್ನೊಂದು ಕ್ಷೇತ್ರವಾದ ಕೋಲಾರ ಜಿಲ್ಲೆಯ ವಿದುರಾಶ್ವತ್ಥವನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.  ಭದ್ರ–ಸರಸ್ವತಿ ಸರೋವರದ ನಡುವಣ ಮಂಟಪದಲ್ಲಿ ಸಪ್ತಫಣಿಯುಕ್ತ ನಾಗರಾಜ ಶಿಲ್ಪವಿದೆ. ಅಲ್ಲದೆ, ನವಗ್ರಹ, ಹಾಗೂ ಅಯ್ಯಪ್ಪನ ಗುಡಿಗಳಿವೆ. ಇಲ್ಲಿ ವಲ್ಮಿಕ ಮಂಟಪವನ್ನು ಎಂಟು ಅಡಿ ಎತ್ತರದ ಹುತ್ತಕ್ಕಾಗಿ ನಿರ್ಮಿಸಲಾಗಿದೆ.  ಕಲ್ಲಿನ ಉಯ್ಯಾಲೆಯೂ ಇದ್ದು, ಇತ್ತೀಚೆಗೆ ಈ ಸ್ಥಳವು ಗಮನಾರ್ಹವಾಗಿ ಬೆಳೆದಿದೆ.  ಅನಂತಪದ್ಮನಾಭನ ಗುಡಿಯ ಗರ್ಭಗೃಹದಲ್ಲಿ ನಾಗರಾಜನ ಹೆಡೆ, ಅನಂತಪದ್ಮನಾಭ ಹಾಗೂ ಸುಬ್ರಹ್ಮಣ್ಯ ದೇವರ ಉತ್ಸವ ಮೂರ್ತಿಗಳಿವೆ.

**ಕೆಮ್ಮಾರು ಸರೋವರ :** ತಾಲೂಕು ಕೇಂದ್ರ ಪುತ್ತೂರಿನಿಂದ ೧೯ ಕಿ.ಮೀ. ದೂರದಲ್ಲಿ ಉಪ್ಪಿನಂಗಡಿ, ಬಿಸ್ಲೆಘಾಟ್ ರಸ್ತೆಯಲ್ಲಿರುವ ನಿಸರ್ಗದತ್ತ ರಮಣೀಯ ತಾಣ.  ವನಸಿರಿಯ ನಡುವಿರುವುದರಿಂದ ವಾರಾಂತ್ಯದ ವಿಹಾರಕ್ಕೆ ಪ್ರಶಸ್ತವಾಗಿರುವ ಪ್ರವಾಸಿ ಕೇಂದ್ರ

**ಕೆಲ್ಲಪುತ್ತಿಗೆ (೧೨೮೪) :** ಹೋಬಳಿ ಕೇಂದ್ರ ಮೂಡಬಿದ್ರೆಯಿಂದ ಎಂಟು ಕಿ.ಮೀ. ಈಶಾನ್ಯಕ್ಕೆ ಇರುವ ಐತಿಹಾಸಿಕ ಮಹತ್ವದ ಸ್ಥಳ. 'ಕೆಲ್ಲ'ಎಂಬ ಹೆಸರಿನ ಸಾಮಂತ ಅರಸುಮನೆತನವೊಂದು ದಕ್ಷಿಣ ಕನ್ನಡದಲ್ಲಿ ಆಳ್ವಿಕೆ ನಡೆಸಿದ್ದು, ಕೆಲ್ಲಪುತ್ತಿಗೆಯು ಅವರ ರಾಜಧಾನಿಯಾಗಿತ್ತೆಂದು ಪಿ.ಎನ್.ನರಸಿಂಹಮೂರ್ತಿ ಅಭಿಪ್ರಾಯ ಪಡುತ್ತಾರೆ.  ಕೆಲ್ಲರು ಆಳುಪರಿಗೆ ನಿಷ್ಠೆಯಿಂದಿದ್ದರೆಂದು ತಿಳಿದುಬರುತ್ತದೆ. ಕೆಲ್ಲ ಅರಸರಿಗೆ ಸಂಬಂಧಿಸಿದ ಕೆಲವು ವೀರಸ್ಮಾರಕಗಳು ಇಲ್ಲಿ ಲಭಿಸಿದ್ದು, ಅದರಿಂದಾಗಿ ಈ ಊರಿಗೆ 'ಕೆಲ್ಲ' ಎಂಬ ವಿಶೇಷಣ ಅಂಟಿಕೊಂಡಿತೆಂದು ಹೇಳಲಾಗುತ್ತದೆ.  ಆದರೆ ಕೆಲ್ಲ ಎಂಬುದಿಂದು ಜೈನ ಉಪನಾಮಗಳಲ್ಲಿ ಒಂದಾಗಿ ಮಾತ್ರವೇ ಉಳಿದಿದೆ.

**ಗುರುಪುರ :** ಜಿಲ್ಲಾ ಕೇಂದ್ರ ಮಂಗಳೂರಿನಿಂದ ೧೬ ಕಿ.ಮೀ. ಈಶಾನ್ಯಕ್ಕೆ **ಆಡ್ಡೂರು (೫,೧೩೨)** ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿ ಗುರುಪುರ (ಫಲ್ಗುಣಿ) ನದಿಯ ಬಲದಂಡೆ ಮೇಲಿರುವ ಸ್ಥಳವಾಗಿದ್ದು, ಮೇಲಿಂದ ಮೇಲೆ ಪ್ರವಾಹಕ್ಕೆ ಈಡಾಗಿರುವ ನೆಲೆ. ಕೆಳದಿ ನಾಯಕರ ಆಡಳಿತಾವಧಿಯಲ್ಲಿ ಇದೊಂದು ಪ್ರಮುಖ ಪಟ್ಟಣವಾಗಿದ್ದು, ಅವರ ಆಳ್ವಿಕೆಯಲ್ಲಿ ವೀರಶೈವ ಗುರುಮಠವೊಂದು ಇಲ್ಲಿ ಸ್ಥಾಪಿಸಲ್ಪಟ್ಟಿತು.  ಆ ಗುರುಮಠದಿಂದಾಗಿ ಊರಿಗೂ ಗುರುಪುರ ಎಂಬ ಹೆಸರು ಬಂತು.  ಪೊಳಲಿಗೆ ತೆರಳುತ್ತಿದ್ದ ರಾಣಿ ಚೆನ್ನಮ್ಮ ಇಲ್ಲಿ ತಂಗಿದ್ದಳೆಂಬ ಐತಿಹ್ಯವಿದೆ. ಇಲ್ಲಿರುವ ಜಂಗಮ ಗುರುಮಠವು ಶಿಥಿಲಾವಸ್ಥೆಯಲ್ಲಿದ್ದರೂ ವಿಶಾಲವಾಗಿದ್ದು, ಆಕರ್ಷಕವಾಗಿದೆ. ಮಠದ ಆವರಣದಲ್ಲಿರುವ ನೀಲಕಂಠ ದೇವಾಲಯದಲ್ಲಿ ಶಿಲಾಮೂರ್ತಿಯಿದೆ.  ಕಾರ್ತಿಕ ಮಾಸದಲ್ಲಿ ದೀಪೋತ್ಸವವಿರುತ್ತದೆ. ಈ ಮಠಕ್ಕೆ ಸೇರಿದ ಹಿಂದಿನ ಕೆಲವು ಗುರುಗಳ ಸಮಾಧಿಗಳೂ ಇಲ್ಲಿವೆ. ಮಠದಲ್ಲಿರುವ ಕಾಷ್ಠಶಿಲ್ಪ, ಕೆಲವು ಪತ್ತಾಸು, ಕಲೆಂಬಿಗಳು ಉಲ್ಲೇಖಾರ್ಹವಾಗಿವೆ. ಗುರುಪುರದ ಪೇಟೆಯಲ್ಲಿರುವ ಗೌಡಸಾರಸ್ವತ ಬ್ರಾಹ್ಮಣರ ವರದರಾಜ ವೆಂಕಟರಮಣ ದೇವಾಲಯವು ಸುಮಾರು ೪೦೦ ವರ್ಷಗಳಷ್ಟು ಪ್ರಾಚೀನದ್ದಾಗಿದೆ.  ಗರ್ಭಗೃಹದಲ್ಲಿ ಶ್ರೀದೇವಿ–ಭೂದೇವಿಯರನ್ನೊಳಗೊಂಡ ವರದರಾಜನ ಸುಂದರವಾದ ಪಂಚಲೋಹದ ಪ್ರತಿಮೆ ಇದೆ. ಅಲ್ಲದೇ ವೆಂಕಟರಮಣ, ಶ್ರೀನಿವಾಸ, ಹನುಮಂತ, ಗಣಪತಿ, ಗರುಡ ಹಾಗೂ ಮಹಾಲಕ್ಷ್ಮಿಯರೂ ಆವರಣದಲ್ಲಿದ್ದಾರೆ.  **ಗಂಜಿಮಠ:**

ಗುರುಪುರಕ್ಕೆ ಅನತಿದೂರದಲ್ಲಿ ಗಂಜಿಮಠವಿದ್ದ ಸ್ಥಳಕ್ಕೆ ಹಿಂದೆ 'ಅಯ್ಯಲಚ್ಚಿಲು' ಎಂದು ಕರೆಯಲಾಗುತ್ತಿದ್ದು, ಬಡಬಗ್ಗರಿಗೆ ಮಠದ ವತಿಯಿಂದ ಗಂಜಿಯನ್ನು ನೀಡುತ್ತಿದ್ದುದರಿಂದ ಅದು ಗಂಜಿಮಠವೆಂದೇ ಪ್ರಸಿದ್ಧವಾಗಿತ್ತು. ಇದು ಬಡಗಉಳಿಪಾಡಿ (೫,೮೮೫) ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿದೆ.

**ಗುರುವಾಯನಕೆರೆ :**ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ಐದು ಕಿ.ಮೀ. ಪಶ್ಚಿಮಕ್ಕೆ **ಕುವೆಟ್ಟು (೬,೦೩೫)**ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿರುವ ಧಾರ್ಮಿಕ ಸ್ಥಳ. ಇಲ್ಲಿರುವ ವಿಶಾಲವಾದ ಕೆರೆಯಿಂದಾಗಿ ಆ ಊರಿಗೆ ಈ ಹೆಸರು ಬಂದಿದೆ. ಬಂಗರಸರ ಕಾಲದಲ್ಲಿ ಒಂದೇ ಆವರಣದಲ್ಲಿ ನಿರ್ಮಾಣಗೊಂಡಿರುವ ಶಾಂತಿನಾಥ, ಚಂದ್ರನಾಥ ಹಾಗೂ ಅನಂತನಾಥ ತೀರ್ಥಂಕರರ ಪ್ರತ್ಯೇಕ ಬಸದಿಗಳು; ಮಾನಸ್ತಂಭವೊಂದಕ್ಕೆ ನಾಲ್ಕು ಕಂಬದ ಮಂಟಪ ನಿರ್ಮಿಸುವ ಮೂಲಕ ಅದನ್ನು ಪಂಚಕಂಬದ ಬಸದಿಯನ್ನಾಗಿಸಿ, ಸ್ತಂಭದ ಮೇಲಿರುವ ಬ್ರಹ್ಮ ಯಕ್ಷನಿಗೆ ನಿತ್ಯಪೂಜೆ ಸಲ್ಲುವಂತೆ ಮಾಡಿರುವುದೊಂದು ವಿಶೇಷ. ಸುಮಾರು ೧೫ನೆಯ ಶತಮಾನಕ್ಕೆ ಸೇರಿದ ಈ ವಿಶಾಲವಾದ ತ್ರಿಕೂಟ ಬಸದಿಯ ಸಂಕೀರ್ಣದ ಮುಂದಿರುವ ಎತ್ತರದ ಮಾನಸ್ತಂಭವು ಗಮನಾರ್ಹವಾಗಿದೆ. ಈ ಸಂಕೀರ್ಣವನ್ನು ಇತ್ತೀಚೆಗೆ ದುರಸ್ತಿ ಮಾಡಿ ಪುನರ್ ಜೀರ್ಣೋದ್ಧಾರ ಮಾಡಲಾಗಿದೆ. ಮುಂದೆ ಉದ್ಯಾನವನ್ನೂ ರೂಪಿಸಲಾಗಿದೆ. ಈ ಬಸದಿಗಳಲ್ಲಿ ವಿವಿಧ ಪ್ರಮಾಣದ ಪಂಚಲೋಹದ ತೀರ್ಥಂಕರ ಶಿಲ್ಪಗಳು ಅಧಿಕ ಸಂಖ್ಯೆಯಲ್ಲಿದ್ದು, ಪ್ರಾಕಾರದೊಳಗೆ ಪದ್ಮಾವತಿ ಯಕ್ಷಿಯ ಸನ್ನಿಧಾನವೂ ಇದೆ. ಈ ಬಸದಿಯ ಸನಿಹದಲ್ಲೇ ಬೆಳ್ತಂಗಡಿ ರಸ್ತೆಯಲ್ಲಿ ಹಝ್ರತ್ ಹಯಾತುಲ್ ಔಲಿಯಾ ದರ್ಗಾ ಶರೀಫ್, ಬದ್ರಿಯಾ ಜುಮ್ಮಾ ಮಸೀದಿ, ಯಾಹಿಯಾವುಲ್ ಮದ್ರಸಾ, ಕಬ್ರಸ್ಥಾನ ಮುಂತಾದವೆಲ್ಲ ಒಂದೇ ಆವರಣದಲ್ಲಿವೆ. ದರ್ಗಾವನ್ನು ಮರದ ಕಂಬಗಳನ್ನು ಬಳಸಿ ನಿರ್ಮಿಸಲಾಗಿದ್ದು, ಮಂಗಳೂರು ಹೆಂಚಿನ ಛಾವಣಿ ಇದೆ. ಇಲ್ಲಿ ಸಮಾಧಿಯಾಗಿರುವ ಸಂತರು ಏಮನ್‌ನವರಾಗಿದ್ದು, ಅವರ ಉರುಸು ಕಾಜೂರು ಉರುಸ್‌ಗೆ ಮೂರು ದಿನ ಮೊದಲು ನಡೆಯುತ್ತದೆ. ಹತ್ತು ದಿನಗಳ ಕಾಲ ನಡೆಯುವ ಈ ಉರುಸ್‌ನಲ್ಲಿ ನಾಡಿನ ಖ್ಯಾತ ಧರ್ಮಗುರುಗಳಿಂದ ಧಾರ್ಮಿಕ ಉಪನ್ಯಾಸವನ್ನು ಏರ್ಪಡಿಸಲಾಗುತ್ತದೆ. ಆ ಸಂದರ್ಭದಲ್ಲಿ ಲಕ್ಷಾಂತರ ಮಂದಿ ದರ್ಗಾಕ್ಕೆ ಭೇಟಿ ನೀಡಿ ಉರುಸ್‌ನಲ್ಲಿ ಭಾಗವಹಿಸುತ್ತಾರೆ.

**ಚಿತ್ರಾಪುರ :** ಮಂಗಳೂರಿನಿಂದ ೨೪ ಕಿ.ಮೀ. ಉತ್ತರಕ್ಕಾದಂತೆ ಇರುವ **ಕುಳಾಯಿ** ಕಂದಾಯ ಗ್ರಾಮಕ್ಕೆ ಸೇರಿದ್ದು, ಮಂಗಳೂರು ಮಹಾನಗರಪಾಲಿಕೆಯಲ್ಲಿಂದು ಅಂತರ್ಗತವಾಗಿದೆ. ಪ್ರಾಚೀನ ಶಾಸನಗಳಲ್ಲಿ ಚಿತ್ರಪ್ಪ ಎಂದೇ ಉಲ್ಲೇಖಿತಗೊಂಡಿರುವ ಇದು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿರುವ, ಸುಮಾರು ೧೧ ನೆಯ ಶತಮಾನಕ್ಕೆ ಸೇರಿದ ದುರ್ಗಾದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಚೌಕಾಕಾರದ ಈ ಗುಡಿಯಲ್ಲಿರುವ ಗಣಪತಿಯ ಕಿರುಶಿಲ್ಪ ಆಕರ್ಷಕವಾಗಿದೆ. ಅಲ್ಲೇ ಇರುವ ೧೪೬೭ರ ಶಿಲಾಶಾಸನದಲ್ಲಿ ಆ ದೇವಾಲಯಕ್ಕೆ ನೀಡಲ್ಪಟ್ಟಿರುವ ಭೂದಾನಗಳ ಪಟ್ಟಿಯೇ ಇದೆ. ಇಲ್ಲಿ ದುರ್ಗಾದೇವಿಯನ್ನು ಶಿವಲಿಂಗ ರೂಪದಲ್ಲಿ ಪ್ರತಿಷ್ಠಾಪಿಸಲಾಗಿದೆ. ಈ ದೇವಿಗೆ ಪೊರಿಪು ಉಳ್ಳಾಳ್ತಿ ಎಂಬ ನಾಮಾಂಕಿತವಿದ್ದು, ೧೩೮೮ರ ಶಾಸನಗಳಲ್ಲಿ ಚಿತ್ರಪುರದ ಪುಳುಪಿನ ದೇವಾಲ್ಯ ಎಂದೇ ಈ ಗುಡಿಯು ದಾಖಲಿಸಲ್ಪಟ್ಟಿದೆ. ಈ ದೇವಿಗೆ ಹರಕೆ ಹೊತ್ತ ಭಕ್ತರಿಂದ ಪ್ರತೀ ವರ್ಷ 'ಹುಳ' ಸಮಾರಾಧನೆಯಾಗುತ್ತದೆ. ಈ ದೇವಾಲಯವು ಚಿತ್ರಾಪುರದ ಮಧ್ವಮಠದ ನಿಯಂತ್ರಣಕ್ಕೊಳಪಟ್ಟಿದ್ದು, ಸುಮಾರು ೧೪–೧೫ನೆಯ ಶತಮಾನದ ಶಾಸನಗಳಲ್ಲಿ ಈ ಮಠದ ಪ್ರಸ್ತಾಪವಿರುವುದು ಗಮನಾರ್ಹವಾಗಿದೆ. ಇತ್ತೀಚೆಗೆ, ಇಲ್ಲಿ ನಿರ್ಮಾಣಗೊಂಡಿರುವ ವಿಶಾಲವಾದ ಅಯ್ಯಪ್ಪಸ್ವಾಮಿ ಗುಡಿ ಆಕರ್ಷಕವಾಗಿದೆ.

**ಜಮಾಲಬಾದ್:** ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ಎಂಟು ಕಿ.ಮೀ. ಉತ್ತರಕ್ಕೆ **ನಡ(೨,೯೧೩)** ಗ್ರಾಮದಲ್ಲಿರುವ ಏಕಶಿಲಾಪರ್ವತ ಪ್ರದೇಶ. ಬೆಟ್ಟದ ಮೇಲಿರುವ ಕೋಟೆ ಹಾಗೂ ಸ್ಮಾರಕಗಳಿಂದಾಗಿ ಖ್ಯಾತಿ ಪಡೆದಿದೆ. ಹಿಂದೆ ನರಸಿಂಹಗಡ ಎಂಬ ಹೆಸರೂ ಈ ಸ್ಥಳಕ್ಕಿದ್ದು, ನರಸಿಂಹವರ್ಮನೆಂಬ ದೊರೆಯು ಬೆಟ್ಟದ ಮೇಲೆ ಕೋಟೆ ಕಟ್ಟಿಕೊಂಡು ಆಳುತ್ತಿದ್ದನೆಂದು ಹೇಳಲಾಗುತ್ತದೆ. ಆದರೆ ಇದನ್ನು ಟಿಪ್ಪು ೧೭೮೪ರಲ್ಲಿ ವಶಪಡಿಸಿಕೊಂಡ ನಂತರ ಪ್ರಾಚೀನ ಕೋಟೆಯನ್ನು ದುರಸ್ತಿಗೊಳಿಸಿ 'ನಡ' ಗ್ರಾಮಕ್ಕೆ ತನ್ನ ತಾಯಿ ಜಮಾಲ್ ಬೀ ಹೆಸರಿನಲ್ಲಿ ಜಮಾಲಬಾದ್ ಎಂದೂ, ಕೋಟೆಯನ್ನೊಳಗೊಂಡ ಬೆಟ್ಟಕ್ಕೆ ಜಮಾಲಗಡ್ ಎಂದೂ ಹೆಸರಿಟ್ಟನೆಂದು ತಿಳಿದುಬರುತ್ತದೆ. ಮುಂದೆ ಅದನ್ನು ಬ್ರಿಟಿಷರು ೧೮೦೦ರಲ್ಲಿ ಸ್ವಾಧೀನಪಡಿಸಿಕೊಂಡರು. ಆದರೆ ಇಂದು ಈ ಬೆಟ್ಟವನ್ನು ಸ್ಥಳೀಯವಾಗಿ ಗಡಾಯಿಕಲ್ಲು (ಗಡ=ಕೋಟೆ) ಎಂದು ಕರೆಯಲಾಗುತ್ತದೆ. ಸುಮಾರು ೧,೮೦೦ ಅಡಿ ಎತ್ತರದ ಈ ಗಿರಿ ಪರ್ವತವನ್ನೇರಲು ಮೆಟ್ಟಿಲಿರುವ ಮಾರ್ಗವೊಂದೇ ಏಕೈಕದಾರಿಯಾಗಿದ್ದು, ಉಳಿದೆಲ್ಲ ಭಾಗವು ದುರ್ಗಮವಾಗಿದೆ. ಮೊದಲನೆಯ ಸುತ್ತಿನ ಕೋಟೆಯ ಪ್ರಧಾನದ್ವಾರವು ಆಕರ್ಷಕವಾಗಿದೆ. ಒರಟಾದ ಮೆಟ್ಟಿಲುಗಳನ್ನೇರಿ ಮೇಲೆರುವಾಗ ಕಾಣಸಿಗುವ ಒಳಸುತ್ತಿನ ಕೋಟೆಗಳು ಪಾಳು ಬಿದ್ದಿವೆ. ಸುಮಾರು

ಮೂರು ಸಾವಿರ ಮೆಟ್ಟಿಲುಗಳನ್ನೇರಿ ಪರ್ವತಾಗ್ರವನ್ನು ತಲುಪಬಹುದಾಗಿದೆ. ಅಲ್ಲಲ್ಲಿ ಕಾಣಸಿಗುವ ಬುರುಜುಗಳು ಶಿಥಿಲಾವಸ್ಥೆಯಲ್ಲಿವೆ. ಅಲ್ಲೇ, ವಿಶಾಲವಾದ ಬಯಲಿನಲ್ಲಿರುವ ಎರಡು ಕೆರೆಗಳಲ್ಲಿ ಒಂದರ ಬಳಿ ಎರಡು ಫಿರಂಗಿಗಳು ಬಿದ್ದಿದ್ದು, ಬದಿಯಲ್ಲೇ ಪುಟ್ಟದೊಂದು ಕಟ್ಟಡವಿದೆ. **ಸುರಿಯ: ನಡ** ಗ್ರಾಮ(೨,೯೧೩)ದ ವ್ಯಾಪ್ತಿಯಲ್ಲಿರುವ ಸುರಿಯದ (ಸೂರ್ಯ, ಸುರೆಯ) ಸದಾಶಿವ ದೇವಾಲಯವು ಜಿಲ್ಲೆಯ ಅತಿ ಪ್ರಾಚೀನ ಗುಡಿಗಳಲ್ಲಿ ಒಂದಾಗಿದೆ. ದೇವಾಲಯವು ಕಿರಿದಾಗಿದ್ದು, ಸರಳವಾಗಿದೆ. ಗರ್ಭಗೃಹದಲ್ಲಿ ಸದಾಶಿವರುದ್ರನೆಂದು ಕರೆಯಲಾಗುವ ಒರಟೊರಟಾದ ಪುಟ್ಟ ಶಿಲ್ಪವಿದೆ. ತಮ್ಮ ಕಷ್ಟ–ಕಾರ್ಪಣ್ಯಗಳಿಂದ ಬಿಡುಗಡೆ ಹೊಂದಲು ಇಷ್ಟ ಪಡುವ ಹರಕೆ ಹೊತ್ತ ಭಕ್ತರು ತಂದೊಪ್ಪಿಸುವ ಮಣ್ಣಿನ ವಸ್ತುಗಳು ಇಲ್ಲಿಯ ವಿಶೇಷವಾಗಿದೆ. ಗುಡಿಯ ಸಮೀಪದಲ್ಲೇ ಇರುವ ಅಮ್ಮಾಡಿ ಹರಕೆ ಬನದಲ್ಲಿ ಮರವೊಂದರ ಬುಡದಲ್ಲಿ ಎರಡು ಶಿವಲಿಂಗಗಳಿವೆ. ಅವುಗಳ ಸುತ್ತ ಭಕ್ತರು ದೇವರಿಗೆ ಹರಕೆ ಒಪ್ಪಿಸಿರುವ ಜೇಡಿಮಣ್ಣಿನಿಂದ ತಯಾರಿಸಿರುವ ಕೆಂಪು–ಕಪ್ಪು ವರ್ಣದ ವೈವಿಧ್ಯಮಯ ವಸ್ತುಗಳು ಲಕ್ಷೋಪಲಕ್ಷ ಸಂಖ್ಯೆಯಲ್ಲಿ ರಾಶಿಬಿದ್ದಿರುವುದು ವಿಚಿತ್ರವೆನಿಸಿದರೂ ವಿಶಿಷ್ಟವಾಗಿದೆ. **ಪೆರ್ಮಾಣು:** ಸುರಿಯ ಉಪಗ್ರಾಮದಿಂದ ಒಂದೆರಡು ಕಿ.ಮೀ. ಅಂತರದಲ್ಲಿರುವ ಇದು ಅಲ್ಲಿರುವ ಅನಂತನಾಥ ಬಸದಿಯಿಂದಾಗಿ ಪ್ರಸಿದ್ಧವಾಗಿದೆ. ಜೀರ್ಣಾವಸ್ಥೆಯಲ್ಲಿದ್ದ ಇಲ್ಲಿನ ಪುರಾತನ ಬಸದಿಯನ್ನು ಪುನರ್ ಜೀರ್ಣೋದ್ಧಾರ ಮಾಡಿಸುತ್ತಿದ್ದ ರಾಣಿ ಭೈರಾದೇವಿಯನ್ನು ವಿರೋಧಿಸಿ, ಆ ಕಾರ್ಯವನ್ನು ಸ್ಥಳೀಯರೇ ಪೂರೈಸಿದರೆಂಬ ಮೌಖಿಕ ಪರಂಪರೆ ಈ ಭಾಗದಲ್ಲಿ ರೂಢಿಯಲ್ಲಿದೆ. ಬಸದಿಯ ಒಳಗೆ ಗರ್ಭಗೃಹದಲ್ಲಿ ಅನಂತನಾಥ ತೀರ್ಥಂಕರನ ಸುಂದರವಾದ ಪಂಚಲೋಹದ ಬಿಂಬವಿದ್ದು, ಆಕರ್ಷಕವಾಗಿದೆ.

**ತಣ್ಣೀರುಬಾವಿ**: ಮಂಗಳೂರು ಪಟ್ಟಣದಲ್ಲಿ, ಸುಲ್ತಾನ ಬತ್ತೇರಿಯು ಇರುವ ಬೋಳೂರಿನಿಂದ, ದೋಣಿಯ ಮೂಲಕ ಗುರುಪುರ ಹೊಳೆಯನ್ನು ದಾಟಿ ಕಾಲ್ನಡಿಗೆಯಲ್ಲಿ ತಲುಪಬಹುದಾದ ಸ್ಥಳ. ಅಲ್ಲಿರುವ ನಿಡಿದಾದ ಬೀಚು ಸಮುದ್ರದ ಅಬ್ಬರದ ಅಲೆಗಳಿಗೆ ಸದಾ ಮೈದೆರೆದುಕೊಂಡಿದ್ದು, ಪ್ರವಾಸಿಗರಿಗೆ ಮುದ ನೀಡುವ ತಾಣವಾಗಿದೆ. ಅಲ್ಲದೆ ಇಲ್ಲಿರುವ ಜಿ.ಎಂ.ಆರ್ ಎನರ್ಜಿ ಲಿ., ನಿಂದಾಗಿ ಪ್ರಸಿದ್ದವಾಗಿದೆ. ಸುಮಾರು ೩೨ ಎಕರೆ ಪ್ರದೇಶದಲ್ಲಿ ಸ್ಥಾಪಿಸಲ್ಪಟ್ಟಿರುವ ಈ ವಿದ್ಯುತ್ ಉತ್ಪಾದನಾ ಘಟಕವು ಖಾಸಗಿ ಒಡೆತನಕ್ಕೆ ಸೇರಿದ್ದು ೨೨೦ ಮೆ. ವ್ಯಾ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿದೆ. ತಣ್ಣೀರುಬಾವಿಯ ಬಳಿ ಗುರುಪುರ ಹೊಳೆಯ ಅಂಚಲ್ಲಿ ಸ್ಥಾಪಿಸಲ್ಪಟ್ಟಿರುವ ಈ ತೇಲು ಘಟಕವು ದೇಶದ ಮೊದಲನೆ ಘಟಕವಾಗಿದ್ದು. ಸುಮಾರು ೧೨೦೦೦ ಟನ್ ಭಾರವಿದೆ ಇಲ್ಲಿ ನ್ಯಾಪ್ತ ಅನಿಲದಿಂದ ಉತ್ಪಾದಿಸಲ್ಪಡುವ ವಿದ್ಯುತ್ತನ್ನು ೨೦೦೧ ರ ನವೆಂಬರ್‌ನಿಂದ ಕೆಪಿಟಿಸಿಎಲ್ ಗೆ ಸರಬರಾಜು ಮಾಡಲಾಗುತ್ತಿದೆ. ಈ ಸ್ಥಳವನ್ನು ಕೂಳೂರು ಸೇತುವೆ – ಪಣಂಬೂರು ಮಾರ್ಗವಾಗಿ ರಸ್ತೆ ಮೂಲಕವೂ ತಲುಪಬಹುದಾಗಿದೆ.

**ತೊಡಿಕಾನ (೨,೧೮೬)**: ತಾಲೂಕು ಕೇಂದ್ರ ಸುಳ್ಯದಿಂದ ೧೦ ಕಿ.ಮೀ. ಆಗ್ನೇಯಕ್ಕೆ, ಕೊಡಗಿಗೆ ತಾಗಿದಂತೆ ಇರುವ ಜಿಲ್ಲೆಯ ಕಡೆಯ ಗ್ರಾಮ. ಶಿಶಿಲ ಗ್ರಾಮದಂತೆ ಪ್ರಕೃತಿ ಮಡಿಲಲ್ಲಿರುವ ಸುಂದರ ನಿಸರ್ಗ ನೆಲೆ. ತೊಡಿಕಾನದ ಪರ್ವತವನ್ನೇರಿದರೆ ಕಾಣುವುದೇ ಕೊಡಗು ಜಿಲ್ಲೆ. ತುಳುನಾಡಿನ ಪ್ರಾಚೀನ ಕ್ಷೇತ್ರಗಳಲ್ಲಿ ಒಂದಾಗಿರುವ ಇಲ್ಲಿ ಮಲ್ಲಿಕಾರ್ಜುನ ದೇಗುಲವಿದೆ. ಗುಡಿಯ ಮಗ್ಗುಲಲ್ಲಿರುವ ಮತ್ಸ್ಯತೀರ್ಥ ವಾಹಿನಿಯು ಮುಂದೆ ಪಯಸ್ವಿನಿ ನದಿಯನ್ನು ಸೇರುತ್ತದೆ. ಪರಶುರಾಮಸೃಷ್ಟಿ ಎಂದು ಹೇಳುವ ಭೂಭಾಗವು ತೊಡಿಕಾನಕ್ಕೆ ಮುಗಿದು, ಬ್ರಹ್ಮದೇವರ ಸೃಷ್ಟಿ ಅಲ್ಲಿಂದ ಮುಂದಕ್ಕೆ ಪ್ರಾರಂಭವಾಗುತ್ತಿದ್ದು, ಅವೆರಡರ ಸಂಗಮ ಸ್ಥಾನವಿದಾಗಿದೆ ಎಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಮಹಾಭಾರತದ ದ್ವೈತವನ ಇದೆಂಬ ಪೌರಾಣಿಕ ನಂಬಿಕೆಯೂ ಇದೆ. ಅತ್ಯಂತ ವಿಶಾಲವಾದ ಈ ದೇವಾಲಯಕ್ಕೆ ಕೊಡಗಿನ ಅರಸರೂ ಹಿಂದೆ ದತ್ತಿ ನೀಡಿದ್ದಾರೆ. ಈ ಗುಡಿಗೆ ಎರಡುಕಿ.ಮೀ. ದೂರದಲ್ಲಿ ದೇವರಗುಂಡಿ ಜಲಪಾತವಿದೆ. ಇಲ್ಲಿನ ಶಿವಲಿಂಗ ಕಣ್ವ ಪ್ರತಿಷ್ಠಿತ ಎಂಬ ಐತಿಹ್ಯವಿದೆ.

**ದರೆಗುಡ್ಡೆ (೧,೬೬೯):** ಜಿಲ್ಲಾ ಕೇಂದ್ರ ಮಂಗಳೂರಿನಿಂದ ೪೫ ಕಿ.ಮೀ. ಹಾಗೂ ಹೋಬಳಿ ಕೇಂದ್ರ ಮೂಡಬಿದ್ರೆಯಿಂದ ೧೦ ಕಿ.ಮೀ. ವಾಯವ್ಯಕ್ಕಾದಂತೆ ಇರುವ ಗ್ರಾಮ. ಅಲ್ಲಿರುವ ನೈಸರ್ಗಿಕ ವಿಸ್ಮಯದಿಂದಾಗಿ ಪ್ರಸಿದ್ಧವಾಗಿದೆ. ಶಿಲಾ ಸಮೂಹದ ಮಧ್ಯದಿಂದ ಸದಾಕಾಲ ಚಿಮ್ಮುವ ತಿಳಿನೀರ ಕಾರಂಜಿ ಸನಿಹದ ಗುಂಡಿಯನ್ನು ಸೇರುತ್ತದೆ. ಅಲ್ಲೇ ಇರುವ ಶಂಭುಲಿಂಗೇಶ್ವರ ದೇವಾಲಯದ ಜಾತ್ರೆಗೆ ಬರುವ ಭಕ್ತರಿಗೆ ಜಾತ್ರೆ ಸಮಯದಲ್ಲಿ ಇದು ಉಪಯೋಗವಾಗುತ್ತದೆ.

**ದಿಡುಪೆ ಜಲಪಾತ:** ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ಈಶಾನ್ಯಕ್ಕೆ ಇರುವ ದಿಡುಪೆ ಗ್ರಾಮದ ಆನಡ್ಕ ಎಂಬಲ್ಲಿ ಸುಮಾರು ೧೫೦ ಅಡಿಗಳಷ್ಟು ಎತ್ತರದಿಂದ ಧುಮುಕುವ ನೇತ್ರಾವತಿ ನದಿಯು ಸೃಷ್ಟಿಸಿರುವ ಜಲಪಾತ ಇದಾಗಿದ್ದು, ಅಲ್ಲಿಂದ ಮುಂದಕ್ಕೆ ನಿಸರ್ಗ ಮಡಿಲಲ್ಲಿ ನೇತ್ರಾವತಿ ನದಿಯು ಪ್ರಶಾಂತವಾಗಿ ಹರಿಯುತ್ತಾ ಸಾಗುತ್ತದೆ.

**ದೇವರಗುಂಡಿ ಜಲಪಾತ :** ತಾಲೂಕು ಕೇಂದ್ರ ಸುಳ್ಯದಿಂದ ದಕ್ಷಿಣಕ್ಕೆ ಸುಮಾರು ಎಂಟು ಕಿ.ಮೀ. ದೂರದಲ್ಲಿ ಕೊಡಗು ಜಿಲ್ಲೆಯ ಗಡಿಯಲ್ಲಿರುವ ಪ್ರವಾಸಿ ತಾಣ, ಅಲ್ಲಿರುವ ಜಲಪಾತದಿಂದಾಗಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ತೊಡಿಕಾನ ಗ್ರಾಮದಿಂದ ಸುಮಾರು ಎರಡು ಕಿ.ಮೀ. ಅಂತರದಲ್ಲಿರುವ ದಟ್ಟ ಅರಣ್ಯದಿಂದ ಕೂಡಿದ ಪರ್ವತ ಪಂಕ್ತಿಯಲ್ಲಿ ಜಲಪಾತವಾಗಿ ಧುಮುಕಿ, ತೊಡಿಕಾನದ ಮಲ್ಲಿಕಾರ್ಜುನ ದೇವಾಲಯದತ್ತ ಹರಿದುಬಂದು ಮತ್ಸ್ಯತೀರ್ಥವಾಗುತ್ತದೆ. ಈ ಜಲಪಾತವಿರುವ ಸ್ಥಳವನ್ನು ದೇವರಗುಂಡಿ ಎಂದು ಸ್ಥಳೀಯವಾಗಿ ಕರೆಯಲಾಗುತ್ತದೆ. ಇದೇ ಮಲ್ಲಿಕಾರ್ಜುನನ ಮೂಲಸ್ಥಾನವಾಗಿದೆ. ಅರ್ಜುನನು ಶಿವನನ್ನು ಓಲೈಸಿ ಪಾಶುಪತಾಸ್ತ್ರವನ್ನು ಪಡೆದದ್ದು ಇಲ್ಲೇ ಎಂದೂ ಹೇಳಲಾಗುತ್ತದೆ.

**ಧರ್ಮಸ್ಥಳ(೯,೨೫೮):** ನಾಡಿನ ಗಣ್ಯ ತೀರ್ಥಕ್ಷೇತ್ರಗಳಲ್ಲಿ ಒಂದಾಗಿರುವ ಧರ್ಮಸ್ಥಳವು, ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ೧೬ ಕಿಮೀ ಪೂರ್ವಕ್ಕೆ ಹಾಗೂ ಜಿಲ್ಲಾ ಕೇಂದ್ರ ಮಂಗಳೂರಿನಿಂದ ೭೫ ಕಿಮೀ ಈಶಾನ್ಯಕ್ಕೆ ಇರುವ ವಿಶಿಷ್ಟ ಯಾತ್ರಾಸ್ಥಳ. ಶ್ರೀಕ್ಷೇತ್ರಕ್ಕೆ ಮೂರು ಕಿಮೀ ಅಂತರದಲ್ಲಿ ಹರಿಯುವ ನೇತ್ರಾವತಿ ನದಿಯು ಈ ಕ್ಷೇತ್ರವನ್ನು ಪಾವನಗೊಳಿಸಿದೆ. ರಾಷ್ಟ್ರೀಯ ಹೆದ್ದಾರಿ ೪೮ ಕ್ಷೇತ್ರದಿಂದ ೨೨ಕಿಮೀ ದಕ್ಷಿಣದಲ್ಲಿ ಹಾದುಹೋಗಿದ್ದು, ಕೊಕ್ಕಡ ಮಾರ್ಗವಾಗಿಯೂ ಅದನ್ನು ತಲುಪಬಹುದಾಗಿದೆ. ಶ್ರೀಕ್ಷೇತ್ರದಿಂದ ಸುಮಾರು ಎಂಟು ಕಿಮೀ ಉತ್ತರದಲ್ಲಿ ರಾಜ್ಯ ಹೆದ್ದಾರಿ ೬೪ ಉಜಿರೆ ಮಾರ್ಗವಾಗಿ ಹಾದು ಹೋಗಿದೆ.

ಧರ್ಮಸ್ಥಳಕ್ಕೆ ಪ್ರಾಚೀನ ಕಾಲದಲ್ಲಿ 'ಮಲ್ಲರಮಾಡಿ', 'ಕುಡುಮ' ಎಂಬ ಹೆಸರುಗಳಿದ್ದವು. ಆದರೆ ಹದಿನಾರನೆಯ ಶತಮಾನದ ಮೊದಲ ದಶಕದಲ್ಲಿ ಇಲ್ಲಿಗೆ ಭೇಟಿ ನೀಡಿದ್ದ ಸೋದೆಮಠದ ಯತಿಗಳಾದ ವಾದಿರಾಜರು, ಮಂಜುನಾಥ ಲಿಂಗವನ್ನು ಶಾಸ್ತ್ರೋಕ್ತವಾಗಿ ಪುನರ್ ಪ್ರತಿಷ್ಠಾಪಿಸಿ ಆಗಮೋಕ್ತವಾಗಿ ಪೂಜಿಸಿ, ದಾನಧರ್ಮಗಳಿಂದ ಕೂಡಿದ ಇದು ಧರ್ಮಸ್ಥಳವೇ ಸರಿ ಎಂದು ಪ್ರಶಂಸಾಪೂರ್ವಕವಾಗಿ ಹೇಳಿದ್ದರಂತೆ. ಮುಂದೆ, ಅದೇ ಅನ್ವರ್ಥನಾಮವಾಗಿ ಉಳಿದು "ಕುಡುಮ" ಗ್ರಾಮಕ್ಕೆ 'ಧರ್ಮಸ್ಥಳ' ಎಂಬ ಅಭಿದಾನ ಲಭಿಸಿತೆಂದು ತಿಳಿದುಬರುತ್ತದೆ.

ಸ್ಥಳೀಯ ಕೈಫಿಯತ್ತಿನ ಪ್ರಕಾರ ಇಂದಿನ ಧರ್ಮಸ್ಥಳ ಪರಿಸರವು ಸುಮಾರು ೧೫ನೆಯ ಶತಮಾನದಿಂದ ಸ್ಥಳೀಯ ಜೈನ ಹೆಗಡೆ ಮನೆತನದ ನಿಯಂತ್ರಣದಲ್ಲಿತ್ತು. ಅಲ್ಲಿಯ ಚಂದ್ರನಾಥ ಬಸದಿಯು ಅವರ ಮನೆದೇವರಾಗಿತ್ತು. ಈ ಮನೆತನಕ್ಕೆ ಸೇರಿದ ಬಿರ್ಮಣ್ಣ ಹೆಗಡೆ ಹಾಗೂ ಅಮ್ಮುದೇವಿ ಬಲ್ಲಾಳ್ತಿ ದಂಪತಿಗಳು ಧರ್ಮದೇವತೆಗಳೆನಿಸಿದ ದೈವಗಳ ಆಜ್ಞೆಯಂತೆ, ತಾವು ವಾಸಿಸುತ್ತಿದ್ದ ನೆಲ್ಯಾಡಿಬೀಡನ್ನು ದೈವರಾಧನೆ–ಸೇವೆಗಳಿಗೆಂದು ಮೀಸಲಿಟ್ಟು, ಅಣ್ಣಪ್ಪಸ್ವಾಮಿ ಗುಡ್ಡದ ಮೇಲೆ ಮಾಡಗಳನ್ನು ನಿರ್ಮಿಸಿ, ಆ ನಾಲ್ಕು ದೈವಗಳೊಡನೆ, ಅಣ್ಣಪ್ಪಸ್ವಾಮಿಯನ್ನೂ ನೆಲೆಗೊಳಿಸಿದರು. ಆ ಸಂದರ್ಭದಲ್ಲೇ ಬ್ರಾಹ್ಮಣರ ಕೋರಿಕೆಯಂತೆ ದೇವಾರಾಧನೆಗೂ ಮುಂದಾದರು. ತತ್ಪರಿಣಾಮವಾಗಿ ಧರ್ಮದೇವತೆಗಳ ಸೂಚನೆಯಂತೆ ಅಣ್ಣಪ್ಪನು ಮಂಗಳೂರು ಪಟ್ಟಣದ ಕದ್ರಿಗುಡ್ಡದ ತೀರ್ಥದಲ್ಲಿದ್ದ ಮಂಜುನಾಥಲಿಂಗವನ್ನು ತಂದು, ಧರ್ಮಸ್ಥಳದಲ್ಲಿ ಈಗ ಮಂಜುನಾಥನ ಗುಡಿಯಿರುವ ತಾಣದಲ್ಲಿ ನೆಲೆಗೊಳಿಸಿದನು. ಅದಕ್ಕೆ ಪುಟ್ಟ ಗುಡಿ ನಿರ್ಮಾಣಗೊಂಡು ಮಧ್ವ ಬ್ರಾಹ್ಮಣರು ಅದರ ಅರ್ಚಕರಾದರು. ಆದರೂ ಜೈನ ಧರ್ಮೀಯರಾದ ಹೆಗ್ಗಡೆ ಕುಟುಂಬದವರೇ ಅದರ ಧರ್ಮಾಧಿಕಾರಿಗಳಾದರು. ಅಂದಿನಿಂದ, ಕ್ಷೇತ್ರದಲ್ಲಿ ಅನ್ನಸಂತರ್ಪಣೆಯಂತಹ ಅನೇಕ ಧರ್ಮಕಾರ್ಯಗಳಲ್ಲಿ ಹತ್ತು ಸಮಸ್ತರೂ ಪಾಲ್ಗೊಳ್ಳುವಂತಾಯಿತು. ಧರ್ಮಾಧಿಕಾರಿಗಳಾಗಿದ್ದ ದೇವರಾಜ ಹೆಗ್ಗಡೆಯವರ ಕಾಲದಲ್ಲಿ, ಸೋದೆಮಠದ ವಾದಿರಾಜ ಯತಿಗಳ ಹಸ್ತದಿಂದ ಶಾಸ್ತ್ರೋಕ್ತವಾಗಿ ಮಂಜುನಾಥಲಿಂಗವು ಪುನರ್ ಪ್ರತಿಷ್ಠಾಪಿತಗೊಂಡು, ಕ್ಷೇತ್ರಕ್ಕೆ 'ಧರ್ಮಸ್ಥಳ' ಎಂಬ ಅಭಿದಾನವೂ ಲಭಿಸಿ, ಅದೇ ಸ್ಥಿರನಾಮವಾಯಿತು. ಅಲ್ಲಿಂದೀಚೆಗೆ, ಮಂಜುನಾಥ ದೇವಾಲಯವೂ ಸೇರಿದಂತೆ ಕ್ಷೇತ್ರವು, ವಿವಿಧ ಧರ್ಮಾಧಿಕಾರಿಗಳ ಅಧಿಕಾರಾವಧಿಯಲ್ಲಿ ಬೆಳೆಯುತ್ತಾ ಹೆಚ್ಚು ಪ್ರಸಿದ್ಧವಾಯಿತು. ತತ್ಪರಿಣಾಮವಾಗಿ ಇಂದು ಧರ್ಮಸ್ಥಳವು, ಧರ್ಮಾಧಿಕಾರಿ ವೀರೇಂದ್ರಹೆಗ್ಗಡೆಯವರ ಮಾರ್ಗದರ್ಶನದಲ್ಲಿ, ವಿವಿಧ ರಂಗಗಳಲ್ಲಿ ಅನುಪಮ ಸೇವೆಗೆ ತನ್ನನ್ನು ತೊಡಗಿಸಿಕೊಳ್ಳುವ ಮೂಲಕ ದೇಶದಾದ್ಯಂತ ಜನರ ಆದರಣೆಗೆ ಪಾತ್ರವಾಗಿದೆ.

ಧರ್ಮಸ್ಥಳದ ಹೃದಯವಾಗಿರುವ ಮಂಜುನಾಥ ದೇವಾಲಯವು ಪೂರ್ವಾಭಿಮುಖವಾಗಿದ್ದು, ಎರಡು ಸುತ್ತಿನ ಪ್ರಾಕಾರವನ್ನು ಹೊಂದಿದ್ದು, ಎರಡು ಮಹಾದ್ವಾರಗಳಿವೆ. ಅವುಗಳಲ್ಲಿ ಒಳಪೌಳಿಯ ನವೀಕರಣ ಕಾರ್ಯವನ್ನು ಚಂದ್ರಯ್ಯ ಹೆಗ್ಗಡೆ(೧೮೩೦–೪೯)ಯವರು ನೆರವೇರಿಸಿದರೆ, ಹೊರ ಪೌಳಿಯು ಮಂಜಯ್ಯ ಹೆಗ್ಗಡೆ (೧೮೪೯–೯೫)ಯವರ ಕಾಲದಲ್ಲಿ ಪೂರ್ಣಗೊಂಡಿತು. ಈ ದೇವಾಲಯದ ನಡುಭಾಗದಲ್ಲಿರುವ ಪ್ರಧಾನ ಗರ್ಭಗೃಹವು ಸಾಕಷ್ಟು ನವೀಕರಣಗೊಂಡಿದ್ದು ಕಾಂತಿಯುಕ್ತವಾಗಿದೆ. ಗರ್ಭಗೃಹದಲ್ಲಿ, ಹಿಂದೆ ಅಣ್ಣಪ್ಪಸ್ವಾಮಿಯು ಕದ್ರಿಬೆಟ್ಟದಿಂದ ತಂದಿಟ್ಟಿರುವ ಮಂಜುನಾಥಲಿಂಗವಿದ್ದು ಅದನ್ನು ಸುವರ್ಣಕವಚ, ಛತ್ರಚಾಮರ, ಪ್ರಭಾವಳಿಗಳಿಂದ ಅಲಂಕರಿಸಲಾಗುತ್ತದೆ.

ದೇವರಿಗೆ ಧರಿಸುವ ಚಿನ್ನದ ನಾಗಾಭರಣವನ್ನು ಚಂದ್ರಯ್ಯ ಹೆಗ್ಗಡೆಯವರು ದಾನ ನೀಡಿದ ಅಂಶ ಅದರ ಮೇಲಿರುವ ಶಾಸನದಿಂದ ವೇದ್ಯವಾಗುತ್ತದೆ. ದೇವಾಲಯದ ಆವರಣದಲ್ಲಿ ಪರಿವಾರ ದೇವತೆಗಳ ಸನ್ನಿಧಾನವಿದೆ. ಅಮ್ಮನವರೊಂದಿಗೆ ಧರ್ಮದೇವತೆಗಳೂ ಇದ್ದಾರೆ. ಗರ್ಭಗೃಹದ ಹಿಂಬದಿಯಲ್ಲಿ ವಿನಾಯಕನಿದ್ದು, ಹೊರಸುತ್ತಿನಲ್ಲಿ ಕ್ಷೇತ್ರಪಾಲಕ ಅಣ್ಣಪ್ಪಸ್ವಾಮಿ, ಕಲ್ಲೇರಿತ್ತಾಯ ದೈವಸ್ಥಾನಗಳೂ ಇವೆ. ಮಂಜುನಾಥನ ದೇವಾಲಯದ ಒಳಗೋಪುರದಲ್ಲಿರುವ ಧರ್ಮಸಿಂಹಾಸನವು ಕಾರಣಿಕ ಪೀಠವಾಗಿದ್ದು, ಖಾವಂದರೆಂದೇ ಗೌರವದಿಂದ ಸಂಬೋಧಿಸಲ್ಪಡುವ ಧರ್ಮಾಧಿಕಾರಿಗಳು ಅದರ ಮೇಲೆ ಕುಳಿತು, ಭಕ್ತರ ಸುಖಃದುಃಖಗಳನ್ನು ಆಲಿಸಿ, ಸಾಂತ್ವನ ನೀಡುತ್ತಾರೆ. "ಆಣೆ ವಾಕ್ಯ, ತೀರ್ಮಾನ, ಹೊಯ್ಲು" ಎಂಬ ನ್ಯಾಯವಿತರಣಾ ಕಾರ್ಯಗಳನ್ನೂ ಅದರ ಮೇಲೆ ಕುಳಿತೇ ನಿರ್ವಹಿಸುತ್ತಾರೆ. ಹೀಗೆ ಮಂಜುನಾಥನ ಸನ್ನಿಧಿಯಲ್ಲಿ ಮಾತು ತೀರ್ಮಾನ, ವಾಕ್‌ದೋಷ ನಿವೃತ್ತಿಗಳು ವಿಶಿಷ್ಟ ಆಚರಣೆಗಳಾಗಿದ್ದು, ವ್ಯಕ್ತಿಗಳ ನಡುವಣ ಭಿನ್ನಾಭಿಪ್ರಾಯಗಳನ್ನು ನ್ಯಾಯಾಲಯದಂತೆ ಬಗೆಹರಿಸುತ್ತ ಬಂದಿರುವ ರಾಷ್ಟ್ರದ ಎರಡು ದೇವಾಲಯಗಳಲ್ಲಿ ಧರ್ಮಸ್ಥಳದ ಮಂಜುನಾಥ ಸನ್ನಿಧಿಯು ಒಂದಾದರೆ, ಒರಿಸ್ಸಾದ ಸಾಕ್ಷಿ ಗೋಪಾಲ ಅಂತಹ ಇನ್ನೊಂದು ದೇವಾಲಯವಾಗಿದೆ.

ಕ್ಷೇತ್ರಕ್ಕೆ ಬರುವ ಭಕ್ತಾದಿಗಳಿಗೆ ಅಧಿಕೃತವಾಗಿ ಮೂರು ದಿನ ತಂಗಲು ಅವಕಾಶವಿದ್ದು, ಅವರಿಗೆಂದೇ ಗಂಗಾ, ಕಾವೇರಿ, ನರ್ಮದಾ, ಗೋದಾವರಿ, ಗಂಗೋತ್ರಿ, ನೇತ್ರಾವತಿ, ವೈಶಾಲಿ ಮುಂತಾದ ಅತಿಥಿಗೃಹಗಳಿಂದು ಸನ್ನಿಧಿಯಲ್ಲಿ ತಲೆಎತ್ತಿ ನಿಂತಿವೆ. ನಿತ್ಯಾನ್ನ ದಾನ ವ್ಯವಸ್ಥೆಯು ಇಲ್ಲಿನ ವಿಶೇಷವಾಗಿದ್ದು, ಭಕ್ತಾದಿಗಳಿಗೆ ಎರಡೂ ಹೊತ್ತು ಉಚಿತ ಭೋಜನ ಸೌಕರ್ಯ ಒದಗಿಸುವ ಅನ್ನಪೂರ್ಣ ಭೋಜನ ಶಾಲೆ(೧೯೮೬)ಯಲ್ಲಿ ಸುಮಾರು ಮೂರುಸಾವಿರ ಜನರು ಏಕಕಾಲದಲ್ಲಿ ಕುಳಿತು ಊಟ ಮಾಡುವ ವ್ಯವಸ್ಥೆ ಇದ್ದು ಅತ್ಯಾಧುನೀಕ ರೀತಿಯಲ್ಲಿ ಇದಿಂದು ಕಾರ್ಯ ನಿರ್ವಹಿಸುತ್ತಿದೆ. ಧರ್ಮಸ್ಥಳದ ನಿತ್ಯಾನ್ನದಾನ ವ್ಯವಸ್ಥೆಯು ನಾಡಿನ ಇತರ ಕ್ಷೇತ್ರಗಳಿಗೆ ಮಾದರಿಯಾಗಿದೆ.

ಜಾತ್ರೆ–ಉತ್ಸವ : ಕಾರ್ತಿಕ ಮಾಸದ ಏಕಾದಶಿಯಿಂದ ಅಮಾವಾಸ್ಯೆಯವರೆಗೆ ಐದು ದಿನಗಳ ಕಾಲ, ಶ್ರೀಕ್ಷೇತ್ರದಲ್ಲಿ ಜರುಗುವ ಲಕ್ಷದೀಪೋತ್ಸವದ ಸಂದರ್ಭದಲ್ಲಿ ಮಂಜುನಾಥನ ಉತ್ಸವಮೂರ್ತಿಯ ಮೆರವಣಿಗೆಯು ವಿಜೃಂಭಣೆಯಿಂದ ನಡೆಯುತ್ತದೆ. ಆ ಸಂದರ್ಭದಲ್ಲಿ, ಸರ್ವಧರ್ಮ ಸಮ್ಮೇಳನವು ನಾಲ್ಕನೆಯ ದಿನದಂದೂ, ಸಾಹಿತ್ಯ ಸಮ್ಮೇಳನವು ಐದನೆಯ ದಿನದಂದೂ ಅದ್ದೂರಿಯಿಂದ ಜರುಗುತ್ತದೆ. ಅಲ್ಲದೆ, ಪ್ರೌಢಶಾಲಾ ಮೈದಾನದಲ್ಲಿ ವಸ್ತು ಪ್ರದರ್ಶನವೂ ನೆರೆಯುತ್ತದೆ. ಮಹಾಶಿವರಾತ್ರಿಯು ಇಲ್ಲಿಯ ಇನ್ನೊಂದು ವಿಶೇಷ ಪರ್ವವಾಗಿದೆ. ಅಂದು ರಾತ್ರಿಯೆಲ್ಲ ಮಂಜುನಾಥನಿಗೆ ಅಭಿಷೇಕ ನಡೆಯುತ್ತದೆ. ಭಕ್ತರು ತೇರನ್ನು ಎಳೆಯುತ್ತಾರೆ. ವಿಷು ಜಾತ್ರೆಯು ಧರ್ಮಸ್ಥಳದ ವಾರ್ಷಿಕ ಜಾತ್ರೆಯಾಗಿದೆ. ಮೇಷ ಸಂಕ್ರಮಣದಿಂದ ಒಂಭತ್ತು ದಿನಗಳ ಕಾಲ ನಡೆಯುವ ಈ ಜಾತ್ರೆಯಲ್ಲಿ, ಎಂಟನೆಯ ದಿನದಂದು ಮಹಾರಥೋತ್ಸವವಾಗುತ್ತದೆ. ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ಇಲ್ಲಿ ನಡೆಯುವ ಮಹಾನಡಾವಳಿಯು ಅಷ್ಟದಿನಗಳ ಮಹಾಪರ್ವವಾಗಿದ್ದು, ಆಗ ಧರ್ಮದೇವತೆಗಳನ್ನು ವಿಧಿಬದ್ಧವಾಗಿ ಆರಾಧಿಸಲಾಗುತ್ತದೆ. ಇತ್ತೀಚೆಗೆ, ಅಂದರೆ ೨೦೦೫ರಲ್ಲಿ ಮಹಾನಡಾವಳಿಯು ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರ ಸಾರಥ್ಯದಲ್ಲಿ ಯಶಸ್ವಿಯಾಗಿ ಜರುಗಿತು.

ಬಾಹುಬಲಿ ಶಿಲ್ಪ : ಧರ್ಮಸ್ಥಳದ ಮುಖ್ಯ ಪ್ರವೇಶದ್ವಾರದ ಬಲಬದಿಯ ರತ್ನಗಿರಿಯಲ್ಲಿರುವ ೩೯ ಅಡಿ ಎತ್ತರದ ಭವ್ಯ ಗೊಮ್ಮಟಮೂರ್ತಿಯು ೧೯೮೨ರಲ್ಲಿ ಪ್ರತಿಷ್ಠಾಪಿಸಲ್ಪಟ್ಟಿದೆ. ಇದು ಜಿಲ್ಲೆಯಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ಎರಡನೆಯ ಬಾಹುಬಲಿ ಶಿಲ್ಪವಾಗಿದ್ದು, ಇನ್ನೊಂದು ಶಿಲ್ಪವನ್ನು ವೇಣೂರಿನಲ್ಲಿ (೧೬೦೪) ನೋಡಬಹುದಾಗಿದೆ. ಧರ್ಮಸ್ಥಳದ ಈ ಪ್ರಶಾಂತ ವಾತಾವರಣದಲ್ಲಿ ಬಾಹುಬಲಿ ಮೂರ್ತಿಯು ನೆಲೆಗೊಳ್ಳಬೇಕೆಂಬ ಅಪೇಕ್ಷೆ, ಹಿಂದಿನ ಧರ್ಮಾಧಿಕಾರಿಗಳಾಗಿದ್ದ ರತ್ನವರ್ಮ ಹೆಗ್ಗಡೆಯವರ ಧರ್ಮಪತ್ನಿ ಶ್ರೀಮತಿ ರತ್ನಮ್ಮನವರದಾಗಿತ್ತು. ಅದರಂತೆ ೧೯೬೭ರಲ್ಲಿ ಕಾರ್ಕಳದ ಬಳಿಯ ಮಂಗಳಪಾದೆಯಲ್ಲಿ, ಸ್ಥಳೀಯವಾಗಿ ಲಭ್ಯವಿರುವ ಶಿಲೆಯನ್ನೇ ಬಳಸಿಕೊಂಡು ಬಾಹುಬಲಿಮೂರ್ತಿಯ ಶಿಲ್ಪಕೆತ್ತನಾ ಕಾರ್ಯದ ಹೊಣೆಯನ್ನು ಕಾರ್ಕಳದ ಶಿಲ್ಪಿ ರಂಜಾಳ ಗೋಪಾಲಶೆಣ್ಯೆಯವರಿಗೆ ವಹಿಸಿಕೊಡಲಾಯಿತು. ಶೆಣ್ಯೆರವರ ರೂವಾರಿತ್ವದಲ್ಲಿ ದುಡಿದ ಹತ್ತಾರು ಶಿಲ್ಪಿಗಳ ಪರಿಶ್ರಮದಿಂದಾಗಿ ೧೯೭೩ರಲ್ಲಿ ಕೆತ್ತನೆಯ ಕಾರ್ಯ ಪೂರ್ಣಗೊಂಡಿತು. ಧರ್ಮಸ್ಥಳದಿಂದ ಸುಮಾರು ೬೪ಕಿಮೀ ದೂರದಲ್ಲಿದ್ದ ಮಂಗಳಪಾದೆಯಲ್ಲಿ ಸಿದ್ಧಗೊಂಡ ೩೯ ಅಡಿ ಎತ್ತರದ, ೧೭೦ ಟನ್ ತೂಕದ ಈ ಏಕಶಿಲಾ ಮೂರ್ತಿಯನ್ನು ೬೪ ಗಾಲಿಗಳಿರುವ ೬೦ ಟನ್ ಭಾರದ ವಿಶೇಷ ಟ್ರಾಲಿಯಲ್ಲಿ ೨೩ ದಿನಗಳ ಆತಂಕದ ಪಯಣದ ನಂತರ ಧರ್ಮಸ್ಥಳಕ್ಕೆ ತರಲಾಯಿತು. ಅದನ್ನು ೧೯೭೫ರಲ್ಲಿ ವಿಶೇಷ ಟ್ರಾವೆಲಿಂಗ್ ಗ್ಯಾಂಟ್ರಿಯ ನೆರವಿನೊಂದಿಗೆ ಹದಿಮೂರು ಅಡಿ ಎತ್ತರದ ಪೀಠದ ಮೇಲೆ ನಿಲ್ಲಿಸಲಾಯಿತು. ಮುಂದೆ ೧೯೮೨ರಲ್ಲಿ ಜರುಗಿದ ಒಂಭತ್ತು ದಿನಗಳ ಪ್ರತಿಷ್ಠಾಪನಾ ಮಹೋತ್ಸವದಲ್ಲಿ ಫೆಬ್ರವರಿ ಮೂರರಂದು ಶಾಸ್ತ್ರೋಕ್ತವಾಗಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ಅಲ್ಲಿಂದೀಚೆಗೆ ವರ್ಷಂಪ್ರತಿ

ಪಾದಾಭಿಷೇಕವು ಸಾಂಗವಾಗಿ ನಡೆದು, ೧೯೯೫ರಲ್ಲಿ ಮಹಾಮಸ್ತಕಾಭಿಷೇಕವೂ ವಿಜೃಂಭಣೆಯಿಂದ ಜರುಗಿತು. ಮುಂದೆ, ೨೦೦೭ರ ಫೆಬ್ರವರಿಯಲ್ಲಿ ಮೂರನೆಯ ಮಹಾಮಸ್ತಕಾಭಿಷೇಕವು ವಿಜೃಂಭಣೆಯಿಂದ ಜರುಗಿತು. ರತ್ನಗಿರಿ ಬೆಟ್ಟದ ತಪ್ಪಲಿನಲ್ಲಿ ಹುಲಿ–ಹಸು ಒಂದೆಡೆ ಇರುವಂತೆ ಕೆತ್ತಲಾಗಿದ್ದು, ಅದು ಶಾಂತಿ–ಸೌಹಾರ್ದಗಳ ಸಂಕೇತವಾಗಿದೆ. ೨೮೦ ಮೆಟ್ಟಿಲುಗಳನ್ನೇರಿ ರತ್ನಗಿರಿಯ ತುದಿಯನ್ನು ಮುಟ್ಟಿದಾಗ ಎದುರು ಕಾಣುವ ಭವ್ಯ ಬಾಹುಬಲಿ ಮೂರ್ತಿ, ಸುತ್ತಲಿನ ಪ್ರಕೃತಿ ಸಿರಿಯ ದರ್ಶನ, ಪ್ರವಾಸಿಗರನ್ನು ಮಂತ್ರಮುಗ್ಧರನ್ನಾಗಿಸುತ್ತದೆ. ಮೂರ್ತಿಯ ಬದಿಯಲ್ಲೇ, ೧೨ ಕಂಬಗಳು ಹೊತ್ತು ನಿಂತಿರುವ ಆಕರ್ಷಕ ಮಂಟಪವಿದೆ. ಈ ಬೆಟ್ಟವನ್ನು ವಾಹನದಲ್ಲಿ ತಲುಪಲು ಉತ್ತಮ ಟಾರು ರಸ್ತೆಯೂ ಇದೆ.

ಅಣ್ಣಪ್ಪಸ್ವಾಮಿಗುಡ್ಡ : ಇಲ್ಲಿರುವ ಅಣ್ಣಪ್ಪಸ್ವಾಮಿ (ಬದಿನಡೆ) ಗುಡ್ಡದ ತುದಿಯಲ್ಲಿ ಧರ್ಮದೇವತೆಗಳಾದ ಕಾಳರಾಹು, ಕಾಳರ್ಕಾಮಿ, ಕುಮಾರಸ್ವಾಮಿ ಹಾಗೂ ಕನ್ಯಾಕುಮಾರಿಯರ ಪುಟ್ಟ ಗುಡಿಗಳಿವೆ. ಅಲ್ಲದೆ ಅಣ್ಣಪ್ಪಸ್ವಾಮಿ, ಕಾಲಭೈರವ ಹಾಗೂ ಪಂಜುರ್ಲಿ ದೈವಗಳ ಸ್ಥಾನವೂ ಇಲ್ಲಿದೆ. ಧರ್ಮಸ್ಥಳದ ರಕ್ಷದೇವತೆ ಅಣ್ಣಪ್ಪದೈವವಾಗಿದ್ದು, ಕಳ್ಳತನಕ್ಕೆ ಇಲ್ಲಿ ಎಡೆಯಿಲ್ಲವೆಂದೇ ಹೇಳಲಾಗುತ್ತದೆ.

ನೆಲ್ಯಾಡಿಬೀಡು :ಮಂಜುನಾಥ ದೇವಾಲಯದಿಂದ ಆಗ್ನೇಯಕ್ಕಾದಂತೆ ಕಾರು ಮ್ಯೂಸಿಯಂನ ಸಮೀಪದಲ್ಲಿರುವ ನೆಲ್ಯಾಡಿಬೀಡು, (ಈ ಹೆಸರಿನ ಒಂದು ಗ್ರಾಮವೂ ಇದೇ ತಾಲೂಕಿನಲ್ಲಿದ್ದು ಇವೆರಡರ ನಡುವಣ ಸಂಬಂಧವನ್ನು ಪರಿಶೀಲಿಸುವ ಅಗತ್ಯವಿದೆ) ಧರ್ಮಾಧಿಕಾರಿಗಳಾದ ವೀರೇಂದ್ರ ಹೆಗ್ಗಡೆಯವರ ಪೂರ್ವಿಕರು ಹಿಂದೆ ವಾಸಿಸುತ್ತಿದ್ದ ಬೀಡಾಗಿತ್ತು. ಆದರೆ ಧರ್ಮದೇವತೆಗಳಾದ ಕಾಳರಾಹು, ಕಾಳಕಾರ್ಮಿ, ಕುಮಾರಸ್ವಾಮಿ ಹಾಗೂ ಕನ್ಯಾಕುಮಾರಿ ದೈವಗಳ ಆದೇಶದಂತೆ, ಹೆಗ್ಗಡೆಯವರ ಪೂರ್ವಿಕರು ನೆಲ್ಯಾಡಿಬೀಡನ್ನು ಧರ್ಮದೇವತೆಗಳಿಗೆ ಬಿಟ್ಟುಕೊಟ್ಟು, ತಮಗಾಗಿ ಬೇರೊಂದು ಬೀಡನ್ನು ಕಟ್ಟಿಕೊಂಡರು. ತತ್ಪರಿಣಾಮವಾಗಿ ಧರ್ಮಾಧಿದೇವತೆಗಳನ್ನು ಅಲ್ಲೇ ನೆಲೆಗೊಳಿಸಿ ತೂಗು ಮಂಚಗಳನ್ನಿಟ್ಟು, ಧೂಪಾದೀಪಾದಿ ಸೇವೆಗಳನ್ನು ನಡೆಸುತ್ತಾ ಬಂದಿರುವುದನ್ನು ಈಗಲೂ ನೋಡಬಹುದಾಗಿದೆ.

ಚಂದ್ರನಾಥ ಬಸದಿ : ನೆಲ್ಯಾಡಿಬೀಡಿನ ಹಿಂಭಾಗದಲ್ಲೇ ಎತ್ತರದ ಸ್ಥಳದಲ್ಲಿ ಪೂರ್ವಾಭಿಮುಖವಾಗಿ ನಿಂತಿರುವ ಈ ಬಸದಿಯ ಗರ್ಭಗೃಹದಲ್ಲಿ ಎಂಟನೆಯ ತೀರ್ಥಂಕರನಾದ ಚಂದ್ರನಾಥಸ್ವಾಮಿಯ ಶಿಲ್ಪವಿದೆ. ಪದ್ಮಾವತಿ ಯಕ್ಷಿಯ ಸನ್ನಿಧಿಯೂ ಇದೆ. ಅಲ್ಲದೇ ಗರ್ಭಗೃಹದಲ್ಲಿ ಪಂಚಲೋಹದ ತೀರ್ಥಂಕರ ಬಿಂಬಗಳಿವೆ. ಈ ಬಸದಿಯನ್ನು ೧೯೯೮ರಲ್ಲಿ ವ್ಯವಸ್ಥಿತವಾಗಿ ಜೀರ್ಣೋದ್ಧಾರ ಮಾಡಲಾಗಿದೆ. ಇದು ವಿಶಾಲವಾದ ಪ್ರದೇಶದಲ್ಲಿ ಪ್ರಶಾಂತ ವಾತಾವರಣದಲ್ಲಿದ್ದು ಆಕರ್ಷಕವಾಗಿದೆ. ಕ್ಷೇತ್ರದ ಧರ್ಮಾಧಿಕಾರಿಗಳಾದ ಹೆಗ್ಗಡೆ ಕುಟುಂಬದವರ ಮನೆದೇವರಾಗಿ ಬಹು ಹಿಂದಿನಿಂದಲೂ ಇದು ಆರಾಧಿಸಲ್ಪಡುತ್ತಿದೆ. ಶ್ರೀಕ್ಷೇತ್ರದಲ್ಲಿ ಜರುಗುವ ಲಕ್ಷದೀಪೋತ್ಸವದ ಬೆನ್ನಲ್ಲೇ ವಸಂತಮಹಲ್‌ನಲ್ಲಿ ಚಂದ್ರನಾಥ ತೀರ್ಥಂಕರನಿಗೆ ಸಮವಸರಣ ಪೂಜೆ ಹಾಗೂ ಧಾರ್ಮಿಕ ಉಪನ್ಯಾಸಗಳು ಜರುಗುತ್ತವೆ. ಅಲ್ಲದೆ ಬಸದಿಯಲ್ಲಿ ವಾರ್ಷಿಕೋತ್ಸವವಾಗುತ್ತದೆ.

ವಸಂತೋದ್ಯಾನ :ಮಂಜುನಾಥ ದೇವಾಲಯದ ಮುಂಭಾಗದಲ್ಲಿ ಎಡಕ್ಕಾದಂತೆ ಇರುವ ಈ ಉದ್ಯಾನವು ಸುಂದರ ಹೂದೋಟವಾಗಿದ್ದು, ಮಧ್ಯದಲ್ಲಿ ಕಲಾತ್ಮಕವಾದ ಮಂಟಪವಿದೆ. ಅದರೊಳಗಿರುವ ಸರಸ್ವತಿಯ ಶಿಲ್ಪ ಆಕರ್ಷಕವಾಗಿದೆ. ಮಂಟಪದ ಎದುರಿನ ಕೊಳದ ಮಧ್ಯೆ ಇರುವ ಘಟಸುಂದರಿಯ ಕೊಡದಿಂದ ಸದಾಕಾಲ ಜಲಧಾರೆ ಸುರಿಯುತ್ತಿರುತ್ತದೆ. ಸಮೀಪದಲ್ಲೇ ಮತ್ಸ್ಯಾಗಾರವಿದೆ.

ಮಂಜೂಷಾ ವಸ್ತು ಸಂಗ್ರಹಾಲಯ: ಧರ್ಮಸ್ಥಳದ ಮಂಜುನಾಥೇಶ್ವರ ದೇವಾಲಯದ ಎದುರಲ್ಲೇ ಇರುವ ಮಂಜೂಷಾ ವಸ್ತುಸಂಗ್ರಹಾಲಯವು (೧೯೮೯), ಶ್ರೀ ಧರ್ಮಸ್ಥಳ ಮಂಜುನಾಥ ಸಾಂಸ್ಕೃತಿಕ ಪ್ರತಿಷ್ಠಾನ (೧೯೮೮)ದ ಭಾಗವಾಗಿ ರೂಪುಗೊಂಡಿದ್ದು, ಕ್ಷೇತ್ರಕ್ಕೇ ಕಳಶಪ್ರಾಯವಾಗಿದೆ. ಇದು ಪ್ರವಾಸಿಗರಿಗೆ ಅಪೂರ್ವ ಜಗತ್ತೊಂದನ್ನು ತೆರೆದಿಡುವಲ್ಲಿ ಯಶಸ್ವಿಯಾಗಿದೆ. ಮಿನಿ ಸಲಾರ್ ಜಂಗ್ ಮ್ಯೂಸಿಯಂ ಎಂಬ ಹೆಗ್ಗಳಿಕೆಗೂ ಪಾತ್ರವಾಗಿರುವ ಇದಕ್ಕೆ, ಇಂದಿನ ರೂಪವನ್ನು ನೀಡುವಲ್ಲಿ ವೀರೇಂದ್ರ ಹೆಗ್ಗಡೆ ದಂಪತಿ ಸಾಕಷ್ಟು ಪರಿಶ್ರಮಿಸಿದ್ದಾರೆ. ಆದರೆ ಅದಕ್ಕೂ ಮೊದಲು ಮಂಜಯ್ಯ ಹೆಗ್ಗಡೆ ಹಾಗೂ ರತ್ನವರ್ಮ ಹೆಗ್ಗಡೆಯವರು ಅಪರೂಪದ ವಸ್ತುಗಳನ್ನು ವಿವಿಧೆಡೆಗಳಿಂದ ಸಂಗ್ರಹಿಸಿ ತಂದು ಗಾಜಿನ ಮನೆಯಲ್ಲಿ ಜೋಡಿಸುತ್ತಿದ್ದರು. ಅದೇ ಇಂದಿನ ಮಂಜೂಷಾ ಮ್ಯೂಸಿಯಂಗೆ ಅಡಿಪಾಯವಾಯಿತು. ಇತಿಹಾಸಪೂರ್ವ ಕಾಲಕ್ಕೆ ಸೇರಿದ ಹಳೆಯ ಪಳಿಯುಳಿಕೆಗಳು, ಶಿಲಾಯುಗ ಸಂಸ್ಕೃತಿಯ ಶಿಲಾಯುಧಗಳು, ವೈವಿಧ್ಯಮಯ ಮೂರ್ತಿಶಿಲ್ಪಗಳು, ಲೋಹದ ಪ್ರತಿಮೆಗಳು, ಪ್ರಾಚೀನ ಹಾಗೂ ಅರ್ವಾಚೀನ ಕಾಲದ ನಾಣ್ಯಸಂಗ್ರಹ, ಆಭರಣಗಳು, ಪೂಜಾಪರಿಕರಗಳು, ಭೂತಾರಾಧನಾ ಭಂಡಾರದ ಪರಿಕರಗಳು, ಆಯುಧೋಪಕರಣಗಳು, ಪಿಂಗಾಣಿ ಪದಾರ್ಥಗಳು, ತೂಕ–ಅಳತೆ

ಸಾಧನಗಳು, ಗೃಹೋಪಯೋಗಿ ಸಲಕರಣೆಗಳು, ಅಲಂಕರಣ ಸಾಧನಗಳು, ಬಗೆಬಗೆಯ ಲೇಖನಿ, ಕನ್ನಡಕ, ಗಡಿಯಾರ, ಬೆರಳಚ್ಚುಯಂತ್ರ ಸ್ಟವ್, ಇಸ್ತ್ರಿಪೆಟ್ಟಿಗೆ, ಗ್ಯಾಸ್‌ಲೈಟ್, ಸೀಮೆಎಣ್ಣೆ ದೀಪ–ಬುಡ್ಡಿ, ರೇಡಿಯೋ, ಕ್ಯಾಮರಾ, ಹೊಲಿಗೆಯಂತ್ರ, ದೂರದರ್ಶಕ, ಪ್ರೋಜೆಕ್ಟರ್ ಮುಂತಾದ ಅಸಂಖ್ಯಾತ ವಸ್ತುಗಳ ಸಾಮ್ರಾಜ್ಯವೇ ಇದೆ. ಅವುಗಳಲ್ಲಿ, ಕೆಲವು ವಸ್ತುಗಳು ಬೆಳೆದುಬಂದ ಬಗೆಯನ್ನು ಗುರುತಿಸಬಹುದಾದ ಒಳನೋಟ ಇಲ್ಲಿ ಲಭ್ಯವಿದೆ. ಇಲ್ಲಿರುವ ಮೈಸೂರು ಶೈಲಿಯ ಸಾಂಪ್ರದಾಯಿಕ ವರ್ಣಚಿತ್ರಗಳು, ಗಂಜೀಫಾ ಇಸ್ಪೀಟು ಎಲೆಗಳು, ದೇವಗೊಳ ಉದ್ದರಣೆ, ಸುಣ್ಣಕಾಯಿ, ವಿಭೂತಿಕರಂಡ, ಚೇಳಿನಾಕಾರದ ಬೀಗ, ದೀಪಸ್ತಂಭ ಮುಂತಾದವು ವೀಕ್ಷಕರನ್ನು ಮಂತ್ರಮುಗ್ಧರನ್ನಾಗಿಸುತ್ತವೆ. ದೇಶವಿದೇಶಗಳ ನಾಣ್ಯ–ನೋಟುಗಳು, ಸಂಗೀತ ವಾದ್ಯಗಳು, ಬ್ಯಾಟರಿಗಳು, ಆಟಿಕೆಗಳೂ ಇಲ್ಲಿವೆ. ಅಲ್ಲದೆ ಭೂತಾರಾಧನೆಯನ್ನು ಬಿಂಬಿಸುವ ದೈವಗಳ ವೇಷಭೂಷಣಗಳು, ಗಗ್ಗರ, ಎಣ್ಣೆಯ ಗುಜ್ಜಣಿಗೆಗಳೂ ಗಮನಾರ್ಹವಾಗಿವೆ. ಬಂದೂಕು, ಪಿಸ್ತೂಲು, ರಿವಾಲ್ವರ್ ಹಾಗೂ ಸಿಡಿಮದ್ದಿನ ಪೆಟ್ಟಿಗೆಗಳೂ ಇವೆ. ಅಲ್ಲದೆ ಹೆಸರಿಸಲಾಗದ ವಿವರಿಸಲಾಗದ ಅನೇಕ ವಸ್ತುಗಳೂ ಈ ಸಂಗ್ರಹಾಲಯದಲ್ಲಿವೆ. ಹೀಗೆ ಶ್ರೀಮಂತವೂ, ವೈವಿಧ್ಯಮಯವೂ, ಕಲಾತ್ಮಕವೂ ಆದ ಸಂಗ್ರಹದಿಂದಾಗಿ ಮಂಜುಷಾ ವಸ್ತುಸಂಗ್ರಹಾಲಯಕ್ಕೆ ನಾಡಿನ ವಸ್ತುಸಂಗ್ರಹಾಲಯಗಳ ಸಾಲಿನಲ್ಲಿ ವಿಶೇಷ ಸ್ಥಾನವಿದೆ. ಸಂಗ್ರಹಾಲಯದ ಮುಂದೆ ಇರುವ ಕಾಷ್ಠ ರಥಗಳು ಸಂರಕ್ಷಣೆಗೊಳಪಟ್ಟಿದ್ದು, ಅವು ಕ್ರಮವಾಗಿ ೧) ಹಿರೆಮಗಳೂರಿನ ಕೋದಂಡಸ್ವಾಮಿ ರಥ, ೨) ಶ್ರೀರಂಗಪಟ್ಟಣದ ಗಂಗಾಧರೇಶ್ವರ ರಥ, ೩) ಅರಸಿಕೆರೆಯ ವೆಂಕಟರಮಣ ರಥ ಹಾಗೂ ೪) ಬಳ್ಳಾರಿಯ ಕೋಟೆಮಲ್ಲೇಶ್ವರ ರಥಗಳಾಗಿವೆ. ಮಂಜುನಾಥನ ಸನ್ನಿಧಾನದ ಎದುರಿರುವ ವಸಂತಮಹಲ್‌ಗೆ ದಿ. ಮಂಜಯ್ಯ ಹೆಗ್ಗಡೆ ಕಲಾ ಮಂದಿರ ಎಂಬ ಹೆಸರೂ ಇದ್ದು, ಅಲ್ಲಿ ಹಲವಾರು ಆಕರ್ಷಕ ವರ್ಣಚಿತ್ರಗಳಿವೆ. **ಹಸ್ತಪ್ರತಿ ಭಂಡಾರ:** 'ಬಾಗಲಕೋಟೆಯ ಬಸವೇಶ್ವರ ಕಲಾ ಕಾಲೇಜಿನ ಪ್ರಾಧ್ಯಾಪಕ ಗೌ.ಮ. ಉಮಾಪತಿಶಾಸ್ತ್ರಿಗಳು, ತಾವು ಸಂಗ್ರಹಿಸಿದ್ದ ಸುಮಾರು ೨೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳ ಭಂಡಾರವನ್ನು ಧರ್ಮಸ್ಥಳಕ್ಕೆ ವಹಿಸಿಕೊಟ್ಟಾಗ, ಮಂಜೂಷಾದಲ್ಲಿ ಈ ಅಪೂರ್ವ ಹಸ್ತಪ್ರತಿ ಭಂಡಾರ ಹಾಗೂ ಗ್ರಂಥಭಂಡಾರಗಳು ರೂಪುಗೊಂಡವು. ಅಲ್ಲಿಂದು ೫,೦೦೦ಕ್ಕೂ ಹೆಚ್ಚಿನ ಓಲೆ ಗ್ರಂಥಗಳಿದ್ದು, ೨೦೦೦ಕ್ಕೂ ಹೆಚ್ಚು ಕಾಗದದ ಹಸ್ತಪ್ರತಿ ದಾಖಲೆಗಳಿವೆ. ಅಲ್ಲದೇ ಹಳೆ ಕಡತಗಳು, ಕಲ್ಲಚ್ಚಿನ ಪ್ರತಿಗಳು ಹಾಗೂ ಪ್ರಾಚೀನ ಮುದ್ರಿತ ಗ್ರಂಥಗಳ ಭಂಡಾರವೇ ಇಲ್ಲಿದೆ. ೨೦,೦೦೦ಕ್ಕೂ ಹೆಚ್ಚು ವೃತ್ತಪತ್ರಿಕೆಗಳ ಸಂಗ್ರಹವಿದೆ.

ವಿಮಾನ ಪ್ರದರ್ಶನ : ಮಂಜೂಷಾದ ಎದುರು ಭಾಗದ ಬಯಲಲ್ಲಿ, ೧೯೩೮ರ ಡಕೋಟಾ (ಡಿಸಿ–೩) ಮಾಡೆಲ್‌ನ ವಿಮಾನವೊಂದಿದೆ. ಒಟ್ಟು ೩೨ ಮಂದಿಯನ್ನು ಒಯ್ಯುವ ಹಾಗೂ ಒಂಭತ್ತು ಗಂಟೆ ಕಾಲ ಹಾರುವ ಸಾಮರ್ಥ್ಯವನ್ನೂ ಹೊಂದಿರುವ ಇದನ್ನು ಬಿರ್ಲಾ ಜೂಟ್ ಕಂಪೆನಿಯವರು ವಸ್ತು ಸಂಗ್ರಹಾಲಯಕ್ಕೆ ೧೯೭೬ರಲ್ಲಿ ದೇಣಿಗೆ ನೀಡಿದ್ದಾರೆ. ಕಾರು ಮ್ಯೂಸಿಯಂನ ಮುಂಭಾಗದಲ್ಲಿರುವ ಇನ್ನೊಂದು ವಿಮಾನವು ೧೯೫೨ರ ಎಚ್‌ಟಿ–೨ ಮಾಡೆಲ್‌ನ ಚಾಲಕ ತರಬೇತಿ ವಿಮಾನವಾಗಿದ್ದು, ಅದನ್ನು ಬೀದರಿನ ಭಾರತೀಯ ವಾಯುಸೇವಾ ತರಬೇತಿ ಕೇಂದ್ರದವರು ೧೯೯೧ರಲ್ಲಿ ಸಂಗ್ರಹಾಲಯಕ್ಕೆ ಉಡುಗೊರೆಯಾಗಿ ನೀಡಿದ್ದು, ಇಲ್ಲೀಗ ಪ್ರದರ್ಶಿಸಲ್ಪಡುತ್ತಿದೆ.

ಕಾರು ಮ್ಯೂಸಿಯಂ: ವೈಶಾಲಿ ಅತಿಥಿಗೃಹದ ಹಿಂಬದಿಯಲ್ಲಿರುವ ಕಾರು ಸಂಗ್ರಹಾಲಯವೂ ಅನನ್ಯವಾಗಿದೆ. ಇಲ್ಲಿರುವ ವಿವಿಧ ಮಾದರಿಯ ಸುಮಾರು ೪೦ಕ್ಕೂ ಹೆಚ್ಚು ಕಾರುಗಳಲ್ಲಿ ೧೯೦೮ರ ಮಾಡೆಲ್ ಅತ್ಯಂತ ಪ್ರಾಚೀನದ್ದಾಗಿದೆ. ಗಾಂಧೀಜಿಯವರು ೧೯೨೭ರಲ್ಲಿ ಮದ್ರಾಸಿನಿಂದ ಪಾಂಡಿಚೇರಿಗೆ ಪ್ರಯಾಣ ಮಾಡಿದ ಸ್ಟುಡಿ ಬೇಕರ್ ಕಾರು (೧೯೨೭ರ ಮಾಡೆಲ್): ಶೃಂಗೇರಿ ಮಠಾಧೀಶರು ಬಳಸುತ್ತಿದ್ದ ಪೆಕಾರ್ಡ್ ಕಾರು; ಮೈಸೂರರಸರ ಡ್ಯಾಮ್ಲರ್ ಕಾರು; ನೆಹರೂರವರ ಕ್ಯಾಡಿಲಾಕ್ ಕಾರು; ಸಿ.ವಿ.ರಾಮನ್‌ರ ಮೋರಿಸ್ ಕಾರು ಮುಂತಾದವು ಈ ಮ್ಯೂಸಿಯಂಗೆ ಶೋಭೆ ತಂದಿವೆ. ಅಲ್ಲೇ ಕುದುರೆ ಸಾರೋಟು (೧೮೬೪–೧೯೦೫); ಎತ್ತಿನಗಾಡಿಗಳ ಸಂಗ್ರಹವೂ ಇದೆ. ಅವುಗಳಲ್ಲಿ ಚಾಮುಂಡಿಬೆಟ್ಟದ ಸಾರೋಟು, ಕೇರಳದ ಕಥಾಕಳಿ ನೃತ್ಯ ತಂಡ ಬಳಸುತ್ತಿದ್ದ ಸಾರೋಟು, ಮದ್ರಾಸ್‌ನಿಂದ ಕಾಶಿಗೆ ಪ್ರಯಾಣಿಕರನ್ನು ಒಯ್ಯುತ್ತಿದ್ದ ಸಾರೋಟುಗಳು ಗಮನಾರ್ಹವಾಗಿವೆ. ಕೆನಡಾ ವೃತ್ತಪತ್ರಿಕೆಯ ಮುದ್ರಣಾಲಯದಲ್ಲಿ ಬಳಕೆಯಲ್ಲಿದ್ದ ಪ್ರಾಚೀನ ಮುದ್ರಣಯಂತ್ರ (ಸು. ೧೮೪೪ರ ಮಾಡೆಲ್); ಲೊಕೊಮೋಟಿವ್ ಎಂಜಿನ್ (ಈಗ ಉಜಿರೆಯಲ್ಲಿದೆ). ಅಪರೂಪದ ಅಗ್ನಿಶಾಮಕ ಯಂತ್ರ (೧೯೨೬), ಹಡಗು ಮಾದರಿ ಮುಂತಾದವನ್ನು ಇಲ್ಲಿ ನೋಡಬಹುದಾಗಿದೆ.

ಧರ್ಮಸ್ಥಳವು ಇಂದು ಧಾರ್ಮಿಕ ಚಟುವಟಿಕೆಯ ಜೊತೆಗೆ, ಬಹುಮುಖಿಯಾಗಿ ಇತರ ಸಾಮಾಜಿಕ ಕ್ಷೇತ್ರಗಳಲ್ಲೂ ತನ್ನನ್ನು ತೊಡಗಿಸಿಕೊಂಡಿದೆ. ಧರ್ಮಸ್ಥಳ ಮಂಜುನಾಥ ಎಜುಕೇಷನ್ ಸೊಸೈಟಿಯ ಆಶ್ರಯದಲ್ಲಿ ೨೮ ಶಿಕ್ಷಣ ಸಂಸ್ಥೆಗಳ ಮೂಲಕ ನಾಡಿನ

ವಿವಿಧೆಡೆಗಳಲ್ಲಿ ಜ್ಞಾನ ಪ್ರಸಾರ; ಆಸ್ಪತ್ರೆ–ವೈದ್ಯಕೀಯ ಕಾಲೇಜುಗಳ ಮೂಲಕ ಆರೋಗ್ಯ–ವೈದ್ಯಕೀಯ ಶಿಕ್ಷಣ ಸೇವೆ; ಧರ್ಮಸ್ಥಳದಲ್ಲಿರುವ ಧರ್ಮಸ್ಥಳ ಮಂಜುನಾಥೇಶ್ವರ ಯೋಗ ಮತ್ತು ಪ್ರಕೃತಿ ಚಿಕಿತ್ಸಾಲಯದ ಮೂಲಕ, ಪಂಚಭೌತಿಕ ಚಿಕಿತ್ಸಾ ಎಂದು ಕರೆಯಲಾಗುವ ಮಣ್ಣು ಚಿಕಿತ್ಸೆ ಜಲಚಿಕಿತ್ಸೆ ವರ್ಣಚಿಕಿತ್ಸೆ ಆಹಾರಚಿಕಿತ್ಸೆ ಕಂಪನ ಚಿಕಿತ್ಸೆ ಮುಂತಾದ ನೈಸರ್ಗಿಕ ವಿಧಾನಗಳನ್ನು ಅನುಸರಿಸಿ ರೋಗಿಗಳನ್ನು ಗುಣಪಡಿಸುವಿಕೆ; ಶಾಂತಿವನ ಟ್ರಸ್ಟ್ ಮೂಲಕ ಲೌಕಿಕ–ಆಧ್ಯಾತ್ಮಿಕ ಬೆಳವಣಿಗೆ, ರುಡ್‌ಸೆಟ್ ಗ್ರಾಮೀಣಾಭಿವೃದ್ಧಿ ಯೋಜನೆ (೧೯೮೨)ಯಡಿ ೨೦ ಕೇಂದ್ರಗಳಲ್ಲಿ ಸ್ವಉದ್ಯೋಗ ತರಬೇತಿ ಸಂಸ್ಥೆಗಳ ಮೂಲಕ ಕಾರ್ಯನಿರ್ವಹಣೆ; ಧರ್ಮೋತ್ಥಾನ ಟ್ರಸ್ಟ್ ಮೂಲಕ ನಾಡಿನ ಪುರಾತನ ದೇವಾಲಯಗಳ ಜೀರ್ಣೋದ್ಧಾರ ಹಾಗೂ ಪುರಾತನ ಕಲೆಗಳ ಪುನರುತ್ಥಾನ ಮುಂತಾದ ವೈವಿಧ್ಯಮಯ ಕಾರ್ಯಗಳಲ್ಲಿ ಕೈ ಜೋಡಿಸುವ ಮೂಲಕ, ಸಾರ್ವಜನಿಕ ಸೇವೆಯಲ್ಲಿ ಶ್ರೀಕ್ಷೇತ್ರವು ತನ್ನದೇ ಆದ ಛಾಪನ್ನು ಮೂಡಿಸುವಲ್ಲಿ ಯಶಸ್ವಿಯಾಗಿದೆ. ಧರ್ಮಸ್ಥಳದಿಂದ ನೇತ್ರಾವತಿ ಹೊಳೆಗೆ ಹೋಗುವ ಮಾರ್ಗದಲ್ಲಿ ಸ್ವಲ್ಪ ಒಳಕ್ಕಾದಂತೆ ಇರುವ ಶ್ರೀರಾಮನ ಅಮೃತಾಶಿಲಾ ದೇವಾಲಯವು ಇತ್ತೀಚಿನ ರಚನೆಯಾಗಿದ್ದು, ಚಿತ್ತಾಕರ್ಷಕವಾಗಿದೆ.

**ನಂದಾವರ :** ತಾಲೂಕು ಕೇಂದ್ರ ಬಂಟ್ವಾಳದಿಂದ ನೈಋತ್ಯಕ್ಕೆ ಇರುವ ಸಜೀಪ ಮುನ್ನೂರು ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳ. ನಂದರೆಂಬ ಅರಸರು ಅಲ್ಲಿ ಕೋಟೆ–ಅರಮನೆ ನಿರ್ಮಿಸಿಕೊಂಡು ಆಡಳಿತ ನಡೆಸುತ್ತಿದ್ದುದ್ದರಿಂದ ಅದಕ್ಕೆ ನಂದಾವರ ಎಂಬ ಹೆಸರು ಬಂದಿತೆಂಬ ಅಭಿಪ್ರಾಯವಿದೆ. ಇನ್ನೊಂದು ಐತಿಹ್ಯದ ಪ್ರಕಾರ ಬಂಗಾಡಿಯ ಬಂಗರಸ ಲಕ್ಷ್ಮಪ್ಪರಸನು ನಂದಾವರವನ್ನು ವಶಪಡಿಸಿಕೊಂಡು ಮಣ್ಣಿನ ಕೋಟೆ, ಅರಮನೆ, ಆದಿನಾಥ ಬಸದಿ, ಮುಂತಾದವನ್ನು ನಿರ್ಮಿಸಿ, ಅಲ್ಲಿಂದಲೇ ರಾಜ್ಯಭಾರ ಮಾಡಿದನೆಂದೂ ಹೇಳಲಾಗುತ್ತದೆ. ಅನಂತರದಲ್ಲಿ ಉಂಟಾದ ರಾಜಕೀಯ ಏಳು–ಬೀಳುಗಳ ನಡುವೆಯೂ ಇದು ಬಂಗರಸರ ಆಳ್ವಿಕೆಯಲ್ಲಿ ೧೯೦೧ರವರೆವಿಗೂ ಇತ್ತೆಂದು ಹೇಳಲಾಗುತ್ತದೆ. ಆದರಿಂದು ಅರಮನೆ, ಕೋಟೆ, ಬಸದಿಗಳೆಲ್ಲವೂ ನೆಲಸಮವಾಗಿದ್ದು, ಕೇವಲ ಶಂಕರನಾರಾಯಣ ದೇವಾಲಯವಷ್ಟೇ ಉಳಿದಿದೆ. ನೇತ್ರಾವತಿ ತಟದ ಮೇಲಿರುವ ಈ ದೇವಾಲಯವು ಸುಮಾರು ೧೦–೧೧ನೆಯ ಶತಮಾನದ ರಚನೆ ಎಂಬ ಅಭಿಪ್ರಾಯವಿದ್ದು, ಗರ್ಭಗೃಹದಲ್ಲಿ ಸ್ವಯಂಭುಲಿಂಗವಿದೆ. ನೇತ್ರಾವತಿಯು ಇಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವುದರಿಂದ ಅಘನಾಶಿನಿಯಾಗಿ ಕ್ಷೇತ್ರಕ್ಕೆ ಪಾವಿತ್ರ್ಯತೆ ಬಂದಿದೆ. ಇಲ್ಲಿನ ವಿನಾಯಕನು ಬಲಸೊಂಡಿಲನ್ನು ಹೊಂದಿರುವುದರಿಂದ ಸಂಕಷ್ಟಹರನೆಂದು ಭಾಜಿತನಾಗಿದ್ದಾನೆ. ಮಾಘ ಹುಣ್ಣಿಮೆಯಂದು ಆರಂಭಗೊಂಡು ನಡೆಯುವ ಐದು ದಿನಗಳ ವಾರ್ಷಿಕ ಜಾತ್ರೆಯಲ್ಲಿ ರಥೋತ್ಸವವಿರುತ್ತದೆ. ಅಲ್ಲದೇ ಊರಲ್ಲಿ ಕೋಟೆ ಹನುಮಂತ, ವೀರಭದ್ರ, ಮುಂತಾದ ದೇವಾಲಯಗಳಿವೆ. ಇಲ್ಲಿಯ ಹನುಮ ಶಿಲ್ಪವು ವ್ಯಾಸ ಪ್ರತಿಷ್ಠಿತವೆಂದು ಹೇಳಲಾಗುತ್ತದೆ. ೧೯೨೪ರ ನೇತ್ರಾವತಿ ಪ್ರವಾಹದಲ್ಲಿ ಈ ಊರು ಹಾನಿಗೊಳಗಾಗಿತ್ತು.

**ನಾರಾವಿ (೩,೯೦೦) :** ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ವಾಯವ್ಯಕ್ಕೆ ೨೪ ಕಿ.ಮೀ. ದೂರದಲ್ಲಿ ನಾರಾವಿ ಹೊಳೆಯ ದಂಡೆಯ ಮೇಲಿರುವ ಊರು. ಈ ನದಿ ತೀರದಲ್ಲಿ ಟಿ.ವಿ.ಶಿವರುದ್ರಪ್ಪನವರು ಹಳೆಯ ಶಿಲಾಯುಗ ಕಾಲಕ್ಕೆ ಸೇರಿದ್ದೆಂದು (ಸು. ಕ್ರಿಪೂ.೨೫೦೦೦–೧೨,೦೦೦) ಹೇಳಲಾಗುವ ಶಿಲಾಯುಧವೊಂದನ್ನು ಬಹಳ ಹಿಂದೆಯೇ ಪತ್ತೆಹಚ್ಚಿ ವರದಿ ಮಾಡಿದ್ದಾರೆ. ಇದನ್ನಾಧರಿಸಿ ನಾರಾವಿಯ ಪ್ರಾಚೀನತೆಯನ್ನು ಹಳೆಶಿಲಾಯುಗ ಕಾಲದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ನಾಡಿನ ಪ್ರಾಚೀನ ಸೂರ್ಯ ಆರಾಧನಾ ಕೇಂದ್ರಗಳಲ್ಲಿ ಒಂದಾಗಿರುವ ನಾರಾವಿಯ ಪ್ರಕೃತಿ ಸೌಂದರ್ಯ ಅನುಪಮವಾಗಿದ್ದು, ಮಳೆಗಾಲದಲ್ಲಿ ನಾಲ್ಕು ದಿಕ್ಕುಗಳಿಂದಲೂ ಉಕ್ಕಿ ಹರಿಯುವ ಹೊಳೆಗಳಿಂದಾಗಿ ಅಂಡಮಾನ್ ದ್ವೀಪವೇ ಆಗಿಬಿಟ್ಟು, ಸೂರ್ಯದರ್ಶನವೇ ಇರುವುದಿಲ್ಲವೆಂದು ಸ್ಥಳೀಯರು ಹೇಳುವುದು ರೂಢಿಯಲ್ಲಿದೆ. ದಿನಗಟ್ಟಲೆ ಸೂರ್ಯ ದರ್ಶನವೇ ಆಗದ ಈ ಊರಿಗೆ ನ+ರವಿ ಎಂಬರ್ಥದಲ್ಲಿ ನಾರಾವಿ ಎಂಬ ಹೆಸರು ಬಂದಿದೆ ಎಂಬ ಅಭಿಪ್ರಾಯವಿದೆ. ಅದರಿಂದಾಗಿ ಇಲ್ಲೊಂದು ಸೂರ್ಯದೇವಾಲಯವನ್ನು ಪ್ರಾಚೀನ ಕಾಲದಲ್ಲಿ ನಿರ್ಮಿಸಲಾಯಿತೆಂದು ಹೇಳಲಾಗುತ್ತದೆ. ಇಲ್ಲಿರುವ ಸೂರ್ಯ ದೇವಾಲಯದ ಗರ್ಭಗೃಹದಲ್ಲಿ ಎರಡು ಕೈಗಳಲ್ಲಿ ತಾವರೆಯ ಮೊಗ್ಗನ್ನು ಹಿಡಿದು ಸಮಭಂಗಿಯಲ್ಲಿ ನಿಂತಿರುವ, ಮೂರು ಅಡಿ ಎತ್ತರದ ಆದಿತ್ಯ ಶಿಲ್ಪವು ಕಲಾತ್ಮಕವಾಗಿದ್ದು, ಸುಮಾರು ೧೧ನೆಯ ಶತಮಾನದ್ದೆಂದು ಪಿ. ಗುರುರಾಜಭಟರು ಅಭಿಪ್ರಾಯಪಡುತ್ತಾರೆ. ಅಲ್ಲೇ ಇರುವ ಸ್ಕಂದ/ ಕಾರ್ತಿಕೇಯನ ದೇವಾಲಯವೂ ಉಲ್ಲೇಖಾರ್ಹವಾಗಿದೆ. ಬಿದಿರಿನ ಬುಟ್ಟಿ ಹಾಗೂ ಬಳಪದ ಕಲ್ಲಿನ ಮರಿಗೆಗಳ ತಯಾರಿಕೆಗೆ ಹಿಂದೆ ಹೆಸರಾಗಿದ್ದ ಈ ಊರಿನಲ್ಲಿರುವ ಕ್ಯಾಥೊಲಿಕ್ ಚರ್ಚಿನ ಆಶ್ರಯದಲ್ಲಿ ಅನಾಥಾಲಯವೊಂದು ಕಾರ್ಯ ನಿರ್ವಹಿಸುತ್ತಿದೆ. ಊರಾಚೆ ಸುಮಾರು ಒಂದೂವರೆ ಕಿ.ಮೀ. ದೂರದ ಪಮ್ಮದಬೆಟ್ಟು ಪ್ರದೇಶವು ಕೃಷ್ಣಶಿಲೆ ಎಂದೂ ಕರೆಯಲಾಗುವ ಬಳಪದ ಕಲ್ಲನ್ನು ಸಮೃದ್ಧವಾಗಿ ಹೊಂದಿದೆ. ಇದರಿಂದಾಗಿ ರಾಜ್ಯ ಸರ್ಕಾರದ ಶಿಲ್ಪಕಲಾಶಾಲೆಯೊಂದು ಅಲ್ಲಿ ಕಾರ್ಯಪ್ರವೃತ್ತವಾಗಿದೆ. ಇಲ್ಲಿರುವ ಕಲ್ಲಗಣಿಗಳಲ್ಲಿ ಆಳವಾಗಿ ಕೊರೆದಿರುವ ಚಿತ್ರವಿಚಿತ್ರ ಗುಂಡಿಗಳು ಪಾತಾಳಕ್ಕೆ ಕೊರೆದ ಬಿಲಗಳಂತೆ ಗೋಚರಿಸುತ್ತವೆ.

**ನಾವೂರು (೨,೮೩೭) :** ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ಒಂಬತ್ತು ಕಿ.ಮೀ. ಹಾಗೂ ಮಂಗಳೂರಿನಿಂದ ೬೫ ಕಿ.ಮೀ. ಈಶಾನ್ಯಕ್ಕೆ ಘಟ್ಟದ ತಪ್ಪಲಿನಲ್ಲಿರುವ ಸ್ಥಳ. ಪೂರ್ವಕ್ಕೆ ಇರುವ ಪ್ರಶಸ್ತವಾದ ಕುದುರೆಮುಖ ಪರ್ವತಶ್ರೇಣಿ (ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿದೆ) ಯ ವೀಕ್ಷಣೆಗೆ ರಮ್ಯಸ್ಥಳವಾಗಿದೆ. ಸಮುದ್ರಮಟ್ಟದಿಂದ ಸುಮಾರು ೬,೨೧೫ ಅಡಿ ಎತ್ತರದಲ್ಲಿರುವ ಈ ಗಿರಿ ಪರ್ವತ ಶ್ರೇಣಿಯು ಕುದುರೆಮುಖದ ಆಕಾರದಲ್ಲಿರುವುದರಿಂದ ಇದಕ್ಕೆ ಆ ಹೆಸರು ಬಂದಿದೆ. ಈ ಪರಿಸರವು ನವಿಲುಗಳಿಂದಾಗಿ ಹಿಂದೆ ಪ್ರಸಿದ್ಧವಾಗಿತ್ತು. ಆದರೆ ಈಗ ಅವುಗಳ ಸಂಖ್ಯೆ ಕಡಿಮೆಯಾಗಿದೆಯೆಂದು ಹೇಳಲಾಗುತ್ತದೆ. ಚಿಕ್ಕಮಗಳೂರು ಭಾಗದ ಸಂಸೆ ಭಾಗಕ್ಕಿಂತ ದಕ್ಷಿಣ ಕನ್ನಡ ಜಿಲ್ಲೆಯ ನಾವೂರು ಭಾಗವು ಹೆಚ್ಚು ಕಡಿದಾಗಿಲ್ಲದಿರುವುದರಿಂದ ಕುದುರೆಮುಖ ಪರ್ವತವನ್ನು ಏರಲು ಪ್ರವಾಸಿಗರು ಹೆಚ್ಚು ಪ್ರಯಾಸ ಪಡಬೇಕಾಗಿಲ್ಲ.

**ನಿಡ್ಗಲ್ಲು :** ಇದು ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ೧೦ ಕಿ.ಮೀ. ಪೂರ್ವಕ್ಕೆ, ಧರ್ಮಸ್ಥಳದಿಂದ ಉತ್ತರಕ್ಕಾದಂತಿರುವ **ಕಲ್ಮಂಜ (೧೨,೪೭೪)**ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿದೆ. ಸುಮಾರು ೧೫ನೆಯ ಶತಮಾನದಲ್ಲಿ ಬೈಲಂಗಡಿ ಮೂಲರಸರ ಆಳ್ವಿಕೆಗೊಳಪಟ್ಟಿದ್ದಾಗ, ಇಲ್ಲೊಂದು ಅರಮನೆಯು ನಿರ್ಮಾಣಗೊಂಡಿದ್ದು, ಅದರ ಅವಶೇಷಗಳನ್ನು ಶಾಂತಿನಾಥ ಬಸದಿಯ ಸಮೀಪದಲ್ಲಿ ಈಗಲೂ ವೀಕ್ಷಿಸಬಹುದಾಗಿದೆ. ನೇತ್ರಾವತಿ ನದಿದಂಡೆಯ ಮೇಲೆ ಜೀರ್ಣಾವಸ್ಥೆಯಲ್ಲಿದ್ದ ಈ ಪುರಾತನ ಬಸದಿಯನ್ನು ೧೯೬೮ರಲ್ಲಿ ಪುನರ್‌ಜೀರ್ಣೋದ್ಧಾರ ಮಾಡಲಾಗಿದೆ. ಈ ಬಸದಿಯ ದ್ವಾರಗೋಪುರವು ಆಕರ್ಷಕವಾಗಿದೆ. ಬಸದಿಯ ಗರ್ಭಗೃಹದಲ್ಲಿ ಸುಮಾರು ನಾಲ್ಕಡಿ ಎತ್ತರದ ಶಾಂತಿನಾಥ ತೀರ್ಥಂಕರನ ಬಿಂಬವಿದೆ. ಅಲ್ಲದೇ ಚೌವ್ವೀಸ್ ತೀರ್ಥಂಕರರು, ಪದ್ಮಾವತಿಯಕ್ಷಿ, ಕ್ಷೇತ್ರಪಾಲ ಬ್ರಹ್ಮ ಹಾಗೂ ಗಂಧಕುಟಿಶಿಲ್ಪಗಳೂ ಇಲ್ಲಿವೆ. ಇಲ್ಲಿ ವಾರ್ಷಿಕ ಜಾತ್ರೆಯಾಗುತ್ತದೆ. ಈ ಬಸದಿಯ ಆವರಣದಲ್ಲಿ ಅಂಗಣ ಪಂಜುರ್ಲಿಯ ಭಂಡಾರ ಸ್ಥಾನವೂ ಇದೆ.

**ನೆಲ್ಲಿಕಾರು (೨,೫೯೧) :** ಜಿಲ್ಲಾ ಕೇಂದ್ರ ಮಂಗಳೂರಿನಿಂದ ೩೫ ಕಿ.ಮೀ. ಈಶಾನ್ಯಕ್ಕೆ ಇರುವ ಪ್ರಮುಖ ಸ್ಥಳ. 'ನೆಲ್ಲಿಕಾಯಿ'ಯಿಂದಾಗಿ ಊರಿಗೆ ಈ ಹೆಸರು ಬಂದಿತೆಂದು ಹೇಳಲಾಗುತ್ತದೆ. ಮೂರ್ತಿ ಶಿಲ್ಪಗಳ ಕೆತ್ತನೆಗೆ ಹೇಳಿಮಾಡಿಸಿದಂತಹ, ಗ್ರಾನೈಟ್–ಬಳಪದಕಲ್ಲುಗಳಿಗಿಂತ ಭಿನ್ನವಾದ, ನೀಲವರ್ಣದ ನೆಲ್ಲಿಕಾರು ಶಿಲೆ ಎಂದೂ ಕರೆಯಲಾಗುವ ಕೃಷ್ಣಶಿಲೆ ಇಲ್ಲಿ ಸಮೃದ್ಧವಾಗಿ ಲಭಿಸುತ್ತದೆ. ನೆಲ್ಲಿಕಾರಿನ ಅಂಬೆಚಾರ್ ಬೆಟ್ಟದಲ್ಲಿ ಅದರ ನಿಕ್ಷೇಪವಿದೆ. ಕಾರ್ಕಳದ ಶಿಲ್ಪಕಲಾವೈಭವವನ್ನು ಬಿಂಬಿಸುವಲ್ಲಿ ಈ ಶಿಲೆಗಳ ಪಾತ್ರ ಅನನ್ಯ. ಇಲ್ಲಿಯ ಕೆರೆಯೊಂದರಲ್ಲಿ ದೊರೆತ ಅನಂತೇಶ್ವರ ಶಿಲ್ಪವನ್ನು ಭೈರರಸರ ಅಪೇಕ್ಷೆಯಂತೆ ಶೃಂಗೇರಿ ಮಠದ ಜಗದ್ಗುರು ನರಸಿಂಹಭಾರತೀ ಸ್ವಾಮೀಜಿಯವರು ಕಾರ್ಕಳಕ್ಕೆ ತಂದು ಪ್ರತಿಷ್ಠಾಪನೆ ಮಾಡಿಸಿದರೆಂದು ತಿಳಿದು ಬರುತ್ತದೆ. ಆದರೆ ಜೈನಬಸದಿಯ ಅವಶೇಷಗಳನ್ನು ಇಲ್ಲಿ ನೋಡಬಹುದಾಗಿದೆ.

**ನೆಲ್ಲಿತೀರ್ಥ :** ಜಿಲ್ಲಾ ಕೇಂದ್ರ ಮಂಗಳೂರಿನಿಂದ ೩೦ ಕಿ.ಮೀ. ಈಶಾನ್ಯಕ್ಕೆ **ಕೊಂಪದವು (೨,೩೩೩)**ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿರುವ ತೀರ್ಥಸ್ಥಳ. ನಿಸರ್ಗದತ್ತವಾದ ನೆಲ್ಲಿತೀರ್ಥ/ಆಮಲತೀರ್ಥವೆಂಬ ಗುಹಾತೀರ್ಥವಿರುವ ಸುಂದರ ಪ್ರಕೃತಿಧಾಮದಿಂದಾಗಿ ಪ್ರಸಿದ್ಧವಾಗಿದೆ. ಬೆಟ್ಟ ಗುಡ್ಡಗಳ ನಡುವೆ ವನಸಿರಿಯ ಮಡಿಲಲ್ಲಿ ಏಕಾಂತ ಸ್ಥಳದಲ್ಲಿರುವುದರಿಂದ ಇದನ್ನು ತಲುಪಲು ಶ್ರಮಪಡಬೇಕಾದೀತು. ಗುಹಾತೀರ್ಥದ ಸಮೀಪದಲ್ಲೇ ಪುರಾತನ ಸೋಮನಾಥೇಶ್ವರ ದೇವಾಲಯವಿದೆ. ಬಳಿಯಲ್ಲಿರುವ ನಾಗಪ್ಪನಕೆರೆಯಲ್ಲಿ ಮಿಂದು ಮಡಿಯಲ್ಲಿ ಗುಹಾಪ್ರವೇಶ ಮಾಡಲಾಗುತ್ತದೆ. ದೇವಾಲಯದ ಬದಿಯಲ್ಲೇ ಇರುವ ಮುರಕಲ್ಲಿನ ಗುಹೆಯನ್ನು ಪ್ರವೇಶಿಸಿ ನಡೆಯುತ್ತ, ಬಾಗುತ್ತ, ಅಂಬೆಗಾಲಿಡುತ್ತಾ ತೆವಳುತ್ತ ಸಾಗುವಾಗ ಗವಿಯುದ್ದಕ್ಕೂ ನೆಲ್ಲಿಕಾಯಿ ಗಾತ್ರದ ಜಲಬಿಂದುಗಳು ತೊಟ್ಟಿಕ್ಕುವುದರಿಂದ ಇದಕ್ಕೆ 'ನೆಲ್ಲಿತೀರ್ಥ' ಎಂಬ ಹೆಸರು ಬಂದಿದೆಯೆಂಬ ಅಭಿಪ್ರಾಯವಿದೆ. ತೆವಳುವುದು ಮುಗಿದು ಎದ್ದು ನಿಲ್ಲುವಂತಹ ವಿಶಾಲವಾದ ಗುಹಾಭಾಗದಲ್ಲಿ ನಿರ್ಮಲವಾದ ಜಲದಿಂದ ಕೂಡಿದ ತೀರ್ಥದಮಡುವಿದ್ದು, ಹಿಂಬದಿಯಲ್ಲೇ ಆಳೆತ್ತರದ ಶಿವಲಿಂಗವಿದೆ. ಜಾಬಾಲಮುನಿಗಳು ತಪಸ್ಸು ಮಾಡಿದ ತಾಣ ಇದಾಗಿದ್ದು, ಇಲ್ಲಿಯ ಸೋಮನಾಥೇಶ್ವರ ಲಿಂಗವನ್ನು ಅವರೇ ಪ್ರತಿಷ್ಠಾಪಿಸಿದರೆಂಬ ಐತಿಹ್ಯವಿದೆ. ಇದು ಚೌಟರಸರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯವಾಗಿದ್ದು, ಧನುಪೌರ್ಣಮಿಯಂದು ಇಲ್ಲಿ ವಾರ್ಷಿಕ ಜಾತ್ರೆಯಾಗುತ್ತದೆ. ತುಲಾಸಂಕ್ರಮಣದಿಂದ ಮಹಾಶಿವರಾತ್ರಿಯ ಅವಧಿಯಲ್ಲಿ ಗುಹೆ ಪ್ರವೇಶಿಸಿ ತೀರ್ಥಸ್ನಾನ ಮಾಡಿದರೆ ಶುಭವೆಂದು ನಂಬಲಾಗುತ್ತದೆ. ಕಾಸರಗೋಡು ತಾಲೂಕಿನ (ಕೇರಳ) **ಆಡೂರು** ಗ್ರಾಮದ ವ್ಯಾಪ್ತಿಯಲ್ಲಿರುವ **ನೆಲ್ಲಿತೊಟ್ಟು** ಹಾಗೂ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ **ಕಮಲಶಿಲೆ** ಎಂಬಲ್ಲಿಯೂ ಇದೇ ಮಾದರಿಯ ಗುಹಾತೀರ್ಥಗಳು ಇರುವುದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

**ನೆಲ್ಲಿತೀರ್ಥ :** ಬಂಟ್ವಾಳ ತಾಲೂಕಿನ **ಮಾಣಿ (೩,೫೧೫)**ಗ್ರಾಮದ ಸುಲ್ಲಮಲೆ–ಬಿಳಿಮಲೆ ನಡುವೆ ಇರುವ ಗುಹಾಂತರ ನೆಲ್ಲಿತೀರ್ಥವು ಇನ್ನೊಂದು ಪ್ರಮುಖ ಕ್ಷೇತ್ರವಾಗಿದ್ದು, ಶ್ರಾವಣ ಸಂಕ್ರಮಣದಂದು ಸಾವಿರಾರು ಜನ ಸೇರುತ್ತಾರೆ.

**ಪಂಜ :** ತಾಲೂಕು ಕೇಂದ್ರ ಸುಳ್ಯದಿಂದ ಉತ್ತರಕ್ಕೆ ೧೫ ಕಿ.ಮೀ. ದೂರದಲ್ಲಿರುವ ಹೋಬಳಿ ಕೇಂದ್ರ ಪಂಜ ಪೇಟೆಯಿಂದ ಒಂದು ಕಿ.ಮೀ. ದೂರದ ಕಾಡಲ್ಲಿ ಎತ್ತರದ ಸ್ಥಳದಲ್ಲಿ ಪಂಚಲಿಂಗೇಶ್ವರ ದೇವಾಲಯವಿದೆ. ವಿಶಾಲವಾದ ಈ ದೇವಾಲಯದ ಗರ್ಭಗೃಹವು ಗಜಪೃಷ್ಠಾಕಾರದ ತಳವಿನ್ಯಾಸವನ್ನು ಹೊಂದಿದೆ. ಗರ್ಭಗೃಹದಲ್ಲಿ ಏಕಪೀಠದ ಮೇಲೆ ಪಂಚಲಿಂಗಗಳನ್ನು ಸ್ಥಾಪಿಸಲಾಗಿದೆ. ಈ ಗುಡಿಯಲ್ಲಿ ದುರ್ಗೆ, ಗಣಪತಿ, ಸುಬ್ರಹ್ಮಣ್ಯ, ಶಾಸ್ತಾವು, ಮುಂತಾದ ಪರಿವಾರ ದೇವರುಗಳಿವೆ. ಅಲ್ಲದೇ ಕಾಜಿಕುಜುಂಬ, ಉಳ್ಳಾಕುಳ ಭೂತಸ್ಥಾನಗಳೂ ಇಲ್ಲಿದೆ. ಕೋಟಿಚೆನ್ನಯಗಳ ಪೈಕಿ, ಚೆನ್ನಯನು ಇಲ್ಲಿಯ ಪಂಚಲಿಂಗೇಶ್ವರ ಗುಡಿಯ ಧ್ವಜಸ್ತಂಭಕ್ಕೆ ತಲೆ ಚಚ್ಚಿಕೊಂಡು ಸತ್ತನೆಂದು ಹೇಳಲಾಗುತ್ತದೆ.

**ಪಡುಪಣಂಬೂರು (೧,೩೪೫)** : ಮಂಗಳೂರಿನಿಂದ ೨೨ ಕಿ.ಮೀ. ಉತ್ತರಕ್ಕೆ ಹಾಗೂ ಹೋಬಳಿ ಕೇಂದ್ರ ಮೂಲ್ಕಿಯಿಂದ ಐದು ಕಿ.ಮೀ. ದಕ್ಷಿಣಕ್ಕೆ, ರಾಷ್ಟ್ರೀಯ ಹೆದ್ದಾರಿ ೧೭ರ ಮಗ್ಗಲಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಪ್ರಾಚೀನ ಶಾಸನಗಳಲ್ಲಿ 'ಪಡಂಬೂರು' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಜೈನಕೇಂದ್ರವೂ ಆಗಿದ್ದ ಅಂಶ ಶಾಸನಗಳಿಂದ ವೇದ್ಯವಾಗುತ್ತದೆ. ಅಲ್ಲದೇ ಸ್ವಲ್ಪಕಾಲ ಇದು ಸಾವಂತ ಅರಸರ ರಾಜಧಾನಿ ಪಟ್ಟಣವೂ ಆಗಿದ್ದು, ಅವರನ್ನು ಉಪ್ಪಿನ ಸಾವಂತರು' ಎಂದೂ ಕರೆಯುವುದಿದೆ. ಊರ ಶಿವಾಲಯದಲ್ಲಿರುವ ಇಮ್ಮಡಿ ದೇವರಾಯನ ಆಳ್ವಿಕೆಗೆ ಸೇರಿದ ಸುಮಾರು ೧೪೩೭ರ ಶಾಸನ, ಮೂಲಪಡಂಬೂರ ಪಡುವಣ ಊರಲ್ಲಿನ ಅಣ್ಣರಗೊಳ ಎಂಬ ತಾವನ್ನು ಕೊಳತೂರ ಗೋವಿಂದದೇವನ ಮಗನಿಗೆ ದಾನ ನೀಡಿದ ಅಂಶವನ್ನು ದಾಖಲಿಸಿದೆ. ಅಲ್ಲದೇ ಪಡಂಬೂರ ಪಡುವಣ ಉಮಾಮಹೇಶ್ವರ ದೇವರ ನಂದಾದೀಪಕ್ಕೆಂದು ತೆಂಗಿನೆಣ್ಣೆಯನ್ನು ದಾನ ಬಿಟ್ಟ ಅಂಶವನ್ನೂ ಉಲ್ಲೇಖಿಸಿದೆ. ಇಲ್ಲಿಯ ಉಮಾಮಹೇಶ್ವರ ಗುಡಿಯಲ್ಲಿರುವ ಉಮಾಮಹೇಶ್ವರ ಶಿಲ್ಪವು ಆಕರ್ಷಕವಾಗಿದೆ. ಮೂಲ ಪಡಂಬೂರಿನ ಪಡುವಣ ದಿಕ್ಕಲ್ಲಿ ಈ ಊರು ತಲೆ ಎತ್ತಿದ್ದರಿಂದ ಇದಕ್ಕೆ ಪಡುವ ಪಡಂಬೂರು ಎಂಬ ಹೆಸರು ಬಂದು ಮುಂದೆ ಅದೇ ಪಡುಪಣಂಬೂರು ಆಗಿದೆ.

ಇಲ್ಲಿರುವ ಸಾವಂತರಸರ ಅರಮನೆಯು ವಿಶಾಲವಾಗಿದ್ದರೂ, ಅಷ್ಟಷ್ಟು ಭಾಗ ಪಾಳು ಬಿದ್ದು, ಚಾವಡಿ, ಬಸದಿ ಮುಂತಾದ ಕೆಲವು ಭಾಗ ಮಾತ್ರ ಸುಸ್ಥಿತಿಯಲ್ಲಿವೆ. ಅರಮನೆಯ ಚಾವಡಿಯಲ್ಲಿ ವಿಶೇಷ ದಿನಗಳಂದು ಅರಸರು ಆಸೀನರಾಗುವ ಸಿಂಹಾಸನವಿದೆ. ಅರಮನೆಯ ಆವರಣದಲ್ಲೇ 'ಅರಮನೆಯ ಬಸದಿ' ಇದೆ. ಸಾವಂತರಸರ ವಂಶಸ್ಥರು ಈಗಲೂ ಅಲ್ಲೇ ವಾಸಿಸುತ್ತಿದ್ದು, 'ಶ್ರೀ ಜನಾರ್ದನ' ಎಂಬ ಅಂಕಿತವುಳ್ಳ ರಾಜಮುದ್ರೆಯುಂಗುರ ಅವರ ವಶದಲ್ಲಿದೆ. ಸಾವಂತರಸರು ಈ ಊರನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಳ್ಳುವುದಕ್ಕೆ ಮೊದಲು ಸೀಮಂತೂರು ಹಾಗೂ ಕೋಟೆಕೇರಿಗಳು ಕ್ರಮವಾಗಿ ಅವರ ರಾಜಧಾನಿಗಳಾಗಿದ್ದು, ಚೌಟರಸರ ಧಾಳಿಯಿಂದಾಗಿ ಸೀಮಂತೂರನ್ನೂ, ಪೋರ್ಚುಗೀಸರ ಕಿರುಕುಳದಿಂದಾಗಿ ಕೋಟೆಕೇರಿಯನ್ನೂ ಅವರು ತ್ಯಜಿಸಿದರೆಂದು ತಿಳಿದುಬರುತ್ತದೆ. ಅರಮನೆಯ ಎದುರಿನ ಬಾಕಿಮಾರುಗದ್ದೆಯಲ್ಲಿ ಹಿಂದಿನ ಸಾವಂತರಸರ ಅನೇಕ ಸಮಾಧಿಗಳಿದ್ದು, ಅದರಾಚೆಗೆ ಕಂಬಳಗದ್ದೆ ಇದೆ. ಹಿಂದೆ ಸಾವಂತರಸರ ಕಾಲದಲ್ಲಿ ಪಡುಪಣಂಬೂರಿನಲ್ಲಿ ಜರುಗುತ್ತಿದ್ದ 'ಅರಸು ಕಂಬಳ' ಪ್ರತಿಷ್ಠಿತ ಹಬ್ಬವಾಗಿ, ಪ್ರಮುಖ ಧಾರ್ಮಿಕ ಆಚರಣೆಯಾಗಿ ಎಲ್ಲರನ್ನೂ ಆಕರ್ಷಿಸುತ್ತಿತ್ತು. ಈಗ ಆ ವೈಭವವಿಲ್ಲದಿದ್ದರೂ 'ಮೂಲ್ಕಿ ಸೀಮೆ ಅರಸು ಕಂಬಳ ಸಮಿತಿ' ಅದನ್ನು ಸಾಕಷ್ಟು ಸಂಭ್ರಮದಿಂದ ಆಚರಿಸಿಕೊಂಡು ಬರುತ್ತಿದೆ. ಹಿಂದೆ ಕೋಳಿ ಅಂಕವು ಬಾಕಿಮಾರುಗದ್ದೆಯಲ್ಲಿ ನಡೆಯುತ್ತಿತ್ತು. ಆದರೆ ಅದನ್ನು ಈಗ ಬೇರೆಡೆ ನಡೆಸಲಾಗುತ್ತದೆ. ಇಲ್ಲಿಂದ ವರದಿಯಾಗಿರುವ ನಾಲ್ಕು ಶಾಸನಗಳಲ್ಲಿ ಮೂರು ಜೈನ ಶಾಸನಗಳಾಗಿವೆ. ಅವುಗಳಲ್ಲಿ ಬಯಲಂಗಡಿಯ ಮೇಳೆಬಸದಿಯ ಮುಂದಿರುವ ೧೫೪೨ರ ಶಾಸನವು ಕಿನ್ನಿಕ ಸಾಮಂತರ ಅಳಿಯ ದುಗ್ಗಣ ಸಾಮಂತರು ಆಳುತ್ತಿದ್ದಾಗ ಗುರು ಚಾರುಕೀರ್ತಿ ಪಂಡಿತದೇವರ ಆದೇಶದಂತೆ, ಅಕ್ಕಚೆನ್ನಮ್ಮ ದೇವಿಯು, ಮೂರು ಸಾವಿರ ಆಳುಗಳೂ ಸೇರಿದಂತೆ ನಗರದ ಸಮಸ್ತರ ಅನುಮತದೊಂದಿಗೆ ಅನಂತನಾಥ ತೀರ್ಥಂಕರ ಬಸದಿಯ ಅನಂತನಾಥ, ವೃಷಭನಾಥ, ಮೇಲಣ ನೆಲೆಯ ದೇಹಾರ, ರತ್ನತ್ರಯದೇಹಾರ ಹಾಗೂ ತೀರ್ಥಂಕರರ ಬಸ್ತಿಗಳ ಅಮೃತಪಡಿ ನಿತ್ಯ ನೈವೇದ್ಯ, ಅಭಿಷೇಕಗಳಿಗೆಂದು ಒಟ್ಟು ೩೨೮ ಮೂಡೆ (ಮುಡಿ) ಅಕ್ಕಿಯನ್ನು ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಅಲ್ಲೇ ಇರುವ ಇದೇ ತೇದಿಯಲ್ಲಿ ನೀಡಲ್ಪಟ್ಟಿರುವ ಇನ್ನೊಂದು ಶಾಸನ ಅನಂತ ತೀರ್ಥಂಕರ ಬಸದಿಯ ಮೇಲಣ ನೆಲೆಯ ನಡುವಣ ದಿಕ್ಕಿನ ದರ್ಶನವೂ ಸೇರಿದಂತೆ ಎಲ್ಲ ತೀರ್ಥಂಕರರ ಪೂಜಾವಿಧಿಗಳಿಗೆಂದು ನಾರಣಸೆಟ್ಟಿಯು ೧೫೦ ಮೂಡೆ ಅಕ್ಕಿಯನ್ನು ದಾನಬಿಟ್ಟ ಅಂಶವನ್ನು ದಾಖಲಿಸುತ್ತದೆ. ಅಲ್ಲದೇ ಬಿದಿರೆಯ ಗುರುಗಳ ಬಸ್ತಿಯ ಮೇಗಣ ನೆಲೆಯ ಹಾಲಧಾರೆ ಸೇವೆ ಹಾಗೂ ಕೆಳಗಣನೆಲೆ ಭಗವಂತಿಯ ಪೂಜೆಗೆಂದೂ ೫೦

ಮೂಡೆ ಅಕ್ಕಿಯನ್ನು ದಾನಬಿಟ್ಟ ಅಂಶವನ್ನೂ ನಿವೇದಿಸುತ್ತದೆ. ಅದೇ ಬಸದಿಯ ಬಳಿ ಇರುವ ೧೫೫೯ರ ಇನ್ನೊಂದು ಶಾಸನದಿಂದ ದುಗ್ಗಣ ಸಾವಂತರು ಊರ ಒಟ್ಟು ಸಿದ್ಧಾಯದಲ್ಲಿ ಹದಿನೇಳೂವರೆ ವರಾಹ ಹೊನ್ನನ್ನು ಶಾಸ್ತ್ರದಾನಕ್ಕಾಗಿ ದತ್ತಿ ಬಿಟ್ಟು ಅದರಲ್ಲಿ ೧೨ ವರಾಹವನ್ನು ಚಂದ್ರೋಪಾಧ್ಯಾಯರಿಗೆ ಅರ್ಚಕ ವೃತ್ತಿಯಾಗಿ ಬಿಟ್ಟುಕೊಟ್ಟ ಅಂಶವೂ ವೇದ್ಯವಾಗುತ್ತದೆ. ಇಲ್ಲಿನ ಎಲ್ಲ ಬಸದಿಗಳು ಸ್ಥಳೀಯ ಸಾವಂತರಸರ ಕಾಲದ ರಚನೆಗಳಾಗಿದ್ದು, ಅರಮನೆಗೆ ಅನತಿ ದೂರದಲ್ಲಿರುವ ಚಂದ್ರನಾಥ ಬಸದಿ ಶಿಥಿಲಾವಸ್ಥೆಯಲ್ಲಿರುವ ಕಲ್ಲುಬಸದಿ ಹಾಗೂ ಊರ ನಡುವೆ ಇರುವ ಅನಂತನಾಥ ಬಸದಿಗಳು ಇಲ್ಲಿಯ ಪ್ರಮುಖ ಸ್ಮಾರಕಗಳಾಗಿವೆ. ಪಾಳು ಬಿದ್ದಿರುವ ಕಲ್ಲುಬಸದಿಯು ಪಾರ್ಶ್ವನಾಥ ತೀರ್ಥಂಕರನದ್ದಾಗಿದ್ದು, ಗಿಡ–ಮರ ಬೆಳೆದು ಕೊಂಚ ಭಾಗ ಜರಿದು ಬಿದ್ದಿದ್ದು, ಸಂರಕ್ಷಿಸುವ ಅಗತ್ಯವಿದೆ. ಅಲ್ಲಿದ್ದ ಪಾರ್ಶ್ವನಾಥ ತೀರ್ಥಂಕರ ಶಿಲ್ಪವನ್ನೊಂದು ಅನಂತನಾಥ ಬಸದಿಯಲ್ಲಿ ತಂದು ಇರಿಸಲಾಗಿದೆ. ಊರ ನಡುವೆ ಇರುವ ಅನಂತನಾಥ ಬಸದಿಯು ಶಾಸನೋಕ್ತ ಅನಂತತೀರ್ಥೇಶ್ವರ ಬಸದಿಯಾಗಿದ್ದು, ಭವ್ಯವಾಗಿದೆ. ಅದರ ಮುಂದಿರುವ ಎತ್ತರದ ಮಾನಸ್ತಂಭವೂ ಅಷ್ಟೇ ಆಕರ್ಷಕವಾಗಿದೆ. ಇಲ್ಲಿ ಹಿಂದೂ – ಜೈನ ಎಂಬ ಭೇಧವೇ ಇಲ್ಲದಷ್ಟು ಸಾಮರಸ್ಯವಿರುವ ಅಂಶ ಉಲ್ಲೇಖಾರ್ಹವಾದುದು. ಇಲ್ಲಿರುವ ಪದ್ಮಾವತಿ ದೇವಿಯನ್ನು ಸೀಮಂತೂರಿನಿಂದ ಬಂದವಳೆಂದು ಹೇಳಲಾಗುತ್ತದೆ. ಇಲ್ಲಿನ ಬಸದಿಗಳು ಮೂಡುಬಿದ್ರೆಯ ಜೈನಮಠಕ್ಕೆ ಸೇರಿದ್ದಾಗಿದೆ.

**ಪಣಂಬೂರು (ನವ ಮಂಗಳೂರು):** ಮಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಗೊಳಪಟ್ಟಿರುವ ಇದು ಮಂಗಳೂರಿನಿಂದ ಉತ್ತರಕ್ಕೆ ಒಂಭತ್ತು ಕಿ.ಮೀ. ಅಂತರದಲ್ಲಿ ರಾಷ್ಟ್ರೀಯ ಹೆದ್ದಾರಿ ೧೭ರ ಮಗ್ಗುಲಲ್ಲಿರುವ ಪಟ್ಟಣವಾಗಿದ್ದು, ಅಲ್ಲಿ ನೂತನವಾಗಿ ರೂಪುಗೊಂಡಿರುವ ನವಮಂಗಳೂರು ಬಂದರಿನಿಂದಾಗಿ ಪ್ರಸಿದ್ಧವಾಗಿದೆ. ಮಿಗಿಲಾಗಿ ಮಂಗಳ ಯೂರಿಯ, ಡಿ.ಎ.ಪಿ., ಮೊದಲಾದ ಕೃತಕ ಗೊಬ್ಬರಗಳನ್ನು ಉತ್ಪಾದಿಸುವ ಬೃಹತ್ ಕಾರ್ಖಾನೆಯಾದ ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಲಿ., ಕಾರ್ಖಾನೆ ಹಾಗೂ ಮಂಗಳೂರು ರಿಫೈನರಿ ಅಂಡ್ ಪೆಟ್ರೋಕೆಮಿಕಲ್ಸ್ ಲಿ. ಸಮುಚ್ಚಯಗಳು ಇರುವುದಿಲ್ಲೇ.

ಫಲ್ಗುಣಿ ನದಿದಂಡೆಯ ಮೇಲಿರುವ ಈ ಊರಿನ ಮುದ್ದಹೆಗ್ಗಡೆ ವಂಶಸ್ಥರು ಹಿಂದೆ ಆಸುಪಾಸಿನ ಹಳ್ಳಿಗಳ ಆಡಳಿತವನ್ನು ನಿರ್ವಹಿಸುತ್ತಿದ್ದರೆಂದು ತಿಳಿದುಬರುತ್ತದೆ. ಅಲ್ಲದೇ ಪಣಂಬೂರಿನಲ್ಲಿ ಪ್ರಾಚೀನ ಕಾಲದ ನಂದನೇಶ್ವರ ಹಾಗೂ ವಿಷ್ಣುಮೂರ್ತಿ ದೇವಾಲಯಗಳಿವೆ. **ನವಮಂಗಳೂರು ಬಂದರು :** ಹಳೆಮಂಗಳೂರು ಬಂದರು ಸರ್ವಋತು ಬಂದರಾಗಿರದೆ ಕೇವಲ ಒಂಭತ್ತು ತಿಂಗಳು ಮಾತ್ರ ಕಾರ್ಯನಿರ್ವಹಿಸುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ನೂತನ ಬಂದರೊಂದನ್ನು ನಿರ್ಮಿಸಲು ಮುಂದಾಗಿ ಅದರ ನಿರ್ಮಾಣಕ್ಕೆ ಪಣಂಬೂರನ್ನು ಆಯ್ಕೆಮಾಡಿಕೊಂಡು, ಸರ್ವಋತು ಬಂದರನ್ನು ೨೦೦ ಎಕರೆ ಪ್ರದೇಶದಲ್ಲಿ ೧೯೭೫ರಲ್ಲಿ ಪೂರ್ಣಗೊಳಿಸುವುದರೊಂದಿಗೆ ರಾಷ್ಟ್ರದ ಪ್ರಮುಖ ಬಂದರುಗಳ ಸಾಲಿನಲ್ಲಿ ಇದಕ್ಕೆ ಒಂಭತ್ತನೆಯ ಸ್ಥಾನ ಲಭಿಸುವಂತಾಗಿದೆ. ರೈಲು ಸಂಪರ್ಕ, ರಸ್ತೆ ಸಾರಿಗೆ ಹಾಗೂ ವಿಮಾನ ನಿಲ್ದಾಣಗಳೊಂದಿಗೆ ಜೋಡಿಸಲ್ಪಟ್ಟಿರುವ ಇದು ಸರಕು ಸಾಗಣೆಗಾಗಿಯೇ ಮೀಸಲಾಗಿದೆ. ಎಡೆಬಿಡದ ಆಮದು–ರಫ್ತು ವಹಿವಾಟಿನಿಂದಾಗಿ ರಾಷ್ಟ್ರದ ಆರ್ಥಿಕಾಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಅರವತ್ತೈದು ಕಿ.ಮೀ. ದೂರದಲ್ಲಿರುವ ಕುದುರೆಮುಖ ಕಂಪೆನಿಯ ಕಬ್ಬಿಣದ ಅದಿರನ್ನು ನೀರಿನೊಂದಿಗೆ ಬೆರೆಸಿ, ಕೊಳವೆ ಪೈಪ್‌ಲೈನ್ ಮೂಲಕ ಕುದುರೆಮುಖದಿಂದ ನವಮಂಗಳೂರು ಬಂದರಿಗೆ ಸಾಗಿಸಿ, ಬಂದರು ಪ್ರದೇಶದಲ್ಲಿರುವ ಕುಲುಮೆಯಲ್ಲಿ ಉಂಡೆ ಮಾಡಿ ವಿದೇಶಗಳಿಗೆ ರಫ್ತು ಮಾಡುವ ಮಾಯಾಲೋಕವಿಲ್ಲಿದೆ. ಮಿಗಿಲಾಗಿ ವಿದೇಶಗಳಿಂದ ಖಾದ್ಯತೈಲ, ಇಂಧನ ತೈಲ, ರಾಸಾಯನಿಕ ವಸ್ತು, ಸಿಮೆಂಟ್, ಯಂತ್ರೋಪಕರಣ ಮುಂತಾದವು ಆಮದಾಗುತ್ತವೆ. ಪಣಂಬೂರಿನ ಕಡಲಂಚಿನ ಬೀಚು, ಸಂಜೆಯ ವಾಯುವಿಹಾರಕ್ಕೆ, ಸೂರ್ಯಾಸ್ತಮದ ವೀಕ್ಷಣೆಗೆ, ಜಲಕ್ರೀಡೆಗೆ ಪ್ರಶಸ್ತವಾಗಿದ್ದು, ಪ್ರವಾಸಿಗರನ್ನು ಆಕರ್ಷಿಸುವ ಸುಂದರ ತಾಣವಾಗಿದೆ.

**ಪಾರೆಂಕಿ (೩,೨೮೫):** ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ೧೨ ಕಿ.ಮೀ. ನೈಋತ್ಯಕ್ಕೆ ಹಾಸನ–ಮಂಗಳೂರು ಹೆದ್ದಾರಿಯಲ್ಲಿರುವ ಸ್ಥಳ. ಅಲ್ಲದೇ ಊರಲ್ಲಿರುವ ಚಾರಿತ್ರಿಕ ಮಹತ್ವದ ಮಹಿಷಾಸುರಮರ್ದಿನಿ (ಪಾರಿಂಕೇಶ್ವರಿ) ದೇವಾಲಯದಿಂದಾಗಿ ಮಹತ್ವ ಪಡೆದಿದೆ. ಪಾರ್ವತಿಯು ಮಹಿಷನನ್ನು ಮರ್ದಿಸಿ ನೆಲೆಸಿದ ಸ್ಥಳ ಇದೆಂಬ ಪೌರಾಣಿಕ ನಂಬಿಕೆ ಇದೆ. ಶಂಖ, ಚಕ್ರ ತ್ರಿಶೂಲ, ಮಹಿಷಲಾಂಗೂಲಗಳಿಂದ ಕೂಡಿದ ಮಹಿಷಮರ್ದಿನಿಯ ಶಿಲ್ಪ ಆಕರ್ಷಕವಾಗಿದೆ. ಪುರಾಣ ಪ್ರಸಿದ್ಧ ಇಂದ್ರಾಣಿ ಸರೋವರ ಗುಡಿಯ ಸಮೀಪದಲ್ಲಿಯೇ ಇದೆ. **ಪಾಂಡವರ ಕಲ್ಲು** : ಪಾರೆಂಕಿಯಿಂದ ಎರಡು ಕಿ.ಮೀ. ದೂರದಲ್ಲಿರುವ ಪಾಂಡವರಕಲ್ಲು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಕಲ್ಗೋರಿಗಳಿರುವ ಸ್ಥಳ. 'ಪಾಂಡವರಕಲ್ಲು' ಪ್ರದೇಶವು ನೆರೆಯ ಬಂಟ್ವಾಳ ತಾಲೂಕಿನ **ಬಡಗಕಜೇಕಾರು(೨,೩೯೪)**ಕಂದಾಯ ಗ್ರಾಮದ

ವ್ಯಾಪ್ತಿಯಲ್ಲಿದೆ. ಈ ಕಲ್ಗೋರಿಗಳ ನಡುನಡುವೆ ಜನವಸತಿ ಏರ್ಪಟ್ಟಿದೆ. ಕಾಯರ್ ಮರದಡಿಯಲ್ಲಿ ಕಲ್ಗೋರಿ ಸಮೂಹವೇ ಇದೆ. ಇವು ಬೃಹತ್ ಗಾತ್ರದ ಒರಟು ಚಪ್ಪಡಿಗಳನ್ನು ನೆಟ್ಟು, ಮೇಲೆ ಅಡ್ಡಡ್ಡವಾಗಿ ಮತ್ತೊಂದು ಚಪ್ಪಡಿಯನ್ನು ಹಾಸಿರುವ ಒರಟು ರಚನೆಗಳಾಗಿದ್ದು, ಬೃಹತ್ ಶಿಲಾಯುಗ ಸಂಸ್ಕೃತಿಯ ಮಾನವರ ಸಮಾಧಿಗಳಾಗಿವೆ. ಈ ಪ್ರದೇಶದಲ್ಲಿ ಕಪ್ಪು-ಕೆಂಪು ಮಣ್ಣಿನ ಮಡಕೆ, ಬೂದಿ, ಮೂಳೆ ಮುಂತಾದವು ಲಭಿಸುತ್ತವೆ. ಅಲ್ಲದೆ ಈ ಪ್ರದೇಶದಲ್ಲಿ ಬೇರೆ ಬೇರೆ ದೈವಗಳ ಸ್ಥಾನವಿದೆ. **ಕಕ್ಕೆಪದವು:** ತಾಲೂಕು ಕೇಂದ್ರ ಬಂಟ್ವಾಳದಿಂದ ೨೦ ಕಿ.ಮೀ. ದೂರದ ಕಕ್ಕೆಪದವು ಎಂಬ ಸ್ಥಳದಲ್ಲಿ ಶಿಲಾಯುಧ ಸಂಸ್ಕೃತಿಗೆ ಸೇರಿದ ಹತ್ತಾರು ಕಲ್ಗೋರಿ ರಚನೆಗಳಿವೆ. ಪಾಂಡವರು ವನವಾಸದಲ್ಲಿದ್ದ ಸಂದರ್ಭದಲ್ಲಿ ಈ ರಚನೆಗಳನ್ನು ನಿರ್ಮಿಸಿದ್ದೆಂಬ ನಂಬಿಕೆ ಸ್ಥಳೀಕರಲ್ಲಿದ್ದು, ಅವನ್ನೂ 'ಪಾಂಡವರಕಲ್ಲು' ಎಂದೇ ಇಂದಿಗೂ ಕರೆಯಲಾಗುತ್ತಿದೆ.

**ಪುತ್ತಿಗೆ (೭೫೩೫):** ತಾಲೂಕು ಕೇಂದ್ರ ಮಂಗಳೂರಿನಿಂದ ೨೨ ಕಿ.ಮೀ. ಈಶಾನ್ಯಕ್ಕೂ, ಹೋಬಳಿಕೇಂದ್ರ ಮೂಡಬಿದ್ರೆಯಿಂದ ಮೂರು ಕಿ.ಮೀ. ಪಶ್ಚಿಮಕ್ಕೂ ಇರುವ ಚಾರಿತ್ರಿಕ ಮಹತ್ವದ ಸ್ಥಳ. ಹಾವುಗಳು ವಾಸಿಸುವ ಪುತ್ತ ಇಲ್ಲವೇ ಹುತ್ತಗಳು ಹೇರಳವಾಗಿ ಇಲ್ಲಿರುವುದರಿಂದ ಆ ಊರಿಗೆ 'ಪುತ್ತಿಗೆ' ಎಂಬ ಹೆಸರು ಬಂತೆಂದು ಹೇಳಲಾಗುತ್ತದೆ. ವಿಜಯನಗರ ಕಾಲದ ಶಾಸನದಲ್ಲೂ 'ಪುತ್ತಿಗೆ'ಎಂದೇ ಇದು ಉಲ್ಲೇಖಿಸಲ್ಪಟ್ಟಿದ್ದು, ಅಲ್ಲಿರುವ ಸೋಮನಾಥೇಶ್ವರ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಮಿಗಿಲಾಗಿ ಸ್ವಲ್ಪ ಕಾಲ ಚೌಟರಸರ ರಾಜಧಾನಿಯೂ ಆಗಿದ್ದ ಈ ಊರಲ್ಲಿ ಅವರ ಕಾಲದಲ್ಲಿ ಅರಮನೆಯೊಂದನ್ನು ನಿರ್ಮಿಸಲಾಗಿತ್ತೆಂದು ತಿಳಿದುಬರುತ್ತದೆ. ಆದರೆ 'ಕಾಯರಮಂಜ ಅರಮನೆ' ಎಂಬ ಹೆಸರಿದ್ದ ಅದಕ್ಕೆ ಕೆಸರುಗಲ್ಲಿಟ್ಟ ಮುಹೂರ್ತ ಅಶುಭವಾಗಿದ್ದರಿಂದ ಅದು ಊರ್ಜಿತಗೊಳ್ಳದೆ ನಾಶವಾಯಿತೆಂಬ ಐತಿಹ್ಯ ಆ ಭಾಗದಲ್ಲಿ ರೂಢಿಯಲ್ಲಿದೆ. ಇಲ್ಲಿರುವ ಸೋಮೇಶ್ವರ ಗುಡಿಯು ಚೌಟರಸರ ನಿರ್ಮಾಣವಾಗಿದೆ. ಆ ಗುಡಿಯ ಮುಂದೆ ಇರುವ ಕೃಷ್ಣದೇವರಾಯನ ಕಾಲಕ್ಕೆ ಸೇರಿದ ೧೫೧೬ರ ಶಾಸನವು ರತ್ನಪ್ಪವೊಡೆಯರು ಮಂಗಳೂರು-ಬಾರಕೂರು ರಾಜ್ಯಗಳನ್ನಾಳುತ್ತಿದ್ದಾಗ, ಭೈರರಸನ ಪುತ್ತಿಗೆ ಸೀಮೆಯ ಧಾಳಿಗೆ ಸಂಬಂಧಿಸಿದಂತೆ ಹೆಗ್ಗಡೆಗಳೀರ್ವರೂ ಪುತ್ತಿಗೆಯ ಸೋಮನಾಥ ದೇವರ ಸನ್ನಿಧಿಯಲ್ಲಿ ತಿರುಮಲರಾಯಚೌಟರಿಗೆ ಬರೆದುಕೊಟ್ಟ ಒಡಂಬಡಿಕೆಯಾಗಿದ್ದು ಗಮನಾರ್ಹವಾಗಿದೆ. ಮೂಡಬಿದ್ರೆಯ ಹೊಸಬಸ್ತಿಯಲ್ಲಿರುವ ೧೫೭೭ರ ಶಿಲಾಶಾಸನದಿಂದ, ಚೌಟರಾಣಿ ಲೋಕಾದೇವಿಯು, ಸೋದರಿ ಪದ್ಮಲದೇವಿಯ ಪುಣ್ಯಾರ್ಥವಾಗಿ, ಗುರುಕುಲ ಬಸ್ತಿಯ ಪಾರ್ಶ್ವನಾಥನ ಸನ್ನಿಧಿಯಲ್ಲಿ ಜೈನಯತಿಗಳ ಆಹಾರದಾನಕ್ಕೆಂದು ಭೂದಾನ ನೀಡಿದ ಅಂಶ ವೇದ್ಯವಾಗುತ್ತದೆ. ಮಿಗಿಲಾಗಿ ಪುತ್ತಿಗೆಯಲ್ಲಿರುವ ಅರಸುಗಳು ಇದನ್ನು ಅಳಿಸಬಾರದೆಂಬ ನಿಷೇದಾರ್ಥಕ ಶಾಪಾಶಯ ಭಾಗವನ್ನೂ ಇದು ಒಳಗೊಂಡಿದೆ. ತೋಡೊಂದರ ಸನಿಹದಲ್ಲೇ ಇರುವ ಮಹತೋಭಾರ ಸೋಮನಾಥೇಶ್ವರ ದೇವಾಲಯದ ಅಧಿದೇವ ಸೋಮನಾಥನು ಚೌಟರಸರ ಆರಾಧ್ಯದೈವವಾಗಿದ್ದು, ಆ ದೇವರ ರಥೋತ್ಸವಕ್ಕೆಂದು ಹಿಂದೆ 'ಭೂಮಂಡಲ ರಥ' ಎಂಬ ಆಕರ್ಷಕವಾದ ತೇರೊಂದಿತ್ತು. ಆದರಿಂದು ಅದು ಜತನಗೊಂಡಿದೆಯಾದರೂ, ಅದರ ಕೆಲವು ಸುಂದರ ಚಿತ್ರಪಟ್ಟಿಕೆಗಳನ್ನು ಈಗ ಆ ದೇವಾಲಯದಲ್ಲಿ ಸಂರಕ್ಷಿಸಿಟ್ಟಿದ್ದಾರೆ. ಅನಂತರದಲ್ಲಿ "ಆಳುಪಲ್ಲಂಕಿ' ಎಂಬ ಬೃಹತ್ತಾದ ನೂತನ ರಥವೊಂದನ್ನು ನಿರ್ಮಿಸಲಾಗಿದೆ. ಮಡದಿಯರೊಡಗೂಡಿದ ಕಾಳ, ಮಹಾಕಾಳ, ನಂದಿ, ಮಹಾನಂದಿ ಎಂಬ ಶಿವಗಣಾಧೀಶ್ವರರು ರಥಪೀಠದ ನಾಲ್ಕು ದಿಕ್ಕಲ್ಲೂ ಪಲ್ಲಕ್ಕಿಯನ್ನು ಹೊತ್ತು ನಿಂತಿರುವ ಭಂಗಿ, ಅದಕ್ಕೆ 'ಆಳುಪಲ್ಲಂಕಿ' ಎಂಬ ಹೆಸರನ್ನು ಅನ್ವರ್ಥಗೊಳಿಸಿದೆ. ಇದನ್ನು ಅಶ್ವತ್ಥಪುರದ ಬಾಬೂರಾಯ ಆಚಾರ್ಯ ಎಂಬುವ ಕಾಷ್ಟಶಿಲ್ಪಿಯು ಸಿದ್ಧಪಡಿಸಿದ್ದು, ಚಿತ್ತಾಕರ್ಷಕವಾಗಿದೆ.

**ಪುತ್ತೂರು (೪೮,೦೭೦) :** ಜಿಲ್ಲಾ ಕೇಂದ್ರ ಮಂಗಳೂರಿನಿಂದ ೫೦ ಕಿ.ಮೀ. ಆಗ್ನೇಯಕ್ಕೆ ಇರುವ ತಾಲೂಕು ಹಾಗೂ ಉಪವಿಭಾಗೀಯ ಕೇಂದ್ರ. ೧೯೨೭ರವರೆಗೆ ಅಂದಿನ ಉಪ್ಪಿನಂಗಡಿ ತಾಲೂಕಿನಲ್ಲೊಂದು ಹೋಬಳಿ ಕೇಂದ್ರವಾಗಿದ್ದ ಪುತ್ತೂರನ್ನು ೧೯೨೭ರಲ್ಲಿ ತಾಲೂಕು ಕೇಂದ್ರವನ್ನಾಗಿ ಮಾಡುವುದರೊಂದಿಗೆ ಉಪ್ಪಿನಂಗಡಿಯು ಹೋಬಳಿ ಕೇಂದ್ರದ ಸ್ಥಾನಕ್ಕಿಳಿಯಿತು. ಅಲ್ಲದೇ ಪ್ರತ್ಯೇಕ ತಾಲೂಕಾಗುವವರೆಗೆ ಸುಳ್ಯವು (೧೯೬೬) ಪುತ್ತೂರು ತಾಲೂಕಿನ ಭಾಗವಾಗಿಯೇ ಇತ್ತು. ಇಂದು ಪುರಸಭೆಯ ಆಡಳಿತಕ್ಕೊಳಪಟ್ಟಿರುವ ಪುತ್ತೂರು 'ಹತ್ತು ಚೋದ್ಯಗಳಿಗೆ ಹೆಸರಾಗಿದ್ದು "ಹತ್ತೂರು ಕೊಟ್ಟರೂ ಪುತ್ತೂರು ಬಿಡೆ" ಎಂಬ ಹೆಗ್ಗಳಿಕೆಗೂ ಹಿಂದೆ ಪಾತ್ರವಾಗಿತ್ತು.

ಸುಮಾರು ೧೦ನೆಯ ಶತಮಾನದಲ್ಲಿ ಪುತ್ತೂರು ರೂಪುಗೊಂಡಿರಬಹುದೆಂಬ ಅಭಿಪ್ರಾಯವಿದ್ದು, ಹೊಸದಾಗಿ ರೂಪಿಸಿದ ಊರು, 'ಪುತ್ತೂರು' ಎಂಬ ಅಭಿಪ್ರಾಯವನ್ನು ವೈ.ಉಮಾನಾಥಶೆಣೈ ವ್ಯಕ್ತಪಡಿಸಿದ್ದಾರೆ. ಆದರೆ ಇಲ್ಲಿಯ ಮಹಾಲಿಂಗೇಶ್ವರ ದೇವಾಲಯದ

ಆವರಣದಲ್ಲಿರುವ ೧೪೩೧ರ ಶಿಲಶಾಸನದಲ್ಲಿ ಪುತ್ತೂರಿನ ಮೊದಲ ಉಲ್ಲೇಖ ಕಂಡು ಬರುತ್ತದೆ. ಅದೇ ದೇವಾಲಯದಲ್ಲಿರುವ ಸುಮಾರು ೧೨ನೆಯ ಶತಮಾನಕ್ಕೆ ಸೇರಿದ್ದೆಂದು ಭಾವಿಸಲಾಗಿರುವ ಶಿಲಾಶಾಸನವೊಂದರಲ್ಲಿ ಮಹಾಲಿಂಗೇಶ್ವರ ದೇವಾಲಯಕ್ಕೆ ಹೊಂದಿಕೊಂಡಂತೆ ಇರುವ ಕೆರೆಯ ಉಲ್ಲೇಖವಿದೆ. ಆ ಕೆರೆಯಲ್ಲಿಳಿದು ಸ್ನಾನ ಮಾಡಿದಲ್ಲಿ, ಗಾಳ–ಬಲೆಗಳನ್ನಿಕ್ಕಿ ಮೀನು ಹಿಡಿದಲ್ಲಿ, ಅರಸನಿಗೆ ತಪ್ಪುದಂಡ ಕೊಡಬೇಕಾಗುತ್ತೆಂಬ ಎಚ್ಚರಿಕೆಯ ಮಾತು ಆ ಶಾಸನದಲ್ಲಿದೆ. ಇದರಿಂದ ಆ ವೇಳೆಗಾಗಲೇ ಇಲ್ಲಿ ಮಹಾಲಿಂಗೇಶ್ವರ ದೇವಾಲಯವಿತ್ತೆಂದು ತರ್ಕಿಸಬಹುದಾಗಿದೆ. ಬಂಗಾಡಿ (ಬೆಳ್ತಂಗಡಿ ತಾ.) ಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯವಾಳುತ್ತಿದ್ದ, ಸಾಮಂತ ಬಂಗರಸರ ಉಪರಾಜಧಾನಿಗಳಲ್ಲಿ 'ಪುತ್ತೂರು' ಕೂಡ ಒಂದಾಗಿದ್ದು, ಅವರ ಅರಮನೆಯೂ ಇಲ್ಲಿತ್ತೆಂಬ ಐತಿಹ್ಯವಿದೆ. ಬಂಗರ ಸ್ಥಾನವಾಗಿದ್ದ ಪುತ್ತೂರನ್ನು ಪಾಂಡ್ಯಪ್ಪನೆಂಬುವನ್ನು ಆಳುತ್ತಿದ್ದ ಅಂಶ, ಪುತ್ತೂರಿನ ೧೪೩೧ರ ಶಾಸನದಲ್ಲಿದ್ದು, ಆ ವೇಳೆಗೆ ಮಂಗಳೂರು ರಾಜ್ಯವನ್ನು ಆಳುತ್ತಿದ್ದ ಅಣ್ಣಪ್ಪೊಡೆಯನು, ಪುತ್ತೂರಿನ ಮಹಾದೇವ ದೇವಾಲಯದ ಪೂಜಾವಿಧಿಗಳಿಗೆಂದು ಭೂದಾನ ನೀಡಿದ ಅಂಶವು ವೇದ್ಯವಾಗುತ್ತದೆ. ಅಲ್ಲದೆ ಕ್ರಿಯಾಶಕ್ತಿದೇವರು ಪುತ್ತೂರಿಗೆ ಭೇಟಿ ನೀಡಿದ್ದ ಅಂಶವೂ ಇದರಲ್ಲಿ ದಾಖಲಾಗಿದೆ. ಅನಂತರದಲ್ಲಿ ಪುತ್ತೂರು ಕೊಡಗು ಅರಸರ ಪ್ರಭುತ್ವಕ್ಕೂ ಒಳಪಟ್ಟಿತ್ತು.

ಊರ ನಡುವೆ ಪುತ್ತೂರು–ಮಂಗಳೂರು ರಸ್ತೆಯಂಚಲ್ಲೇ ಇರುವ ಮಹಾಲಿಂಗೇಶ್ವರ ದೇವಾಲಯವು ಗಜಪೃಷ್ಠಾಕಾರದ ರಚನೆಯಾಗಿದ್ದು, ವಿಶಾಲವೂ ಆಕರ್ಷಕವೂ ಆಗಿದೆ. ಸಮೀಪದಲ್ಲಿರುವ ಬೃಹತ್ತಾದ ಪುಷ್ಕರಣಿಯೇ ಮೇಲೆ ಹೇಳಿರುವ ಶಾಸನೋಕ್ತ ಕೆರೆಯಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಹೊರಗೆ ಪರಿವಾರ ದೇವತೆಗಳಾದ ಪಾರ್ವತಿ, ಸುಬ್ರಹ್ಮಣ್ಯ, ಎಡಮುರಿ ಗಣೇಶ, ಶಾಸ್ತಾವು ಮುಂತಾದವುಗಳಿವೆ. ಅಲ್ಲದೇ ಕ್ಷೇತ್ರರಕ್ಷಕ ದೈವಗಳಾಗಿ ಪಿಲಿಭೂತ, ಪಂಜುರ್ಲಿ, ಅಂಗಣತ್ತಾಯ, ರಕ್ತೇಶ್ವರಿಗಳ ಸ್ಥಾನವೂ ಇದೆ. ದೇವಾಲಯದ ಭಿತ್ತಿಯ ಮೇಲೆ ವರ್ಣರಂಜಿತ ದೇವತಾ ಚಿತ್ರಗಳಿವೆ. ಹತ್ತು ದಿನಗಳ ಕಾಲ ನಡೆಯುವ ಈ ದೇವರ ವಾರ್ಷಿಕ ಜಾತ್ರೆಯು ಅತ್ಯಂತ ವೈಭವದಿಂದ ಕೂಡಿರುತ್ತದೆ. ಈ ದೇವರ ರಥೋತ್ಸವಕ್ಕೆ ಹಿಂದಿನ ದಿನ ರಾತ್ರಿ ಸಮೀಪದ ಬಲ್ನಾಡಿನಿಂದ ಭಂಡಾರಪಲ್ಲಕ್ಕಿಯಲ್ಲಿ ಆಗಮಿಸುವ ಉಳ್ಳಾಲ್ತಿಯ ಕಿರುವಾಳು ಆಕರ್ಷಕವಾಗಿರುತ್ತದೆ. ಅಂದು ಬೆಳಗಿನ ಜಾವ ಪುಷ್ಕರಣಿಯಲ್ಲಿ ಮಹಾಲಿಂಗೇಶ್ವರನ ತೆಪ್ಪೋತ್ಸವವಿರುತ್ತದೆ. ರಥೋತ್ಸವದಂದು ಬೆಳಗ್ಗೆ ನಡೆಯುವ ದರ್ಶನಬಲಿಯಲ್ಲಿ ಉತ್ಸವ ಮೂರ್ತಿಯನ್ನು ಹೊತ್ತವರು ಕೈಬೀಸುತ್ತಾ ಲೀಲಾಜಾಲವಾಗಿ ನಡೆದಾಡುತ್ತಾ, ವಾದ್ಯದ ಲಯಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾರೆ. ಅಂದು ಸಂಜೆ ಬಲ್ನಾಡಿನ ಉಳ್ಳಾಲ್ತಿಯ ನೇತೃತ್ವದಲ್ಲಿ ಜರುಗುವ ಮಹಾಲಿಂಗೇಶ್ವರನ ರಥೋತ್ಸವವು ಅತ್ಯಂತ ವಿಜೃಂಭಣೆಯಿಂದ ಕೂಡಿರುತ್ತದೆ. ಆ ಸಂದರ್ಭದಲ್ಲಿ ನಡೆಯುವ ಬೆಡಿ, ಮಾರಿಬೆಡಿ ಸಿಡಿಮದ್ದಿನ ಆರ್ಭಟಗಳ ಸಿಡಿತ ಜನಸಾಗರದ ಎದೆಯನ್ನಲುಗಿಸುತ್ತದೆ. ಆದರೂ ಮುಗಿಲಲ್ಲಿ ಮೂಡುವ ಕಾಂತಿಮಯ ವರ್ಣ ಚಿತ್ತಾರಗಳು ಭಕ್ತರ ಮನಸೂರೆಗೊಳ್ಳುತ್ತಿದ್ದು, 'ಪುತ್ತೂರಿನ ಬೆಡಿ' ವಿಶೇಷ ಖ್ಯಾತಿಯನ್ನು ಪಡೆದಿದೆ. ರಥೋತ್ಸವವಾಗುತ್ತಿದ್ದಂತೆಯೇ ಉಳ್ಳಾಲ್ತಿ ದೇವಿಯ ಭಂಡಾರವನ್ನು ಬಲ್ನಾಡಿಗೆ ಬೀಳ್ಕೊಡಲಾಗುತ್ತದೆ. ಅಂದು ಸಂಜೆಯೇ ಉತ್ಸವ ಮೂರ್ತಿಯನ್ನು ತಲೆಯಲ್ಲಿ ಹೊತ್ತ ಬ್ರಾಹ್ಮಣರು ೧೨ ಕಿ.ಮೀ. ದೂರದ ಕುಮಾರಧಾರಾ ತೀರದ ಶಾಂತಿಗೋಡು ಗ್ರಾಮದ ವೀರಮಂಗಲದಲ್ಲಿ 'ಆರಾಟ' (ಅವಭೃತೋತ್ಸವ) ನಡೆಸಿದ ನಂತರ ಎಲ್ಲಿಯೂ ದೇವರನ್ನು ಇಳಿಸದೆ ಓಡೋಡಿ ಬಂದು ಮಾರನೆಯ ದಿನ ಮುಂಜಾವಿನ ವೇಳೆಗೆ ಮೂಲಸ್ಥಾನವನ್ನು ಸೇರುವುದರೊಂದಿಗೆ ಜಾತ್ರೆಯು ಮುಕ್ತಾಯವಾಗುತ್ತದೆ. ಆ ಸಂದರ್ಭದಲ್ಲಿ ಜಾತ್ರೆಯ ಬಯಲಿನಲ್ಲಿ ನೆರೆಯುವ ಜಾತ್ರೆಯಂಗಡಿಗಳ ವೈವಿಧ್ಯತೆ, ಸರ್ಕಸ್ಸು, ಯಕ್ಷಗಾನದ ಡೇರೆ, ಯಕ್ಷಿಣಿ ತಂಡ, ಐಸ್‌ಕ್ರೀಂ ಅಂಗಡಿ ಸಾಲು, ಬಳೆ–ಭಂಡಾರ ಸಾಲುಗಳು ಈ ಜಾತ್ರೆಯ ಇನ್ನೊಂದು ವಿಶೇಷವಾಗಿದೆ. ಪುತ್ತೂರಿನಲ್ಲಿ ಗಣೇಶನ ಹಬ್ಬದ ಸಂದರ್ಭದಲ್ಲಿ ನಡೆಯುವ ಏಳು ದಿನಗಳ ಸಂಭ್ರಮದ ಆಚರಣೆ ಹಾಗೂ ದಸರೆಯ ಮೆರವಣಿಗೆಗಳು ಉಲ್ಲೇಖಾರ್ಹವೇ ಸರಿ. ಪುತ್ತೂರಿನ ಮಹಾಲಿಂಗೇಶ್ವರ ಜಾತ್ರೆಯ ಬೆನ್ನಲ್ಲೇ ಬಲ್ನಾಡಿನಲ್ಲಿ ಜರುಗುವ ಉಳ್ಳಾಲ್ತಿ ದೈವದ ಜಾತ್ರೆಗೆ ಹೆಣ್ಣುಮಕ್ಕಳ ನಿಷೇಧವಿದ್ದು, ಆ ಜಾತ್ರೆಯಲ್ಲಿ ಸ್ತ್ರೀಪುರುಷರ ಗೌಜುಗದ್ದಲ ಕಡಿಮೆ, ಹೊಟೇಲು–ಅಂಗಡಿ–ಮನರಂಜನೆ ಎಲ್ಲವೂ ಇಲ್ಲಿ ನಿಷಿದ್ಧ. ಆ ಸಂದರ್ಭದಲ್ಲಿ ದಂಡನಾಯಕ ಉಳ್ಳಾಲ್ತಿ, ಕಾಳರಾಹು ಮತ್ತು ಮಲರಾಯ ಎಂಬ ದೈವಗಳಿಗೆ ನೇಮೋತ್ಸವವಾಗುತ್ತದೆ. ಅದರಲ್ಲೂ ಉಳ್ಳಾಲ್ತಿಯ ನೇಮವು ವಿಶಿಷ್ಟವಾಗಿರುತ್ತದೆ. ಪುತ್ತೂರಿನಲ್ಲಿ ವೆಂಕಟರಮಣ, ಭವಾನಿಶಂಕರ, ಮಹಾಮಾಯಿ, ರಾಧಾಕೃಷ್ಣ ಮುಂತಾದ ದೇವಾಲಯಗಳಿವೆ. ಅಲ್ಲದೇ ಜೈನರ ಶಾಂತಿನಾಥ ಬಸದಿ, ಮುಸ್ಲಿಮರ ಮಸೀದಿ–ದರ್ಗಾ ಹಾಗೂ ಕ್ರೈಸ್ತರ ಮಾಯಿದೇವನ ಇಗರ್ಜಿಗಳಿವೆ. ಇಲ್ಲಿ ೧೯೦೯ರಲ್ಲಿ ಆರಂಭಗೊಂಡ ಗ್ರಾಮೀಣ ಸಹಕಾರ ಸಂಘವು ಜಿಲ್ಲೆಯ ಮೊದಲ ಸಹಕಾರ ಸಂಘವಾಗಿರುವುದೊಂದು ವಿಶೇಷವಾಗಿದೆ. **ಬೀರಮಲೆ** : ಪುತ್ತೂರಿಗೆ ಸಮೀಪದಲ್ಲಿರುವ ಬೀರಮಲೆಯು ಚಾರಣಾಸಕ್ತರಿಗೆ ಪ್ರಶಸ್ತವಾಗಿದ್ದು, ಗಿರಿನೆತ್ತಿಯಲ್ಲಿ ವಿಶ್ವಕರ್ಮ ದೇವಾಲಯವಿದೆ. ಇದೊಂದು ಇತಿಹಾಸಪೂರ್ವ ಕಾಲದ ಮಾನವನ ನೆಲೆಯಾಗಿತ್ತೆಂಬ ಅಂಶವನ್ನು ಸೂಚಿಸುವ ಶಿಲಾಯುಗ ಸಂಸ್ಕೃತಿಗೆ ಸೇರಿದ ಕುರುಹುಗಳಿದ್ದು, ಶಿಲಾಯುಧಗಳು ಪತ್ತೆಯಾಗಿರುವ ಅಂಶವನ್ನು ವಿದ್ವಾಂಸರು ಈಗಾಗಲೇ ವರದಿ ಮಾಡಿದ್ದಾರೆ. **ಕಾರಂತರ ಬಾಲವನ:** ಶಿವರಾಮಕಾರಂತರು ಪುತ್ತೂರಿನಲ್ಲಿದ್ದಾಗ ವಾಸಿಸುತ್ತಿದ್ದ ಮನೆಯೇ ಬಾಲವನ. ಅಲ್ಲಿ ಅವರು ಸುಮಾರು ೪೦ ವರ್ಷ ನೆಲೆಸಿದ್ದರು.

ತತ್ಪರಿಣಾಮವಾಗಿ ಅದೊಂದು ಸಾಂಸ್ಕೃತಿಕ ಕೇಂದ್ರವಾಗಿ ರೂಪುಗೊಂಡಿತು. ಮಕ್ಕಳನ್ನು ಆಕರ್ಷಿಸುವ ಬಾಲವನವಾಯಿತು. ಮುಂದೆ ೧೯೭೩ರಲ್ಲಿ ಅವರು ಸಾಲಿಗ್ರಾಮಕ್ಕೆ ತೆರಳಿದ ಮೇಲೆ ಸಾರ್ವಜನಿಕರ ಒತ್ತಾಯಕ್ಕೆ ಓಗೊಟ್ಟು ಸರ್ಕಾರ ಅದನ್ನು ರಾಷ್ಟ್ರೀಯ ಸ್ಮಾರಕವನ್ನಾಗಿಸಲು ಯೋಚಿಸಿತ್ತು. ತತ್ಪರಿಣಾಮವಾಗಿ ಸರ್ಕಾರವು ಅದನ್ನು ಖರೀದಿಸಿದ್ದರಿಂದ ನಾಟ್ಯಶಾಲೆ, ಪಕ್ಷಿಸಂಗ್ರಹಾಲಯ, ಮಕ್ಕಳ ಗ್ರಂಥಾಲಯ, ಸಸ್ಯೋದ್ಯಾನ, ಸಭಾಭವನಗಳು ಅಸ್ತಿತ್ವಕ್ಕೆ ಬಂದವು. ಶಿಬಿರ, ಕಮ್ಮಟ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವ ಕೇಂದ್ರವಾಯಿತು. ಇಂದು ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಯುತ್ತಿದೆ. **ಕ್ಯಾಂಪ್ಕೊ** : ಪುತ್ತೂರಿನ ಕೃಷಿ ಸಹಕಾರಿ ಸಂಸ್ಥೆಗಳಲ್ಲಿ ಕೇಂದ್ರೀಯ ಅಡಿಕೆ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಸ್ಥೆಯನ್ನು ಕರ್ನಾಟಕ-ಕೇರಳ ಸರ್ಕಾರಗಳು ಸಂಯುಕ್ತವಾಗಿ ಹುಟ್ಟುಹಾಕಿದ್ದು, ಅಡಿಕೆಗೆ ಸ್ಥಿರ ಮಾರುಕಟ್ಟೆಯನ್ನು ಒದಗಿಸುವ ಉದ್ದೇಶ ಅದರ ಹಿಂದಿತ್ತು. ಮುಂದೆ ಕೋಕೋ ಬೆಳೆಯನ್ನು ಅಭಿವೃದ್ಧಿಪಡಿಸುವ ಹಿನ್ನೆಲೆಯಲ್ಲಿ ಚಾಕಲೆಟು ಕಾರ್ಖಾನೆಯನ್ನು ೧೯೮೬ರಲ್ಲಿ ಈ ಸಂಸ್ಥೆಯು ಆರಂಭಿಸಿತು. ಆಧುನಿಕ ಯಂತ್ರಗಳನ್ನು ಬಳಸಿ, ಉತ್ತಮ ಗುಣಮಟ್ಟದ ವಿವಿಧ ಬ್ರಾಂಡ್‌ನ ಚಾಕಲೇಟುಗಳನ್ನು ಇಲ್ಲಿ ತಯಾರಿಸಲಾಗುತ್ತಿದೆ. **ಬೆಂದ್ರ್‌ತೀರ್ಥ:** ತಾಲೂಕು ಕೇಂದ್ರ ಪುತ್ತೂರಿನಿಂದ ೧೨ ಕಿ.ಮೀ. ಅಂತರದ ಇರ್ದೆ ಗ್ರಾಮದಿಂದ ಒಂದು ಕಿ.ಮೀ. ದೂರದಲ್ಲಿ ಹೊಲಗದ್ದೆಗಳ ನಡುವೆ ಇರುವ ಬಿಸಿನೀರಿನ ತೀರ್ಥಕ್ಕೆ ಮುರಕಲ್ಲಿನ ಪ್ರಾಕಾರವನ್ನು ರಚಿಸಿ, ಮೆಟ್ಟಿಲುಗಳನ್ನು ಒದಗಿಸಿ ಅದನ್ನು ಪುಷ್ಕರಣಿಯಂತೆ ರೂಪಿಸಿ ಸಂರಕ್ಷಿಸಲಾಗಿದೆ. ತುಳುಭಾಷೆಯಲ್ಲಿ ಬೆಂದ್ರು ಎಂದರೆ 'ಬಿಸಿನೀರು' ಎಂದರ್ಥ. ಅದರಿಂದಾಗಿ ಇದಕ್ಕೆ ಬೆಂದ್ರ್‌ತೀರ್ಥ ಎಂಬ ಹೆಸರು ಬಂದಿದೆ. ಈ ಬಿಸಿನೀರಿನ ಬುಗ್ಗೆಯನ್ನು ೧೮೮೨ರಷ್ಟು ಹಿಂದೆಯೇ ಓಲ್ಡ್ ಹ್ಯಾಂ ಎಂಬ ವಿಜ್ಞಾನಿಯು ಪತ್ತೆ ಮಾಡಿ, ತನ್ನ **"ಥರ್ಮಲ್ ಸ್ಪ್ರಿಂಗ್ಸ್ ಆಫ್ ಇಂಡಿಯಾ"** ಎಂಬ ಕೃತಿಯಲ್ಲಿ ದಾಖಲಿಸಿರುವುದು ಗಮನಾರ್ಹ. ಋತುಮಾನವನ್ನನುಸರಿಸಿ ಅದು ದಿನನಿತ್ಯ ೧೩೬೫ರಿಂದ ೪೬೪೦ ಲೀಟರನಷ್ಟು ಬಿಸಿನೀರನ್ನು ಚಿಮ್ಮಿಸುತ್ತದೆಂದು ಅಂದಾಜು ಮಾಡಲಾಗಿದೆ. ಸ್ಥಳೀಯವಾಗಿ ಅದಕ್ಕೆ **'ತೀರ್ಥದ ಕೆರೆ'** ಎಂಬ ಹೆಸರಿದ್ದು, ಸೋಣ(ಶ್ರಾವಣ) ಅಮಾವಾಸ್ಯೆಯಂದು ಪುತ್ತೂರಿನ ಸುತ್ತಮುತ್ತಲಿನ ಜನ ತೀರ್ಥಸ್ನಾನಕ್ಕೆ ಬರುತ್ತಾರೆ. ಆಗ ಹತ್ತಿರದಲ್ಲೇ ಇರುವ ವಿಷ್ಣುವಿನ ಗುಡಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಈ ನೀರಿನಲ್ಲಿ ಜಳಕ ಮಾಡಿದರೆ ರೋಗರುಜಿನ ವಾಸಿಯಾಗುತ್ತದೆಂದು ನಂಬಲಾಗುತ್ತಿತ್ತು. ಆದರೆ ಇಂದು ಇದು ಸಂಪೂರ್ಣ ಬತ್ತಿಹೋಗಿದೆ. ಬರಿದಾಗಿರುವ ಕಲ್ಯಾಣಿ ಅಷ್ಟೇ ಉಳಿದಿದೆ. ಇದಕ್ಕೆ ಅದರ ಬದಿಯಲ್ಲಿರುವ ಕೊಳವೆ ಬಾವಿ ಕಾರಣವಾಗಿದ್ದು, ಅದರಲ್ಲಿ ಸದಾ ಬಿಸಿ ನೀರು ಬರುತ್ತದೆ. ಈ ಬಿಸಿ ನೀರ ಬುಗ್ಗೆಯನ್ನು ರಕ್ಷಿಸಬೇಕೆಂಬ ಸ್ಥಳೀಯ ಒತ್ತಾಯವಿದೆ.

**ಪೊಳಲಿ** : ತಾಲೂಕು ಕೇಂದ್ರ ಬಂಟ್ವಾಳದಿಂದ ೧೨ ಕಿ.ಮೀ. ವಾಯವ್ಯಕ್ಕಾದಂತೆ **ಕರಿಯಂಗಳ (೪,೪೬೪)**ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿರುವ ಆಲಯಾಶ್ರಿತ ಉಪಗ್ರಾಮ. ಫಲ್ಗುಣಿ (ಗುರುಪುರ) ನದಿಯ ಸಮೀಪದಲ್ಲಿರುವ ಈ ಸ್ಥಳದಲ್ಲಿ ಆಲುಪರಸ ರಣಸಾಗರನ ಕಾಲದ ಶಾಸನವೂ ಪತ್ತೆಯಾಗಿವೆ. ಸುಮಾರು ಎಂಟನೆಯ ಶತಮಾನಕ್ಕೆ ಸೇರಿದ ಇದೊಂದು ದತ್ತಿ ಶಾಸನವಾಗಿದ್ದು, ನಾಗಮ್ಮನೆಂಬ ವೀರನಿಗೆ ಉಂಬಳಿ ನೀಡಿದ ಅಂಶವನ್ನು ದಾಖಲಿಸಿದೆ. ಇಲ್ಲಿಯ ದುರ್ಗಾಪರಮೇಶ್ವರಿ ಗುಡಿಯ ಧ್ವಜಸ್ತಂಭದ ಬಳಿ ಇರುವ ಕುಲಶೇಖರ ಪಾಂಡ್ಯಪಟ್ಟದೇವರ ಕಾಲದ ಶಾಸನದಲ್ಲಿ, ಬೀರವಡಿ ಮೇಳವಾಡಿಗಳ ಉಲ್ಲೇಖವಿದ್ದು, ಶಾಸನ ಸವೆದಿರುವುದರಿಂದ ವಿಷಯ ಸ್ಪಷ್ಟವಾಗುವುದಿಲ್ಲ. ಇಲ್ಲಿಯ ಬಡಕಬೈಲು ಪ್ರದೇಶದಲ್ಲಿರುವ ಶಾಸನವು ಪಾಂಡ್ಯ ಜಯಸಿಂಗರಸ(೧೩೦೪)ನ ಕಾಲಕ್ಕೆ ಸೇರಿದ್ದು, 'ಪಂಡಿಕಾರು' ಎಂಬ ಭೂಮಿಯನ್ನು ಹೊಳಲಭಟ್ಟಾರಕಿಗೆ ದಾನ ಬಿಟ್ಟ ಅಂಶವನ್ನು ಒಳಗೊಂಡಿದೆ. ಸುಮಾರು ೭-೮ನೆಯ ಶತಮಾನಕ್ಕೆ ಸೇರಿದ ಅಳುಪರ ಕಾಲದ ಪೊಳಲಿ ಶಾಸನದಲ್ಲಿ ಇಲ್ಲಿ ಆರಾಧಿಸಲ್ಪಡುತ್ತಿದ್ದ ಸಪ್ತಮಾತೃಕೆಯರ ಉಲ್ಲೇಖವಿರುವ ಅಂಶವನ್ನು ಕೆ.ವಿ. ರಮೇಶ್ ಸೇರಿದಂತೆ ಅನೇಕ ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಈ ಶಾಸನಗಳಿಂದ ಬಹುಹಿಂದಿನಿಂದಲೂ ಈ ಊರು 'ಪೊಳಲು/ ಹೊಳಲು' ಎಂಬ ಹೆಸರನ್ನೇ ಹೊಂದಿದ್ದು, ಪೊಳಲಿದೇವಿಯು ಹೊಳಲಿ ಪಟ್ಟಣದ ಅಧಿದೇವತೆಯಾಗಿದ್ದ ಅಂಶ ವೇದ್ಯವಾಗುತ್ತದೆ. ಪೊಳಲಿಯ ಅಮ್ಮುಂಜೆಗುತ್ತಿನ ಹೊಲದಲ್ಲಿರುವ ೧೪೬೫ರ ಶಾಸನವನ್ನು ಮಲ್ಲಿಕಾರ್ಜುನನ ಆಡಳಿತಾವಧಿಯಲ್ಲಿ ನೀಡಲಾಗಿದ್ದು, ವಿಠರಸನು ಮಂಗಳೂರು ರಾಜ್ಯವನ್ನು ಆಳುತ್ತಿದ್ದಾಗ, ಪುತ್ತಿಗೆಯ ಚೌಟ ಸೋದರರು ಪೊಳಲಿದೇವಿಯ ಶ್ರೀಗಂಧ-ನಂದಾದೀಪ ಸೇವೆಗಳಿಗೆಂದು ವರ್ಷಂಪ್ರತಿ ೧೦ ಸಣ್ಣ ಪ್ರತಾಪ ಗದ್ಯಾಣವನ್ನು ಆಂಮುಳಿಂಜದಲ್ಲಿ ಬರ್ಮಕ್ಕನಾಯಕಿ(ಅರ್ಚಕಿ?)ಯರಿಗೆ ನೀಡಿದ್ದನ್ನು ಅದು ದಾಖಲಿಸಿದೆ. ಅಲ್ಲದೇ ಈ ಶಾಸನವನ್ನು ಹಾಳು ಮಾಡಿದವರು ಪೊಳಲಿ ದೇವಿಯ ಪ್ರತಿಮೆಯನ್ನು ಭಿನ್ನಮಾಡಿದ ದೋಷಕ್ಕೆ ತುತ್ತಾಗುವರೆಂಬ ಶಾಪಾಶಯವನ್ನೂ ವಿಧಿಸುತ್ತದೆ. ಚೌಟರಸರ ಕಾಲದಲ್ಲಿ ಇದು ಮಳಲಿ-೧೦೦ ಸೀಮೆ ಎಂಬ ೧೫ ಗ್ರಾಮಗಳ ಒಕ್ಕೂಟದಲ್ಲಿ ಒಂದಾಗಿತ್ತು. ಪೊಳಲಿಗೆ ಸಮೀಪದಲ್ಲಿರುವ **ಮಳಲಿ**ಯೇ, ಮಳಲಿ ಬಲ್ಲಾಳರೆಂಬ ಜೈನ ಸಾಮಂತರ ರಾಜಧಾನಿಯಾಗಿದ್ದು, ಚೌಟರಸರ ಸಾಮಂತರಾಗಿ ಅವರು ರಾಜ್ಯಭಾರ ಮಾಡುತ್ತಿದ್ದು, ಅವರ ಕಾಲದ ಅರಸರಬೀಡು ಹಾಗೂ ಅನಂತಸ್ವಾಮಿಯ ಬಸದಿಗಳು ಈಗಲೂ ಮಳಲಿಯಲ್ಲಿವೆ. ಪೊಳಲಿಯ ದೇವಾಲಯದಲ್ಲೇ ಇರುವ ೧೩೦೪ರ ಶಾಸನದಲ್ಲಿ ಪ್ರಸ್ತಾಪಗೊಂಡಿರುವ ಹೊಳಲ ದೇವಿಯ ದೇವಾಲಯವೇ ಈ ಆಲಯವಾಗಿದೆ.

ಪುಳಿನಪುರ, ಪುನ್ನಗರ, ಪೊನ್ನುನಗರ, ಹೊಳಲು, ಪೊಳಲು, ಅಂಬಾಕ್ಷೇತ್ರ ಎಂದೆಲ್ಲ ಉಲ್ಲೇಖಿತಗೊಂಡಿರುವ ಪೊಳಲಿಯನ್ನು ತುಳುವಿನಲ್ಲಿ ಪುರಾಲ್ ಎಂದು ಕರೆಯುತ್ತಾರೆ. ಪೊಳಲಿಯೇ ಪುಳಿನಪುರವಾಗಿ ಶೋಭಿಸುತ್ತಿದ್ದು, ೧೪೪೬ರ ಫಲ್ಗುಣಿ ಮಹಾಪೂರದಲ್ಲಿ ಪಟ್ಟಣವೆಲ್ಲ ಕೊಚ್ಚಿಹೋದರೂ ಗುಡಿಯೊಂದನ್ನು ಮಾತ್ರ ಭಕ್ತರು ಸಂರಕ್ಷಿಸಿಕೊಂಡು ಬಂದಿರಬಹುದೆಂದು ಪೊಳಲಿ ಶಂಕರನಾರಾಯಣಶಾಸ್ತ್ರಿಗಳು ದಾಖಲಿಸಿದ್ದಾರೆ. ಪೊಳಲಿ ಪರಿಸರದಲ್ಲಿ ಪುರಾತನ ಕಟ್ಟಡಗಳ ಅವಶೇಷಗಳನ್ನಿಂದಿಗೂ ಗುರುತಿಸಬಹುದಾಗಿದೆ.

ರಾಜರಾಜೇಶ್ವರಿ ದೇವಾಲಯವು ಪೊಳಲಿಯ ವಿಶೇಷ ಆಕರ್ಷಣೆಯಾಗಿದೆ. ಕಾಲದುದ್ದಕ್ಕೂ ಜೀರ್ಣೋದ್ಧಾರಗೊಂಡು ವಿಸ್ತಾರವಾಗಿ ಬೆಳೆದಿರುವ ಈ ಗುಡಿಯು ಭವ್ಯವಾಗಿದ್ದು, ನಯನ ಮನೋಹರವಾಗಿದೆ. ದೇವಾಲಯದ ಛಾವಣಿಗೆ ತಾಮ್ರದ ತಗಡುಗಳನ್ನು ಹೊಂದಿಸಲಾಗಿದೆ. ಗರ್ಭಗೃಹದಲ್ಲಿರುವ ಸುಮಾರು ಒಂಭತ್ತು ಅಡಿ ಎತ್ತರದ ರಾಜರಾಜೇಶ್ವರಿಯ ಪ್ರತಿಮೆಯು ವರದಾಭಯಹಸ್ತ ಮುದ್ರಾಂಕಿತ ಅಸೀನ ಭಂಗಿಯಲ್ಲಿದ್ದು, ಜೊತೆಗೆ ಗಣಪತಿ, ಸುಬ್ರಹ್ಮಣ್ಯ, ರುದ್ರ, ಭದ್ರಕಾಳಿ, ಮುಂತಾದ ಪರಿವಾರ ದೇವತಾ ಮೂರ್ತಿಗಳಿವೆ. ಅವೆಲ್ಲವೂ ಜೇಡಿಮಣ್ಣಿನಿಂದ ಮಾಡಿದ, ರಕ್ತವರ್ಣದಿಂದ ಕೂಡಿದ ಮೃಣ್ಮಯ ದ್ವಿಬಾಹು ಬಿಂಬಗಳಾಗಿವೆ. ಅವುಗಳಿಗೆ ೧೨ ವರ್ಷಗಳಿಗೊಮ್ಮೆ ಲೇಪಾಷ್ಟಬಂಧವೆಂದು ಹೇಳುವ, ಮುಕ್ಕಾದುದನ್ನು ಸರಿಪಡಿಸಿ ಬಣ್ಣಕೊಡುವ ಧಾರ್ಮಿಕ ಕ್ರಿಯೆಯು ಬ್ರಹ್ಮಕಳಸ ಸಹಿತವಾಗಿ ನೆರವೇರುತ್ತದೆ. ಆ ದೇವರುಗಳಿಗೆ ವಸ್ತ್ರಾಭರಣ–ಕುಸುಮಗಳಿಂದ ಅಲಂಕರಿಸಬಹುದೇ ಹೊರತು ನೀರನ್ನು ತಗುಲಿಸುವಂತಿಲ್ಲ. ಜಲಾಭಿಷೇಕಕ್ಕೆಂದೇ ಪ್ರತ್ಯೇಕ ಕಂಚಿನ ಮೂರ್ತಿಗಳಿವೆ. ಕ್ಷೇತ್ರದ ಅಧಿದೇವತೆ ಇವಳಾದರೂ, ಮಹಾರಥೋತ್ಸವದಂತಹ ಉತ್ಸವಗಳೆಲ್ಲ ಸುಬ್ರಹ್ಮಣ್ಯ ದೇವರಿಗೆ ನಡೆಯುವುದು ಅಲ್ಲಿನ ವೈಶಿಷ್ಟ್ಯ. ಗುಡಿಯ ಹೊರಪೌಳಿಯಲ್ಲಿ ಚತುರ್ಭುಜೆ ದುರ್ಗಾಪರಮೇಶ್ವರಿಯ ಪ್ರಾಚೀನ ಶಿಲಾಮೂರ್ತಿಯಿದ್ದು, ಮೃಣ್ಮಯ ಪ್ರತಿಮೆಗಳ ನಿರ್ಮಾಣಕ್ಕೆ ಮೊದಲು ಈ ಶಿಲಾಮೂರ್ತಿ ಪೂಜೆಗೊಳ್ಳುತ್ತಿತ್ತೆಂದು ಹೇಳಲಾಗುತ್ತದೆ. ಇಬ್ನಾವ ಮಸೂದಿ (೧೧೭೫), ಇಟಲಿಯ ನಿಕೊಲೋಕಂಟಿ (೧೪೨೦) ಹಾಗೂ ಅಬ್ದುಲ ರಝಾಕ್ (೧೪೪೨) ಈ ದೇವಾಲಯದ ವೈಶಿಷ್ಟ್ಯವನ್ನು ದಾಖಲಿಸಿದ್ದಾರೆ. ಈ ದೇವಾಲಯದ ಚಿನ್ನಬೆಳ್ಳಿಯ ತಗಡುಗಳು, ದೇವಿಯ ಬಿಂಬ, ಪರಿವಾರ ದೇವತಾ ಪ್ರತಿಮೆಗಳ ಬಗ್ಗೆ ಅವರೆಲ್ಲ ವರ್ಣಿಸಿದ್ದಾರೆ. ಇಡೀ ದೇವಾಲಯವು ಕಂಚಿನಲ್ಲಿ ಎರಕ ಹೊಯ್ದಂತಿದ್ದು, ದೇವಿಯ ಶಿಲ್ಪವು ಚಿನ್ನದಿಂದ ಮಾಡಿದ ಮಾನವಾಕಾರದ ಬೃಹತ್ ವಿಗ್ರಹವಾಗಿದ್ದು, ಕಣ್ಣುಗಳಿಗೆ ಮಾಣಿಕ್ಯವನ್ನು ಹೊಂದಿಸಿದ್ದ ಈ ಪ್ರತಿಮೆಯು ಕಲಾತ್ಮಕವಾಗಿತ್ತೆಂದು ಉತ್ಪ್ರೇಕ್ಷೆಯಿಂದ ವರ್ಣಿಸಿರುವ ನಿಕೊಲೋಕಂಟಿ, ಅಲ್ಲಿದ್ದ ರಾಜರ ಪ್ರಾಚೀನ ಅರಮನೆಗಳು ಸುಂದರವಾಗಿದ್ದ ಅಂಶವನ್ನು ದಾಖಲಿಸಿರುವುದು ಗಮನಾರ್ಹವಾಗಿದೆ. ಆದರೆ ಇಂದು ಅಲ್ಲಿ ಆರಾಧಿಸಲ್ಪಡುತ್ತಿರುವ ದೇವಿಶಿಲ್ಪವು ಮಣ್ಣಿನ ಮೂರ್ತಿಯಾಗಿರುವುದು ಉಲ್ಲೇಖಾರ್ಹವಾಗಿದೆ. ಈ ಕ್ಷೇತ್ರವನ್ನು ಕೆಳದಿಯ ರಾಣಿ ಚೆನ್ನಮ್ಮಾಜಿಯು ೧೬೮೬ರಲ್ಲಿ ಸಂದರ್ಶಿಸಿ ದೇವಿಯ ದರ್ಶನ ಪಡೆದು ಚೆಂಡಾಟದ ಅವಧಿಯನ್ನು ಮೂರರಿಂದ ಐದು ದಿನಕ್ಕೇರಿಸಿ ದತ್ತಿ ನೀಡಿದಳೆಂದು ಹೇಳಲಾಗುತ್ತದೆ. ಪೊಳಲಿಯಲ್ಲಿರುವ ಪೂಜಾವಸ್ತುಗಳಲ್ಲೊಂದಾದ 'ಉಪ್ಪರ ಸತ್ತಿಗೆ' ಎಂಬ ಧ್ವಜವು ಹೈದರಾಲಿಯ ಮೂಲಕ ಪೊಳಲಿಯನ್ನು ಪ್ರವೇಶಿಸಿತೆಂದು ತಿಳಿದುಬರುತ್ತದೆ. ಅಲ್ಲದೆ ಹೈದರಾಲಿಯು ೧೭೬೫ರ ಪೊಳಲಿ ಚೆಂಡಾಟವನ್ನು ವೀಕ್ಷಿಸಿ ಚೆಂಡಾಡಿದ ಗಂಡುಗಲಿಗಳಿಗೆ ಇನಾಮು ಕೊಟ್ಟನೆಂಬ ಐತಿಹ್ಯವೂ ಇದೆ.

ಈ ದೇವಿಯ ಉತ್ಸವ ಆರಾಧನೆಗಳು ವರ್ಷದುದ್ದಕ್ಕೂ ಜರುಗುತ್ತವೆ. ಆದರೆ ಈ ಪರ್ವಗಳಿಗೆ ಕಿರೀಟವಿಟ್ಟಂತೆ ಒಂದು ತಿಂಗಳು ನಡೆಯುವ, 'ವಾರ್ಷಿಕ ಮಾಸೋತ್ಸವ' ಎಂದೆನ್ನಬಹುದಾದ ಕಾಲಾವಧಿ ಜಾತ್ರೆ ವಿಶೇಷವಾಗಿದ್ದು, ಮೀನಮಾಸದ ಸಂಕ್ರಮಣದಂದು ಉಳಿಪಾಡಿಗುತ್ತಿನಿಂದ ಬರುವ ಕೊಡಮಣ್ತಾಯ ದೈವದ ಭಂಡಾರದ ನೇತೃತ್ವದಲ್ಲಿ ಮಯೂರ ಧ್ವಜಾರೋಹಣವಾಗುವುದರೊಂದಿಗೆ ಜಾತ್ರೆಯು ಆರಂಭವಾಗುತ್ತದೆ. ಅದರಲ್ಲೂ ಜಾತ್ರೆಯ ಕೊನೆಯ ದಿನ ಜರುಗುವ ಆರಾಟವು ವೈಶಿಷ್ಟ್ಯಪೂರ್ಣವಾಗಿರುತ್ತದೆ. ನಡುವೆ ಐದು ದಿನಗಳಿಗೊಂದರಂತೆ ಐದು ದಂಡಮಾಲೋತ್ಸವಗಳು ಜರುಗುತ್ತಿದ್ದು, ಆ ಸಂದರ್ಭದಲ್ಲಿ ಬಲಿಮೂರ್ತಿಗೆ ಕೇಪಳ ಹೂವಿನಿಂದ ಕಟ್ಟಿದ ದುಂಡಾದ ದಂಡಮಾಲೆಯಿಂದಲಂಕರಿಸಿ ಉತ್ಸವ ನಡೆಸಲಾಗುತ್ತದೆ. ೧೮ನೆಯ ದಿನ ಕೋಳಿ ಅಂಕಕ್ಕೆ ಗೂಟನೆಡುವ ಗೌಜಿ ಇರುತ್ತದೆ. ೨೦ನೆಯ ದಿನದ ನಂತರ ನಡೆಯುವ ಪೊಳಲಿ ಚೆಂಡಾಟದ ಆ ಐದು ದಿನಗಳು ಆಕರ್ಷಕವಾಗಿದ್ದು, ಕೊನೆಯದಿನದಂದು ದೇವಿಯು ರಕ್ಕಸರ ತಲೆಯನ್ನು ಕಡಿದು ಚೆಂಡಾಡಿದುದರ ಸಂಕೇತವೆಂದು ಭಾವಿಸಲಾಗುತ್ತದೆ. ಅಮ್ಮುಂಜೆಗುತ್ತು ಹಾಗೂ ಉಳಿಪಾಡಿ ಗುತ್ತುಗಳ ಗಂಡುಗಲಿಗಳು ಈ ಚೆಂಡಾಟದಲ್ಲಿ ಪರಸ್ಪರ ಎದುರಾಳಿಗಳಾಗಿ ಭಾಗವಹಿಸುತ್ತಾರೆ. ೨೦ನೆಯ ದಿನದಿಂದ ೨೫ನೆಯ ದಿನದವರೆಗೆ ಕ್ರಮವಾಗಿ ನವಿಲುರಥ, ಕುಮಾರತೇರು, ಹೂತೇರು, ಸೂರ್ಯಮಂಡಲರಥ, ಚಂದ್ರಮಂಡಲರಥ ಹಾಗೂ ಆಲುಪಲ್ಲಕಿ ಉತ್ಸವಗಳಿದ್ದು, ೨೬ನೆಯ ದಿನದಂದು ಮಹಾರಥೋತ್ಸವವಾಗುತ್ತದೆ. ೨೭ನೆಯ ದಿನದಂದು ಆರಾಟವೂ ಜರುಗಿ, ಫಲ್ಗುಣಿ ನದಿಯ

ಕೂಟೇಲು ಎಂಬಲ್ಲಿ ವಸಂತವಾಡುವುದರೊಂದಿಗೆ ಜಾತ್ರೆ ಮುಗಿದು ಧ್ವಜವನ್ನು ಇಳಿಸುತ್ತಾರೆಂದು ಕೆ.ಅನಂತರಾಮು ತಮ್ಮ 'ದಕ್ಷಿಣ ಸಿರಿನಾಡು' ಗ್ರಂಥದಲ್ಲಿ ದಾಖಲಿಸಿದ್ದಾರೆ. ಪೊಳಲಿ ಕ್ಷೇತ್ರದ ರಾಜರಾಜೇಶ್ವರಿಯ ಮೃಣ್ಮಯಮೂರ್ತಿಯಂತಹ ಬೃಹತ್ ಮೂರ್ತಿ, ಪೊಳಲಿಯ ಜಾತ್ರೆಯಂತಹ ದೀರ್ಘಾವಧಿಯ ಜಾತ್ರೆಗಳು ಅಪರೂಪದ್ದೆಂಬ ಅಂಶವನ್ನು ಏರ್ಯ ಲಕ್ಷ್ಮೀನಾರಾಯಣ ಆಳ್ವ ದಾಖಲಿಸಿದ್ದಾರೆ. ಏಪ್ರಿಲ್ ತಿಂಗಳಲ್ಲಿ ಜರುಗುವ ಈ ಜಾತ್ರೆಗೆ ಬರುವ ಭಕ್ತಾದಿಗಳು ದೇವಿಯ ದರ್ಶನ ಮುಗಿಸಿ ಕಲ್ಲಂಗಡಿ (ಬಚ್ಚಂಗಾಯಿ) ಹಣ್ಣನ್ನೇ ಪ್ರಸಾದವೆಂಬಂತೆ ಊರಿಗೆ ಕೊಂಡೊಯ್ಯುತ್ತಾರೆ. ಫಲ್ಗುಣಿ ನದಿ ದಡದಲ್ಲಿ ಈ ಹಣ್ಣನ್ನು ಯಥೇಚ್ಛವಾಗಿ ಬೆಳೆಯುವುದೇ ಇದಕ್ಕೆ ಕಾರಣವಾಗಿದೆ. ಇಲ್ಲಿರುವ ವ್ಯಾಘ್ರೇಶ್ವರ ಮೃಣ್ಮಯಮೂರ್ತಿಯು, ಹುಲಿಯನ್ನು ಬೇಟೆಯಾಡುತ್ತಿರುವ ವ್ಯಾಧನ ಕೆತ್ತನೆಯನ್ನು ಹೋಂದಿದೆ. ಅಡಿಕೆ ಮರವೊಂದರ ಬದಿಯಲ್ಲಿ ಹುಲಿಯನ್ನು ಸಂಹರಿಸುತ್ತಿರುವ ದೃಶ್ಯವಿದರಲ್ಲಿದ್ದು, ಯೋಧನ ಕಾಲ ಬಳಿ ಮಣ್ಣಿಯ ಜಾಡಿಯೂ ಕಾಣಸಿಗುತ್ತದೆ. ಊರ ಉಳಿಪಾಡಿಗುತ್ತಿನಲ್ಲಿ ಕೊಡಮಣ್ತಾಯ ದೈವದ ಸ್ಥಾನವಿದ್ದು, ಅದಕ್ಕೆ ಪೊಳಲಿ ಜಾತ್ರೆಯು ಮುಕ್ತಾಯಗೊಂಡ ಮಾರನೆಯ ದಿನವೇ ನೇಮೋತ್ಸವವಾಗುತ್ತದೆ.

ಹಿಂದೆ ಈ ಊರ ನಾಲ್ಕು ದಿಕ್ಕಲ್ಲೂ ಕ್ರಮವಾಗಿ ಮೂಡುಕಾಡೇಶ್ವರ, ಪಡುಆದಿನಾಥೇಶ್ವರ, ತೆಂಕು ವರದೇಶ್ವರ ಹಾಗೂ ಬಡಗು ಅಖಿಲೇಶ್ವರ ದೇವಾಲಯಗಳಿದ್ದವೆಂದು ತಿಳಿದು ಬರುತ್ತದೆ. ಅವುಗಳಲ್ಲಿ ಊರಾಚೆ ತೋಟಕುಡಿಕೆಗಳ ನಡುವೆ ಇರುವ ಅಖಿಲೇಶ್ವರ ದೇವಾಲಯವು ಗಜಪೃಷ್ಠಾಕಾರದ ತಳವಿನ್ಯಾಸದಲ್ಲಿರುವ ಪ್ರಾಚೀನ ದೇಗುಲವಾಗಿದ್ದು, ೧೯೯೧ರಲ್ಲಿ ಅದನ್ನು ಜೀರ್ಣೋದ್ಧಾರ ಮಾಡಿದ್ದಾರೆ. ನಿರಾಡಂಬರವಾದ ಈ ದೇವಾಲಯದ ಗೋಪುರದ ರಚನೆ ಅಪರೂಪದ್ದಾಗಿದೆ. ಮಡದಿ ದಾಕ್ಷಾಯಿಣಿಯ ನಿಧನದಿಂದ ಉಂಟಾದ ಕೋಪವನ್ನು, ತಪವನ್ನಾಚರಿಸುವ ಮೂಲಕ ಉಪಶಮನ ಮಾಡಿಕೊಂಡ ಶಿವನ ತಪೋಭೂಮಿ ಇದೆಂಬ ಪೌರಾಣಿಕ ನಂಬಿಕೆ ಇದ್ದು, ಶಿವನೊಬ್ಬನಿಗೆ ಅಲ್ಲಿ ಸ್ಥಾನವಿದ್ದು, ಗಣಗಳಿರಲಿ ನಂದಿಗೂ ಅಲ್ಲಿ ತೀರಾ ಇತ್ತೀಚಿನವರೆಗೆ ಸ್ಥಾನವಿರಲಿಲ್ಲವೆಂದು ತಿಳಿದು ಬರುತ್ತದೆ. ಚೌಟರಸರ ಕಾಲದಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದಿರುವ ಈ ಗುಡಿಯು ವಿಶಿಷ್ಟವಾಗಿದೆ. ಈ ಗುಡಿಗೆ ಅನತಿ ದೂರದಲ್ಲಿ ಫಲ್ಗುಣಿ (ಪುಳಿ(ಲಾ)ನಿ) ನದಿಯು ಹರಿಯುತ್ತಿದ್ದು ಪ್ರಶಾಂತ ವಾತಾವರಣವನ್ನು ಒದಗಿಸಿದೆ. ಇದೇ ರೀತಿ ಇಲ್ಲಿರುವ ವರದೇಶ್ವರ ದೇವಾಲಯವೂ ಇನ್ನೊಂದು ಪ್ರಾಚೀನ ಶೈವದೇವಾಲಯವಾಗಿದೆ.

**ಫರಂಗಿಪೇಟೆ:** ಜಿಲ್ಲಾ ಕೇಂದ್ರ ಮಂಗಳೂರಿನಿಂದ ಪೂರ್ವಕ್ಕೆ ಬಂಟ್ವಾಳ ರಸ್ತೆಯಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಐರೋಪ್ಯರನ್ನು ಫರಂಗಿಯರೆಂದು ಕರೆಯುವ ವಾಡಿಕೆಯಿದ್ದು, ಸುಮಾರು ೧೬ನೆಯ ಶತಮಾನದ ಆದಿಭಾಗದಲ್ಲಿ ಪೋರ್ಚುಗೀಸರು ಇಲ್ಲಿ ಬಂದು ನೆಲೆಸಿ, ಅದೊಂದು ಪೇಟೆಯಾಗಿ ಅಭಿವೃದ್ಧಿಗೊಂಡು ಫರಂಗಿಪೇಟೆ ಎಂದು ಹೆಸರು ಪಡೆಯಿತೆಂದು ತಿಳಿದುಬರುತ್ತದೆ. ಕ್ರೈಸ್ತ ಧರ್ಮದ ದೃಷ್ಟಿಯಿಂದ ಇದು ಮಹತ್ವದ ಊರಾಗಿದ್ದು, ನೇತ್ರಾವತಿಯ ತಟದಲ್ಲಿ, ಕ್ರೈಸ್ತರ ಇಗರ್ಜಿ ಹಾಗೂ ಸೆಮಿನರಿಗಳಿವೆ. ಇಲ್ಲಿಯ ಇಗರ್ಜಿಯು ಹಳೆಯ ಕಾಲದ ಸರಳ ರಚನೆಗೊಂದು ಉತ್ತಮ ಉದಾಹರಣೆಯಾಗಿದೆ. ಸುಮಾರು ೧೫೨೬ರಲ್ಲಿ ನಿರ್ಮಾಣಗೊಂಡ ಈ ಇಗರ್ಜಿಯು ದಕ್ಷಿಣ ಕನ್ನಡದ ಅತ್ಯಂತ ಪ್ರಾಚೀನ ಚರ್ಚುಗಳಲ್ಲಿ ಒಂದಾಗಿದೆ. ಇಟಲಿಯ ಪ್ರವಾಸಿ ಪಿಯತ್ರೊ ಡೆಲ್ಲೆವೆಲ್ಲಿ (೧೬೨೩) ಈ ಇಗರ್ಜಿಯನ್ನು ತನ್ನ ವರದಿಯಲ್ಲಿ ಹೆಸರಿಸಿದ್ದಾನೆ. ಸುಮಾರು ೧೨ನೆಯ ಶತಮಾನದಲ್ಲಿ ಇಟಲಿಯ ಅಸ್ಸೀಸಿ ನಗರದಲ್ಲಿ ಜೀವಿಸಿದ್ದ ಸಂತ ಫ್ರಾನ್ಸಿಸ್‌ಗೆ ಅರ್ಪಿಸಲ್ಪಟ್ಟ ಚರ್ಚು ಇದಾಗಿದೆ. ಬ್ರಿಟಿಷರ ವಿರುದ್ಧದ ಯುದ್ಧದಲ್ಲಿ ಹೈದರಾಲಿಗೆ ಗೆಲುವಾಗಲೆಂದು ಪ್ರಾರ್ಥಿಸುವ ಮೂಲಕ, ಅವನ ವಿಶ್ವಾಸಕ್ಕೂ ಪಾತ್ರವಾಗಿದ್ದ ಈ ಚರ್ಚು (೧೭೬೩), ಅದಕ್ಕಾಗಿ ಹೈದರಾಲಿಯಿಂದ ಇನಾಮನ್ನೂ ಪಡೆದಿತ್ತು. ಆದರೆ ಟಿಪ್ಪು ಕಾಲದಲ್ಲಿ ಇಗರ್ಜಿಗಳು ನಾಶಗೊಳ್ಳುತ್ತಿದ್ದ ಸಂದರ್ಭದಲ್ಲಿ ಹಿಂದೆ ಹೈದರಾಲಿ ಚರ್ಚಿಗೆ ನೀಡಿದ್ದ ಶಾಸನವನ್ನು ತೋರಿಸಲಾಗಿ ಇದು ಉಳಿಯಿತೆಂದು ತಿಳಿದು ಬರುತ್ತದೆ. ಈ ಚರ್ಚಿನ ಮೂಲಭಾಗವೆಲ್ಲ ಮಣ್ಣಿನ ರಚನೆಯಾಗಿದ್ದು, ದಪ್ಪದಪ್ಪ ಗೋಡೆಗಳನ್ನು ಒಳಗೊಂಡಿದೆ. ನಂತರದಲ್ಲಿ ಮೂಲ ರೂಪವನ್ನು ಉಳಿಸಿಕೊಂಡು, ನೂತನ ಸೇರ್ಪಡೆಗಳನ್ನು ಮಾಡಲಾಗಿದೆ. ಮುಂದೆ ೧೯೩೦ರಿಂದ ಕಾಪುಚಿನ್ ಎಂಬ ಕ್ರೈಸ್ತ ಸೇವಾಪಂಥಕ್ಕೆ ಈ ಇಗರ್ಜಿಯು ಸೇರಿದ್ದು. ಆ ಪಂಥಕ್ಕೆ ಸೇರಿದ ಇಗರ್ಜಿಗಳು ಮಂಗಳೂರು, ಉಜಿರೆ ಮುಂತಾದೆಡೆಗಳಲ್ಲೂ ಇವೆ.

**ಬಂಗಾಡಿ :** ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ೧೨ ಕಿ.ಮೀ. ಈಶಾನ್ಯಕ್ಕೆ ಇರುವ **ಇಂದಬೆಟ್ಟು (೩,೯೦೯)** ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಹಿಂದೆ ಬಂಗವಾಡಿ, ಬಂಗ್ವಾಡಿ, ಬಂಗವಾಡಿಪುರ ಎಂದೆಲ್ಲ ಕರೆಯಲ್ಪಡುತ್ತಿದ್ದ ಈ ಊರು ಬಂಗರಸರೆಂಬ ಸ್ಥಳೀಯ ಸಾಮಂತ ರಾಜರ ರಾಜಧಾನಿ ಪಟ್ಟಣವಾಗಿ ಪ್ರಾಮುಖ್ಯತೆ ಪಡೆದಿದ್ದ ತಾವು. ಇವರು ಮೇಲು ಬಂಗಾಡಿ, ಕೆಳಬಂಗಾಡಿ, ಬೆಳ್ತಂಗಡಿ ಮುಂತಾದ ೨೦ ಮಾಗಣೆಗಳ ಒಡೆತನವನ್ನು ಹೊಂದಿದ್ದ ಅರಸರಾಗಿದ್ದು ಬೆಳ್ತಂಗಡಿ, ಮಂಗಳೂರು,

ಪುತ್ತೂರು ಹಾಗೂ ನಂದಾವರಗಳಲ್ಲಿಯೂ ಬಂಗರಸರ ಅರಮನೆಗಳಿದ್ದು, ನಂದಾವರವು ಸ್ವಲ್ಪಕಾಲ ಅವರ ರಾಜಧಾನಿ ಪಟ್ಟಣವೂ ಆಗಿತ್ತು. ಇವರು ಸುಮಾರು ೧೪೧೦ರಿಂದ ೧೯೦೧ರವರೆಗೆ ರಾಜ್ಯಭಾರ ನಡೆಸಿದರು. 'ಹಣವಿನ ಬಂಗರು' ಎಂದೂ ಭಾಜಿಸಲ್ಪಟ್ಟಿದ್ದ ಇವರು ಬಂಗಾಡಿ ಗದ್ಯಾಣವೆಂಬ ಚಿನ್ನದ ನಾಣ್ಯವನ್ನು ಟಂಕಿಸಿ ಚಲಾವಣೆಗೆ ಬಿಟ್ಟಿದ್ದರೆಂದೂ ತಿಳಿದು ಬರುತ್ತದೆ.

ಇಂದು ಬಂಗಾಡಿಯಲ್ಲಿರುವ ಶಾಂತಿನಾಥ ಬಸದಿಯು ಪುರಾತನದ್ದಾದರೂ ೧೯೦೧ರಲ್ಲಿ ಕೊನೆಯ ಬಂಗರಸ, ಲಕ್ಷ್ಮಪ್ಪರಸ ಪದ್ಮರಾಜ ಬಂಗನ ಆಳ್ವಿಕೆಯಲ್ಲಿ ಜೀರ್ಣೋದ್ಧಾರಗೊಂಡ ಅಂಶ ಗೊತ್ತಾಗುತ್ತದೆ. ವಿಸ್ತಾರವೂ ಭವ್ಯವೂ ಆದ ಈ ಬಸದಿಯು ಶಿಲಾಮಯವಾಗಿದ್ದು, ಏಳು ದ್ವಾರಗಳನ್ನು ದಾಟಿದ ಮೇಲೆ ಮೂಲಗರ್ಭಗೃಹದಲ್ಲಿರುವ ಶಾಂತಿನಾಥ ತೀರ್ಥಂಕರನ ದರ್ಶನವಾಗುತ್ತದೆ. ಪದ್ಮಾವತಿ ದೇವಿಗೆ ಇಲ್ಲಿ ಪ್ರತ್ಯೇಕ ಸನ್ನಿಧಿಯಿದ್ದು, ಪ್ರದಕ್ಷಿಣ ಪಥದಲ್ಲಿ ಕ್ಷೇತ್ರಪಾಲ ಜಟ್ಟಿಂಗರಾಯನಿದ್ದು ನಾಯಿ ಅವನ ಲಾಂಛನವಾಗಿದೆ. ಇಲ್ಲಿ ಧರಣೇಂದ್ರ ಯಕ್ಷ ಹಾಗೂ ಬ್ರಹ್ಮಯಕ್ಷರಿಗೂ ಪ್ರತ್ಯೇಕ ಸನ್ನಿಧಿ ಇದ್ದು, ಉಳ್ಳಾಳ್ತಿಯೂ ಸ್ಥಾನಗಿಟ್ಟಿಸಿಕೊಂಡಿದ್ದಾಳೆ. ಬಸದಿಯ ಮೇಲ್ಛಾವಣಿಗೆ ತಾಮ್ರದ ತಗಡುಗಳನ್ನು ಹೊದಿಸಲಾಗಿದ್ದು, ತುದಿಯಲ್ಲಿ ಮೂರು ಕಳಸಗಳಿವೆ. ಡಿಸೆಂಬರ್ ತಿಂಗಳಲ್ಲಿ ಶಾಂತಿನಾಥನ ವಾರ್ಷಿಕ ರಥೋತ್ಸವವಾಗುತ್ತದೆ. ಶಾಂತಿನಾಥ ತೀರ್ಥಂಕರ ಬಸದಿಯ ಪಕಾರದಲ್ಲೇ ಇರುವ ಚೌವ್ವೀಸ್ ತೀರ್ಥಂಕರರ ಪ್ರತ್ಯೇಕ ಬಸದಿಯಲ್ಲಿ, ಸುಮಾರು ಎರಡು ಅಡಿ ಎತ್ತರದ ಪಂಚಲೋಹದ ೨೪ ತೀರ್ಥಂಕರರ ಪ್ರತಿಮೆಗಳಿವೆ. ಊರಿಗೆ ಒಂದು ಕಿ.ಮೀ. ಅಂತರದಲ್ಲಿ ಶ್ರವಣಗುಂಡದ ಬಳಿಯಿರುವ ಬ್ರಹ್ಮಯಕ್ಷನ ಸನ್ನಿಧಿಯು ಛಾವಣಿ ರಹಿತ ಸಾಮಾನ್ಯ ಆವರಣದಲ್ಲಿದೆ. ಬ್ರಹ್ಮ ಯಕ್ಷನ ಮೂರ್ತಿಯು ಕುದುರೆಮೇಲೆ ಕುಳಿತ ಶಿಲ್ಪವಾಗಿರುವುದರಿಂದ ಅದಕ್ಕೆ ಕುದುರೆ ಬ್ರಹ್ಮನೆಂದೂ ಗೆಜ್ಜೆ ಬ್ರಹ್ಮನೆಂದೂ ಕರೆಯುತ್ತಾರೆ. 'ಶ್ರವಣಬಾವಿಯಲ್ಲಿ ಗುಂಡು ತೇಲುವ ಪವಾಡ' ಇಲ್ಲಿನ ವಿಶೇಷವೆಂದು ಹೇಳಲಾಗುತ್ತಿದ್ದು, ಅದೇ ಸ್ಥಳದಲ್ಲಿ ದೊಡ್ಡದೊಂದು ಕಲ್ಯಾಣಿಯೂ ಇದೆ. ಬರಗುರಸರ ಕಾಲದ ಸೋಮೇಶ್ವರ ದೇವಾಲಯವು ಶಿಥಿಲಾವಸ್ಥೆಯಲ್ಲಿದೆ. ಬಂಗಾಡಿಯ ಅರಮನೆಯನ್ನು ಲಕ್ಷ್ಮಪ್ಪರಸ ಪದ್ಮರಾಜ ಬಂಗನು ಸುಮಾರು ೧೯೦೧ರಲ್ಲಿ ನಿರ್ಮಿಸಿದನೆಂದು ತಿಳಿದುಬರುತ್ತದೆ. ಇಲ್ಲಿರುವ ವರ್ಣಚಿತ್ರಗಳು ಯಕ್ಷಗಾನಕ್ಕೆ ಸಂಬಂಧಿಸಿದವೆಂದು ಪಿ. ಗುರುರಾಜಭಟ್ಟರು ಅಭಿಪ್ರಾಯ ಪಡುತ್ತಾರೆ. ಬಂಗಾಡಿಯ ಪೂರ್ವಕ್ಕೆ ಇರುವ ಬಲ್ಲಾಳರಾಯನದುರ್ಗವು ಶಿಥಿಲಾವಸ್ಥೆಯಲ್ಲಿದ್ದು, ಜಮಲಾಬಾದಿನ ಕೋಟೆಯನ್ನೂ ಬಂಗಾಡಿಯಿಂದ ವೀಕ್ಷಿಸಬಹುದಾಗಿದೆ.

**ಬಂಟ್ವಾಳ (೩೯,೮೩೦)** : ಇದು ೧೯೫೯ರಲ್ಲಿ ನೂತನವಾಗಿ ರೂಪುಗೊಂಡ ತಾಲೂಕಾಗಿದ್ದು, ಮೂರು (ಬಂಟ್ವಾಳ (೩೧), ಪಾಣೆ ಮಂಗಳೂರು (೩೦) ಹಾಗೂ ವಿಟ್ಲ(೨೩)) ಹೋಬಳಿ ಹಾಗೂ ೮೪ ಗ್ರಾಮಗಳನ್ನು ಒಳಗೊಂಡಿದೆ. ಜಿಲ್ಲಾ ಕೇಂದ್ರ ಮಂಗಳೂರಿನಿಂದ ೨೫ ಕಿ.ಮೀ. ಪೂರ್ವಕ್ಕೆ ನೇತ್ರಾವತಿ ನದಿಯ ಉತ್ತರದಂಡೆಯ ಮೇಲಿರುವ ತಾಲೂಕು ಕೇಂದ್ರ. ರಾಷ್ಟ್ರೀಯ ಹೆದ್ದಾರಿ ೪೮ ಬಂಟ್ವಾಳ ಪಟ್ಟಣದಿಂದ ಮೂರು ಕಿ.ಮೀ. ಪೂರ್ವದಲ್ಲಿ ಹಾದುಹೋಗಿದ್ದು, ಬಂಟ್ವಾಳ ಮೂಡ–ಜೋಡಿಮಾರ್ಗ ಎಂದೂ ಕರೆಯಲ್ಪಡುವ ಬಂಟ್ವಾಳ ಕ್ರಾಸ್‌ರೋಡು ಬಳಿ ಪೇಟೆಯೊಂದು ತಲೆ ಎತ್ತಿದ್ದು ಹೆಚ್ಚಿನ ಸರ್ಕಾರಿ ಕಚೇರಿಗಳು ಇರುವುದು ಅಲ್ಲೇ. ೧೯೨೩ರಲ್ಲಿ ನೇತ್ರಾವತಿಯಲ್ಲುಂಟಾದ ಮಹಾಪೂರವೇ ಇದರ ತ್ವರಿತ ಬೆಳವಣಿಗೆಗೆ ಕಾರಣವಾಗಿರುವಂತೆ ತೋರುತ್ತಿದ್ದು, ನದಿ ಪ್ರವಾಹದ ಭೀತಿಯಿಂದ ಮುಕ್ತವಾಗಿರುವುದೂ ಅದಕ್ಕೆ ಇನ್ನೊಂದು ಕಾರಣವಾಗಿದೆ. ಬಿ.ಸಿ.ರೋಡ್‌ನಿಂದ ಒಂದು ಕಿ.ಮೀ. ಅಂತರದಲ್ಲಿ ಪಾಣೆ ಮಂಗಳೂರು ಬಳಿ ನೇತ್ರಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಉದ್ದನೆಯ ಸೇತುವೆ ಗಮನಾರ್ಹವಾಗಿದೆ. ಪಟ್ಟಣ ಪಂಚಾಯತಿಯ ಆಡಳಿತಕ್ಕೆ ಒಳಪಟ್ಟಿರುವ ಬಂಟ್ವಾಳವು ಮಂಗಳೂರು–ಹಾಸನ ರೈಲುಮಾರ್ಗದಲ್ಲಿದ್ದು ರೈಲು ನಿಲ್ದಾಣವನ್ನೂ ಹೊಂದಿದೆ. ಬಂಟ್ವಾಳಮೂಡದ ಹೊಲವೊಂದರಲ್ಲಿರುವ ವೀರಬುಕ್ಕಣವೊಡೆಯರ ಕಾಲಕ್ಕೆ ಸೇರಿದ ಶಾಸನದಿಂದ, ಮಂಗಳೂರಿನ ಮಾದರಸನು ಪುದುಗ್ರಾಮದಲ್ಲಿ ಅಗ್ರಹಾರ ಬುಕ್ಕರಾಜಪುರವನ್ನು ರೂಪಿಸಿ ಬ್ರಾಹ್ಮಣರಿಗೆ ಸರ್ವಮಾನ್ಯವಾಗಿ ದಾನ ಬಿಟ್ಟ ಅಂಶ ವೇದ್ಯವಾಗುತ್ತದೆ. ಅದೇ ಸ್ಥಳದ ಮೊಡಂಕಾಪುವಿನಲ್ಲಿರುವ ೧೩೭೭ರ ಶಾಸನದಿಂದ, ಪಂಡರಿದೇವನು ಮಂಗಳೂರು ರಾಜ್ಯವನ್ನು ಆಳುತ್ತಿದ್ದಾಗ, ಸೆಟ್ಟಿಯೋರ್ವನು ಪುದುಗ್ರಾಮದ ತಿಮಿರೇಶ್ವರ ದೇವರಿಗೆ ಭೂದಾನ ನೀಡಿದ ಅಂಶ ಗೊತ್ತಾಗುತ್ತದೆ. ಇಲ್ಲಿ ಉಕ್ತವಾಗಿರುವ ಪುದುಗ್ರಾಮ, ಬಂಟ್ವಾಳದಿಂದ ಪಶ್ಚಿಮಕ್ಕಾದಂತಿರುವ ಇಂದಿನ ಪುದುಗ್ರಾಮ ಎಂದು ತರ್ಕಿಸಬಹುದಾಗಿದೆ. ಈ ಶಾಸನದಿಂದ ಹಿಂದೆ ಅಲ್ಲೊಂದು ತಿಮಿರೇಶ್ವರ ದೇವಾಲಯವಿದ್ದ ಅಂಶ ವ್ಯಕ್ತವಾಗುತ್ತದೆ.

ಊರ ಪ್ರವೇಶದ ಬಸ್ತಿಪಡ್ಪುವಿನಲ್ಲಿರುವ ವಿಶಾಲವಾದ ಆದಿನಾಥ ಬಸದಿಯು ಏಕಾಂತ ಸ್ಥಳದಲ್ಲಿದ್ದು, ಧರ್ಮಸ್ಥಳದ ಧರ್ಮೋತ್ಥಾನ ಟ್ರಸ್ಟ್‌ನ ವತಿಯಿಂದ ಅದನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ. ಆದರಿಂದು ಇಲ್ಲಿ ಜೈನಕುಟುಂಬಗಳು ವಿರಳವಾಗಿವೆ. ಕೆಳಗಿನ ಪೇಟೆಯಲ್ಲಿ ಮುಸ್ಲಿಮರು ನೆಲೆಸಿದ್ದು, ಮಸೀದಿ ದರ್ಗಾಗಳಿವೆ. ಅಲ್ಲದೇ ನೇತ್ರಾವತಿ ನದಿಯ ಆಚೀಚೆ ದಡಗಳ ಮೇಲಿರುವ ವಲಿವುಲ್ಲಾ

ಅಬ್ದುಲ್ ಆವುಲಿಯಾ ದರ್ಗಾಷರೀಫ್ ಹಾಗೂ ಅಕ್ಕರಂಗಡಿಯ ದರ್ಗಾಷರೀಫ್‌ಗಳು ಉಲ್ಲೇಖಾರ್ಹವಾಗಿವೆ. ಇಲ್ಲಿಯ ಬಡ್ಡಕಟ್ಟೆಯಲ್ಲಿರುವ ಅವಧೂತ ಸಂಪ್ರದಾಯದ ನಿತ್ಯಾನಂದ ಭಜನಾ ಮಂದಿರವು ಚಿಕ್ಕದಾದರೂ, ಚೊಕ್ಕವಾಗಿದ್ದು, ಒಳಗೆ ನಿತ್ಯಾನಂದ ಮಹಾರಾಜರ ಪಂಚಲೋಹದ ವಿಗ್ರಹವಿದೆ. ಇಲ್ಲಿಯ ಮಹಾಲಿಂಗೇಶ್ವರ ದೇವಾಲಯವೇ ಬಂಟ್ವಾಳದ ಪ್ರಾಚೀನ ದೇವಾಲಯವಾಗಿದ್ದು, ಖರಾಸುರ ಪ್ರತಿಷ್ಠಿತವೆಂದು ಹೇಳಲಾಗುತ್ತದೆ. ಸೌರಯುಗಾದಿಯಿಂದ ಐದು ದಿನಗಳ ವಾರ್ಷಿಕ ಜಾತ್ರೆ ಇಲ್ಲಿ ಜರುಗುತ್ತದೆ. ಸಮೀಪದಲ್ಲೇ ಸೀತಾರಾಮಚಂದ್ರರ ನೂತನ ದೇವಾಲಯವಿದೆ. ಬಂಟ್ವಾಳ ಪಟ್ಟಣಕ್ಕೆ ಹೆಗ್ಗಳಿಕೆಯಾಗಿರುವ ತಿರುಮಲವೆಂಕಟರಮಣ ದೇವಾಲಯವು ಸುಂದರವಾದ ದ್ವಾರಗೋಪುರಗಳಿಂದ ರಂಜಿಸುತ್ತಿದ್ದು, ಭವ್ಯವಾಗಿದೆ. ಜಿಲ್ಲೆಯ ಗೌಡಸಾರಸ್ವತ ಸಮಾಜದ ಪುರಾತನ ದೇವಾಲಯಗಳಲ್ಲಿ ಇದಕ್ಕೇ ಹಿರಿದಾದ ಸ್ಥಾನವಿದೆ. ಈ ಗುಡಿಯು ಕೊಡಗಿನ ಅರಸರ ಪಕ್ಷಕ್ಕೆ ಸೇರಿದ ಅಡಾವುಡಿಗಾರರ ಲೂಟಿಗೆ ಸಿಲುಕಿ, ದೇವತಾವಿಗ್ರಹ, ನಗನಾಣ್ಯಗಳೆಲ್ಲ ಸೂರೆಗೊಂಡವೆಂದೂ ಅನಂತರ ಪವಾಡಸಾದೃಶ್ಯವಾಗಿ ಮಂಜಯ್ಯ ಭಾಗವತರ ವರ್ಚಸ್ಸಿನಿಂದಾಗಿ ಈ ದೇವಾಲಯಕ್ಕೆ ಮರುಪ್ರಾಪ್ತಿಯಾಯಿತೆಂದೂ ಹೇಳಲಾಗುತ್ತದೆ. ಕಾರ್ಕಳ ಹಾಗೂ ಮೂಲ್ಕಿಯ ವೆಂಕಟರಮಣ ದೇವಾಲಯಗಳಂತೆ ಸಿರಿವಂತಿಕೆಯ ಬೀಡಾಗಿರುವ ಈ ದೇವಾಲಯದಲ್ಲಿ ಬೆಳ್ಳಿಯ ಪಲ್ಲಕ್ಕಿ, ಲಾಲ್ಕಿ, ಧ್ವಜಸ್ತಂಭ, ಪೀಠ, ಪ್ರಭಾವಳಿ ಮುಂತಾದವುಗಳಿವೆ. ಇಲ್ಲಿ ವಿಶ್ವರೂಪದರ್ಶನ, ಲಕ್ಷ್ಮೀನರಸಿಂಹ, ಕಾಳಿಂಗಮರ್ದನ ಮುಂತಾದ ನೂತನ ಶಿಲ್ಪಗಳಿವೆ. ಫಾಲ್ಗುಣ ಮಾಸದಲ್ಲಿ ಒಂದು ವಾರ ಕಾಲ ಇದರ ವಾರ್ಷಿಕ ರಥೋತ್ಸವವಾಗುತ್ತದೆ. ನಾಲ್ಕನೆಯ ದಿನ ನೇತ್ರಾವತಿಯಲ್ಲಿ ತೆಪ್ಪೋತ್ಸವವಾಗುತ್ತದೆ. ಬ್ರಹ್ಮರಥೋತ್ಸವದಂದು ಮಂಗಳೂರು ಮಲ್ಲಿಗೆ ಹೂವು ರಾಶಿರಾಶಿಯಾಗಿ ಬಂದು ಬೀಳುತ್ತದೆ. ಈ ಗುಡಿಯ ಪೂರ್ವದ್ವಾರವೂ ಶಿಲ್ಪ ವೈಭವದಿಂದ ರಾರಾಜಿಸುತ್ತಿದೆ. ಆ ದ್ವಾರದ ಮೂಲಕ ನೇತ್ರಾವತಿ ನದಿಯ ಸ್ನಾನಘಟ್ಟವನ್ನು ತಲುಪಬಹುದಾಗಿದೆ. ಬಂಟ್ವಾಳದ ಕೆಳಪೇಟೆಯಲ್ಲಿ ಕಂಚುಗಾರರ ಓಣಿ ಇದ್ದು, ಅವರದೇ ಆರಾಧ್ಯದೇವತೆಯಾದ ಕಾಳಿಕಾಂಬ ದೇವಾಲಯವಿಲ್ಲಿದೆ. ಇಲ್ಲಿನ ಕಂಚುಗಾರರು ಉತ್ತಮ ಕುಶಲಕರ್ಮಿಗಳಾಗಿದ್ದು, ಇಲ್ಲಿಯ ಕಂಚಿನ ಶಿಲ್ಪ ಹಾಗೂ ಸಾಮಗ್ರಿಗಳು ತುಂಬಾ ಪ್ರಸಿದ್ಧವಾಗಿದ್ದವು. ಆದರೆ ಅವರಲ್ಲಿ ಹೆಚ್ಚಿನವರು ಈಗಾಗಲೇ ವಲಸೆ ಹೋಗಿದ್ದು, ಒಂದೆರಡು ಕುಟುಂಬಗಳು ಮಾತ್ರ ಇಂದಿಲ್ಲಿ ಉಳಿದಿವೆ. ಆದರೆ ಅವರಿಂದು ಕಂಚಿನ ಕೆಲಸ ಮಾಡುತ್ತಿಲ್ಲ. ಇಲ್ಲಿ ರಕ್ತೇಶ್ವರಿಯ ಬನವೊಂದು ಇದ್ದು, ಅವಳು ಇಲ್ಲಿ ಪೂಜಿತಳಾಗುತ್ತಿದ್ದಾಳೆ. ಈ ದೇವಾಲಯದ ಸಮೀಪದಲ್ಲೇ ಕಾಶಿಮಠದ ಶಾಖಾಮಠವಿದೆ. ಅಲ್ಲಿ ಕೆಳದಿಯ ಸೋಮಶೇಖರನಾಯಕನಿಂದ ೧೭೩೪ರಲ್ಲಿ ರಾಜಮರ್ಯಾದೆ ಗಳಿಸಿದ್ದ ಆ ಮಠದ ಆರನೆಯ ಯತಿವರ್ಯ ದೇವೇಂದ್ರತೀರ್ಥರ ಸಮಾಧಿ ಇದೆ. ಈ ಊರಿನ ಬಲ್ತಾಸರ್ ಎಂಬ ಕ್ರಿಶ್ಚಿಯನ್ ಅನುಯಾಯಿ ವಿಶಿಷ್ಟವಾದ ಚಟ್ನಿಯನ್ನು ತಯಾರಿಸಿ ನೀಡಿ ಟೀಪುವಿನ ಮೆಚ್ಚುಗೆಗೆ ಪಾತ್ರನಾಗುವ ಮೂಲಕ ಕ್ರೈಸ್ತ ಬಂಧಿತರ ವಿಮೋಚನೆಗಾಗಿ ಹಂಬಲಿಸಿದ್ದನೆಂದು ತಿಳಿದುಬರುತ್ತದೆ. ಇಲ್ಲಿಯ ಯಶವಂತ ವ್ಯಾಯಾಮಶಾಲೆ (೧೯೪೦) ಪ್ರಮುಖದ್ದಾಗಿದ್ದು, ಮಲ್ಲಕಂಬದ ಕಸರತ್ತು ಉಲ್ಲೇಖಾರ್ಹವಾಗಿದೆ. ಈ ಸಂಸ್ಥೆ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳನ್ನು ನಾಡಿಗೆ ನೀಡುವಲ್ಲಿ ಯಶಸ್ವಿಯಾಗಿದೆ. ನೇತ್ರಾವತಿಯ ಪ್ರವಾಹದಿಂದಾಗಿ ಮೇಲಿಂದ ಮೇಲೆ ಹಾನಿಗೊಳಗಾಗುವ ಈ ಊರಿನಲ್ಲಿ ಪ್ರವಾಹ ವಿಮೋಚನಾ ರಸ್ತೆಯನ್ನು ಈಗಾಗಲೇ ರೂಪಿಸಲಾಗಿದೆ. **ನರಹರಿ ಪರ್ವತ:** ಬಂಟ್ವಾಳಕ್ಕೆ ಎರಡು ಕಿ.ಮೀ. ದೂರದಲ್ಲಿರುವ ಪುಣ್ಯಕ್ಷೇತ್ರ. ನರಹರಿ ಪರ್ವತದ ಮೇಲೆ ಸದಾಶಿವನ ದೇವಾಲಯವಿದ್ದು, ಬದಿಯಲ್ಲೇ ನಾಲ್ಕು ತೀರ್ಥಗಳಿವೆ. (ಶಂಖ, ಚಕ್ರ, ಗದಾ ಹಾಗೂ ಪದ್ಮ) ಕಲ್ಲಡ್ಕ ರೈಲು ನಿಲ್ದಾಣದಿಂದಲೂ ಹಳೆಯ ದಾರಿಯ ಮೂಲಕ ಪರ್ವತಾರೋಹಣ ಮಾಡಿ ಇದನ್ನು ತಲುಪಬಹುದಾಗಿದೆ. ಅರ್ಜುನನ ಶಿವಪೂಜೆಗಾಗಿ ಸದಾಶಿವನನ್ನು ಕೃಷ್ಣನು ಇಲ್ಲಿ ಪ್ರತಿಷ್ಠಾಪಿಸಿದನೆಂಬ ಪೌರಾಣಿಕ ನಂಬಿಕೆ ಇದೆ. ಹಗ್ಗದ ಹರಕೆ ಇಲ್ಲಿನ ವೈಶಿಷ್ಟ್ಯ. ಇತ್ತೀಚೆಗೆ ಈ ಕ್ಷೇತ್ರವು ತುಂಬಾ ಅಭಿವೃದ್ಧಿ ಹೊಂದಿ ಹೆಚ್ಚಿನ ಭಕ್ತರನ್ನು ಆಕರ್ಷಿಸುತ್ತಿದೆ.

**ಬಂಡಾಜೆ ಅರ್ಬಿ ಜಲಪಾತ** : ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ಈಶಾನ್ಯಕ್ಕೆ ೧೮ ಕಿ.ಮೀ. ದೂರದಲ್ಲಿರುವ ಕದಿರುದ್ಯಾವರ (೩,೩೬೦) ಕಂದಾಯ ಗ್ರಾಮಕ್ಕೆ ಸೇರಿದ ವಳರಬ್ರದಿಂದ ಸುಮಾರು ಒಂಬತ್ತು ಕಿ.ಮೀ. ದೂರದ ಬಂಡಾಜೆ ಗುಡ್ಡದಲ್ಲಿರುವ ಜಲಪಾತ. ಬೆಳ್ತಂಗಡಿ–ಚಾರ್ಮಾಡಿ ಹೆದ್ದಾರಿಯಲ್ಲಿರುವ ಇದು ಬೆಟ್ಟದ ಮೇಲಿಂದ ಬೆಳ್ಳಿಯಗೆರೆಯಂತೆ ಫಳಫಳನೆ ಹೊಳೆಯುತ್ತ ಬೀಳುವ ದೃಶ್ಯ ಮನಮೋಹಕವಾಗಿರುತ್ತದೆ. ಮುಂದೆ ಇದೇ ಬಂಡಾಜೆ ಹೊಳೆಯಾಗಿ ಹರಿದು ಸಾಗುತ್ತದೆ. ಬೇಸಿಗೆಯಲ್ಲೂ ಈ ಜಲಪಾತವನ್ನು ವೀಕ್ಷಿಸಲೆಂದೇ ಸಾಹಸಿಗರು ತಂಡೋಪತಂಡವಾಗಿ ಬರುತ್ತಾರೆ. ಬಂಡಾಜೆ ಜಲಪಾತದ ಕೆಳಗೆ ಮಿತ್ತಬಂಡಾಜೆ ಎಂಬ ತಾವಿನಲ್ಲಿ ಹಿಂದೆ ಮಲೆಕುಡಿಯರು ವಾಸಿಸುತ್ತಿದ್ದು, ಅಲ್ಲಿ ನಾಗರಕಲ್ಲುಗಳು ಸಾಕ್ಷಿವೆ. ಅಲ್ಲದೇ ಹತ್ತಾರು ಮಂದಿ ಇರಬಹುದಾದ ವಿಶಾಲವಾದ ಕಲ್ಲಾಸರೆ ಹಾಗೂ ಗುಹೆಗಳಿವೆ. ಮಿಗಿಲಾಗಿ ಪುರಾತನ ಕೋಟೆಯ ಕುರುಹುಗಳೂ ಇದೆ.

**ಬಜಪೆ (ಬಜ್ಪೆ) (೮,೦೩೩) :** ತಾಲೂಕು ಕೇಂದ್ರ ಮಂಗಳೂರಿನಿಂದ ೨೫ ಕಿ.ಮೀ. ಈಶಾನ್ಯಕ್ಕೆ ಇರುವ ಜನಗಣತಿ(ಸೆನ್ಸಸ್) ಪಟ್ಟಣ. ಮಿಗಿಲಾಗಿ ವಿಮಾನ ನಿಲ್ದಾಣವನ್ನು ಹೊಂದಿರುವ ಸ್ಥಳವಾಗಿದೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ರೂಪುಗೊಳ್ಳುತ್ತಿದ್ದು,

ಇತ್ತೀಚೆಗೆ ಅದನ್ನು ಅಂತರಾಷ್ಟ್ರೀಯ ವಿಮಾನ ನಿಲ್ದಾಣವೆಂದೂ ಘೋಷಿಸಲಾಗಿದೆ. ಪ್ರತಿನಿತ್ಯ ಇಲ್ಲಿಂದ ಬೆಂಗಳೂರಿಗೆ ಮೂರು ಹಾಗೂ ಮುಂಬಯಿಗೆ ನಾಲ್ಕು ವಿಮಾನಗಳ ಪ್ರಯಾಣ ಸೌಲಭ್ಯ ಲಭ್ಯವಿದೆ. ಇದೇ ಪರಿಸರದಲ್ಲಿರುವ ಬಜಪೆ ಜಲಪಾತವು ನಿಸರ್ಗ ಪ್ರಿಯರಿಗೆ ಮೆಚ್ಚಿನದಾಗಿದೆ. ವಿಮಾನನಿಲ್ದಾಣಕ್ಕೆ ಸುಮಾರು ಮೂರು ಕಿ.ಮೀ. ದೂರದಲ್ಲಿರುವ **ಆದ್ಯಪಾಡಿ**ಯಲ್ಲಿ ಪುರಾತನ ಕಾಲದ ಆದಿನಾಥೇಶ್ವರ ದೇವಾಲಯವಿದೆ. ಅನತಿದೂರದಲ್ಲಿರುವ **ಸುಂಕದಕಟ್ಟೆ**ಯಲ್ಲಿ ಇತ್ತೀಚಿನ ರಚನೆಯಾದರೂ ಸುಂದರವಾದ ಅಂಬಿಕಾ ಅನ್ನಪೂರ್ಣೇಶ್ವರಿಯ ದೇವಾಲಯವಿದ್ದು, ಶಿಕ್ಷಣ ಸಂಸ್ಥೆಯೊಂದು ಇಲ್ಲಿ ಕಾರ್ಯನಿರ್ವಹಿಸುತ್ತಿದೆ. ಇಲ್ಲಿಯ ಇಗರ್ಜಿಯು ಹಿಂದಿನ ಕಾಲದ್ದಾಗಿದ್ದರೂ (೧೮೩೭) ನಂತರದಲ್ಲಿ ವಿಮಾನದಾಕೃತಿಯಲ್ಲಿ ಆಧುನೀಕರಣಗೊಂಡಿದೆ.

**ಬಳ್ಪ (೨,೮೯೯) :** ತಾಲೂಕು ಕೇಂದ್ರ ಸುಳ್ಯದಿಂದ ೩೪ ಕಿ.ಮೀ. ಈಶಾನ್ಯಕ್ಕೆ ಇರುವ ಚಾರಿತ್ರಿಕ ಮಹತ್ವದ ಸ್ಥಳ. ಅಲ್ಲಿರುವ ಶೂಲಿ ದುರ್ಗಾಪರಮೇಶ್ವರಿ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಗ್ರಾಮದ ಕೋಟೆಗುಡ್ಡೆ ಸ್ಥಳದಲ್ಲಿ ದೇವಿಯ ಶಿಲಾಮಯ ದೇವಾಲಯವಿದೆ. ಗುಡಿಯ ಗರ್ಭಗೃಹದಲ್ಲಿ ದೇವಿಯನ್ನೂ ತ್ರಿಶೂಲರೂಪಿಣಿಯಾಗಿ ಆರಾಧಿಲ್ಪಡುತ್ತಿರುವುದೊಂದು ವಿಶೇಷ. ಅದರಿಂದಾಗಿ ಅವಳಿಗೆ ಶೂಲಿನಿ ದುರ್ಗಾಪರಮೇಶ್ವರಿ ಎಂದೂ ಕರೆಯಲಾಗುತ್ತದೆ.

**ಬೆಳ್ತಂಗಡಿ (೭,೩೦೫) :** ಜಿಲ್ಲಾ ಕೇಂದ್ರ ಮಂಗಳೂರಿನಿಂದ ಈಶಾನ್ಯಕ್ಕಾದಂತೆ ಸುಮಾರು ೬೦ ಕಿ.ಮೀ. ದೂರದಲ್ಲಿರುವ ತಾಲೂಕು ಕೇಂದ್ರ. ಮಲೆನಾಡ ಮಡಿಲಲ್ಲಿ ಮಂಗಳೂರು–ಚಿಕ್ಕಮಂಗಳೂರು (ರಾಜ್ಯ ಹೆದ್ದಾರಿ ೬೪) ರಸ್ತೆಯಲ್ಲಿರುವ ಇದು ಸ್ವತಂತ್ರ ತಾಲೂಕಾಗಿ ೧೯೫೪ರಲ್ಲಿ ರೂಪುಗೊಂಡಿದ್ದು, ಮೂರು ಹೋಬಳಿ (ಬೆಳ್ತಂಗಡಿ ಕಸಬಾ, ವೇಣೂರು, ಕೊಕ್ಕಡ) ಹಾಗೂ ೮೪ ಗ್ರಾಮಗಳನ್ನು ಒಳಗೊಂಡಿದ್ದು, ತಾಲೂಕು ಕೇಂದ್ರ ಬೆಳ್ತಂಗಡಿಯು ಇಂದು ಪಟ್ಟಣ ಪಂಚಾಯಿತಿಯ ಆಡಳಿತಕ್ಕೆ ಒಳಪಟ್ಟಿದೆ. ಬೆಳ್ತಂಗಡಿಗೆ ತುಳುವಿನಲ್ಲಿ 'ಬೋಳ್ತೇರ್' ಎಂದು ಕರೆಯಲಾಗುತ್ತದೆ. ಇಲ್ಲಿ ಬಂಗರಸರ ಕಾಲಕ್ಕೆ ಸೇರಿದ ಕೋಟೆ, ಸೋಮನಾಥೇಶ್ವರ ಗುಡಿ ಹಾಗೂ ಜೈನಬಸದಿಗಳಿವೆ. ಕುತ್ಯಾರು ಪ್ರದೇಶದಲ್ಲಿರುವ ಸೋಮನಾಥೇಶ್ವರ ದೇವಾಲಯವು ಬಂಗರಸರ ಆರಾಧ್ಯ ದೈವವಾಗಿದ್ದು, ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ಅಲ್ಲದೇ ಇತ್ತೀಚಿನದಾದ ಮಹಾಮ್ಮಾಯಿ (ಮಾರಿ) ದೇವಾಲಯವಿದೆ. ಅತ್ತಿಯಡ್ಕದಿಂದ ೧೮೮೫ರಲ್ಲಿ ವಲಸೆ ಬಂದ ಕ್ರೈಸ್ತರು ಇಲ್ಲಿಯ ಗುಡ್ಡದ ಮೇಲೆ ಇಗರ್ಜಿಯನ್ನು ನಿರ್ಮಿಸಿಕೊಂಡರು. ಆದರೆ ನೀರಿನ ಕೊರತೆಯಿಂದ ಆ ಗುಡ್ಡದ ತಪ್ಪಲಿನಲ್ಲೇ ಈಗ ಅಸ್ತಿತ್ವದಲ್ಲಿರುವ ಹೋಲಿ ರಿಡೀಮರ್ಸ್ ಚರ್ಚನ್ನು (ಸ್ವಾಬ್ ಸಾಲ್ವಾದೊರಾಚಿ ಇಗರ್ಜಿ) ೧೯೦೮ರಲ್ಲಿ ನೂತನವಾಗಿ ನಿರ್ಮಿಸಿಕೊಂಡಿದ್ದು, ಇಗರ್ಜಿಯಲ್ಲಿ ಏಸುವಿನ ಮಹಾನಿರ್ವಾಣಕ್ಕೆ ಸಂಬಂಧಿಸಿದಂತಹ ೧೪ ಮನಮೋಹಕ ವರ್ಣಚಿತ್ರಗಳಿವೆ. ಬೆಳ್ತಂಗಡಿಯಲ್ಲಿ ಸೋಮವಾರದಂದು ವಾರದ ಸಂತೆಯಾಗುತ್ತದೆ. ಪ್ರಸಿದ್ಧ ಇತಿಹಾಸತಜ್ಞ ಸೂರ್ಯನಾಥ ಕಾಮತ್ ಇಲ್ಲಿಯವರು.

**ಬೆಳ್ಳಾರೆ (೪,೭೦೧):** ತಾಲೂಕು ಕೇಂದ್ರ ಸುಳ್ಯದಿಂದ ೧೯ಕಿ.ಮೀ. ಉತ್ತರಕ್ಕೆ ಕುಕ್ಕೆಸುಬ್ರಹ್ಮಣ್ಯ ರಸ್ತೆಯಲ್ಲಿರುವ ಸಣ್ಣ ಪಟ್ಟಣ. ಹಿಂದೆ ಇದು ಬಳ್ಳಾಲರೆಂಬ ಸಾಮಂತರಸರ ರಾಜಧಾನಿಯಾಗಿದ್ದು, ಅವರ ಕಾಲಕ್ಕೆ ಸೇರಿದ ಅರಮನೆ ಹಾಗೂ ಬಸದಿಗಳಿಂದು ಶಿಥಿಲಾವಸ್ಥೆಯಲ್ಲಿ ನಿಂತಿವೆ. ಇಕ್ಕೇರಿಯ ವೆಂಕಟಪ್ಪ ನಾಯಕನು ಇಲ್ಲೊಂದು ಕೋಟೆ ನಿರ್ಮಿಸಿ, ಪಂಜ, ಬೆಳ್ಳಾರೆ ಹಾಗೂ ಅಮರಸುಳ್ಯ ಮಾಗಣೆಗಳನ್ನು ಅದರ ನಿಯಂತ್ರಣಕ್ಕೊಳಪಡಿಸಿದನೆಂದು ತಿಳಿದು ಬರುತ್ತದೆ. ಆದರೆ ಮುಂದೆ ಈ ಮಾಗಣೆಗಳನ್ನು ಸೋಮಶೇಖರ ನಾಯಕನು ಕೊಡಗಿನ ಅರಸರಿಗೆ ಒಪ್ಪಿಸಿದನಾದರೂ ಟಿಪ್ಪು ಅದನ್ನು ೧೭೭೫ರಲ್ಲಿ ವಶಪಡಿಸಿಕೊಂಡನು. ಆದರೆ ೧೭೯೯ರಲ್ಲಿ, ಅವನ ಪತನಾನಂತರ ಇವನ್ನು ಕೊಡಗು ಅರಸರೇ ಪಡೆದರಾದರೂ ೧೮೩೪ರಲ್ಲಿ ಅವು ಬ್ರಿಟೀಷರ ಸ್ವಾಧೀನಕ್ಕೊಳಪಟ್ಟವು. ಇಲ್ಲಿಯ ಕೋಟೆಗುಡ್ಡೆ ಎಂಬಲ್ಲಿ ಕೋಟೆಯ ಅವಶೇಷಗಳಿದ್ದು, 'ಬಸ್ತಿಗುಡ್ಡೆ' ಎಂಬ ಸ್ಥಳದಲ್ಲಿನ ಜಿನ ಮಂದಿರ ಪಾಳು ಬಿದ್ದಿದೆ. ಗೌರಿಹಳ್ಳದ ದಂಡೆಯ ಮೇಲಿರುವ ಈ ಊರಲ್ಲಿ ಲಕ್ಷ್ಮೀವೆಂಕಟರಮಣ, ಅಜಿಪಿಲ ಮಹಾಲಿಂಗೇಶ್ವರ ಮುಂತಾದ ಅರ್ವಾಚೀನ ಕಾಲದ ದೇವಾಲಯಗಳಿವೆ. ಅಲ್ಲದೇ ಸುಂದರವಾದ ಜಕಾರಿಯಾ ಜುಮ್ಮಾಮಸೀದಿ ಹಾಗೂ ದರ್ಗಾಗಳಿವೆ.

**ಬೈಲಂಗಡಿ :** ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ೨೨ ಕಿ.ಮೀ. ದೂರದಲ್ಲಿರುವ **ತೋಟತ್ತಾಡಿ** (೩,೨೨೨) ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಒಂದು ಉಪಗ್ರಾಮ. ಹಿಂದೆ ಇದು 'ಮೂಲ' ಎಂಬ ಜೈನ ಅರಸುಮನೆತನದ ರಾಜಧಾನಿಯಾಗಿ ಮೆರೆದಿರುವ ಊರು. ೧೨ ಮಾಗಣೆಗಳ ಪ್ರಭುತ್ವವನ್ನು ಹೊಂದಿದ್ದ ಈ ಅರಸರ ಕಾಲಕ್ಕೆ ಸೇರಿದ ಪಾಳು ಅರಮನೆಯು ಗ್ರಾಮಕ್ಕೆ ಮೂರು ಕಿ.ಮೀ. ದೂರದಲ್ಲಿದೆ. ಈ ಅರಮನೆಯ ಆವರಣದಲ್ಲಿ 'ಮೂಲ' ಅರಸುಮನೆತನಕ್ಕೆ ಸೇರಿದ ಅರಸರ ೧೫ ಸಮಾಧಿಗಳಿವೆ. ಅಲ್ಲದೇ ಅಲ್ಲೇ ಇರುವ ಕರಿಕಲ್ಲಿನ ಎರಡು ಸಮಾಧಿಗಳು ಸುಮಾರು ೧೬೩೦ರಲ್ಲಿದ್ದ ಮೂಲ ರಾಜಮನೆತನದ ಅರಸುಕುಮಾರಿ

ಸೋಮಲದೇವಿ ಮತ್ತವಳ ಪತಿ ಬಂಗವಂಶದ ಇಮ್ಮಡಿ ಲಕ್ಷ್ಮಪ್ಪರಸರ ಸಮಾಧಿಗಳಾಗಿದ್ದು, ಅವರ ಸಾವಿನ ದಾರುಣ ಕಥೆಗೆ ಸಾಕ್ಷಿಯಾಗಿ ನಿಂತಿವೆ. ಅರಮನೆಯ ವಾಯವ್ಯ ಭಾಗದಲ್ಲಿರುವ ಬಸದಿಯನ್ನು ಸುಮಾರು ೧೬೧೧ರಲ್ಲಿ ಜೀರ್ಣೋದ್ಧಾರ ಮಾಡಿದ ಅಂಶ ಅಲ್ಲಿನ ಕಂಬವೊಂದರ ಮೇಲಿರುವ ಶಾಸನದಿಂದ ವೇದ್ಯವಾಗುತ್ತದೆ. ಅಲ್ಲದೇ ಪ್ರಾಚೀನ ಕಾಲದ ಸೋಮನಾಥೇಶ್ವರ ದೇವಾಲಯವಿಲ್ಲಿದೆ. ಸಮೀಪದಲ್ಲೇ ಇರುವ ನಾಗಬನದಲ್ಲಿ ಅಪರೂಪದ ನಾಗಶಿಲ್ಪಗಳಿವೆ. ಉಳಾಳ್ತಿ, ದುರ್ಗಾಪರಮೇಶ್ವರಿ, ಪುರುಷದೈವ, ಭೈರವ, ರಕ್ತೇಶ್ವರಿ ಮುಂತಾದ ದೈವಸ್ಥಾನಗಳು ಇಲ್ಲಿವೆ. ಪೇಟೆಭಾಗದಲ್ಲಿರುವ ಬಂಗಾಡಿಯ ಬಸದಿಯ ಮಾದರಿಯಲ್ಲೇ ಸೋಮಲದೇವಿಯು ಕಟ್ಟಿಸಿದ್ದ ಪಾರ್ಶ್ವನಾಥ ಬಸದಿಯು ಉಲ್ಲೇಖಾರ್ಹವಾಗಿದ್ದು, ಅಲ್ಲಿ ಪಾರ್ಶ್ವನಾಥ ತೀರ್ಥಂಕರ ಹಾಗೂ ಪದ್ಮಾವತಿ ಯಕ್ಷಿಯರ ಶಿಲ್ಪಗಳಿವೆ. 'ಮೂಲ'ಜೈನ ಅರಸರ ಕಾಲಕ್ಕೆ ಸೇರಿದ ಅರಮನೆಗಳು ಜಿಲ್ಲೆಯ ಶಿಶಿಲ, ನಿಡ್ಗಲ್ಲುಗಳಲ್ಲೂ ಇದ್ದವೆಂದು ತಿಳಿದುಬರುತ್ತದೆ.

**ಮಂಗಳೂರು (೪,೧೬,೨೬೨):** ಜಿಲ್ಲಾ ಕೇಂದ್ರವೂ ಆಗಿರುವ ಮಂಗಳೂರು, ರೇವುಪಟ್ಟಣವೂ ಹೌದು. ರಾಜಧಾನಿ ಬೆಂಗಳೂರಿನಿಂದ ಪೂರ್ವಕ್ಕೆ ೩೬೩ಕಿಮೀ ದೂರದಲ್ಲಿರುವ ಪ್ರಮುಖ ನಗರ. ಸ್ಥಳೀಯವಾಗಿ 'ಕೊಡಿಯಾಲ ಬಂದರು' ಎಂದೇ ಕರೆಯಲ್ಪಡುವ ಇದರ ಪಶ್ಚಿಮ ಹಾಗೂ ದಕ್ಷಿಣ ಭಾಗಗಳಲ್ಲಿ ಹರಿಯುವ ಗುರಪುರ ಹಾಗೂ ನೇತ್ರಾವತಿ ನದಿಗಳು, ಪಟ್ಟಣದ ದಕ್ಷಿಣ ಭಾಗದಲ್ಲಿ ಸಂಗಮಿಸಿ, ಸಮುದ್ರವನ್ನು ಸೇರುವಲ್ಲಿ ಹಿನ್ನೀರು ಸರೋವರವನ್ನು ರೂಪಿಸಿವೆ. ಇದು ಎರಡು ನದಿಗಳು ಸಂಗಮಿಸುವ ಕೂಡಲ ಸ್ಥಳವಾಗಿದ್ದು, ತುಳುವಿನಲ್ಲಿ ಈ ನಗರವನ್ನು ' ಕುಡಲ, ಕುಡ್ಲ' ಎಂದೂ ಕರೆಯುತ್ತಾರೆ. ಕೊಂಕಣ ರೈಲು ಮಾರ್ಗವು ಮಂಗಳೂರು ರೈಲು ನಿಲ್ದಾಣದಿಂದ ನಾಲ್ಕು ಕಿಮೀ ದೂರದಲ್ಲಿರುವ ಕಂಕನಾಡಿ ರೈಲು ನಿಲ್ದಾಣದ ಮೂಲಕ ಹಾದುಹೋಗುತ್ತದೆ.

ಪ್ರಮುಖ ಶೈಕ್ಷಣಿಕ ಕೇಂದ್ರವಾಗಿ, ಕೈಗಾರಿಕಾ ನಗರವಾಗಿ, ವಾಣಿಜ್ಯ ಪಟ್ಟಣವಾಗಿ, ನಿಸರ್ಗದತ್ತ ಪ್ರವಾಸಿ ತಾಣವಾಗಿ ಬೆಳೆದಿರುವ ಮಂಗಳೂರು ನಗರವು ಎರಡು (ಹಳೆಯ ಹಾಗೂ ನವ) ಬಂದರುಗಳನ್ನು ಹೊಂದಿದೆ. ತನ್ಮೂಲಕ ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಗರೋತ್ತರ ವಹಿವಾಟಿಗೂ ಹೆಸರಾಗಿದೆ. ಪಟ್ಟಣಕ್ಕೆ ೨೫ಕಿಮೀ ಅಂತರದಲ್ಲಿರುವ ಬಜಪೆ ವಿಮಾನನಿಲ್ದಾಣವು, ಅಂತರಾಷ್ಟ್ರೀಯ ವಿಮಾನನಿಲ್ದಾಣವೆಂದೂ ಈಗಾಗಲೇ ಘೋಷಿಸಲ್ಪಟ್ಟಿವೆ. ದಾಪುಗಾಲಿಟ್ಟಿದೆ. ರಾಷ್ಟ್ರೀಯ ಹೆದ್ದಾರಿ ೧೭ (ಮುಂಬಯಿ–ಕನ್ಯಾಕುಮಾರಿ ರಸ್ತೆ), ರಾಷ್ಟ್ರೀಯ ಹೆದ್ದಾರಿ ೪೮ (ಚೆನ್ನೈ–ಬೆಂಗಳೂರು–ಮಂಗಳೂರು ರಸ್ತೆ) ಹಾಗೂ ರಾಷ್ಟ್ರೀಯ ಹೆದ್ದಾರಿ ೧೩ (ಮಂಗಳೂರು–ಸೊಲ್ಲಾಪುರ ರಸ್ತೆ) ಮಂಗಳೂರು ಪಟ್ಟಣವನ್ನು ಸಂಪರ್ಕಿಸುವ ಪ್ರಮುಖ ಹೆದ್ದಾರಿಗಳಾಗಿವೆ. ಚಾರಿತ್ರಿಕ ಮಹತ್ವವನ್ನೂ ಹೊಂದಿರುವ ಈ ಪಟ್ಟಣವು ಸಮುದ್ರತೀರದ ಬೀಚುಗಳಿಂದಲೂ, ನಿಸರ್ಗಧಾಮಗಳಿಂದಲೂ, ದೇವಾಲಯ–ಮಸೀದಿ–ದರ್ಗಾ–ಇಗರ್ಜಿಗಳಿಂದಲೂ ಸಮೃದ್ಧವಾಗಿದ್ದು, ವೈವಿಧ್ಯತೆಯಿಂದ ಕೂಡಿದೆ.

ಪರಶುರಾಮನಿಂದ ಸ್ಥಾಪಿಸಲ್ಪಟ್ಟಿದ್ದೆಂದು ಹೇಳಲಾಗುವ ಮಂಗಳೂರು ಪಟ್ಟಣದ ಅಧಿದೇವತೆ ಮಂಗಳಾದೇವಿಯಿಂದಾಗಿ ಊರಿಗೆ 'ಮಂಗಲಾಪುರ' ಎಂಬ ಹೆಸರು ಬಂದಿದೆಯೆಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಆದರೆ 'ಮಂಗಲ' ಎಂದರೆ 'ಕೋಟೆ' ಎಂಬ ಅರ್ಥವೂ ಇರುವುದರಿಂದ, ರಾಜಕೀಯ ಹಾಗೂ ಸೈನಿಕ ಮಹತ್ವವನ್ನೂ ಇದು ಹಿಂದೆ ಹೊಂದಿದ್ದರಿಂದ, ಮಂಗಲಪುರ ಎಂಬ ಹೆಸರು ಈ ಪಟ್ಟಣಕ್ಕೆ ಬಂದಿರಬೇಕೆಂದು ಪಿ. ಗುರುರಾಜಭಟ್ಟರು ಅಭಿಪ್ರಾಯಪಡುತ್ತಾರೆ. ಪ್ರಾಚೀನ ಶಾಸನಗಳಲ್ಲಿ "ಮಂಗಲಪುರ" ಎಂದೇ ಉಲ್ಲೇಖಿತಗೊಂಡಿರುವ ಇದರ ಮೊದಲ ಉಲ್ಲೇಖ ಬಾದಾಮಿ ಚಾಳುಕ್ಯರ ಕಾಲಕ್ಕೆ ಸೇರಿದ, ಸುಮಾರು ಏಳನೆಯ ಶತಮಾನದಲ್ಲಿ ನೀಡಲ್ಪಟ್ಟಿರುವ ಮರಟೂರು ತಾಮ್ರಶಾಸನದಲ್ಲಿ ಕಂಡುಬರುತ್ತದೆ. ಇದರಿಂದ ಮಂಗಲೂರು, ಹಿಂದೆ ಆಲುಪರ ಆರಂಭಿಕ ರಾಜಧಾನಿಯಾಗಿತ್ತೆಂದು ಗೊತ್ತಾಗುತ್ತದೆ. ಆದರೆ ಅದಕ್ಕೂ ಮೊದಲೇ ಮಂಗಳೂರು ಪ್ರಮುಖ ಪಟ್ಟಣವಾಗಿ ಮಹತ್ವ ಪಡೆದಿತ್ತೆಂದು ಹೇಳಲಾಗುತ್ತದೆ. ಇದಕ್ಕೆ ಪೂರಕವಾಗಿ ಕ್ರಿಪೂ.ದಲ್ಲೇ ಇದು 'ಮಂಡೆಗೋರ, ಮಗನೂರು, ಮಂಗರೋತ' ಎಂಬ ರೂಪದಲ್ಲಿ ಕ್ರಮವಾಗಿ ಅರಿಯೇನ್, ಟಾಲೆಮಿ ಹಾಗೂ ಕಾಸ್ಮಸ್‌ರ ಕೃತಿಗಳಲ್ಲಿ ಉಲ್ಲೇಖಗೊಂಡಿದ್ದು, ಪ್ಲಿನಿ (ಕ್ರಿ.ಶ. ೧ನೇ ಶತಮಾನ)ಯ ಕೃತಿಯಲ್ಲಿರುವ 'ನಿಟ್ರಿಮಾಸ್' ನೇತ್ರಾವತಿಯನ್ನು ಸೂಚಿಸುತ್ತದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಅಲ್ಲದೆ, ಮಂಜರೂರು ಎಂಬ ರೂಪವೂ ದೊರೆಯುತ್ತದೆ. ಕ್ರಿಪೂ ಎಂಟನೆಯ ಶತಮಾನಕ್ಕೆ ಸೇರಿದ ಉದ್ಯಾವರದ ಶಾಸನವೊಂದರಲ್ಲಿ, ಮಾರನು ಕೊಡಾಲವನ್ನಾಳುತ್ತಿದ್ದಾಗ, ಧರ್ಮಣ್ಣನು ಮಂಗಲಪುರವನ್ನು ಕಿರಿಯನಾಗದತ್ತನಿಗೆ ದತ್ತಿಬಿಟ್ಟ ಅಂಶವಿದೆ. ಆದರೆ ಇಲ್ಲಿ ಉಲ್ಲೇಖಿತಗೊಂಡಿರುವ ಕೊಡಾಲ–ಮಂಗಲಪುರಗಳನ್ನು, ಇಂದಿನ ಕೊಡಿಯಾಲಬೈಲು–ಮಂಗಳೂರು ಪರಿಸರಕ್ಕೆ ಸಂಬಂಧಿಸಿದ ಉಲ್ಲೇಖವೋ ಹೇಗೆಂದು ಪರಿಶೀಲಿಸುವ ಅಗತ್ಯವಿದೆ. ಆದರೆ ೧೩ನೆಯ ಶತಮಾನದ ಆರಂಭಕ್ಕಾಗಲೇ ಮಂಗಳೂರು ಆಳುಪರ ರಾಜಧಾನಿ ಪಟ್ಟಣವಾಗಿತ್ತೆಂಬುದಕ್ಕೆ ಖಚಿತ

ಶಾಸನಾಧಾರಗಳಿವೆ. ಮಂಗಳೂರಿನ ಕೆನರಾ ಶಾಲೆಯ ಆವರಣದಲ್ಲಿರುವ ೧೨೦೪ರ ಶಾಸನದಲ್ಲಿ ಕಂಡುಬರುವ, 'ರಾಜಧಾನಿ ಮಂಗಳಾಪುರದ ಹಿರಿಯರಮನೆಯ ಭುವನಾಶ್ರಯ ಮೊಗಸಾಲೆ'ಯ ಉಲ್ಲೇಖ ಗಮನಾರ್ಹವಾಗಿದೆ. ಮೂಡಬಿದರೆಯ ೧೨೦೪ರ ಶಾಸನದಲ್ಲಿ 'ಮಂಗಲೂರು ಗದ್ಯಾಣ'ದ ಉಲ್ಲೇಖವಿದೆ. ಇದರಿಂದ ಆ ವೇಳೆಗಾಗಲೇ ಟಂಕಶಾಲೆಯೊಂದು ಮಂಗಳೂರಿನಲ್ಲಿ ಅಸ್ತಿತ್ವದಲ್ಲಿದ್ದ ಅಂಶ ವೇದ್ಯವಾಗುತ್ತದೆ. ಇದೇ ರೀತಿ ಕದ್ರಿಯ ಸುಮಾರು ೧೩೦೨ರ ಶಾಸನದಲ್ಲೂ ರಾಜಧಾನಿ ಮಂಗಳಾಪುರದ ಉಲ್ಲೇಖವಿದೆ. ವಿಜಯನಗರದರಸರ ಕಾಲದಲ್ಲಿ ಮಂಗಳೂರು ಪ್ರಾಂತಿಯ ಕೇಂದ್ರವಾಗಿದ್ದು, 'ಮಂಗಳೂರು ರಾಜ್ಯ' ಎಂದೇ ಪ್ರಸಿದ್ಧವಾಗಿತ್ತು. ಇಬ್ನೂನ್ ಬತೂತ (೧೩೪೨), ಅಬ್ದುಲ್ ರಜಾಕ್ (೧೪೪೮)ರ ಕೃತಿಗಳಲ್ಲಿ ಮಂಗಳೂರಿನ ಬಗ್ಗೆ ಸಾಕಷ್ಟು ಮಾಹಿತಿ ಇದ್ದು. ವಿಜಯನಗರದರಸ ಕೃಷ್ಣದೇವರಾಯನು ಪೋರ್ಚುಗೀಸರಿಗೆ ಕೋಟೆಯೊಂದನ್ನು ನಿರ್ಮಿಸಿಕೊಳ್ಳಲು ಅನುಮತಿ ನೀಡಿದ್ದನು. ಏತನ್ಮಧ್ಯೆ, ಸುಮಾರು ೧೫೧೪ರಲ್ಲಿ ಭೇಟಿ ನೀಡಿದ್ದ ಪೋರ್ಚುಗೀಸ್ ಪ್ರವಾಸಿ ಡೂಯಟ್‌ಬಾರ್ಬೋಸಾ, ಮಂಗಳೂರು ಪಟ್ಟಣವು ಮೂರ್ ವ್ಯಾಪಾರಗಳಿಂದ ತುಂಬಿದ್ದ ಅಂಶವನ್ನು ದಾಖಲಿಸಿದ್ದಾನೆ. ಈ ನಡುವೆ ಮಂಗಳೂರು ಪಟ್ಟಣವು ಎರಡು ಬಾರಿ ಪೋರ್ಚುಗೀಸರ ಲೂಟಿಯಿಂದಾಗಿ ನಲುಗಿತು. ಪೋರ್ಚುಗೀಸರು ಹಾಗೂ ಕೆಳದಿನಾಯಕರ ನಡುವೆ ಏರ್ಪಟ್ಟ ಹಲವಾರು ಒಡಂಬಡಿಕೆಗಳಲ್ಲಿ ೧೬೭೦ರ ಒಪ್ಪಂದದ ಪ್ರಕಾರ ಮಂಗಳೂರು ಪಟ್ಟಣದಲ್ಲಿ ಫ್ಯಾಕ್ಟರಿ(ಕೋಠಿ)ಯೊಂದನ್ನು ನಿರ್ಮಿಸಿಕೊಳ್ಳಲು ಪೋರ್ಚುಗೀಸರಿಗೆ ಅನುಮತಿ ದೊರಕಿತು. ಕಾಲಾಂತರದಲ್ಲಿ ಅರಬ್ ವ್ಯಾಪಾರಿಗಳ ಮೇಲೆ ಪೋರ್ಚುಗೀಸರು ಹೇರಿದ ನಿರ್ಬಂಧಗಳಿಂದ ಬೇಸತ್ತ ಅರಬ್ಬರು, ೧೬೯೫ರಲ್ಲಿ ಮಂಗಳೂರು ಪಟ್ಟಣವನ್ನು ಸುಟ್ಟರು. ಮುಂದೆ ಹದಿನೆಂಟನೆಯ ಶತಮಾನದ ಆರಂಭದಲ್ಲಿ ಪೋರ್ಚುಗೀಸರನ್ನು ಕೆಳದಿ ನಾಯಕರು ಹೊರದೂಡಿದರಾದರೂ, ೧೭೧೪ರಲ್ಲಿ ಕಾರ್ಖಾನೆಯನ್ನು ನಿರ್ಮಿಸಿಕೊಳ್ಳಲು ಮತ್ತೊಮ್ಮೆ ಅವರಿಗೆ ನಾಯಕರು ಅನುಮತಿಸಿದರು. ಮುಂದೆ ೧೭೬೩ರಲ್ಲಿ ಮಂಗಳೂರನ್ನು ವಶಪಡಿಸಿಕೊಂಡ ಹೈದರಾಲಿಯು, ಅಲ್ಲಿ ಬಂದರುಕಟ್ಟೆ ಹಾಗೂ ಆಯುಧಗಾರಗಳನ್ನು ನಿರ್ಮಿಸಿದನು.

ಏತನ್ಮಧ್ಯೆ ಮಂಗಳೂರನ್ನು ಬ್ರಿಟೀಷರು ೧೭೬೮ರಲ್ಲಿ ಹೈದರಾಲಿಯಿಂದ ವಶಪಡಿಸಿಕೊಂಡರಾದರೂ ದೀರ್ಘಕಾಲ ತಮ್ಮ ಸ್ವಾಧೀನದಲ್ಲಿ ಇಟ್ಟುಕೊಳ್ಳಲಾಗಲಿಲ್ಲ. ಟಿಪ್ಪು ಹಾಗೂ ಬ್ರಿಟಿಷರ ನಡುವಣ ಮಂಗಳೂರು(೧೭೮೩)ಒಪ್ಪಂದದಿಂದಾಗಿ ಎರಡನೆಯ ಆ್ಯಂಗ್ಲೊ–ಮೈಸೂರು ಯುದ್ಧವು ಅಂತ್ಯಗೊಂಡಿದ್ದು, ಚರಿತ್ರಾರ್ಹ ಘಟನೆಯಾಗಿದೆ. ಮುಂದೆ ಮಂಗಳೂರನ್ನು ಬ್ರಿಟಿಷರು ಟಿಪ್ಪುವಿನಿಂದ ವಶಪಡಿಸಿಕೊಂಡರಾದರೂ, ಅದನ್ನು ೧೭೯೪ರಲ್ಲಿ ಪುನರ್‌ವಶಪಡಿಸಿಕೊಂಡ ಟಿಪ್ಪು, ಅಲ್ಲಿದ್ದ ಕೋಟೆಯನ್ನು ನೆಲಸಮಗೊಳಿಸಿದನು. ಆದರೆ ೧೭೯೯ರಲ್ಲಿ ಟಿಪ್ಪುವಿನ ಅವಸಾನದೊಂದಿಗೆ ಮಂಗಳೂರು ಬ್ರಿಟೀಷರಿಗೆ ಕೈವಶವಾಯಿತು. ಟಿಪ್ಪು ಮರಣಾನಂತರ ಉತ್ತರ – ದಕ್ಷಿಣ ಕನ್ನಡ (ಕೆನರಾ) ಪ್ರದೇಶಗಳು ಬ್ರಿಟಿಷರ ಮದ್ರಾಸ್ ಪ್ರಾಂತದ ಹಿಡಿತಕ್ಕೊಳಪಟ್ಟವು. ಫ್ರಾನ್ಸಿಸ್ ಬುಕಾನನ್ ೧೮೦೧ರಲ್ಲಿ ಈ ಪಟ್ಟಣಕ್ಕೂ ಭೇಟಿ ನೀಡಿದ್ದನು. ಕೊಡಗಿನಲ್ಲಿ ೧೮೩೭ರಲ್ಲಿ ಜರುಗಿದ ದಂಗೆಯ ಸಂದರ್ಭದಲ್ಲಿ ಮಂಗಳೂರು ಪಟ್ಟಣವನ್ನು ಪ್ರವೇಶಿಸಿದ್ದ ಬಂಡುಕೋರರು ಜೈಲಿಗೆ ಮುತ್ತಿಗೆ ಹಾಕಿ ಬಾಗಿಲೊಡೆದರು. ಅಲ್ಲದೆ ಬ್ರಿಟೀಷ್ ಕಚೇರಿಗಳಿಗೆ ಬೆಂಕಿ ಇಟ್ಟರು. ಆದರೆ ಈ ದಂಗೆಯನ್ನು ತಕ್ಷಣಕ್ಕೆ ನಿಯಂತ್ರಿಸಲಾಯಿತು. ೧೮೬೨ರಲ್ಲಿ ಕೆನರಾ ಜಿಲ್ಲೆಯನ್ನು ವಿಭಜಿಸಿ ದಕ್ಷಿಣ ಹಾಗೂ ಉತ್ತರ ಕೆನರಾ ಜಿಲ್ಲೆಗಳನ್ನು ರೂಪಿಸಲಾಯಿತು. ದಕ್ಷಿಣ ಕನ್ನಡವು ಮದ್ರಾಸ್ ಪ್ರಾಂತದ ನಿಯಂತ್ರಣದಲ್ಲಿ ಮುಂದುವರಿದರೆ, ಉತ್ತರ ಕನ್ನಡವು ಮುಂಬಯಿ ಪ್ರಾಂತಾಡಳಿತದ ನಿಯಂತ್ರಣಕ್ಕೊಳಪಟ್ಟಿತು. ಇದು ೧೯೪೭ರವರೆಗೆ ಮುಂದುವರಿಯಿತು. ಸ್ವಾತಂತ್ರ್ಯನಂತರ ಮದ್ರಾಸ್ ರಾಜ್ಯದ ನಿಯಂತ್ರಣಕ್ಕೊಳಪಟ್ಟಿದ್ದ ಇದು ೧೯೫೬ರಲ್ಲಿ ಮೈಸೂರು ರಾಜ್ಯದಲ್ಲಿ ವಿಲೀನವಾಯಿತು. ಈ ಅವಧಿಯಲ್ಲಿ (೧೭೯೯–೧೯೫೬) ಮಂಗಳೂರು ಪ್ರಮುಖ ಬಂದರಾಗಿ, ಆಡಳಿತ ಕೇಂದ್ರವಾಗಿ ಮಹತ್ವದ ಪಾತ್ರವಹಿಸಿತು.

ಕೋಟೆಗಳು: ಹಿಂದೆ, ಮಂಗಳೂರು ಪಟ್ಟಣದಲ್ಲಿ ವಿವಿಧ ಕಾಲಾವಧಿಯಲ್ಲಿ ನಿರ್ಮಿಸಲ್ಪಟ್ಟಿದ್ದ ನಾಲ್ಕು ಕೋಟೆಗಳಿದ್ದವೆಂದು ತಿಳಿದುಬರುತ್ತದೆ. ಇದಕ್ಕೆ ಪೂರಕವಾಗಿ ೧) ಬಂಗರಸರು ಉರ್ವದ ಬಳಿ ನಿರ್ಮಿಸಿದ್ದ ಕೋಟೆಯನ್ನು ಇಕ್ಕೇರಿಯ ವೆಂಕಟಪ್ಪ ನಾಯಕನು ನೆಲಸಮಗೊಳಿಸಿದನು. ಆದರೆ, (೧೬೨೩) ಆ ವೇಳೆಗಾಗಲೇ ಅದು ಶಿಥಿಲಾವಸ್ಥೆಯಲ್ಲಿದ್ದ ಅಂಶವನ್ನು ಪೆಟ್ರಾಡೆಲ್ಲಾ ವೆಲ್ಲೆಯು ದಾಖಲಿಸಿದ್ದಾನೆ. ೨) ಬಿದನೂರಿನ ಬಸವಪ್ಪ ನಾಯಕನು (೧೭೪೦–೫೪) ನಿರ್ಮಿಸಿದ್ದ ಕೋಟೆಯನ್ನು ಟಿಪ್ಪು ೧೭೮೪ರಲ್ಲಿ ಧ್ವಂಸ ಮಾಡಿದನೆಂದು ಹೇಳಲಾಗುತ್ತದೆ. ೩) ಪೋರ್ಚುಗೀಸರು ೧೫೬೮ರಲ್ಲಿ ನಿರ್ಮಿಸಿದ್ದ ಸಂತ ಸೆಬಾಸ್ಟೀನ್ ಕೋಟೆ ಹಾಗೂ ೪) ಇಂದು ದೀಪಸ್ತಂಭವಿರುವ ಬೆಟ್ಟದ ಮೇಲೆ, ಹಿಂದೆ ಇತ್ತೆಂದು ಹೇಳಲಾಗುವ ಕೋಟೆಗಳನ್ನು ಉಲ್ಲೇಖಿಸಲಾಗುತ್ತದೆ. ಆದರೆ ಮಧ್ಯಯುಗದಲ್ಲಿ ತುಳುನಾಡನ್ನು ಆಳುತ್ತಿದ್ದ ಅಲುಪರಿಗೆ, ಮಂಗಳೂರು (ಮಂಗಲಪುರ) ರಾಜಧಾನಿ ಪಟ್ಟಣವಾಗಿದ್ದ ಅಂಶ, ೧೨೦೪ರ ಮಂಗಳೂರು ಹಾಗೂ ೧೩೦೨ರ

ಕದ್ರಿ ಶಾಸನಗಳಿಂದ ಖಚಿತವಾಗುತ್ತದೆ. ಅದರಲ್ಲೂ ಮಂಗಳೂರಿನ ೧೨೦೪ರ ಶಾಸನದಿಂದ ಮಂಗಲಾಪುರದಲ್ಲಿದ್ದ ಹಿರಿಯ ಅರಮನೆಗೆ 'ಭುವನಾಶ್ರಯ' ಎಂಬ ಹೆಸರಿದ್ದ ಅಂಶವೂ ಸ್ಪಷ್ಟವಾಗುತ್ತದೆ. ಆದರೆ ಇಂದು ಈ ಕೋಟೆಗಳಲ್ಲಿ, ಬಸವಪ್ಪನಾಯಕನಿಂದ ನಿರ್ಮಾಣವಾಗಿತ್ತೆಂದು ಹೇಳಲಾಗುವ ಕೋಟೆಯು ಎರಡು ಸುತ್ತಿನದಾಗಿದ್ದು, ಕೆಳಗಿನ ಸುತ್ತು, ವಿಶಾಲ ಪ್ರದೇಶವನ್ನು ಒಳಗೊಂಡಿದ್ದು, ಆರು ಕೊತ್ತಲಗಳಿದ್ದು, ಹಲವಾರು ಕಾವಲುಗೋಪುರಗಳಿದ್ದವೆಂದು ತಿಳಿದುಬರುತ್ತದೆ. ಇದಕ್ಕೂ ಮೊದಲು ಅದೇ ಸ್ಥಳದಲ್ಲಿ ಬಂಗರಸರ ಕೋಟೆಯು ಇತ್ತೆಂದು ಹೇಳಲಾಗುತ್ತದೆ. ಹಳೆಯ ಕೋಟೆಯ ಅವಶೇಷಗಳನ್ನು, ಇಂದು ಫೋರ್ಟ್ (ಏಳನೆಯ) ವಾರ್ಡ್ ಎಂದೇ ಕರೆಯಲಾಗುವ ಪ್ರದೇಶದಲ್ಲಿ ಮಾತ್ರ ನೋಡಬಹುದಾಗಿದೆ. ಹಿಂದೆ ಇದ್ದ ಸಂತ ಸೆಬಾಸ್ಟೀನ್ ಕೋಟೆ ಪ್ರದೇಶದಲ್ಲಿ ಇಂದು ಹೆಂಚಿನ ಕಾರ್ಖಾನೆಯಿದೆಯಾದರೂ, ಕಡಲಂಚಿನಲ್ಲಿ ಕೋಟೆಯ ಅವಶೇಷಗಳನ್ನು ಗುರುತಿಸಬಹುದೆಂದು ಹೇಳಲಾಗುತ್ತದೆ.

ಸುಲ್ತಾನ ಬತ್ತೇರಿ: ಗುರುಪುರ ನದಿ ದಂಡೆಯ ಮೇಲಿರುವ ಇದು ಬೋಳೂರು ಪ್ರದೇಶದಲ್ಲಿದೆ. ಶತ್ರುಗಳ ಯುದ್ಧ ನೌಕೆಗಳ ಪ್ರವೇಶವನ್ನು ನಿಯಂತ್ರಿಸುವ ಉದ್ದೇಶದಿಂದ ಟಿಪ್ಪು ಸುಲ್ತಾನನು ಈ ಕಾವಲು ಗೋಪುರವನ್ನು ನಿರ್ಮಿಸಿದನೆಂದು ಹೇಳಲಾಗುತ್ತದೆ. ಸುಮಾರು ೨೦ ಅಡಿ ಎತ್ತರವಿರುವ ಇದೊಂದು ಕಾವಲುಗೋಪುರವಾದರೂ, ಆಕರ್ಷಕವಾಗಿದ್ದು, ಸಂರಕ್ಷಿತ ಸ್ಮಾರಕವೆಂದು ರಾಜ್ಯ ಸರ್ಕಾರದ ಪುರಾತತ್ವ ಇಲಾಖೆಯಿಂದ ಘೋಷಿಸಲ್ಪಟ್ಟಿದೆ.

ಬಾವುಟ ಗುಡ್ಡೆ / ದೀಪಸ್ತಂಭ ಗುಡ್ಡೆ ಎಂದೂ ಕರೆಯಲ್ಪಡುವ ಈ ಗುಡ್ಡವು ಪಟ್ಟಣದ ನಡುವೆ ಇದೆ. ಬೆಟ್ಟದ ಮೇಲೆ ಸಮುದ್ರದತ್ತ ಮುಖ ಮಾಡಿರುವ ಪಾಳು ಕಟ್ಟಡವಿದ್ದು, ಹಿಂದೆ ಇದೇ ಲೈಟ್‌ಹೌಸ್ ಆಗಿತ್ತು. ಪುರಸಭೆಯವರಿಂದು ಅದರ ಸುತ್ತ ಉದ್ಯಾನವನ್ನು ರೂಪಿಸಿದ್ದಾರೆ.

ಮಂಗಳಾದೇವಿ ದೇವಾಲಯ: ಪಟ್ಟಣದ ಅಧಿದೇವತೆಯಾದ ಮಂಗಳಾದೇವಿಯನ್ನು ಪರಶುರಾಮನು ಪ್ರತಿಷ್ಠಾಪಿಸಿ ಆಲಯವನ್ನು ನಿರ್ಮಿಸಿದನೆಂದು ಪೌರಾಣಿಕವಾಗಿ ಹೇಳಲಾಗುತ್ತದೆ. ಸುಮಾರು ೧೦ನೆಯ ಶತಮಾನದ ಆರಂಭದ ದಶಕದಲ್ಲಿ ಮತ್ಸ್ಯೇಂದ್ರನಾಥ ಮುನಿಯು ಇದನ್ನು ಪ್ರತಿಷ್ಠಾಪಿಸಿ ಪೂಜಿಸಿದನೆಂದು ನಂಬಲಾಗುತ್ತದೆ. ಅಲ್ಲದೆ ಮತ್ಸ್ಯೇಂದ್ರನಾಥ ಮುನಿಯ ಆದೇಶದಂತೆ ಅತ್ತಾವರದ ಬಲ್ಲಾಳ ದೊರೆಯೊಬ್ಬನು ಈ ತಾಣದಲ್ಲಿ ದೇವಿಯ ಆಲಯವನ್ನು ನಿರ್ಮಿಸಿದನೆಂದು ಹೇಳಲಾಗುತ್ತದೆ. ಮುಂದೆ ಸುಮಾರು ೯೬೮ರಲ್ಲಿ ಇದನ್ನು ವಿಸ್ತಾರಗೊಳಿಸುವ ಮೂಲಕ, ಅಲುಪ ರಾಜ ಇಮ್ಮಡಿ ಕುಂದವರ್ಮನು ಅದನ್ನು ಪುನರ್ ಜೀರ್ಣೋದ್ಧಾರ ಮಾಡಿಸಿದನೆಂದೂ ತಿಳಿದುಬರುತ್ತದೆ. ಆ ಸಂದರ್ಭದಲ್ಲಿ ಗೋಕರ್ಣನಾಥನೂ ಉಪಸ್ಥಿತನಿದ್ದನೆಂದು ಹೇಳಲಾಗುತ್ತದೆ. ಈಗಿರುವ ದೇವಾಲಯವು ಬಿದನೂರಿನ ನಾಯಕರ ಕಾಲದಲ್ಲಿ ಪುನರ್ ನಿರ್ಮಾಣಗೊಂಡಿತೆಂದು ಹೇಳಲಾಗುತ್ತದೆ. ವಿಶಾಲವಾದ ಪ್ರಾಕಾರದೊಳಗಿರುವ ಮಂಗಳಾದೇವಿ ದೇವಾಲಯದ ಗರ್ಭಗೃಹದಲ್ಲಿ ಪರಶುರಾಮ ಪ್ರತಿಷ್ಠಿತವೆಂದು ಹೇಳಲಾಗುವ, ಆಸೀನ ಭಂಗಿಯಲ್ಲಿರುವಂತೆ ತೋರುವ, ಕಣ್ಣು–ಮೂಗು–ಕಿವಿಗಳನ್ನು ಸ್ಫುಟವಾಗಿ ತಿದ್ದಿಲ್ಲದ, ಉಬ್ಬಿದ ವಕ್ಷಸ್ಥಳವನ್ನು ಹೊಂದಿರುವಂತೆ ಕಾಣುವ, ಸುಮಾರು ಒಂದೂವರೆ ಅಡಿ ಎತ್ತರದ ಮಂಗಳಾದೇವಿಯ ಪ್ರಾಕೃತಿಕ ಶಿಲಾಬಿಂಬವಿದೆ.  ಈ ಗುಡಿಯನ್ನು ಬೆಳ್ಳಿಯ ತಗಡಿನಿಂದ ಅಚ್ಚುಕಟ್ಟುಗೊಳಿಸಲಾಗಿದೆ. ಗುಡಿಯ ಆವರಣದಲ್ಲಿ ವಿನಾಯಕ, ರಕ್ತೇಶ್ವರಿ ಮತ್ತಿತರ ಪರಿವಾರ ದೇವತೆಗಳ ಸನ್ನಿಧಾನವಿದೆ. ವಿನಾಯಕ ದೇವಾಲಯದ ಬದಿಯಲ್ಲಿರುವ ವೀರಗಲ್ಲು, ಮೂರು ಹಂತದ ಕೆತ್ತನೆಯನ್ನು ಹೊಂದಿದ್ದು, ಯೋಧನ ವೀರಮರಣವನ್ನು ದಾಖಲಿಸುತ್ತಿದ್ದು, ಸುಮಾರು ೧೪ನೆಯ ಶತಮಾನಕ್ಕೆ ಸೇರಿದೆ. ಈ ದೇವಿಯ ಜಾತ್ರೆಯು ನವರಾತ್ರಿ ಸಂದರ್ಭದಲ್ಲಿ ಹನ್ನೊಂದು ದಿನಗಳ ಕಾಲ ವಿಜೃಂಭಣೆಯಿಂದ ಜರುಗುತ್ತದೆ. ಅದರಲ್ಲೂ ದಶಮಿಯಂದು ಮಧ್ಯಾಹ್ನ ಜರುಗುವ ದೇವಿಯ ರಥೋತ್ಸವ ಆಕರ್ಷಕವಾಗಿರುತ್ತದೆ. ಅಂದು ಸಂಜೆ ಮಾರ್ನೋಮಿ (ಮಹಾನವಮಿ) ಕಟ್ಟೆಗೆ ದೇವಿಯು ರಥದಲ್ಲಿ ಕುಳಿತು ಕೈಗೊಳ್ಳುವ ವಿಜಯಯಾತ್ರೆಯೂ ವಿಶಿಷ್ಟವಾಗಿರುತ್ತದೆ. ಕುಂಭಮಾಸದ ಹುಣ್ಣಿಮೆಯಿಂದ ಐದು ದಿನ ನಡೆಯುವ ಕಿರುಜಾತ್ರೆಯ ಸಂದರ್ಭದಲ್ಲಿ ಪರಿವಾರ ದೈವಗಳಿಗೆ ನೇಮೋತ್ಸವವಿರುತ್ತದೆ. ಅಲ್ಲದೇ ಕಾರ್ತಿಕ ಮಾಸದಲ್ಲಿ ಲಕ್ಷ ದೀಪೋತ್ಸವವಿರುತ್ತದೆ.

ಮಂಗಳೂರಿನಲ್ಲಿ ಗಣಪತಿ, ವೆಂಕಟರಮಣ, ಕಾಳಿಕಾಂಬ, ವಿನಾಯಕ, ಗೋಕರ್ಣನಾಥ, ಮುಖ್ಯಪ್ರಾಣದೇವರು, ಲಕ್ಷ್ಮೀನಾರಾಯಣ, ಮಹಾಮಾಯಿ, ದತ್ತಾತ್ರೇಯ, ಉಮಾಮಹೇಶ್ವರಿ, ಗೋಪಾಲಕೃಷ್ಣ, ತ್ರಿಶೂಲೇಶ್ವರ, ವೀರಭದ್ರ, ಶರಭೇಶ್ವರ, ಪಂಚಲಿಂಗೇಶ್ವರ, ನಿರೇಶ್ವಾಲ್ಯ (ನೀರಶಿವಾಲಯ)ದ ಶಿವಾಲಯ ಮುಂತಾದ ದೇವಾಲಯಗಳಿವೆ. ಅಲ್ಲದೆ ಚಂದ್ರನಾಥ ತೀರ್ಥಂಕರ ಬಸದಿಯೂ ಇದೆ. ಮಿಗಿಲಾಗಿ ಕೃಷ್ಣಮಠ, ಗೋಕರ್ಣನಾಥ ಮಠ, ವೀರಶೈವ ಮಠ ಮುಂತಾದವುಗಳೂ ಇವೆ.

ವೆಂಕಟರಮಣ ದೇವಾಲಯ: ಕುದ್ರೋಳಿಯ ರಥಬೀದಿಯಲ್ಲಿರುವ ಗೌಡಸಾರಸ್ವತ ಬ್ರಾಹ್ಮಣರ ವೆಂಕರಮಣ ದೇವಾಲಯವು ಸುಂದರ ಶಿಲ್ಪಗಳನ್ನು ಹೊಂದಿದ್ದು, ಗರ್ಭಗೃಹದಲ್ಲಿ ವೆಂಕರಮಣ ಹಾಗೂ ಪರಿವಾರ ದೇವತೆಗಳಿವೆ. ಈ ದೇವಾಲಯದಲ್ಲಿ ನವರಾತ್ರಿ ಅಂಗವಾಗಿ ವಿಶೇಷವಾದ ಶಾರದಾ ಮಹೋತ್ಸವವನ್ನು ಆಚರಿಸುತ್ತಾರೆ. ಈ ದೇವಿಯ ಮೃಣ್ಮೂರ್ತಿಯ ವಿಸರ್ಜನಾ ಮಹೋತ್ಸವವೂ ವಿಜೃಂಭಣೆಯಿಂದ ಕೂಡಿರುತ್ತದೆ. ಅದರಲ್ಲಿ ಪಾಲ್ಗೊಳ್ಳುವ ಹುಲಿವೇಷದ ತಂಡಗಳದೇ ವಿಶೇಷ ಆಕರ್ಷಣೆ. ರಥಬೀದಿಯಲ್ಲಿಯೇ ಇರುವ ಮಹಾಮಾಯಾ ದೇವಾಲಯ, ಚಿತ್ರಪುರ ಸಾರಸ್ವತರ ಸಮಾಧಿಮಠದಲ್ಲಿ ಮಠದ ಆರನೆಯ ಗುರುಗಳಾದ ವಾಮನಾಶ್ರಮ ಸ್ವಾಮಿಗಳ (೧೮೨೩–೩೯) ಸಮಾಧಿ ಇದೆ. ಅದರ ಮೇಲೆ ಭವಾನಿಶಂಕರ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಅಲ್ಲೇ ವೇಣುಗೋಪಾಲದೇವರ ಸನ್ನಿಧಿಯೂ ಇದೆ. ಸಮಾಧಿಮಠದ ಸನಿಹದಲ್ಲಿ ಉಮಾಮಹೇಶ್ವರ ಗುಡಿ ಇದೆ. ಕ್ಯಾತಾಯಿನಿಮಠ, ನರಸಿಂಹಮಠ, ಹಾಗೂ ಕೃಷ್ಣದೇವಾಲಯಗಳು ಅದೇ ಬೀದಿಯಲ್ಲಿವೆ. **ಶರವು** ಎಂಬಲ್ಲಿ ಶರಭೇಶ್ವರ, ಮಹಾಗಣಪತಿ ದೇವಾಲಯಗಳಿವೆ. ಜಿಲ್ಲೆಯ ಪ್ರಾಚೀನ ಗುಡಿಗಳಲ್ಲಿ ಒಂದಾದ ಇದರ ಗರ್ಭಗೃಹದಲ್ಲಿ ಶರಭೇಶ್ವರ ಲಿಂಗವಿದ್ದು, ಗುಡಿಯ ದಕ್ಷಿಣ ಗೋಡೆಯ ಮೇಲಿರುವ ಉದ್ಭವ ಗಣಪತಿಗೆ ಚಿನ್ನದ ಕವಚದಿಂದ ಅಲಂಕರಿಸಲಾಗಿದೆ. ಚಂದ್ರಮಾನ ಯುಗಾದಿಯಿಂದ ಎಂಟು ದಿನಗಳ ಕಾಲ ನಡೆಯುವ ಶರಭೇಶ್ವರ ಜಾತ್ರೆಯಲ್ಲಿ ಎಂಟನೆಯ ದಿನದಂದು ಶಿವಗಣಪರ ತೇರನ್ನು ಎಳೆಯಲಾಗುತ್ತದೆ. ಇಲ್ಲಿ ನಡೆಯುವ ಮಣ್ಣಗುಡ್ಡೆ ಗುರ್ಜಿ ಉತ್ಸವವೂ ವಿಶಿಷ್ಟವಾಗಿರುತ್ತದೆ.

ಕುದ್ರೋಳಿಯ **ಗೋಕರ್ಣನಾಥ ದೇವಾಲಯವು** ಸುಲ್ತಾನ ಬತ್ತೇರಿಗೆ ಹೋಗುವ ಮಾರ್ಗದಲ್ಲಿದೆ. ಇದು ಕಳೆದ ಶತಮಾನದ ಎರಡನೆಯ ದಶಕ (೧೯೧೨)ದಲ್ಲಿ ನಿರ್ಮಾಣಗೊಂಡಿದ್ದು, ಅದನ್ನು ೧೯೯೧ರಲ್ಲಿ ಚೋಳ ಶೈಲಿಯಲ್ಲಿ ಪುನರ್ ಜೀರ್ಣೋದ್ಧಾರ ಮಾಡಲಾಗಿದೆ. ಬಿಲ್ಲವ ಜನಾಂಗದವರಿಂದ ಪೋಷಿಸಲ್ಪಡುತ್ತಿರುವ ಈ ದೇವಾಲಯದ ಪ್ರಧಾನ ಗರ್ಭಗೃಹದಲ್ಲಿ ಗೋಕರ್ಣನಾಥ ಲಿಂಗವಿದೆ. ಅತ್ಯಂತ ವೈಭವೋಪೇತವಾಗಿರುವ ಈ ದೇವಾಲಯದ ನಾಲ್ಕು ದಿಕ್ಕಲ್ಲೂ ದ್ರಾವಿಡ ಗೋಪುರಗಳಿದ್ದು, ಒಳಗೆ ಗಣಪತಿ, ಸುಬ್ರಮಣ್ಯ, ಅನ್ನಪೂರ್ಣೇಶ್ವರಿ, ಆನಂದಭೈರವ ಮುಂತಾದ ಉಪದೇವತೆಗಳ ಪ್ರತ್ಯೇಕ ಗುಡಿಗಳಿವೆ. ಈ ದೇವಾಲಯದ ಪ್ರಾಕಾರದ ಒಳಭಿತ್ತಿಯಲ್ಲಿ ಆಕರ್ಷಕವಾದ ಪೌರಾಣಿಕ ವರ್ಣ ಚಿತ್ರಗಳಿವೆ. ಈ ದೇವಾಲಯದ ವತಿಯಿಂದ ದಸರೆಯಲ್ಲಿ ಜರುಗುವ ನವರಾತ್ರಿ ಉತ್ಸವವು ಅತ್ಯಂತ ವೈಭವದಿಂದ ಕೂಡಿದ್ದು, ನವಮಿಯಂದು ನಡೆಯುವ ನವದುರ್ಗ ಮೆರವಣಿಗೆ ಬಹಳ ಆಕರ್ಷಕವಾಗಿರುತ್ತದೆ. ಈ ಗುಡಿಯ ಬದಿಯಲ್ಲೇ ಇರುವ ಗೋಪಾಲಕೃಷ್ಣನ ಗುಡಿಯು ಇತ್ತೀಚಿನ ಆಕರ್ಷಕ ಶಿಲ್ಪಗಳನ್ನು ಒಳಗೊಂಡಿದೆ. ರಥದ ಬೀದಿಯಲ್ಲಿರುವ ಕಾಳಿಕಾಂಬ–ವಿನಾಯಕ ದೇವಾಲಯವು ವಿಶ್ವಕರ್ಮ ಸಮಾಜದವರಿಗೆ ಸೇರಿದ್ದು, ಬದಿಯಲ್ಲೇ ಗುರುಮಠವಿದೆ. ಮಠದಲ್ಲಿ ಪಂಚಮುಖಿ ವಿಶ್ವಕರ್ಮೇಶ್ವರನ ಸನ್ನಿದಿಯಿದೆ. ಅಲ್ಲದೆ ನಾಗಲಿಂಗಸ್ವಾಮಿಗಳ ಆಸೀನ ವಿಗ್ರಹವೂ ಇದೆ. **ಉರ್ವ**ದ ಮಾರಿಗುಡಿಯ ಮಾರಿಪರ್ವ ವಿಶೇಷವಾಗಿರುತ್ತದೆ.

ಅತ್ತಾವರದ ಚಕ್ರಪಾಣಿ ದೇವಾಲಯದಲ್ಲಿರುವ ೧೩೬೦ರ ಶಾಸನದಿಂದ, ಚಕ್ರಪಾಣಿ ದೇವಾಲಯದ ಆಂಜನೇಯ ದೇವರಿಗೆ ದತ್ತಿ ಬಿಟ್ಟಿರುವ ಅಂಶ ಗೊತ್ತಾಗುತ್ತದೆ. ಅಲ್ಲದೆ, ಚಕ್ರಪಾಣಿ ದೇವರಿಗೆ ಹಿಂದೆ ಅಲುಪ ಕುಲಶೇಖರನ ಕಾಲದಲ್ಲೂ ದತ್ತಿ ಬಿಟ್ಟಿದ್ದ ಅಂಶವೂ ದಾಖಲಾಗಿದೆ. ಈ ದೇವಾಲಯದ ಗರ್ಭಗೃಹದಲ್ಲಿರುವ ಗೋಪಿನಾಥನ ಶಿಲ್ಪವು ಆಕರ್ಷಕವಾಗಿದ್ದು ೧೨–೧೩ನೆಯ ಶತಮಾನದ ರೂಪಲಕ್ಷಣವನ್ನು ಹೊಂದಿದೆ. ಕುಲಶೇಖರದಲ್ಲಿರುವ ೧೪೪೦ರ ಶಾಸನದಿಂದ, ಅಲ್ಲಿಯ ವೀರನಾರಾಯಣ ದೇವಾಲಯದ ಧರ್ಮ ಸತ್ರಕ್ಕೆ ಮಂಗಳೂರಿನ ಕರಣಿಕರು ದತ್ತಿ ಬಿಟ್ಟ ಅಂಶ ವೇದ್ಯವಾಗುತ್ತದೆ. ಮಂಗಳೂರಿನ ಹಳೆಯ ಬಂದರು ಪರಿಸರದಲ್ಲಿರುವ ಆದಿನಾಥ ತೀರ್ಥಂಕರ ಬಸದಿಯಲ್ಲಿ ಮರದ ಕೆತ್ತನೆಯ ಅಪೂರ್ವ ಕಲಾಕೃತಿಗಳನ್ನು ನೋಡಬಹುದಾಗಿದೆ.

ಕದ್ರಿ: ಮಂಗಳೂರು ಪಟ್ಟಣದ ಭಾಗವೇ ಆಗಿರುವ ಕದ್ರಿಬೆಟ್ಟದ ಕೆಳಗಿರುವ ಕದ್ರಿಯು, ಮಂಜುನಾಥ ದೇವಾಲಯ ಹಾಗೂ ಗುಡಿಯ ಹಿಂಬದಿಯ ಬೆಟ್ಟದ ಮೇಲಿರುವ ನಾಥಪಂಥಕ್ಕೆ ಸೇರಿದ ಜೋಗಿಮಠಗಳಿಂದಾಗಿ ಪ್ರಸಿದ್ಧವಾಗಿದೆ. ಕದ್ರಿಯು ಪ್ರಾಚೀನ ಶಾಸನಗಳಲ್ಲಿ 'ಕದಳಿ', 'ಕದರಿಕಾ', 'ಕದಿರೆ' ಎಂದೆಲ್ಲ ಕರೆಯಲ್ಪಟ್ಟಿದ್ದು, ಹಿಂದೆ ನಾಥಪಂಥಕ್ಕೆ ಸೇರಿದ ಪ್ರಮುಖ ಧಾರ್ಮಿಕ ಕೇಂದ್ರವಾಗಿದ್ದು, ಮತ್ಸ್ಯೇಂದ್ರನಾಥ ಹಾಗೂ ಗೊರಖನಾಥ ಮುನಿಗಳು ಕದ್ರಿಕ್ಷೇತ್ರಕ್ಕೆ ಭೇಟಿ ನೀಡಿದ್ದರೆಂಬ ಐತಿಹ್ಯವಿದೆ. ಸುಮಾರು ೧೨–೧೩ನೆಯ ಶತಮಾನಕ್ಕೆ ಸೇರಿದ ಕದ್ರಿಯ ಶಾಸನದಲ್ಲಿ ಮಂಜುನಾಥನ ಪ್ರಥಮ ಉಲ್ಲೇಖವಿದೆ. ಅಲೆವೂರು ಶಾಸನ (೧೨೦೮) ಹಾಗೂ ಕದ್ರಿ ಶಾಸನ (೧೩೮೬) (೧೩೮೯) ಗಳಲ್ಲೂ ಮಂಜುನಾಥನ ಉಲ್ಲೇಖವಿದೆ. ಕದ್ರಿಯ ೧೪೦೫ರ ಶಾಸನದಲ್ಲಿ ಮಂಗಳೂರು ರಾಜ್ಯಕ್ಕೆ ಕದಿರೆಯು ಆದಿಸ್ಥಾನವಾಗಿದ್ದ ಉಲ್ಲೇಖವಿದೆ.

ವಿಶಾಲವಾದ ಪ್ರಾಕಾರದ ನಡುವೆ ಇರುವ ಮಂಜುನಾಥ ದೇವಾಲಯವು ನೇಪಾಳ ಶೈಲಿಯನ್ನು ಹೋಲುತ್ತಿದ್ದು, ಸುಮಾರು ೧೪–೧೫ನೆಯ ಶತಮಾನದ ಪುನಾರಚನೆಯಾಗಿದ್ದು, ಆಕರ್ಷಕವಾಗಿದೆ. ಪ್ರಧಾನ ಗರ್ಭಗೃಹದಲ್ಲಿ ಮಂಜುನಾಥನ ಸ್ವಯಂಭುಲಿಂಗವಿದೆ. ಶಾಸನಗಳಲ್ಲಿ ಕದ್ರಿಯನ್ನು ಶುದ್ಧ ಶಿವಸ್ಥಾನವೆಂದು ಕರೆಯಲಾಗಿದೆ. ಆದರೆ ಇದು ಹಿಂದೆ ಬೌದ್ಧಧರ್ಮಕ್ಕೆ ಸೇರಿದ ಮಹಾಯಾನ ಪಂಥದ ಇಲ್ಲಿ ಸಾಕಷ್ಟು ಪುರಾವೆಗಳಿದ್ದು, ನಂತರದಲ್ಲಿ ನಾಥಪಂಥಿಯರು ಅದನ್ನು ತಮ್ಮದಾಗಿಸಿಕೊಂಡರೆಂದು ಹೇಳಲಾಗುತ್ತದೆ. ಒಂದು ಕಾಲಕ್ಕೆ ಗುಡ್ಡದ ಬುಡದಲ್ಲಿರುವ ಮಂಜುನಾಥ ದೇವಾಲಯ ಹಾಗೂ ಗುಡ್ಡದ ಮೇಲಿರುವ ಜೋಗಿಮಠಗಳೆರಡೂ ನಾಥಪಂಥಿಯರ ವಶದಲ್ಲಿದ್ದು, ಕಾಲಾಂತರದಲ್ಲಿ ದೇವಾಲಯವು ಆಗಮೋಕ್ತ ದೇವಾಲಯವಾಗಿ ಮಾರ್ಪಟ್ಟಂತೆ ತೋರುತ್ತದೆ. ಆದರೆ, ನಾಥಪಂಥದ ಸ್ವಾಮಿಗಳಿಗೆ, ಇಲ್ಲಿ ಇಂದಿಗೂ ವಿಶೇಷ ಗೌರವದ ಸ್ಥಾನಮಾನಗಳಿವೆ. ನಾಥಮುನಿ 'ಮತ್ಸ್ಯೇಂದ್ರನಾಥ'ನ ಹೆಸರೇ, ಕ್ರಮೇಣ ಮಚ್ಛೇಂದ್ರನಾಥ, ಮಂಜುನಾಥ ರೂಪವನ್ನು ಪಡೆದಿರಬೇಕೆಂದು ಗೋವಿಂದ ಪೈ ಅಭಿಪ್ರಾಯಪಡುತ್ತಾರೆ. ಮಂಜುನಾಥ ದೇವಾಲಯದ ಗರ್ಭಗೃಹದ ಗೋಡೆಗೆ ಹೊಂದಿಕೊಂಡಂತೆ ವಿವಿಧ ದಿಕ್ಕುಗಳಲ್ಲಿನ ದೇವಕೋಷ್ಟಗಳಲ್ಲಿ, ನಾಥಪಂಥದ ಪ್ರವರ್ತಕರಾದ ಪದ್ಮಾಸೀನ ಭಂಗಿಯಲ್ಲಿರುವ ಮತ್ಸ್ಯೇಂದ್ರನಾಥ, ಸ್ಥಾನಕ ಭಂಗಿಯಲ್ಲಿರುವ ಗೋರಕ್ಷನಾಥ ಮತ್ತು ಪದ್ಮಾಸೀನ ಚೌರಂಗಿನಾಥ ಹಾಗೂ ಶೃಂಗನಾಥರ ಶಿಲಾಪ್ರತಿಮೆಗಳಿವೆ. ಅಲ್ಲದೆ ಪಂಚಲೋಹದಿಂದ ರಚಿಸಲ್ಪಟ್ಟಿರುವ ಮೂರು ಶ್ರೇಷ್ಠ ಕಲಾಕೃತಿಗಳೂ ಇಲ್ಲಿವೆ. ಅವುಗಳಲ್ಲೊಂದು ಲೋಕೇಶ್ವರ ಪ್ರತಿಮೆಯಾಗಿದೆ. ದಕ್ಷಿಣ ಭಾರತದಲ್ಲೇ ಅಪರೂಪದ ಪಂಚಲೋಹದ ಬಿಂಬವೆಂದು ಖ್ಯಾತಿ ಪಡೆದಿರುವ ಈ ಮೂರ್ತಿಯ ಪೀಠದ ಮೇಲಿರುವ ಸಂಸ್ಕೃತ ಶಾಸನದಿಂದ ಅದು ಲೋಕೇಶ್ವರ ಬಿಂಬವಾಗಿದ್ದು, ಅಲುಪರಾಜ ಕುಂದವರ್ಮನಿಂದ ೯೬೮ರಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತ್ತೆಂದು ತಿಳಿದುಬರುತ್ತದೆ. ಸುಮಾರು ಐದು ಅಡಿ ಎತ್ತರದ ಈ ಆಸೀನ ಪ್ರತಿಮೆಯು ಯೋಗಮುದ್ರೆಯಲ್ಲಿದ್ದು, ಮೂರು ಮುಖಗಳನ್ನೂ, ಆರು ಬಾಹುಗಳನ್ನೂ ಹೊಂದಿದ್ದು, ಮೂರುತಲೆಗಳಿಗೂ ಸೇರಿದಂತೆ ಕಲಾತ್ಮಕವಾದ ಜಟಾಮುಕುಟವಿದೆ. ಈ ಪ್ರತಿಮೆಗೆ ಪಲ್ಲಕ್ಕಿಯಾಕಾರದ ಆಕರ್ಷಕವಾದ ಪ್ರಭಾವಳಿ ಇದೆ. ಸ್ಥಳೀಯವಾಗಿ ಇದನ್ನು ಬ್ರಹ್ಮನೆಂದೂ ಕರೆಯಲಾಗುತ್ತಿದೆ. ಈ ಪ್ರತಿಮೆಯು ಬೌದ್ಧ ಧರ್ಮದ ಮಹಾಯಾನ ಪಂಥಕ್ಕೆ ಸೇರಿದ ವಜ್ರಯಾನ ಶಾಖೆಗೆ ಸಂಬಂಧಿಸಿದ್ದ ಬುದ್ಧನ ಪ್ರತಿಮೆ ಇರಬಹುದೆಂಬ ಅಭಿಪ್ರಾಯವಿದೆ. ಆದರೆ ಶಿವನ ಅವತಾರಿಯಾದ ನಾಥಮುನಿ ಮತ್ಸ್ಯೇಂದ್ರನಾಥನದಿರಬಹುದೆಂಬ ಇನ್ನೊಂದು ಅಭಿಪ್ರಾಯವೂ ಇದೆ. ಒಟ್ಟಾರೆ ಇದರ ಬಗ್ಗೆ ಇನ್ನೂ ಜಿಜ್ಞಾಸೆ ನಡೆದಿದೆ. ಅಲ್ಲೇ ಇರುವ ಇನ್ನೆರಡು ಲೋಹ ಬಿಂಬಗಳಲ್ಲಿ ಒಂದಾದ ವ್ಯಾಸಬಿಂಬವು ಧ್ಯಾನ ಮುದ್ರೆಯಲ್ಲಿರುವ ಬುದ್ಧನ ಪ್ರತಿಮೆ ಎಂದು ವಿದ್ವಾಂಸರು ತರ್ಕಿಸಿದ್ದಾರೆ. ಅದರ ಪೀಠದ ಮೇಲಿರುವ ಗರುಡ ಕೆತ್ತನೆಗಳು, ಬುದ್ಧನೂ ವಿಷ್ಣುವಿನ ದಶಾವತಾರಗಳಲ್ಲಿ ಒಂದೆಂಬ ಅಂಶವನ್ನು ಧ್ವನಿಸುವಂತಿದೆ ಎಂಬ ಅಭಿಪ್ರಾಯವೂ ಇದೆ. ಅಲ್ಲಿರುವ ನಾರಾಯಣ ಎಂದು ಕರೆಯಲ್ಪಡುವ ಮೂರ್ತಿಯು ಮಂಜುಘೋಷ ಇಲ್ಲವೇ ಮಂಜುಶ್ರೀ ಪ್ರತಿಮೆ ಎಂದು ಹೇಳಲಾಗುತ್ತದೆ. ಇದರ ಪ್ರಭಾವಳಿಯಲ್ಲಿ ಬುದ್ಧನ ಕಿರು ಕೆತ್ತನೆಯಿದೆ. ಸುಮಾರು ಮೂರು ಅಡಿ ಎತ್ತರವಿರುವ ಈ ಎರಡೂ ಪ್ರತಿಮೆಗಳು, ಸುಮಾರು ೧೦–೧೧ನೆಯ ಶತಮಾನದ ಬಿಂಬಗಳಾಗಿದ್ದು, ಆಕರ್ಷಕವಾಗಿವೆ. ಈ ದೇವಾಲಯದಲ್ಲಿ, ಉತ್ತರ ಭಾಗಕ್ಕಾದಂತೆ ಇರುವ ಸುಮಾರು ೧೦ ಅಡಿ ಎತ್ತರದ ಆಳ್ವಕಂಬದ ಮೇಲ್ಭಾಗದಲ್ಲಿರುವ ಕಿರು ಮಂಟಪವು, ನಾಲ್ಕು ಕಡೆಗಳಲ್ಲೂ ಧ್ಯಾನಮುದ್ರೆಯಲ್ಲಿರುವ ಬುದ್ಧನ ಕಿರು ಕೆತ್ತನೆಗಳನ್ನು ಹೊಂದಿದ್ದು, ಕೆಳಭಾಗದಲ್ಲಿ ಪದ್ಮಾಸೀನ ಯತಿಗಳ ಶಿಲ್ಪಕೆತ್ತನೆ ಇದೆ.

ಈ ದೇವಾಲಯದ ಪ್ರಾಕಾರದಲ್ಲಿ ದುರ್ಗಾಪರಮೇಶ್ವರಿ, ಮಹಾಗಣಪತಿ ಹಾಗೂ ಶಾಸ್ತಾರರ ಗುಡಿಗಳೂ ಇವೆ. ದುರ್ಗಾಪರಮೇಶ್ವರಿ ಗುಡಿಯಲ್ಲಿ, ದೇವಿಯು ಸ್ವಯಂಭೂಲಿಂಗ ರೂಪದಲ್ಲಿ ಆರಾಧಿಸಲ್ಪಡುತ್ತಿದ್ದು, ಇದು ಪಶ್ಚಿಮ ಕರಾವಳಿಯ ವೈಶಿಷ್ಟವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಗುಡಿಯ ಮುಂದೆ ಸುಮಾರು ೩೫ ಅಡಿ ಎತ್ತರದ ಲೋಹದ ದೀಪಸ್ತಂಭವಿದ್ದು, ಲಕ್ಷ ದೀಪೋತ್ಸವ ಸಂದರ್ಭದಲ್ಲಿ ಅದನ್ನು ದೀಪಗಳಿಂದ ಬೆಳಗಿಸಲಾಗುತ್ತದೆ. ದೇವಾಲಯದ ಪ್ರಾಕಾರದಲ್ಲಿರುವ ಬೆಳ್ಳಿಯ ರಥ ಆಕರ್ಷಕವಾಗಿದೆ. ದೇವಾಲಯದ ಎದುರು ಭಾಗದಲ್ಲಿ ಒಂಭತ್ತು ತೀರ್ಥಕೆರೆಗಳಿವೆ. ಆ ಕುಂಡಗಳಿಗೆ ಗುಡ್ಡದ ಮೇಲಿಂದ ಬರುವ ನೀರು, ಗೋಮುಖತೀರ್ಥವಾಗಿ ಹರಿಯುತ್ತದೆ. ಮಂಜುನಾಥನ ವಾರ್ಷಿಕ ಜಾತ್ರೆಯು ಮಕರ ಸಂಕ್ರಮಣದಿಂದ ಒಂಭತ್ತು ದಿನಗಳ ಕಾಲ ಜರುಗುತ್ತದೆ. ಆ ಸಂದರ್ಭದಲ್ಲಿ ಸುಮಾರು ೬೨ ಅಡಿ ಎತ್ತರದ ಧ್ವಜಸ್ತಂಭವನ್ನು ಎತ್ತಿ ನಿಲ್ಲಿಸಿ, ೪೦ ಅಡಿ ಉದ್ದದ, ಬಹಳ ಅಪರೂಪದ್ದೆನ್ನಬಹುದಾದ, ಬಟ್ಟೆ ಇತ್ಯಾದಿ ವಸ್ತುಗಳನ್ನು ಬಳಸಿ ವರ್ಣರಂಜಿತವಾಗಿ ಸಿದ್ಧಪಡಿಸಿದ ಗರುಡನೆಂದು ಹೇಳಲಾಗುವ ಮನುಷ್ಯಾಕೃತಿಯ ಬೊಂಬೆಯನ್ನು ಅದಕ್ಕೆ ಇಳಿಬಿಡುತ್ತಾರೆ. ಜಾತ್ರೆಯ ಎಂಟನೆಯ ದಿನದಂದು ಮಂಜುನಾಥನ ಮಹಾರಥೋತ್ಸವವು ಅತ್ಯಂತ ವಿಜೃಂಭಣೆಯಿಂದ ಜರುಗುತ್ತದೆ. ನವರಾತ್ರಿ ಸಂದರ್ಭದಲ್ಲಿ ಜರುಗುವ ದುರ್ಗಾಪರಮೇಶ್ವರಿಯ ನವರಾತ್ರಿ ಉತ್ಸವವೂ ವಿಜೃಂಭಣೆಯಿಂದ ಕೂಡಿರುತ್ತದೆ. ಈ ಕ್ಷೇತ್ರಕ್ಕೆ ಬರುವ ಯಾತ್ರಾರ್ಥಿಗಳಿಗೆ ಸೀಮಿತ ವಸತಿ ಸೌಕರ್ಯವಿದ್ದು, ಪ್ರತೀ ಭಾನುವಾರ, ಸೋಮವಾರ, ಗುರುವಾರ, ಶನಿವಾರ ಹಾಗೂ ಸಂಕ್ರಮಣ ಹುಣ್ಣಿಮೆಯಂದು ಮಧ್ಯಾಹ್ನ ಅನ್ನಸಂತರ್ಪಣೆ ಇರುತ್ತದೆ.

ಜೋಗಿಮಠ: ಮಂಜುನಾಥ ದೇವಾಲಯದಿಂದ ಗುಡ್ಡವೇರಿದರೆ ಸಿಗುವ ಜೋಗಿಮಠವು, ನಾಥಪಂಥಕ್ಕೆ ಸೇರಿದ ಸುಮಾರು ೧೦ನೆಯ ಶತಮಾನದಷ್ಟು ಪ್ರಾಚೀನ ಮಠವಾಗಿದೆ. ಮಠದಲ್ಲಿ ಕಾಲಭೈರವೇಶ್ವರ ಗುಡಿ ಇದೆ. ಪರಶುರಾಮನೇ ಈ ಮಠದ ಮೊದಲ ಗುರುವಾಗಿದ್ದು, ೧೨ ವರ್ಷ ಇಲ್ಲಿ ಯೋಗವನ್ನು ಆಚರಿಸಿದನೆಂದು ನಂಬಲಾಗುತ್ತದೆ. ಅವನು ಸ್ಥಾಪಿಸಿದ ಯಜ್ಞಕುಂಡವೇ 'ಪರಶುರಾಮಧುನಿ'. ಅದು ಅಂದಿನಿಂದಲೂ ಜಾಗೃತವಾಗಿದೆ ಎಂದು ಹೇಳಲಾಗುತ್ತದೆ. ಮಠದ ಬಯಲಿನಲ್ಲಿ ವೈವಿಧ್ಯಮಯವಾದ ಪುಟ್ಟ ಪುಟ್ಟ ಗುಡಿಗಳಿವೆ. ಒಳಗೆ ನಾಥವರ್‍ಯರ ಮೂರ್ತಿಗಳಿವೆ. ಇಲ್ಲಿರುವ ಜ್ವಾಲಾನಾಥ, ಚೌರಂಗಿನಾಥ, ಗೋರಕ್ಷನಾಥ, ಮತ್ಸ್ಯೇಂದ್ರನಾಥ ಗುಡಿಗಳಲ್ಲಿ ಮತ್ಸ್ಯೇಂದ್ರನಾಥನ ಗುಡಿಯ ಕೆಳಗೆ ಇದ್ದ ಗವಿಗಳನ್ನು ಇಂದು ಮುಚ್ಚಲಾಗಿದೆ. ಜೋಗಿಮಠದ ಪರಿಸರದಲ್ಲಿರುವ ೧೪೨೩ರ ಶಾಸನದಿಂದ ವಿಜಯ ಭೂಪತಿರಾಯನ ಆಯುರಾರೋಗ್ಯಕ್ಕಾಗಿ ದುರ್ಗಾದೇವಿ ಸನ್ನಿಧಿಯಲ್ಲಿ ಜಪ ಮಾಡಲು ಇಬ್ಬರು ಬ್ರಾಹ್ಮಣರನ್ನು ನಿಯೋಜಿಸಿದ ಅಂಶ ಗೊತ್ತಾಗುತ್ತಿದೆ. ಅಲ್ಲದೆ ತಿಮಿಲೇಶ್ವರ ದೇವರ ಪ್ರಸ್ತಾಪವೂ ಇದೆ.  ಅಲ್ಲೇ ಇರುವ ೧೪೭೫ರ ಇನ್ನೊಂದು ಶಾಸನದಿಂದ, ಮಂಗಳೂರು ರಾಜ್ಯದ ಆದಿಸ್ಥಾನವಾದ ಕದಿರೆಯ ನಾಲ್ವರು ಸೇನಬೋವರೂ, ಸ್ಥಾನಿಕರೂ ಏಕಸ್ಥರಾಗಿ ಮಂಗಳನಾಥ ಒಡೆಯರಿಗೆ ಭೂದಾನ ಬಿಟ್ಟ ವಿಷಯ ಗೊತ್ತಾಗುತ್ತದೆ. ಅಲ್ಲದೆ ಗೋರಕ್ಷನಾಥ ಹಾಗೂ ಚಂದ್ರನಾಥ ಯತಿಗಳ ಆರಾಧನೆಯ ಹೊಣೆಯನ್ನು ಅವರಿಗೆ ವಹಿಸಿಕೊಟ್ಟಿದ್ದ ಅಂಶವೂ ವೇದ್ಯವಾಗುತ್ತದೆ. ಮಠದ ಆವರಣದಲ್ಲಿ ಹಿಂದಿನ ಗುರುಗಳ ಸಮಾಧಿಗಳಿವೆ. ಅಲ್ಲೇ ಇರುವ ಸೀತಾಕುಂಡದಿಂದ, ಕೆಳಗಿನ ತೀರ್ಥಕೆರೆಗಳಿಗೆ ನೀರು ಹರಿದು ಹೋಗುತ್ತದೆ. ಅಲ್ಲಿರುವ ಪರಶುರಾಮಕಟ್ಟೆಯ ಮೇಲೆ ನಿಂತು, ತನ್ನ ಬೆರಳ ಸನ್ನೆಯಿಂದಲೆ ಸಮುದ್ರವನ್ನು ಹಿಂದೆ ಸರಿಯುವಂತೆ ಪರಶುರಾಮನು ಮಾಡಿದನೆಂಬ ಐತಿಹ್ಯವಿದೆ. ಇಲ್ಲಿರುವ ಪಾಂಡವರ ಗುಹೆಯನ್ನು ಗುಡ್ಡದಲ್ಲಿ ಆಳಕ್ಕಾದಂತೆ ಕೊರೆಯಲಾಗಿದ್ದು, ತಳದಲ್ಲಿ ಪಾತಾಳ ಭೈರವನ ಗುಡಿಯಿದೆ. ಬದಿಯಲ್ಲೇ 'ಕೈಬಟ್ಟಲುಕೆರೆ' ಎಂದು ಕರೆಯಲಾಗುವ ಹೊಂಡವಿದೆ. ಪ್ರತಿ ೧೨ ವರ್ಷಗಳಿಗೊಮ್ಮೆ ನಡೆಯುವ ಪರಶುರಾಮ ಝುಂಡಿ ಪಾದಯಾತ್ರೆಯು, ನಾಥಪಂಥದ ೧೨ ಕವಲುಗಳಿಗೆ ಸೇರಿದ ಬಾರಹಿ ಪಂಥಿ ಸಾಧುಗಳು ಹಾಗೂ ಅವಧೂತ ಯೋಗಿಗಳನ್ನು ಒಳಗೊಂಡಿರುತ್ತದೆ. ಇದು ನಾಸಿಕ್ ಜಿಲ್ಲೆಯ ತ್ರ್ಯಂಬಕೇಶ್ವರದಿಂದ ಕುಂಬಮೇಳದಂದು ಹೊರಟು ನಿಗಧಿತ ಮಾರ್ಗದಲ್ಲಿ ಸುಮಾರು ೧೧೮೦ ಕಿಮೀ. ಕ್ರಮಿಸುತ್ತಾ ಮಾರ್ಗಮಧ್ಯದಲ್ಲಿ ಸಿಗುವ ೧೨ ನಾಥಪಂಥಿಯ ಮಠಗಳಿಗೆ ನೂತನ ಸ್ವಾಮಿಗಳನ್ನು ನೇಮಿಸುತ್ತಾ, ಕದ್ರಿಗೆ ಆಗಮಿಸುತ್ತದೆ. ಕದ್ರಿ ಮಠದ ಆವರಣದಲ್ಲಿರುವ ಶಿಲಾಪೀಠದ ಮೇಲೆ ನೂತನಸ್ವಾಮಿಗಳನ್ನು ಕೂರಿಸಿ, ಕದ್ರಿಯ ಜೋಗಿಮಠಕ್ಕೆ ಪಟ್ಟ ಕಟ್ಟಲಾಗುತ್ತದೆ. ಕದ್ರಿಯಲ್ಲೇ ವಿಟ್ಲದ ಜೋಗಿಮಠದ ಅರಸರಿಗೂ ಪಟ್ಟವಾಗುತ್ತದೆ. ಮರುದಿವಸ ಕದ್ರಿಯಿಂದ ವಿಟ್ಲಕ್ಕೆ ತೆರಳಿ, ವಿಟ್ಲದ ಅರಸರನ್ನು ವಿಟ್ಲದ ಪೀಠದಲ್ಲಿ ಕುಳ್ಳಿರುಸುವುದರೊಂದಿಗೆ ಝುಂಡಿಯು ಅಂತ್ಯವಾಗುತ್ತದೆ.  ಇತ್ತೀಚೆಗೆ ೨೦೦೪ರಲ್ಲಿ ಜರುಗಿದ ಝುಂಡಿ ಯಾತ್ರೆಯ ಸಂದರ್ಭದಲ್ಲಿ ಹಾಲಿ ಇರುವ ಸ್ವಾಮಿಗಳು ಪಟ್ಟಾಧಿಕಾರವನ್ನು ಸ್ವೀಕರಿಸಿದ್ದಾರೆ.

ಮುಂಡಾಣ ಜಲಪಾತ: ಜೋಗಿಮಠದಿಂದ ಪಶ್ಚಿಮಕ್ಕೆ ಸುಮಾರು ಒಂದು ಕಿ.ಮೀ ದೂರದಲ್ಲಿರುವ ಈ ಕಿರು ಜಲಪಾತವು ಸುಮಾರು ೧೨ ಅಡಿ ಎತ್ತರದಿಂದ ಎರಡು ಹಂತದಲ್ಲಿ ಧುಮುಕುತ್ತಿದ್ದು, ಅದನ್ನು ವರ್ಷದುದ್ದಕ್ಕೂ ನೋಡಬಹುದಾಗಿದೆ. ಇದನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸುವ ಅಗತ್ಯವಿದೆ.

ಮಸೀದಿಗಳು: ಮಂಗಳೂರು, ಬಂದರುಪಟ್ಟಣವಾಗಿರುವುದರಿಂದ ಅರಬ್ ವ್ಯಾಪಾರಿಗಳನ್ನು ಬಹುಹಿಂದಿನಿಂದಲೂ ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ. ಹಳೇ ಬಂದರು ಪ್ರದೇಶದಲ್ಲಿ ಪುರಾತನ ಮಸೀದಿಗಳಿವೆ. ಅವುಗಳಲ್ಲಿ ಜಿನತ್ ಭಕ್ಷ ಜುಮ್ಮಾ ಮಸೀದಿಯು ಹಲವಾರು ಶತಮಾನಗಳ ಹಿಂದೆ, ಪಶ್ಚಿಮ ಕರಾವಳಿಯಲ್ಲಿ ಬಂದು ನೆಲೆಸಿದ್ದ ಅರೇಬಿಯಾದ ಸಂತ, ಮಲ್ಲಿಕ ದೀನಾರನ ಅನುಯಾಯಿಗಳಾದ ಅರಬ್ ವ್ಯಾಪಾರಿಗಳಿಂದ ನಿರ್ಮಾಣಗೊಂಡಿತೆಂದು ಹೇಳಲಾಗುತ್ತದೆ. ಆದರೆ ಕಾಲಾಂತರದಲ್ಲಿ ಅದು ಸಾಕಷ್ಟು ಮಾರ್ಪಾಟುಗಳನ್ನು ಹೊಂದಿದ್ದು, ಅದಕ್ಕೆ ಈಗಿರುವ ಸ್ವರೂಪವನ್ನು ಟಿಪ್ಪು ಸುಲ್ತಾನನ ಅಪೇಕ್ಷೆಯಂತೆ ಹದಿನೆಂಟನೆಯ ಶತಮಾನದ ಕೊನೆಯ ಭಾಗದಲ್ಲಿ ನೀಡಲಾಯಿತೆಂದು ತಿಳಿದುಬರುತ್ತದೆ. ಈ ಮಸೀದಿಯ ಕಲಾತ್ಮಕ ಕಂಬಗಳು, ಸೂಕ್ಷ್ಮ ಕುಸುರಿ ಕೆತ್ತನೆಯಿಂದಾಗಿ ಆಕರ್ಷಕವಾಗಿವೆ. ಲೈಟ್ ಹೌಸ್ ಬೆಟ್ಟದ ಮೇಲೆ ಇರುವ ಈದ್ಗಾ ಮಸೀದಿಯು ಚೌಕಾಕಾರದ ರಚನೆಯಾಗಿದ್ದು, ಈದ್ಗಾ ಪ್ರಾರ್ಥನೆಗೆಂದು ಮಂಗಳೂರಿನ ಮುಸ್ಲಿಮರು ಅಲ್ಲಿ ಸೇರುತ್ತಾರೆ. ಇದನ್ನೂ ಟಿಪ್ಪುಸುಲ್ತಾನನೇ ನಿರ್ಮಿಸಿದನೆಂದು ಹೇಳಲಾಗುತ್ತದೆ. ದೊಂಗರಗೇರಿಯಲ್ಲಿರುವ ಷಾ ಅಮೀರ್ ಮಸೀದಿ ಹಾಗೂ ಷಾ ಅಮೀರ್ ದರ್ಗಾಗಳು ಸುಮಾರು ೨೦೦ ವರ್ಷಗಳಷ್ಟು ಪ್ರಾಚೀನ ರಚನೆಗಳಾಗಿದ್ದು, ಆಕರ್ಷಕವಾಗಿವೆ. **ಸೈದಾನಿ ಬೀಬಿ ಸಾಹಿಬಾ ದರ್ಗಾ**: ನಗರದ ಎ. ಬಿ. ಶೆಟ್ಟಿ ವೃತ್ತದ ಬಳಿಯಲ್ಲಿ ಸೈದಾನಿ ಬೀಬಿ ಸಾಹಿಬಾ ಎಂಬ ಮುಸ್ಲಿಂ ಸಂತಮಾತೆಯ ದರ್ಗಾ ಇದೆ. ಆಕೆ ಸುಮಾರು ೬೦೦ ವರ್ಷಗಳ ಹಿಂದೆ ಮದೀನಾದಿಂದ ಮಂಗಳೂರಿಗೆ ಬಂದ ಸಂತ ಮಹಿಳೆ. ಹಿಂದೂ ಹಾಗೂ ಮುಸ್ಲಿಮರಿಂದ ಸಮಾನ ಗೌರವಾಧರಗಳಿಗೆ ಪಾತ್ರಳಾಗಿದ್ದ ಈಕೆಯ ದರ್ಗಾಕ್ಕೆ ಅನುಯಾಯಿಗಳು ನಡೆದುಕೊಳ್ಳುತ್ತಾರೆ. ಈ ದರ್ಗಾಕ್ಕೆ ಸಮೀಪದಲ್ಲೆ ಇರುವ ಘಾಜಿಯಾ ಮಸೀದಿಯು ಟಿಪ್ಪು ಕಾಲದ ಆಕರ್ಷಕ ರಚನೆಯಾಗಿದೆ.

ಚರ್ಚುಗಳು: ಪಶ್ಚಿಮ ಕರಾವಳಿಯು ಬಹು ಹಿಂದಿನಿಂದಲೂ ಪಾಶ್ಚಿಮಾತ್ಯ ಸಂಪರ್ಕವನ್ನು ಹೊಂದಿದ್ದು, ಪೋರ್ಚುಗೀಸರು, ಫ್ರೆಂಚರು, ಡಚ್ಚರು ಹಾಗೂ ಬ್ರಿಟಿಷರ ಪ್ರಭಾವ, ದಕ್ಷಿಣ ಕನ್ನಡ ಜಿಲ್ಲೆಯ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ರಂಗಗಳ ಮೇಲೆ ಗಣನೀಯ ಪ್ರಮಾಣದಲ್ಲಿ ಉಂಟಾಯಿತು. ತತ್ಪರಿಣಾಮವಾಗಿ ಕ್ರೈಸ್ತ ಧರ್ಮಿಯರಿಗೆ ಸಂಬಂಧಿಸಿದ ಬೃಹತ್ ಗಾತ್ರದ ಆಕರ್ಷಕ ಕಟ್ಟಡಗಳು ನಿರ್ಮಾಣಗೊಂಡವು. ಆದರೆ ಅವು ಕಾಲಕಾಲಕ್ಕೆ ಮಾರ್ಪಾಟುಗೊಂಡಿದ್ದು, ಮೂಲರೂಪದಲ್ಲಿ ಉಳಿದಿಲ್ಲ. ಮಂಗಳೂರಿನಲ್ಲಿ ಈಗ ಕಾಣಸಿಗುವ ಕಟ್ಟಡಗಳು ೨೦೦ ವರ್ಷಗಳಷ್ಟು ಪ್ರಾಚೀನದ್ದಾಗಿವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೧೫೨೦ರ ದಶಕದಲ್ಲಿ ನಿರ್ಮಾಣಗೊಂಡ ಮೂರು ಪ್ರಾಚೀನ ಇಗರ್ಜಿಗಳಲ್ಲಿ, ಬೊಳಾರ ಭಾಗದಲ್ಲಿರುವ ಮೋಸ್ಟ್ ಹೋಲಿ ರೋಸರಿ ಚರ್ಚು ಒಂದಾಗಿದೆ. ಆದರೆ ೧೯೧೦ರಲ್ಲಿ ಹಳೆಯ ಇಗರ್ಜಿ ಇದ್ದ ಸ್ಥಳದಲ್ಲಿ ಈಗಿನ ಸುಂದರವೂ, ಆಕರ್ಷಕವೂ ವಿಸ್ತಾರವೂ ಆದ ಚರ್ಚನ್ನು ನಿರ್ಮಿಸಲಾಗಿದೆ. ಮುಂಬಯಿ ಮಿಷನ್ನಿನ ದಿವ್ಯೋಪಾದ್ರಿ, ಅದರ ವಾಸ್ತುತಜ್ಞರಾಗಿದ್ದು, ಅಂದಿನ ಪ್ಯಾರಿಸ್‌ಪಾದ್ರಿ ಫಾಧರ್ ಬುಜೋನಿ ಅವರು, ಗಂಟೆ ಗೋಪುರವನ್ನು ನಿರ್ಮಿಸಿ ಇಟಲಿ ಮೂಲದ  ಗಂಟೆಗಳನ್ನು ಅಳವಡಿಸಿದ್ದಾರೆ. ಹಿಂದೆ, ಈ ಚರ್ಚಿನ ಆಕರ್ಷಕ ಗುಮ್ಮಟದ ಮೇಲೆ ರಾತ್ರಿಯಲ್ಲಿ ದೀಪಾಲಂಕಾರವನ್ನು ಮಾಡಲಾಗುತ್ತಿದ್ದು, ಅದು ನಾವಿಕರಿಗೆ ದಿಕ್ಸೂಚಿಯಾಗಿರುತ್ತಿದ್ದವು.

ಬಿಜೈನಲ್ಲಿರುವ ಸಂತ ಮಿಲಾಗ್ರಿಸ್ ಚರ್ಚು ೧೬೮೦ರಲ್ಲಿ ಥಾಮಸ್ ಕ್ಯಾಸ್ಟ್ರೋ ಅವರಿಂದ ನಿರ್ಮಾಣಗೊಂಡಿತು. ಆದರೆ, ಮುಂದೆ ೧೭೮೪ರಲ್ಲಿ ಟಿಪ್ಪು ದಾಳಿಗೆ ಸಿಲುಕಿತು. ಬಾವುಟ ಗುಡ್ಡದ ಮೇಲಿರುವ ಈದ್ಗಾ ಮಂದಿರವನ್ನು ಅವನು ಈ ಚರ್ಚಿನ ಅವಶೇಷಗಳಿಂದ ನಿರ್ಮಿಸಿದನೆಂದು ಹೇಳಲಾಗುತ್ತದೆ. ನಂತರದಲ್ಲಿ ಈ ಇಗರ್ಜಿಯನ್ನು ಭವ್ಯವಾಗಿ ನಿರ್ಮಿಸಲಾಗಿದೆ. ಇಂದು ಇದು ಸಂತ ಆಂತೋನಿ ಭಕ್ತಿಕೇಂದ್ರ ಹಾಗೂ ಸಂತ ಮೊನಿಕಾ ಭಕ್ತಿಕ್ಷೇತ್ರವೂ ಆಗಿದೆ. ಅಲ್ಲಿರುವ ಶೋಕಮಾತೆಯ ಭಕ್ತಿಪಂಥವು, ಭಾರತದಲ್ಲಿಯೇ ಪ್ರಥಮವಾಗಿ ರೂಪುಗೊಂಡದ್ದೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಚರ್ಚಿನ ಒಳಗಿರುವ, ಬಾಲಕ ಏಸುವನ್ನು ಎತ್ತಿಕೊಂಡಿರುವ ಮಿಲಾಗ್ರಿಸ್ ಮಾತೆಯ ಮೂರ್ತಿಯು ಮನಮೋಹಕವಾಗಿದೆ.

ಮಂಗಳೂರಿನ ಸಂತ ಜೋಸೆಫ್ ಥಿಯಾಲಜಿಕಲ್ ಸೆಮಿನರಿಯನ್ನು ೧೮೭೮ರಲ್ಲಿ ಫಾದರ್ ಅಗಸ್ಟಸ್ ಡಯಮೆಂಟಿಯ ನೇತೃತ್ವದಲ್ಲಿ ನಿರ್ಮಿಸಲಾಗಿದೆ. ಧರ್ಮ ಪ್ರಚಾರಕ್ಕಾಗಿ ಕ್ರೈಸ್ತ ಪಾದ್ರಿಗಳನ್ನು ರೂಪಿಸುವ ಮಹೋನ್ನತ ಗುರುಕುಲ ಇದಾಗಿದೆ. ಸೆಮಿನರಿಗೆ ಹೊಂದಿಕೊಂಡಂತೆ ಇರುವ ಎರಡು ಇಗರ್ಜಿಗಳ ಬೃಹತ್ತದ ಗೋಪುರಗಳು ಕಲಾತ್ಮಕವಾಗಿವೆ. ಇದಕ್ಕೆ ೧೯೧೪–೩೭ರ ಅವಧಿಯಲ್ಲಿ ಸಾಕಷ್ಟು ಸೇರ್ಪಡೆಗಳನ್ನು ಮಾಡಲಾಗಿದೆ. ತತ್ಪರಿಣಾಮವಾಗಿ ವಾಸ್ತು ವಿನ್ಯಾಸ ದೃಷ್ಟಿಯಿಂದ ಈ ಇಗರ್ಜಿಯು ಇಂದು ದಕ್ಷಿಣ ಭಾರತದಲ್ಲೇ ವಿಶಿಷ್ಟವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಮಂಗಳೂರಿನ ಬಾವುಟಗುಡ್ಡದ ಸಮೀಪದಲ್ಲಿರುವ ಸಂತ ಎಲೋಶಿಯಸ್ ಚರ್ಚನ್ನು ೧೮೮೫ರಲ್ಲಿ ಫಾಧರ್ ಜೋಸೆಫ್ ವಿಲ್ಲಿ ನಿರ್ಮಿಸಿದರು. ಎಲೋಶಿಯಸ್ ಗೊನ್ಸಾಗ(೧೫೬೮–೯೧) ಎಂಬ ಸಂತನಿಗೆ ಸಮರ್ಪಿತವಾಗಿರುವ ಇದನ್ನು ರೋಮ್ ನಗರದ ಸಂತ ಪಿಲಿಪ್‌ನೇರಿ ಇಗರ್ಜಿಯ ಮಾದರಿಯಲ್ಲಿ ನಿರ್ಮಿಸಲಾಗಿದೆ. ಇಗರ್ಜಿಯ ಒಳಭಾಗದ ಭಿತ್ತಿಯನ್ನು ಅಲಂಕರಿಸಿರುವ ಆಕರ್ಷಕ ವರ್ಣಚಿತ್ರಗಳನ್ನು ಇಟಲಿಯ ಆಂತೋನಿ ಮೊಶ್ಚೆನಿಯು ೧೯೦೨–೦೪ರ ಅವಧಿಯಲ್ಲಿ ರಚಿಸಿದ್ದೆಂದು ತಿಳಿದುಬರುತ್ತದೆ. ಸುಮಾರು ೧೮೯೯ರಲ್ಲಿ ಇಟಲಿಯಿಂದ ಇಲ್ಲಿಗೆ ಬಂದಿದ್ದ ಇವರು, ಮಾನವನ ಉಗಮದಿಂದ ಏಸುವಿನ ಪುನರುತ್ಥಾನದವರೆಗಿನ ಘಟನೆಗಳನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಇಗರ್ಜಿಯ ಛಾವಣಿಯಲ್ಲೂ ಇವರೇ ರಚಿಸಿರುವ ಚಿತ್ರಗಳನ್ನು ನೋಡಬಹುದಾಗಿದೆ. ಇವರೇ ರಚಿಸಿರುವ ಏಸು ಜನನ, ಏಸು ದೀಕ್ಷೆ ಮಕ್ಕಳೊಂದಿಗೆ ಏಸು, ಕ್ಯಾನದ ವಿವಾಹದೌತಣ, ಕೊನೆಯ ಭೋಜನ ಮುಂತಾದ ಅಪೂರ್ವ ಕಲಾಕೃತಿಗಳಿಲ್ಲಿವೆ. ಅಲ್ಲದೆ ಇದೇ ಕಲಾವಿದನ ಇತರ ಕಲಾಕೃತಿಗಳನ್ನು ಮುಂಬಯಿ ಹಾಗೂ ಕೊಚ್ಚಿನ್‌ಗಳಲ್ಲೂ ನೋಡಬಹುದಾಗಿದೆ.

ಇಲ್ಲಿರುವ ಸಂತ ಝೇವಿಯರ್‌ನ ಇಗರ್ಜಿ (೧೯೨೮) ಉಲ್ಲೇಖಾರ್ಹವಾಗಿದೆ. ಬಲ್ಮಠದಲ್ಲಿರುವ ಶಾಂತಿ ಕ್ಯಾಥೆಡ್ರಲ್ ೧೮೬೨ರ ನಿರ್ಮಾಣವಾಗಿದ್ದು, ಸ್ವಿಜರ್‌ಲ್ಯಾಂಡ್‌ನ ಬೆಸಲ್ ನಗರದಲ್ಲಿರುವ ಮಿಷನ್ ಹೌಸ್ ಮಾದರಿಯಲ್ಲಿ ಇದನ್ನು ೧೯೬೨ರಲ್ಲಿ ಪುನರ್ ಜೀರ್ಣೋದ್ಧಾರ ಮಾಡಿದ್ದಾರೆ. ಜಪ್ಪುವಿನಲ್ಲಿರುವ ಕಾಂತಿ ಚರ್ಚು ಹಾಗೂ ಬೊಕ್ಕಾಪಟ್ಣದಲ್ಲಿರುವ ವಿಶ್ರಾಂತಿ ಚರ್ಚುಗಳು ಪ್ರಾಟೆಸ್ಟೆಂಟ್ ಪಂಥಕ್ಕೆ ಸೇರಿದ ಇತರ ಪ್ರಮುಖ ಇಗರ್ಜಿಗಳಾಗಿದ್ದು ಆಕರ್ಷಕವಾಗಿವೆ.

ಕುಲಶೇಖರ: ಮಂಗಳೂರು ನಗರದ ವ್ಯಾಪ್ತಿಯಲ್ಲಿರುವ ಕುಲಶೇಖರದ ಹೋಲಿಕ್ರಾಸ್ ಇಗರ್ಜಿಯಲ್ಲಿರುವ (೧೯೧೩) ಅಲೆಕ್ಸಾಂಡರ್ ದ್ಯೂಬ್ವಾ (೧೮೯–೧೮೭೭) ಸ್ವಾಮಿಯ ಸಮಾಧಿಯಿಂದಾಗಿ ಅದು ಪ್ರಸಿದ್ಧವಾಗಿದೆ. 'ಕುಲಶೇಖರದ ಅಜ್ಜ' ಎಂದೇ ಪ್ರಸಿದ್ಧರಾಗಿದ್ದ ಇವರು ತಮ್ಮ ಪವಾಡ ಸದೃಶ್ಯ ವ್ಯಕ್ತಿತ್ವದಿಂದಾಗಿ ಎಲ್ಲರ ಗೌರವಕ್ಕೂ ಪಾತ್ರರಾಗಿದ್ದರು. ವರ್ಷದಲ್ಲೊಮ್ಮೆ ಅವರ ಜಾತ್ರೆ (ಡಿಸೆಂಬರ್ ೧೧)ಯಾಗುತ್ತದೆ. ಈ ಚರ್ಚಿನಲ್ಲಿ ಅವರಿಗೆ ಸಂಬಂಧಿಸಿದ ವಸ್ತುಗಳನ್ನು ಸಂರಕ್ಷಿಸಿಡಲಾಗಿದೆ.

ಬೀಚುಗಳು: ಕಡಲ ತೀರದಲ್ಲಿರುವ ಮಂಗಳೂರಿಗೆ ಸಮೀಪದಲ್ಲಿರುವ ತಣ್ಣೀರುಭಾವಿ, ಪಣಂಬೂರು, ಸೋಮೇಶ್ವರ, ಉಳ್ಳಾಲ, ಸಸಿಹಿತ್ತಿಲು, ಸುರತ್ಕಲ್, ಮುಕ್ಕಾ ಮುಂತಾದೆಡೆಗಳಲ್ಲಿರುವ ಬೀಚುಗಳು ಸ್ಥಳೀಯರಿಗೆ, ಪ್ರವಾಸಿಗರಿಗೆ ಮುದ ನೀಡುವ ತಾಣಗಳಾಗಿವೆ. **ಉದ್ಯಾನಗಳು:** ಮಂಗಳೂರು ಪಟ್ಟದಲ್ಲಿರುವ ರವೀಂದ್ರನಾಥ ಟಾಗೂರ್ ಉದ್ಯಾನವನ, ಲಾಲ್‌ಬಾಗ್ ಹಾಗೂ ಉರ್ವ ಉದ್ಯಾನವನಗಳು ಆಕರ್ಷಕವಾಗಿದೆ. ಕದ್ರಿ ಉದ್ಯಾನದ ಸಮೀಪದಲ್ಲೇ ಜಿಂಕೆ ಹಾಗೂ ಉರಗಗಳ ಉದ್ಯಾನವಿದ್ದು, ಅದನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ. ಮಂಗಳೂರಿನ ನೆಹರು ಮೈದಾನ, ಪ್ರಮುಖ ಸಾರ್ವಜನಿಕ ಸ್ಥಳವಾಗಿದೆ. ವ್ಯಾಯಾಮಶಾಲೆಗಳೂ ನಗರದಲ್ಲಿದ್ದು ಮಂಗಳಾ ಕ್ರೀಡಾಂಗಣವೂ ಆಟೋಟ ಕ್ಷೇತ್ರಕ್ಕೊಂದು ವ್ಯವಸ್ಥಿತ ಕೊಡುಗೆಯಾಗಿದೆ.

ವಸ್ತು ಸಂಗ್ರಹಾಲಯಗಳು: ಮಂಗಳೂರು ಪಟ್ಟಣದ ಬಿಜೈನಲ್ಲಿರುವ **ಶ್ರೀಮತಿಬಾಯಿ ಸ್ಮಾರಕ ಸರ್ಕಾರಿ ವಸ್ತುಸಂಗ್ರಹಾಲಯ** (೧೯೬೦)ವನ್ನು ಕರ್ನಲ್ ವಿ. ಆರ್. ಮಿರಜ್‌ಕರ್ ಎಂಬ ವೈದ್ಯರೊಬ್ಬರು, ಭವ್ಯ ಭವನವೂ ಸೇರಿದಂತೆ ತಮ್ಮಲ್ಲಿದ್ದ ವಸ್ತುಸಂಗ್ರಹವನ್ನು, ತಮ್ಮ ತಾಯಿ ಶ್ರೀಮತಿಬಾಯಿವರ ಹೆಸರಿನಲ್ಲಿ ಸರ್ಕಾರಕ್ಕೆ ದಾನ ನೀಡಿದ್ದು, ಅವರ ಅಪೇಕ್ಷೆಯಂತೆ ಈ ಸರ್ಕಾರಿ ಸಂಗ್ರಹಾಲಯಕ್ಕೆ ಅವರ ತಾಯಿಯ ಹೆಸರನ್ನೇ ಇಡಲಾಗಿದೆ. ವಿವಿಧ ಧರ್ಮಗಳಿಗೆ ಸಂಬಂಧಿಸಿದ ವಸ್ತುಗಳು, ಮೂರ್ತಿ–ಶಿಲ್ಪ–ವಿಗ್ರಹ, ಚಿತ್ರಗಳು, ಶಿಲೆ, ಖನಿಜ, ಜಲಚರ–ವನಚರ ಜೀವಿಗಳು, ಭೂತದ ಮುಖವಾಡ, ಪೂಜಾ ಸಾಮಗ್ರಿ ಮುಂತಾದ ವಸ್ತು ಸಂಗ್ರಹವನ್ನಿಲ್ಲಿ ನೋಡಬಹುದಾಗಿದೆ. ಸಂತ ಅಲಾಯ್ಸಸ್ ಕಾಲೇಜಿನಲ್ಲಿ **'ಎಲೋಶಿಯಸ್'** ಎಂಬ ಶೈಕ್ಷಣಿಕ, ಐತಿಹಾಸಿಕ, ಹಾಗೂ ಪುರಾತತ್ವ ಮಹತ್ವದ ವಸ್ತುಸಂಗ್ರಹಾಲಯವಿದೆ. ಇಟಲಿಯ ಫಾದರ್ ಚಿಯಾಪ್ರಿಯು ತನ್ನೊಡನೆ ತಂದಿದ್ದ ಅಪೂರ್ವ ವಸ್ತುಗಳೇ ಈ ಮ್ಯೂಸಿಯಂನ ಆರಂಭಕ್ಕೆ ೧೯೧೨ರಲ್ಲಿ ನಾಂದಿಯಾಯಿತು. ಇಂದು ಐದು ಸಾವಿರಕ್ಕೂ ಹೆಚ್ಚು ವಸ್ತುಗಳ ಸಂಗ್ರಹವನ್ನು ಈ ಕಾಲೇಜು ಹೊಂದಿದೆ. ಅಲ್ಲದೆ ಮಂಗಳೂರಿಗೆ ೧೯೦೬ರಲ್ಲಿ ಬಂದ ಮೊದಲ ಕಾರು ಇಲ್ಲಿದೆ. **ಪಾವಂಜೆಹೌಸ್:** ಸಂತ ಆ್ಯನ್ ಶಾಲೆಯಿಂದ ಒಂದು ಕಿ.ಮೀ. ಉತ್ತರಕ್ಕೆ, ರಥಬೀದಿಯ ಹೂವಿನ ಮಾರುಕಟ್ಟೆ ಬಳಿಯ ಗೋಪಾಲಕೃಷ್ಣ ದೇವಾಲಯದ ಪಕ್ಕದಲ್ಲಿರುವ ಇದು ಕಲಾವಿದ ಪಾವಂಜೆ ಗೋಪಾಲ ಕೃಷ್ಣಯ್ಯನವರ ಮನೆಯಾಗಿದ್ದು, ಪ್ರಾದೇಶಿಕ ಸಂಸ್ಕೃತಿಯನ್ನು ಬಿಂಬಿಸುವ ಅಪೂರ್ವ ವಸ್ತುಗಳ ಸಂಗ್ರಹವಿಲ್ಲಿದೆ.

ಪಿಲಿಕುಲ ನಿಸರ್ಗಧಾಮ: ಮಂಗಳೂರು ಪಟ್ಟಣದಿಂದ ಈಶಾನ್ಯಕ್ಕೆ ೧೨ ಕಿಮೀ ದೂರದಲ್ಲಿ ರಾಷ್ಟ್ರೀಯ ಹೆದ್ದಾರಿ ಹದಿಮೂರರ ಮೇಲೆ, ಮಂಗಳೂರು–ಮೂಡಬಿದ್ರಿ ಮಾರ್ಗದಲ್ಲಿ ಸ್ವಲ್ಪ ಒಳಕ್ಕಾದಂತೆ ಇರುವ ಮೂಡುಶೆಡ್ಡೆ (೭೪೧೭) ಸೆನ್ಸಸ್ ಪಟ್ಟಣದ ವ್ಯಾಪ್ತಿಯಲ್ಲಿರುವ ಪ್ರಕೃತಿಧಾಮ. ಹಿಂದೆ ಹುಲಿಗಳು ಸಮೃದ್ಧವಾಗಿದ್ದವೆಂದು ಹೇಳಲಾಗುವ ಈ ಸ್ಥಳವಿರುವ ಪಿ(ಪು)ಲಿ ಕು(ಕೊ)ಳ ಎಂಬುದಕ್ಕೆ ತುಳುವಿನಲ್ಲಿ 'ಹುಲಿಕೊಳ' ಎಂದೇ ಅರ್ಥ. ಈ ನಿಸರ್ಗಧಾಮವು ವೈವಿಧ್ಯತೆಯಿಂದ ಕೂಡಿದ್ದು, ಸುಮಾರು ೩೫೦ ಎಕರೆ ಪ್ರದೇಶದಲ್ಲಿ ಹರಡಿಕೊಂಡಿದೆ. ಪ್ರಕೃತಿ ಪ್ರಿಯರಿಗೆ ಬಗೆಬಗೆಯ ಸಸ್ಯ ಜಗತ್ತನ್ನು ದರ್ಶನ ಮಾಡಿಸುವ ಈ ಧಾಮ ರಾಷ್ಟ್ರದಲ್ಲೇ ಅಭೂತಪೂರ್ವವೆಂದು ಹೇಳಲಾಗುತ್ತದೆ. ವಿಸ್ಮಯ ಸಸ್ಯಲೋಕ, ವಿಶಿಷ್ಟ ವನ್ಯಜೀವಿಲೋಕ, ನಯನಮನೋಹರ ಪುಷ್ಪಲೋಕ, ಅದ್ಭುತ ಮತ್ಸ್ಯಲೋಕಗಳಿಂದ ಕೂಡಿದ ಈ ಸುಂದರ ನಿಸರ್ಗ ತಾಣವು ಪ್ರವಾಸಿಗರಿಗೆ ಅವರ್ಣನೀಯ ಆನಂದ ನೀಡುತ್ತದೆ. ಮಿಗಿಲಾಗಿ, ಮನರಂಜನೆಗಾಗಿ ಕೇಬಲ್‌ಕಾರು, ನೃತ್ಯಕಾರಂಜಿ, ಆಟಿಕೆರೈಲು, ದೋಣಿವಿಹಾರ, ಆನೆಸವಾರಿ, ರೋಪ್‌ವೆ, ಮಾನಸ ಜಲಕ್ರೀಡಾ ಉದ್ಯಾನ, ವಿಜ್ಞಾನಮಂದಿರ, ವಸ್ತುಸಂಗ್ರಹಾಲಯ, ಪ್ಲಾನಿಟೋರಿಯಂ ಮುಂತಾದ ಆಕರ್ಷಣೆಗಳು ಇಲ್ಲಿವೆ. **ಸ್ಯಾಂಡ್‌ಸ್ಟ್ರೀಟ್:** ಅರಬ್ಬೀ ಸಮುದ್ರ ಹಾಗೂ ಗುರುಪುರ ನದಿಗಳ ನಡುವೆ ಇರುವ ಸ್ಯಾಂಡ್‌ಸ್ಟ್ರೀಟ್ ಮುಸ್ಸಂಜೆಯ ವಾಯುವಿಹಾರಕ್ಕೆ, ಮನರಂಜನೆಗೆ ಹೇಳಿ ಮಾಡಿಸಿದ್ದಾಗಿದೆ.

ಬಲಿದಾನ ಸ್ಮಾರಕ: ಹಳೆಯ ಜಿಲ್ಲಾಧಿಕಾರಿ ಕಚೇರಿಯ ಮೂಡಣ ಗೋಡೆಗೆ ಒತ್ತಿಕೊಂಡಂತಿರುವ ಗೋಪುರವನ್ನು, ಪ್ರಥಮ ಜಾಗತೀಕ ಯುದ್ಧದಲ್ಲಿ ದಕ್ಷಿಣಕನ್ನಡ ಜಿಲ್ಲೆಯಿಂದ ಭಾಗವಹಿಸಿದ್ದ ೮೮ ಯೋಧರಲ್ಲಿ ಮರಣ ಹೊಂದಿದ ಇಬ್ಬರು ಯೋಧರ ಸಲುವಾಗಿ ನಿರ್ಮಿಸಲಾಗಿದೆ. ಈ ಅಂಶವನ್ನು ಅದರ ಮೇಲಿರುವ ಶಿಲಾಲೇಖವೂ ಸಮರ್ಥಿಸುತ್ತದೆ. **ಹುತಾತ್ಮರ ಸ್ಮಾರಕ:** ಕದ್ರಿ ಗುಡ್ಡದ ಬಳಿಯ ಕರ್ನಾಟಕ ಪಾಲಿಟೆಕ್ನಿಕ್ ಬಸ್ ನಿಲ್ದಾಣದ ಎದುರಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವೀರಯೋಧರ ಸ್ಮರಣಾರ್ಥವಾಗಿ ಈ ಸ್ತಂಭವನ್ನು

ನಿರ್ಮಿಸಲಾಗಿದೆ. **ಬ್ರಿಟಿಷ್ ಅಧಿಕಾರಿಗಳ ಸಮಾಧಿ:** ಬ್ರಿಗೇಡಿಯರ್ ಜನರಲ್ ಜೇಮ್ಸ್ ಕಾರ್ನಕ್ ಹಾಗೂ ಮೈಕೆಲ್ ಥಾಮಸ್ ಹ್ಯಾರಿಸನ್ನರ ಸಮಾಧಿಗಳ ಮೇಲೆ ನಿರ್ಮಿಸಿರುವ ಆಕರ್ಷಕ ಗೋರಿ ಸ್ಮಾರಕಗಳು ಕ್ರಿಶ್ಚಿಯನ್ನರ ಸ್ಮಶಾನದಲ್ಲಿವೆ.

ಗಾಂಧೀಜಿ ಮತ್ತು ಮಂಗಳೂರು: ಸ್ವಾತಂತ್ರ್ಯ ಸಂಗ್ರಾಮ ಸಂದರ್ಭದಲ್ಲಿ ಮಂಗಳೂರಿಗೂ ಗಾಂಧೀಜಿಯವರು ಮೂರು ಬಾರಿ ಭೇಟಿ ನೀಡಿದ್ದರು. ಅವರ ಮೊದಲ ಭೇಟಿ ೧೯೨೦ರ ಆಗಸ್ಟ್ ೧೯–೨೦ ರಂದಾದರೆ, ಎರಡನೆಯ ಭೇಟಿಯು ೧೯೨೭ರ ಅಕ್ಟೋಬರ್ ೨೬–೨೭ ಆಗಿತ್ತು. ಮುಂದೆ ೧೯೩೪ರ ಫೆಬ್ರವರಿ ೨೪–೨೫ರಂದು ಗಾಂಧೀಜಿ ಮಂಗಳೂರಿಗೆ ಮೂರನೆಯ ಬಾರಿಗೆ ಭೇಟಿ ನೀಡಿದ್ದರು. **ಕೊಂಚಾಡಿ:** ಇದು ಮಂಗಳೂರು–ಬಜಪೆ ರಸ್ತೆಯಲ್ಲಿದೆ. ಇಲ್ಲಿ ೧೯೮೭ರಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಮಹಾಲಸಾ ನಾರಾಯಣಿಯ ದೇವಾಲಯವಿದೆ. ಗೌಡ ಸಾರಸ್ವತ ಬ್ರಾಹ್ಮಣರ ಆರಾಧ್ಯ ದೇವತೆಯಾದ ಇವಳು ವಿಷ್ಣುಸ್ವರೂಪಿಯಾದ ಮೋಹಿನಿ ಎಂದು ತಿಳಿಯಲಾಗಿದ್ದು, ಅವಳ ಕೃಷ್ಣಶಿಲಾ ಪ್ರತಿಮೆಯನ್ನು ವಿಜೃಂಭಣೆಯಿಂದ ವೈವಿಧ್ಯಮಯವಾಗಿ ಪೂಜಿಸಲಾಗುತ್ತಿದೆ. **ಕಂಕನಾಡಿ:** ಕೊಂಕಣ ರೈಲು ಮಾರ್ಗದ ಪ್ರಮುಖ ಜಂಕ್ಷನ್ ಇದಾಗಿದೆ. ಇಲ್ಲಿ ಬ್ರಹ್ಮ ಬೈದರ್ಕಳ ದೈವದ ಪ್ರಾಚೀನ (೧೮೭೪) ಗರಡಿ ಕ್ಷೇತ್ರವಿದೆ. ಗಾಂಧೀಜಿಯವರು ಬದುಕಿದ್ದಾಗಲೇ (೧೯೩೪) ಬ್ರಹ್ಮದೇವರ ಆದೇಶದ ಮೇರೆಗೆ ಗಾಂಧೀಜಿ ಮತ್ತು ನಾರಾಯಣಗುರುಗಳ ಪ್ರತಿಮೆಗಳನ್ನಿಲ್ಲಿ ಪ್ರತಿಷ್ಠೆ ಮಾಡಲಾಗಿದ್ದು, ಈಗಲೂ ಪೂಜೆ ಸಲ್ಲುತ್ತಿದೆ.

**ಮಡಂತ್ಯಾರು : ಪಾರೆಂಕಿ(೩,೨೮೫)**ಗ್ರಾಮಕ್ಕೆ ಸೇರಿದ ಪೇಟೆ ಸ್ಥಳ. ತುಳು ಭಾಷೆಯಲ್ಲಿ ಮಡಂತ್ಯಾರು ಎಂದರೆ 'ಮಠದ ಆಸ್ತಿ' ಎಂದರ್ಥ. ಆದರೆ ಇಂದು ಕ್ರೈಸ್ತಧರ್ಮೀಯರಿಗೆ ಇದು ಪವಿತ್ರ ತಾಣವಾಗಿದೆ. ಇಲ್ಲಿರುವ ಸೇಕ್ರೆಡ್ ಹಾರ್ಟ್ ಚರ್ಚು (೧೮೮೯) ವಿಶಾಲವಾದ ಆವರಣದಲ್ಲಿರುವ ಆಕರ್ಷಕ ಇಗರ್ಜಿ. ಇಗರ್ಜಿಯ ಒಳಗಿರುವ ಏಸು, ಅವನ ಮಾತಾ–ಪಿತರು ಹಾಗೂ ಇತರ ಕ್ರೈಸ್ತ ಸಂತರ ಮೂರ್ತಿಗಳು ಆಕರ್ಷಕವಾಗಿದೆ. ಅದರಲ್ಲೂ ಸುಡಾವೆ ಮಣ್ಣಿನಿಂದ ಮಾಡಿರುವ 'ಶಿಲುಬೆಯ ಹಾದಿ' ಯನ್ನು ಬಿಂಬಿಸುವ ಮೂರ್ತಿಗಳು ವಿಶಿಷ್ಟವಾಗಿವೆ. ಈ ಇಗರ್ಜಿಗೆ ಸೇರಿದ ಕೆಥೋಲಿಕ್ ಬೋರ್ಡ್ ಆಫ್ ಎಜುಕೇಷನ್‌ನ ಆಶ್ರಯದಲ್ಲಿ ಶಿಕ್ಷಣ ಸಂಸ್ಥೆಗಳು ತಲೆ ಎತ್ತಿ ಶಿಕ್ಷಣ ಪ್ರಸಾರದಲ್ಲಿ ಕೈಜೋಡಿಸಿವೆ.

**ಮರ್ದಾಳ :** ತಾಲೂಕು ಕೇಂದ್ರ ಪುತ್ತೂರಿನಿಂದ ೩೬ ಕಿ.ಮೀ. ಪೂರ್ವಕ್ಕೆ ಹಾಗೂ ಹೋಬಳಿ ಕೇಂದ್ರ ಕಡಬದಿಂದ ನಾಲ್ಕು ಕಿ.ಮೀ. ಪೂರ್ವಕ್ಕೆ ಇರುವ **ಬಂಟ್ರ (೧,೬೬೭)** ಗ್ರಾಮದ ವ್ಯಾಪ್ತಿಯಲ್ಲಿರುವ ಚಾರಿತ್ರಕ ಮಹತ್ವದ ಸ್ಥಳ. ಮಂಗಳೂರು–ಹಾಸನ ಬ್ರಾಡ್‌ಗೇಜ್ ರೈಲು ಮಾರ್ಗದಲ್ಲಿರುವ **'ಸುಬ್ರಹ್ಮಣ್ಯ ರಸ್ತೆ' (ನೆಟ್ಟಣಿಗೆ ಮೂಡನೂರು** (೮,೨೨೬) ) ರೈಲು ನಿಲ್ದಾಣದಿಂದ ನಾಲ್ಕು ಕಿ.ಮೀ. ಉತ್ತರಕ್ಕಿರುವ ಇದು ಹಿಂದೆ ಜೈನ ಸಾಮಂತರಸು ಮನೆತನದ ಆಳ್ವಿಕೆಗೆ ಒಳಪಟ್ಟಿತ್ತು. ಈಗಲೂ ಆ ಅರಸರ ಬೀಡನ್ನು ಮರ್ದಾಳ ಬೀಡು ಪ್ರದೇಶದಲ್ಲಿ ನೋಡಬಹುದಾಗಿದೆ. ಈ ಅರಸು ಮನೆತನದ ಆರಾಧ್ಯ ದೇವತೆಗಳಾದ ಚಂದ್ರನಾಥ ಬಸದಿ ಹಾಗೂ ಮಹಾಲಿಂಗೇಶ್ವರ ದೇವಾಲಯಗಳು ಇಲ್ಲಿವೆ. ಊರ ರಸ್ತೆಯ ಬದಿಯಲ್ಲೇ ಇರುವ ವಿಶಾಲವಾದ ಚಂದ್ರನಾಥ ಬಸದಿಯ ಗರ್ಭಗೃಹದಲ್ಲಿ ಚಂದ್ರನಾಥ ತೀರ್ಥಂಕರನ ಸುಂದರ ಶಿಲ್ಪವಿದೆ. ಈ ಬಸದಿಯ ಜೀರ್ಣೋದ್ಧಾರ ಸಂದರ್ಭದಲ್ಲಿ ಪದ್ಮಾವತಿ ಯಕ್ಷಿಯ ಪಂಚಲೋಹದ ವಿಗ್ರಹವೊಂದು ದೊರೆತಿದೆ. ಅದರ ಶಿರೋಭಾಗದಲ್ಲಿದ್ದ ಸರ್ಪದ ಹೆಡೆಯು ಮುಕ್ಕಾಗಿದೆ. ಇಲ್ಲಿರುವ ತೀರ್ಥಂಕರ ಶಿಲ್ಪವನ್ನು ಪಂಜ ಗ್ರಾಮದ ಪಾಳು ಬಸದಿಯೊಂದರಿಂದ ತಂದು ಪ್ರತಿಷ್ಠಾಪಿಸಲಾಗಿದೆಯೆಂಬ ಅಭಿಪ್ರಾಯವಿದೆ. ಊರಾಚೆ ಹೊಲಗಳ ನಡುವೆ ಇರುವ ಮಹಾಲಿಂಗೇಶ್ವರ ದೇವಾಲಯವು ವಿಶಾಲವಾಗಿದ್ದು, ಜೀರ್ಣೋದ್ಧಾರಗೊಂಡಿದೆ. ಬಂಟ್ರ ಗ್ರಾಮದಲ್ಲಿರುವ ಶಿವಾಲಯವು ಗಜಪೃಷ್ಠಾಕಾರದ ತಳವಿನ್ಯಾಸವನ್ನು ಹೊಂದಿರುವ ಪುರಾತನ ದೇವಾಲಯವಾಗಿದೆ.

**ಮುಕ್ಕಾಬೀಚು :** ಜಿಲ್ಲಾ ಕೇಂದ್ರ ಮಂಗಳೂರಿನಿಂದ ೨೪ ಕಿ.ಮೀ. ಉತ್ತರಕ್ಕೆ ರಾಷ್ಟ್ರೀಯ ಹೆದ್ದಾರಿ ೧೭ಕ್ಕೆ ಅನತಿ ದೂರದಲ್ಲಿರುವ ಕಡಲಂಚಿನ ಊರು. ಅಲ್ಲಿರುವ ಬೀಚಿನಿಂದಾಗಿ ಪ್ರವಾಸಿ ತಾಣವಾಗಿ ಪ್ರಸಿದ್ಧಿ ಹೊಂದಿರುವ ತಾಣ. ಮತ್ಸ್ಯ ಆಹಾರ ಉತ್ಪನ್ನ ಹಾಗೂ ಎಣ್ಣೆ ತಯಾರಿಕೆ ಘಟಕವೊಂದು ಇಲ್ಲಿ ಕಾರ್ಯ ನಿರ್ವಹಿಸುತ್ತಿದೆ.

**ಮೂಡಬಿದ್ರೆ (೨೫,೭೧೩)** : ತಾಲೂಕು ಕೇಂದ್ರ ಮಂಗಳೂರಿನಿಂದ (೧೯೧೨–೧೪ರ ಕಾಲಾವಧಿಯಲ್ಲಿ ಇದು ತಾಲೂಕು ಕೇಂದ್ರವೂ ಆಗಿತ್ತು, ಅನಂತರ ೧೯೯೮ರ ಆಗಸ್ಟ್ ವರೆವಿಗೂ ಮೂಡಬಿದ್ರಿಯು ಒಂದು ಹೋಬಳಿ ಕೇಂದ್ರವಾಗಿ ಇಂದಿನ ಉಡುಪಿ

ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿತ್ತು. ಪ್ರಸ್ತುತ ಮಂಗಳೂರು ತಾಲೂಕಿನಲ್ಲಿದೆ.) ಈಶಾನ್ಯಕ್ಕೆ ೩೫ ಕಿ.ಮೀ. ದೂರದಲ್ಲಿರುವ ಹೋಬಳಿ ಕೇಂದ್ರ ರಾಷ್ಟ್ರೀಯ ಹೆದ್ದಾರಿ ೧೩ ಇದರ ಮಗ್ಗುಲಲ್ಲಿ ಹಾದುಹೋಗಿದ್ದು, ಈ ಪಟ್ಟಣವು ಪುರಸಭೆಯ ಆಡಳಿತಕ್ಕೊಳಪಟ್ಟಿದೆ. ಸಾವಿರಕಂಬದ ಬಸದಿ, ಸಿದ್ಧಾಂತ ಬಸದಿ, ಹಾಗೂ ಜೈನಸಿದ್ಧಾಂತದ ಧವಳತ್ರಯ ಟೀಕಾಗ್ರಂಥಗಳಿಂದಾಗಿ 'ಜೈನಕಾಶಿ' ಎಂದೇ ಪ್ರಸಿದ್ಧವಾಗಿರುವ ಈ ಊರು ಬಹು ಹಿಂದೆ ೭೭೦ ಶ್ರಾವಕರ ನಿವಾಸಗಳನ್ನು ಹೊಂದಿತ್ತು. ಅಲ್ಲದೇ ೧೮ ಬಸದಿ, ೧೮ ನಿಷಿಧಿ, ೧೮ ದೇವಾಲಯ, ೧೮ ಕೆರೆ ಹಾಗೂ ೧೮ ಕೇರಿಗಳನ್ನು ಹೊಂದಿದ್ದ ಸುಂದರ ಬೀಡಾಗಿದ್ದು, ಚಾರಿತ್ರಿಕ ಮಹತ್ವವನ್ನೂ ಸಾಂಸ್ಕೃತಿಕ ಹಿರಿಮೆಯನ್ನು ಹೊಂದಿತ್ತು. ಅಲ್ಲದೆ ಪುತ್ತಿಗೆಯ ಚೌಟರಸರ ರಾಜಧಾನಿ ಪಟ್ಟಣವಾಗಿ (೧೬೪೩–೧೮೬೭) ಐತಿಹಾಸಿಕ ಮಹತ್ವವನ್ನೂ ಪಡೆದಿತ್ತು. ಅವರ ಕಾಲದ ಜೈನ ವಾಸ್ತು–ಶಿಲ್ಪಕಲಾ ನೈಪುಣ್ಯತೆಯನ್ನು ಮೂಡಬಿದ್ರೆಯಲ್ಲಿ ಈಗಲೂ ನೋಡಬಹುದಾಗಿದೆ. ಭರತೇಶ ವೈಭವವನ್ನು ರಚಿಸುವ ಮೂಲಕ ಮೂಡಿಬಿದ್ರೆಯ ಹೆಸರನ್ನು ಕನ್ನಡ ಸಾಹಿತ್ಯ ದಿಗಂತದಲ್ಲಿ ಚಿರಸ್ಥಾಯಿಗೊಳಿಸಿದ ರತ್ನಾಕರವರ್ಣಿ ಮೂಡಬಿದ್ರೆಯವನೆಂಬುದು ಉಲ್ಲೇಖಾರ್ಹವಾಗಿದೆ.

ಪ್ರಾಚೀನ ಶಾಸನ, ಸಾಹಿತ್ಯ ಆಕರಗಳಲ್ಲಿ ಪ್ರಾಗ್ವೇಣುಪುರ, ವೇಣುಪುರ, ವಂಶಪುರ, ಕ್ಷೇಮಪುರ ಬಿದುರೆನಗರ, ಬಿದಿರೆ ಎಂದೆಲ್ಲ ಉಲ್ಲೇಖಿತಗೊಂಡಿರುವ ಈ ಊರಿನ ಮೂಡಲ ದಿಕ್ಕಿನಲ್ಲಿ ದಟ್ಟವಾದ ಬಿದಿರುಮೆಳೆಯಿದ್ದುದರಿಂದ 'ಮೂಡುಬಿದಿರೆ' ಎಂಬ ನಾಮಾಂಕಿತವನ್ನು ಇದು ಪಡೆಯಿತೆಂದು ಹೇಳಲಾಗುತ್ತಿದ್ದು, ತುಳು ಭಾಷೆಯಲ್ಲಿ 'ಬೆದ್ರ' ಎಂದಷ್ಟೇ ಕರೆಯುವ ವಾಡಿಕೆಯಿದೆ. ಮೂಡಬಿದ್ರೆಗೆ ಸಮೀಪ ಕೋಡಂಗಲ್ಲು ಪರಿಸರದಲ್ಲಿ ಹೆಬ್ಬಂಡೆಗಳ ನಡುವೆ ಇರುವ ವಿಶಾಲವಾದ ಗುಹೆಗಳು ಶಿಲಾಯುಗ ಮಾನವರ ಚಟುವಟಿಕೆಯ ಕೇಂದ್ರವಾಗಿದ್ದು, ಶಿಲಾಯುಧಗಳು ಪತ್ತೆಯಾಗಿವೆ. ಶಿಲಾಸಮಾಧಿಗಳೂ ಇವೆ. ಮೂಡಬಿದ್ರೆಯಿಂದ ಈವರೆಗೆ ಸುಮಾರು ೮ನೆಯ ಶತಮಾನದಿಂದ ೧೬ನೇ ಶತಮಾನಕ್ಕೆ ಸೇರಿದ ೪೦ ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಗುರುಗಳ ಬಸದಿಯಲ್ಲಿರುವ ಶಾಸನ ಅತ್ಯಂತ ಪ್ರಾಚೀನದ್ದಾದರೆ, ಉಳಿದವು, ೧೫೭೮ರವರೆಗೆ ವಿವಿಧ ಕಾಲಘಟ್ಟದಲ್ಲಿ ನೀಡಲ್ಪಟ್ಟಿರುವ ದಾನಶಾಸನಗಳಾಗಿವೆ. ಇವುಗಳ ನೆರವಿನಿಂದ ಮೂಡಬಿದ್ರೆಯ ಸಾಂಸ್ಕೃತಿಕ ಇತಿಹಾಸವನ್ನು ಅರಿಯಬಹುದಾಗಿದೆ.

ಚೌಟರಸರ ಅರಮನೆ : ಉಳ್ಳಾಲ, ಪುತ್ತಿಗೆ ಹಾಗೂ ಮೂಡಬಿದ್ರೆಗಳನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಏಳು ಮಾಗಣೆಗಳ ಪ್ರಭುಗಳಾಗಿ ೧೨ನೇ ಶತಮಾನದಿಂದ ೧೯ನೇ ಶತಮಾನದವರೆಗೆ ರಾಜ್ಯಭಾರ ಮಾಡಿದ ಚೌಟರಸರು ಸಾಮಂತರಾಜರಾಗಿದ್ದು, ಮೂಡಬಿದ್ರೆ ಅವರ ಕೊನೆಯ ರಾಜಧಾನಿಪಟ್ಟಣವಾಗಿತ್ತು. ಇಲ್ಲಿರುವ ಚೌಟರಸರ ಕಾಲದ ಅರಮನೆಯು ದೊಡ್ಡದಾದ ಹಳೆಮನೆಯಾಗಿದೆ. ಕೋಟೆ–ಕಂದಕಗಳ ಅವಶೇಷಗಳ ನಡುವೆ ಇರುವ ಅರಮನೆಯು ಶಿಥಿಲಾವಸ್ಥೆಯಲ್ಲಿದ್ದು, ಅರಮನೆಯ ಆವರಣದಲ್ಲಿ ಸೋಮನಾಥೇಶ್ವರ ದೇವಾಲಯವಿದೆ. ಈ ಅರಮನೆಯ ಪಟ್ಟದ ಚಾವಡಿಯ ಜಾಲಂದ್ರಗಳನ್ನು ಅಲಂಕರಿಸಿರುವ ವೈವಿಧ್ಯಮಯ ಬಳ್ಳಿಗಳು, ಬೃಹತ್ತಾದ ಕಂಬಗಳ ಮೇಲೆ ಕೆತ್ತಿರುವ ದೇವತಾಮೂರ್ತಿಗಳು ನಯನಮನೋಹರವಾಗಿವೆ. ಆ ಕಂಬಗಳ ಮೇಲೆ ಕೆತ್ತಲಾಗಿರುವ **ಪಂಚನಾರಿತುರಗ** ದಾರು ಶಿಲ್ಪವು, ಕುದುರೆಯ ಎಲ್ಲ ಅಂಗಾಂಗಳನ್ನು ಪಂಚನಾರಿಯರು ವಿವಿಧ ಭಂಗಿಗಳಲ್ಲಿ ಪರಸ್ಪರ ಕಲಾತ್ಮಕವಾಗಿ ಹೆಣೆದುಕೊಂಡಿರುವ ಆಕರ್ಷಕ ಕೆತ್ತನೆಯಾಗಿದ್ದು, ಕುದುರೆಯ ಸರ್ವ ಅಂಗಾಂಗಗಳನ್ನೂ ವ್ಯಾಪಿಸಿರುವಂತೆ ಪಂಚನಾರಿಯರನ್ನು ಬಿಡಿಸಲಾಗಿದೆ. ಇದೇ ರೀತಿ ಅಲ್ಲಿರುವ **ನವನಾರಿಕುಂಜರವು** ಮತ್ತೂ ಸಂಕೀರ್ಣ ಕೆತ್ತನೆಯಾಗಿದ್ದು, ಆನೆಯ ಎಲ್ಲಾ ಅಂಗಾಂಗಗಳನ್ನು ವ್ಯಾಪ್ತಿಸಿದಂತೆ ನವನಾರಿಯರು ವಿವಿಧ ಭಂಗಿಗಳಲ್ಲಿ ಪರಸ್ಪರ ಹೆಣೆದುಕೊಂಡಿರುವಂತೆ ಕೆತ್ತಿರುವ ಕಲಾತ್ಮಕ ಶಿಲ್ಪವಾಗಿದ್ದು, ಆನೆಯ ಮೇಲೆ ಮಂಡಿಯೂರಿ ಕುಳಿತು ಬಿಲ್ಲೇರಿಸಿರುವ ನಾರಿಯರೂ ಇದ್ದಾರೆ. ಅರಮನೆಯ ಆವರಣದಲ್ಲಿರುವ ವಿವಿಧ ಗಾತ್ರದ ಮರದ ಪೆಟ್ಟಿಗೆಗಳು ಪತ್ತಾಸು, ಕಲೆಂಬಿ, ಉಪ್ಪಾಡು, ಮರಿಗೆ ಎಂದೆಲ್ಲ ಕರೆಯಲ್ಪಡುವ ವಸ್ತುಸಂಗ್ರಹಣಾ ಸಾಧನಗಳಾಗಿದೆ. ಈ ಅರಮನೆಯು ಇಂದು ಪುರಾತತ್ವ ಇಲಾಖೆಯ ಸಂರಕ್ಷಣೆಗೆ ಒಳಪಟ್ಟಿದೆ.

ಗುರುಗಳ ಬಸದಿ : ಇಲ್ಲಿರುವ ಹಳೆ ಬಸದಿಯು, ಶಾಸನಗಳಲ್ಲಿ ಗುರುಬಸದಿ, ಸಿದ್ಧಾಂತ ಬಸದಿ ಚಂಡೋಗ್ರ ಪಾರ್ಶ್ವನಾಥ ಬಸದಿ ಎಂದೆಲ್ಲ ಕರೆಯಲ್ಪಟ್ಟಿದ್ದು, ಮೂಡಬಿದ್ರೆಯ ಬಸದಿಗಳಲ್ಲೇ ಅತ್ಯಂತ ಪ್ರಾಚೀನದ್ದಾಗಿದೆ. ಪಾರ್ಶ್ವನಾಥ ತೀರ್ಥಂಕರ ಪೀಠದ ಮೇಲಿರುವ ೭೧೪ರ ಶಾಸನದಿಂದ, ಈ ಬಸದಿಯ ಪ್ರಾಚೀನತೆಯನ್ನು ಎಂಟನೆಯ ಶತಮಾನದ ಎರಡನೆಯ ದಶಕಕ್ಕೆ ಗುರುತಿಸಬಹುದಾಗಿದೆ. ಗುರುಗಳ ಬಸದಿಯಲ್ಲಿರುವ ಏಳು ಶಾಸನಗಳಲ್ಲಿ, ಒಂದು ಎಂಟನೆಯ ಶತಮಾನಕ್ಕೆ ಸೇರಿದ್ದು, ಉಳಿದೈದು ೧೪–೧೬ನೆಯ ಶತಮಾನಕ್ಕೆ ಸೇರಿದ ದಾನಶಾಸನಗಳಾಗಿವೆ. ಅವುಗಳಲ್ಲಿ, ತೇದಿರಹಿತ ಶಾಸನವು ಮುಮ್ಮಡಿ ಬಲ್ಲಾಳನ ಆಡಳಿತಕ್ಕೆ ಸೇರಿದ್ದು, ಊರ ಸಮಸ್ತರೂ,

ಬಲ್ಲಾಳನ ಮಹಾಪ್ರಧಾನ ದೇವಪ್ಪ ದಂಡನಾಯಕನ ಮೈದುನ ಹರಿಯಪ್ಪ ದಂಡನಾಯಕನ ಮುಂದಾಳತ್ವದಲ್ಲಿ ಶಾಸನ ಕಟ್ಟಳೆಯ ನಿರ್ವಹಣೆ ಹಾಗೂ ಸಂರಕ್ಷಣೆಗಾಗಿ ವಿಧಿಸುವ ಕಟ್ಟುಪಾಡುಗಳನ್ನು ಒಳಗೊಂಡಿದೆ. ಪ್ರವಾಸಿ ಮಂದಿರದ ಬಳಿಯಿರುವ ೧೩೯೦ರ ಶಾಸನದಿಂದ ಎರಡನೇ ಹರಿಹರನ ಆಡಳಿತಾವಧಿಯಲ್ಲಿ ಮಂಗರಸನು ಮಂಗಲೂರು ರಾಜ್ಯವನ್ನಾಳುತ್ತಿದ್ದು, ಮಂಜಣ್ಣ ಅಧಿಕಾರಿಯಾಗಿದ್ದಾಗ ನಾಲ್ಕು ಕಠಾರಿ ಅಂಕುಶ ಗದ್ಯಾಣವನ್ನು ಕೇಶವಶೆಟ್ಟಿಯ ಮಗ ಮೈಂದನು ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಗುರುಬಸದಿಯಲ್ಲಿರುವ ೧೪೦೭ರ ಶಾಸನವನ್ನು ವೀರಬುಕ್ಕರಾಯನ ಆಳ್ವಿಕೆಯಲ್ಲಿ ನೀಡಲಾಗಿದ್ದು, ಮಹಾಪ್ರಧಾನ ಚೋಮಯ್ಯ ದಂಡನಾಯಕರ ಆದೇಶದಂತೆ, ಬಾಚಪ್ಪವೊಡೆಯರು ಮಂಗಲೂರು ರಾಜ್ಯವನ್ನು ಆಳುತ್ತಿದ್ದಾಗ, ಚಂಡೋಗ್ರ ಪಾರ್ಶ್ವದೇವರ ಸೇವೆಗೆಂದು ಅಧಿಕಾರ ವರ್ಗದವರು ಸಂಯುಕ್ತವಾಗಿ ಭೂ ದಾನ ನೀಡಿದ ಅಂಶವನ್ನು ದಾಖಲಿಸಿದ್ದು, ಈ ಶಾಸನದ ಶಾಪಾಶಯ ಭಾಗವೂ ವಿಶಿಷ್ಟವಾಗಿದೆ. ಅಲ್ಲೇ ಇರುವ ೧೪೮೭ರ ಶಾಸನವು ಪಾರ್ಶ್ವನಾಥನ ಸೇವೆಗೆಂದು ಬೆಟ್ಟದ ಮೇಲೆ ಚನ್ನಪಟ್ಟಣವನ್ನು ನೆಲೆಗೊಳಿಸಿ, ಹೊಸದಾಗಿ ಗದ್ದೆಯನ್ನು ರೂಪಿಸಿ ದಾನ ಬಿಟ್ಟ ವಿಷಯವನ್ನು ನಿವೇದಿಸುತ್ತದೆ. ಇದೇ ಬಸದಿಯ ಆವರಣದಲ್ಲಿರುವ ಇನ್ನೊಂದು ಶಾಸನವು ಕೃಷ್ಣದೇವರಾಯನ ಆಳ್ವಿಕೆಯಲ್ಲಿ (೧೫೧೫) ನೀಡಲ್ಪಟ್ಟಿದ್ದು, ಮಂಗಲೂರು–ಬಾರಕೂರು ರಾಜ್ಯಗಳನ್ನಾಳುತ್ತಿದ್ದ ರತ್ನಪ್ಪೊಡೆಯರು ಬಿದಿರೆಯ ನಗರದಲ್ಲಿ ಜೀನಶಾಸ್ತ್ರ ದಾನಕ್ಕೆಂದು ೭೭೦ ದೊಡ್ಡ ವರಾಹದಿಂದ ಬಂದ ಬಡ್ಡಿ ಬತ್ತವನ್ನು ದಾನ ಬಿಟ್ಟ ಅಂಶವನ್ನು ಉಲ್ಲೇಖಿಸುತ್ತದೆ. ಅಲ್ಲಿಯ ಗದ್ದುಗೆ ಮಂಟಪದಲ್ಲಿರುವ ೧೫೩೮ರ ಶಾಸನದಿಂದ ಆ ಮಂಟಪದ ನಿರ್ಮಾಣಕ್ಕಾದ ಒಟ್ಟು ವೆಚ್ಚದಲ್ಲಿ ೧೨ ಭಾಗವನ್ನು ಕಾಜವ ಚೌಳಿಸೆಟ್ಟಿ ಮತ್ತವನ ಅಳಿಯಂದಿರು ಪಾವತಿಸಿ ಪುಣ್ಯ ಗಳಿಸಿಕೊಂಡರೆಂದು ದಾಖಲಿಸಿದೆ.

ಪೂರ್ವಾಭಿಮುಖನಾಗಿರುವ ಈ ಬಸದಿಯ ಗರ್ಭಗೃಹದಲ್ಲಿ ನೆಲ್ಲಿಕಾರು (ಕೃಷ್ಣ)ಶಿಲೆಯಲ್ಲಿ ರೂಪಿಸಿರುವ ಸುಮಾರು ಎಂಟು ಅಡಿ ಎತ್ತರದ ಪಾರ್ಶ್ವನಾಥ ತೀರ್ಥಂಕರನ ಸುಂದರ ಬಿಂಬವಿದೆ. ಬೆಳ್ಕೊಡೆಯಂತೆ, ಶಿರದ ಮೇಲೆ ಚಾಚಿಕೊಂಡಿರುವ ನಾಗಹೆಡೆಗಳ ಕೆತ್ತನೆಯಲ್ಲಿ ಕಲಾತ್ಮಕತೆ ಮೈದುಂಬಿ ನಿಂತಿದೆ. ಇದನ್ನು ಅಲ್ಲಿಯ ಶ್ರಾವಕರು ಸುಮಾರು ೭೧೪ರಲ್ಲಿ ಪ್ರತಿಷ್ಠಾಪಿಸಿದ ಅಂಶ, ಅದರ ಸಿಂಹ ಪೀಠದ ಮೇಲಿರುವ ಶಾಸನದಿಂದ ಮನವರಿಕೆಯಾಗುತ್ತದೆ. ಜೈನ ಸಿದ್ಧಾಂತವನ್ನು ಪ್ರತಿಪಾದಿಸುವ 'ಷಟ್ಖಂಡಾಗಮ'ವು ಪ್ರಾಕೃತ ಭಾಷೆಯಲ್ಲಿರುವ ಪುರಾತನ ಗ್ರಂಥ. ಜಿನಯತಿ ವೀರಸೇನಾಚಾರ್ಯರು ಈ ಗ್ರಂಥಕ್ಕೆ ಪ್ರಾಕೃತ ಭಾಷೆಯಲ್ಲಿ 'ಧವಳ, ಜಯಧವಲ ಹಾಗೂ ಮಹಾಧವಲ' ಎಂಬ ಟೀಕಾಗ್ರಂಥಗಳನ್ನು ಬರೆದಿದ್ದಾರೆ. ಆ ಟೀಕೆಗಳನ್ನು ಕನ್ನಡ ಲಿಪಿಯಲ್ಲಿ ಕೊರೆದಿರುವ ಓಲೆಗರಿ ಹಸ್ತಪ್ರತಿ ಕಟ್ಟುಗಳು ಈ ಬಸದಿಯಲ್ಲಿರುವುದೊಂದು ಹೆಗ್ಗಳಿಕೆಯಾಗಿದ್ದು ,ಶಿವರಾಮ ಕಾರಂತರು ಅವುಗಳ ಬಗ್ಗೆ ವಿದ್ವಜ್ಜನರ ಗಮನ ಸೆಳೆದರು. ಈ ಹಸ್ತಪ್ರತಿಗಳನ್ನೂ ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ (ಸು. ೧೧೨೦)ಬರೆದುಕೊಂಡುವಾಗಿರಬೇಕೆಂದು ಎಚ್.ಆರ್. ರಘುನಾಥಭಟ್ ಅಭಿಪ್ರಾಯಪಡುತ್ತಾರೆ. ಜೈನ ಸಿದ್ಧಾಂತದ ಈ ಅಪೂರ್ವ ಹಸ್ತಪ್ರತಿಗಳು ಇಲ್ಲಿರುವುದರಿಂದ ಇದಕ್ಕೆ 'ಸಿದ್ಧಾಂತದ ಬಸದಿ' ಎಂದೂ ಜಿನಗುರುಗಳಿಗೆ ಇಲ್ಲಿ ಪಟ್ಟವಾಗುವುದರಿಂದ 'ಗುರು ಬಸದಿ' ಎಂದೂ ಇದು ಜನಪ್ರಿಯವಾಗಿದೆ. ಮೂವತ್ತೈದಕ್ಕೂ ಹೆಚ್ಚು ನವರತ್ನ ನಿರ್ಮಿತ ರತ್ನಮಯ ಜಿನಬಿಂಬಗಳು ಇಲ್ಲಿಯ ಇನ್ನೊಂದು ವಿಶೇಷವಾಗಿದ್ದು, ಅವು ಅರ್ಧ ಅಂಗುಲದಿಂದ ಹತ್ತು ಅಂಗುಲ ಎತ್ತರದ ಅಮೂಲ್ಯ ಪ್ರತಿಮೆಗಳಾಗಿವೆ. ಜಿನಯಾತ್ರಿಕರು ವಿಶೇಷ ಕಾಣಿಕೆ ಪಾವತಿಸಿ ಈ ರತ್ನಮಯ ಜಿನಬಿಂಬ ಹಾಗೂ ಸಿದ್ಧಾಂತ ಗ್ರಂಥಗಳನ್ನು ನೇಮದಿಂದ ದರ್ಶಿಸಬಹುದಾಗಿದೆ. ಪ್ರತ್ಯೇಕ ಕೊಠಡಿಯಲ್ಲಿ ಸಂರಕ್ಷಿಸಲ್ಪಟ್ಟಿರುವ ಈ ಅಪೂರ್ವ ಸಂಗ್ರಹದಲ್ಲಿರುವ ರತ್ನಮಯ ಜಿನಬಿಂಬಗಳಲ್ಲೊಂದು ತಾಳೆಮರದ ಬೇರಿನಿಂದ ಮಾಡಿದ್ದೆಂದು ತಿಳಿದುಬರುತ್ತದೆ. 'ಧವಳತ್ರಯ' ಹಸ್ತಪ್ರತಿಗಳಲ್ಲಿರುವ ಬರಹವು ವಿಶೇಷ ಜಾತಿಯ ಶಾಯಿಯನ್ನು ಬಳಸಿ ಲೆಕ್ಕಣಿಕೆಯಿಂದ ಬರೆದಿರುವ ಅಪೂರ್ವ ದಾಖಲೆಗಳಾಗಿವೆ. ಓಲೆಯ ಅಂಚುಗಳಲ್ಲಿ ತೀರ್ಥಂಕರ, ಶಾಸನ ದೇವತೆ, ಜಿನಯತಿ, ಭಕ್ತ ರಾಜ, ರಾಣಿ, ಗಿಡ–ಮರ–ಬಳ್ಳಿ, ಸರ್ಪ, ನವಿಲು, ಮುಂತಾದ ಕಿರು ಚಿತ್ರಗಳಿದ್ದು, ಅವುಗಳಲ್ಲಿ ಕಂಡುಬರುವ ವರ್ಣ ಸಾಮರಸ್ಯ ಹಾಗೂ ರೇಖಾಲಾಲಿತ್ಯವನ್ನು ಬಿ.ಪಿ. ಬಾಯಿರಿಯವರು ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ. ಅವು ಸ್ಥಳೀಯ ಸಾಂಪ್ರದಾಯಿಕ ಶೈಲಿಗೆ ಸೇರಿರುವುದೊಂದು ವಿಶೇಷವಾಗಿದೆ

ತ್ರಿಭುವನ ತಿಲಕ ಚೂಡಾಮಣಿ ಬಸದಿ: ಮೂಡಬಿದ್ರೆಗೇ ಕಳಶಪ್ರಾಯವಾದ ಈ ಬಸದಿಯು ಮೂರು ಅಂತಸ್ತಿನ ಭವ್ಯ ರಚನೆಯಾಗಿದ್ದು, ವಿಸ್ತಾರವೂ, ವಿಶ್ರುತವೂ, ಜಾನ್ನತ್ಯವೂ ವಿಶಿಷ್ಟ ಶಿಲ್ಪಕಲಾಕೃತಿಯೂ ಆಗಿದೆ. ದಕ್ಷಿಣ ಭಾರತಕ್ಕೆ ತಿಲಕಪ್ರಾಯವಾಗಿದ್ದು, ಸಾವಿರ ಕಂಬದ ಬಸದಿ ಎಂದೇ ಪ್ರಖ್ಯಾತವಾಗಿದ್ದು, 'ಹೊಸಬಸದಿ' ಎಂದೂ ಕರೆಯುವ ವಾಡಿಕೆ ಇದೆ. ಈ ಬಸದಿಯ ನಿರ್ಮಾಣ–ವಿಸ್ತರಣೆ–ಸೇರ್ಪಡೆಗಳನ್ನು ಅಲ್ಲೇ ಇರುವ ಹದಿನೈದಕ್ಕೂ ಹೆಚ್ಚು ಶಿಲಾಶಾಸನಗಳು ಉಲ್ಲೇಖಿಸುತ್ತದೆ. ಅಲ್ಲದೇ ಬಸದಿಯ ಪ್ರಧಾನ ತೀರ್ಥಂಕರ ಚಂದ್ರಪ್ರಭರೂ ಸೇರಿದಂತೆ ಇತರ ತೀರ್ಥಂಕರರು ಹಾಗೂ ಪರಿವಾರ ದೇವತೆಗಳ ಪೂಜಾವಿಧಿಗೆಂದು ದಾನ ಬಿಟ್ಟಿರುವುದನ್ನು ಅವು ದಾಖಲಿಸಿವೆ. ಅವುಗಳಲ್ಲಿ ಗದ್ದುಗೆ ಮಂಟಪದ ಉತ್ತರದ ಗೋಡೆಯಲ್ಲಿರುವ ೧೪೨೯ರ ಶಾಸನದಿಂದ ದೇವರಾಯನು

ವಿಜಯನಗರದಿಂದಾಳುತ್ತಿದ್ದಾಗ ಪ್ರಧಾನಿ ಪೆರುಮಾಳ ದೇವದಂಡನಾಯಕನ ಆದೇಶದಂತೆ, ಮಂಗಲೂರು ರಾಜ್ಯದ ಆಡಳಿತಾಧಿಕಾರಿಯಾಗಿದ್ದ ನಾಗಮಂಗಲದ ದೇವರಾಜೊಡೆಯನು ವೇಣೂರಿನಲ್ಲಿ ಚೈತಾಲಯದ ನಿರ್ಮಾಣಕ್ಕೆಂದು ನೀಡಿದ ಕ್ಷೇತ್ರದಲ್ಲಿ, ಚಾರುಕೀರ್ತಿ ಪಂಡಿತರು ಸ್ಥಳೀಯರಾದ ಚೌಟರು–ಬಲ್ಲಾಳರುಗಳ ನೆರವಿನೊಂದಿಗೆ, ತ್ರಿಭುವನ ಚೂಡಾಮಣಿ ಬಿರುದಾಂಕಿತ ಮಹಾಚೈತ್ಯಾಲಯವನ್ನು ಜಗದಾಶ್ಚರ್ಯ ರೀತಿಯಲ್ಲಿ ನಿರ್ಮಿಸಿ, ಚಂದ್ರಪ್ರಭಾ ಜಿನವಾಸದಲ್ಲಿ ಆರೂವರೆ ಅಡಿ ಎತ್ತರದ ಮಿರಮಿರನೆ ಹೊಳೆಯುವ ಚಂದ್ರಪ್ರಭಾ ತೀರ್ಥಂಕರರ ಕಂಚಿನ ದಿವ್ಯಮೂರ್ತಿಯನ್ನು ಬಿದಿರೆಯ ಸಮಸ್ತ ಶ್ರಾವಕರ ನೆರವಿನೊಂದಿಗೆ ಪ್ರತಿಷ್ಠಾಪಿಸಿದ ಅಂಶವನ್ನು ದಾಖಲಿಸುತ್ತದೆ. ಈ ಕಂಚಿನಮೂರ್ತಿಯು ದಶತಾಳ ಲಕ್ಷಣದಿಂದ ಕೂಡಿದ್ದು, ಬಿದಿರೆಯ ಹಲರು ಇದನ್ನು ನೂತನವಾಗಿ ಮಾಡಿಸಿದ ಅಂಶವೂ ಅದೇ ಶಾಸನದಲ್ಲಿ ದಾಖಲಾಗಿದೆ. ಅಲ್ಲೇ ಇರುವ ಇನ್ನೆರಡು ಶಾಸನಗಳಿಂದ ಚಾರುಕೀರ್ತಿ ಪಂಡಿತ ದೇವರ ನಿರೂಪದಂತೆ ವೇಣೂರಿನ ೧೨ ಮಂದಿ ಸೆಟ್ಟಿಯರು ತ್ರಿಭುವನ ಚೈತ್ಯಾಲಯದ ಎರಡು ಹಾಗೂ ಮೂರನೆಯ ನೆಲೆಗಳನ್ನು ನಿರ್ಮಿಸಿದ ಅಂಶ ಗೊತ್ತಾಗುತ್ತದೆ. ಅದೇ ವರ್ಷದಲ್ಲಿ ನೀಡಲ್ಪಟ್ಟಿರುವ ಇನ್ನೊಂದು ಶಾಸನದಿಂದ ಗೇರುಸೊಪ್ಪೆಯ ಭೈರವೇಂದ್ರನು ಬೆಳಗೊಳ, ಚಂದ್ರಗುತ್ತಿ ಹಾಗೂ ಹೊನ್ನಾವರಗಳಲ್ಲಿನ ಬಸದಿಗಳಿಗೆ ಪೂಜಾ ವ್ಯವಸ್ಥೆ ಮಾಡುವುದರ ಜೊತೆಗೆ ವೇಣುಪುರದ ಸಮಸ್ತರ ಅನುಮತದೊಂದಿಗೆ ತ್ರಿಭುವನ ಚೂಡಾಮಣಿ ಮಹಾಚೈತ್ಯಾಲಯದ ತೃತೀಯ ನಿಲಯದ ಮೇಲುಭಾಗಕ್ಕೆ ತಾಮ್ರದ ಹೊದಿಕೆಯನ್ನು ಮಾಡಿಸಿಕೊಟ್ಟನೆಂದು ಗೊತ್ತಾಗುತ್ತದೆ. ಅಲ್ಲದೇ ಚಂದ್ರಪ್ರಭಾ ಸ್ವಾಮಿಯ ಪೂಜಾವಿಧಿಗೆಂದು ಬೆಳ್ಳಿಯ ಪೂಜಾಸಾಮಗ್ರಿ, ಕುಂಭ, ಬಟ್ಟಲು, ಗಿಂಡಿ, ಪೀಠ, ಅಡ್ಡಣಿಗೆ, ತಾಣದೀವಿಗೆ ಮುಂತಾದವನ್ನು ಅವನು ದಾನ ನೀಡಿದ್ದು, ಅವನ ಪಟ್ಟದರಸಿ ನಾಗದೇವಿಯು ಬಸ್ತಿಯ ಮುಂದಣ ಮಾನಸ್ತಂಭವನ್ನು ನಿಲ್ಲಿಸಿದರೆ, ಮಕ್ಕಳಾದ ಲಕ್ಷ್ಮೀ ಹಾಗೂ ಪಂಡಿತದೇವಿಯರು ಆಹಾರದಾನಕ್ಕೆ ಏರ್ಪಾಡು ಮಾಡಿದರೆಂದು ತಿಳಿದುಬರುತ್ತದೆ. ಬಸದಿಯ ಮುಖಮಂಟಪವನ್ನು ಬಿಕಾರೆ, ಸುಳ್ಯ, ನಾರಾವಿ, ಬಳಿಪಾಡಿ, ಪೂಂಜ, ಉಳ್ಳಿ ಮುಂತಾದ ಊರುಗಳ ೫೬ ಮಂದಿ ಸೆಟ್ಟಿಗಳ ಜೊತೆಗೆ ಪುರಪ್ರಮುಖರು ಸಂಯುಕ್ತವಾಗಿ ನಿರ್ಮಿಸಲು ಮುಂದಾದ ಅಂಶ ಗೊತ್ತಾಗುತ್ತದೆ. ಇದೇ ರೀತಿ ಅಲ್ಲಿರುವ ೧೪೬೨ ಎರಡು ಶಾಸನಗಳಲ್ಲೊಂದು ಗೆರುಸೊಪ್ಪೆಯ ಹಿರಿಯ ಭೈರವ ದೇವರಸರು ವ್ಯಾಧಿಗೆ ಸಿಲುಕಿದಾಗ, ಆಯುರಾರೋಗ್ಯವೃದ್ಧಿಗೆಂದು ಬಿದಿರೆಯ ಚಂದ್ರನಾಥ ಹಾಗೂ ಸುಪಾರ್ಶ್ವನಾಥ ತೀರ್ಥಂಕರರ ಪೂಜಾವಿಧಿಗಳಿಗೆಂದು ೧೦೦೦ ಮೂಡೆ ಭತ್ತವನ್ನು ದಾನ ಬಿಟ್ಟ ಅಂಶವನ್ನು ದಾಖಲಿಸಿರುವುದು ಗಮನಾರ್ಹವಾಗಿದೆ. ಇದೇ ರೀತಿ ೧೪೬೦, ೧೪೭೬, ೧೪೮೭, ೧೫೩೨ ಹಾಗೂ ೧೫೭೧ ರ ಶಾಸನಗಳೂ ಈ ಬಸದಿಗೆ ನೀಡಿದ ದತ್ತಿ ಶಾಸನಗಳಾಗಿವೆ. ಅದರಲ್ಲೂ ೧೫೩೨ರ ಶಾಸನ ಚಂದ್ರನಾಥ ಸ್ವಾಮಿಯ ಕುಂಭಾಭಿಷೇಕಕ್ಕಾಗಿ ೧೦ ಬಣ್ಣ ಪ್ರಮಾಣದ ೪೫ ವರಾಹ ಗದ್ಯಾಣ ತೂಕದ , ೫೦೦ ಗದ್ಯಾಣ ಮೌಲ್ಯದ ಸುವರ್ಣ ಕುಂಭವನ್ನು ಬಿದಿರೆಯ ನಖರಸೆಟ್ಟಿ ಹಾಗೂ ಇತರರು ದಾನ ಬಿಟ್ಟ ಅಂಶವನ್ನು ದಾಖಲಿಸಿರುವುದು ಗಮನಾರ್ಹವಾಗಿದೆ. ಅಲ್ಲೇ ಇರುವ ೧೫೭೧ರ ಶಾಸನದಿಂದ ಚೌಟಕುಲದ ಲೋಕಾದೇವಿಯು ತನ್ನ ಸೋದರಿ ಪದ್ಮಲದೇವಿಯ ಪುಣ್ಯಾರ್ಥವಾಗಿ ಋಷಿಮುನಿಗಳ ಆಹಾರ ದಾನಕ್ಕೆಂದು ದಾನ ಬಿಟ್ಟ ಅಂಶ ಗೊತ್ತಾಗುತ್ತದೆ.

ಊರ ನಡುವೆ, ಮುರಕಲ್ಲನ್ನು ಬಳಸಿ ನಿರ್ಮಿಸಿರುವ, ವಿಶಾಲವಾದ ಪ್ರಾಕಾರದೊಳಗಿರುವ ಸಾವಿರ ಕಂಬದ ಬಸದಿಯು 'ತ್ರಿಭುವನ ತಿಲಕ ಚೂಡಾಮಣಿ' ಎಂದೇ ಖ್ಯಾತಿ ಪಡೆದಿದ್ದು, ವಿಶಾಲವೂ ವಿಸ್ತಾರವೂ ಆದ ಬೃಹತ್ ಚೈತ್ಯಾಲಯವಾಗಿದೆ. ಶಾಸನಗಳಲ್ಲಿ ವರ್ಣರಂಜಿತವಾಗಿ ಬಣ್ಣಿಸಲ್ಪಟ್ಟಿರುವ, ಈ ಬಸದಿಯ ಶಿಲ್ಪಕೌಶಲ್ಯವನ್ನು ನೋಡಿದ ವಿಶ್ವಕರ್ಮನೂ ತಲೆದೂಗಿದನೆಂದು, ಶಾಸನವೊಂದು ದಾಖಲಿಸಿದೆ. ಮೂರು ಅಂತಸ್ತುಳ್ಳ ಈ ಬಸದಿಯ ತಳಗರ್ಭಗೃಹದಲ್ಲಿ ಚಂದ್ರಪ್ರಭಾ ತೀರ್ಥಂಕರರ ಕಂಚಿನ ವಿಗ್ರಹವಿದ್ದರೆ, ನಡುವಣ ಅಂತಸ್ತಿನ ಗರ್ಭಗೃಹದಲ್ಲಿ ಸುಪಾರ್ಶ್ವನಾಥಾದಿ ವಿವಿಧ ತೀರ್ಥಂಕರರ ಬಿಂಬಗಳಿದ್ದು, ಮೇಲಂತಸ್ತಿನ ಗರ್ಭಗೃಹದಲ್ಲಿ ಚಂದ್ರಪ್ರಭಾದಿ ತೀರ್ಥಂಕರರ ಬಿಂಬಗಳಿವೆ. ಸಾವಿರಕಂಬಗಳು ಹೊತ್ತು ನಿಂತಿರುವ ಈ ಭವ್ಯ ಬಸದಿಯ ರಚನೆಯಲ್ಲಿ ಶಿಲೆಯ ಜೊತೆಗೆ ಮರವೂ ಪ್ರಮುಖ ಪಾತ್ರ ವಹಿಸಿದೆ. ದ್ವಾರಗೋಪುರ ಮಂಟಪ, ಭೈರಾದೇವಿ ಮಂಟಪ, ಚಿತ್ರಾದೇವಿ ಮಂಟಪ, ನಮಸ್ಕಾರ ಮಂಟಪ, ತೀರ್ಥಂಕರ ಮಂಟಪ, ಲಕ್ಷ್ಮೀ (ಗಂಧಕುಟ) ಮಂಟಪ ಹಾಗೂ ಗರ್ಭಗೃಹ ಮಂಟಪ ಎಂಬವು ಒಂದಕ್ಕೊಂದು ಕೂಡಿಕೊಂಡಿರುವ ಅಖಂಡರಚನೆಯಾಗಿವೆ. ಇವುಗಳಲ್ಲಿ ಗಂಧಕುಟಿ ಮಂಟಪಕ್ಕೆ ಸಂಬಂಧಿಸಿದಂತೆ ೧೪೭೬ರ ಶಾಸನದಲ್ಲಿ 'ಬಸದಿಯ ನಡುವಣ ಎರಡು ಗಂಧಕುಟಿಗಳನ್ನು ಪೂಜೆಗೆಂದು ಊರ ಸಮಸ್ತರು ದಾನ ಬಿಟ್ಟ' ವಿಷಯ ಉಲ್ಲೇಖಿತಗೊಂಡಿದೆ. ಮೂರನೆಯ ಅಂತಸ್ತಿನ ಛಾವಣಿಗೆ ಹೊದಿಸಿರುವ ತಾಮ್ರದ ತಗಡುಗಳು ಮಿರಮಿರನೆ ಹೊಳೆಯುವ ಮೂಲಕ ದೂರದಿಂದಲೇ ವೀಕ್ಷಕರ ಗಮನವನ್ನು ಹಿಂದೆ ಸೆಳೆಯುತ್ತಿದ್ದವು. ದ್ರಾವಿಡ ಇಲ್ಲವೇ ಜಾತ್ತರೇಯ ಶೈಲಿಯಲ್ಲಾಗಲಿ ಇಲ್ಲದ ಈ ವಾಸ್ತುಶೈಲಿಯು ನೇಪಾಳಿ ಶೈಲಿಯಿಂದ ಪ್ರಭಾವಿತವಾದುದೆಂದು ಫರ್ಗೂಸನ್ ಸೇರಿದಂತೆ ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟರೆ, ಹಿಮಾಚಲ ಪ್ರದೇಶದ ವಾಸ್ತುಶೈಲಿಯಿಂದ ಪ್ರಭಾವಿತವಾಗಿದೆಯೆಂದು ಪರ್ಸಿಬ್ರೌನ್ ಸೇರಿದಂತೆ ಅನೇಕರು

ಅಭಿಪ್ರಾಯಪಡುತ್ತಾರೆ. ಆದರೆ, ನಾಥಪಂಥಿಯರು ಉತ್ತರದಿಂದ ತಂದ ಶೈಲಿ ಇದೆಂಬ ಅಭಿಪ್ರಾಯವನ್ನು ಸೂರ್ಯನಾಥಕಾಮತ್ ಮುಂದಿಡುತ್ತಾರೆ. ಏತನ್ಮಧ್ಯೆ ಸ್ಥಳೀಯ ಹವಾಗುಣಕ್ಕನುಗುಣವಾಗಿ ಹುಟ್ಟಿಬೆಳೆದ ಸ್ಥಳೀಯ ಶೈಲಿ ಎಂಬ ಅಭಿಪ್ರಾಯ ಇತ್ತೀಚಿಗೆ ಹೆಚ್ಚು ಗಟ್ಟಿಯಾಗುತ್ತಿದೆ. ಈ ಚೈತ್ಯಾಲಯವು ತೀರ್ಥಂಕರರ, ಯಕ್ಷಯಕ್ಷಿಯರ ವೈವಿಧ್ಯಮಯ ಮೂರ್ತಿ ಶಿಲ್ಪಗಳಿಂದ ಶ್ರೀಮಂತವಾಗಿದ್ದು, ಅಲ್ಲಿರುವ ಸಹಸ್ರಕೂಟಕ್ಕೆ ಅರ್ಹತ್ತರ ಸಾವಿರ ಕಂಚಿನ ಬಿಂಬಗಳನ್ನು ಬೆಸೆದಿದ್ದು, ಗಣಧರವಲಯ ಶಿಲ್ಪವಂತೂ ಅಪೂರ್ವದ್ದಾಗಿದೆ. ಹೊರಗಿನ ಸಾಲುಮಂಟಪಗಳಲ್ಲಿ ಶಿಲ್ಪಿಗಳು ತೋರಿರುವ ಕಲಾನೈಪುಣ್ಯ ಅಸಾಧಾರಣವಾಗಿದ್ದು, ಕಗ್ಗಲಿನಿಂದ ಕಡೆದ ಕಂಬಗಳು ವೈವಿಧ್ಯತೆಯಿಂದ ಕೂಡಿದ್ದು, ಪ್ರತಿಯೊಂದೂ ಭಿನ್ನವಾಗಿದ್ದು, ಕಲೆಗಾರಿಕೆಯಿಂದ ತುಂಬಿ ತುಳುಕುತ್ತಿವೆ. ಅದರಲ್ಲೂ ಭೈರಾದೇವಿ ಮಂಟಪದಲ್ಲಿ ಕಂಡುಬರುವ ಕೋಲಾಟಮಗ್ನ ತರುಣಿಯರು, ಹುಲ್ಲೆ–ಹರಿಣಾಕ್ಷಿ ವಾದ್ಯಗಾರ್ತಿಯರು, ಹಸುವಿನ ಕೆಚ್ಚಲುಣುತ್ತಿರುವ ಹುಲಿಮರಿ, ಕಹಾರಿ ಕಾಳಗ, ಮಲ್ಲಯುದ್ಧದಲ್ಲಿ ತೊಡಗಿರುವ ಯೋಧರೇ ಮುಂತಾದ ಶಿಲ್ಪಗಳು ಗಮನಾರ್ಹವಾಗಿವೆ. ಅಲ್ಲದೇ ಹಿಂದೂ ದೇವತೆಗಳ ಶಿಲ್ಪಗಳ ಜೊತೆಗೆ ಚೀನಿ ಮೂಲದ ಡ್ರಾಗನ್ ಹಾಗೂ ಜಿರಾಫೆ ಕೆತ್ತನೆಗಳೂ ಅಷ್ಟೇ ಮಹತ್ವದ್ದಾಗಿವೆ. ಇದಕ್ಕೆ ಪೂರಕವಾಗಿ ಮೂಡಬಿದ್ರೆಯ ಶಾಸನವೊಂದರಲ್ಲಿ ಚೀನಾದೊಂದಿಗಿನ ವ್ಯಾಪಾರಕ್ಕೆ ಸಂಬಂಧಿಸಿದಂತೆ ಸುಳಿವಿರುವಂತೆ ತೋರುತ್ತದೆ. ಶಾಸನಗಳಲ್ಲಿ ಅತಿಶಯೋಕ್ತಿಯಿಂದ ವರ್ಣಿಸಲ್ಪಟ್ಟಿರುವ ಈ ಚೈತ್ಯಾಲಯದಲ್ಲಿ ವರ್ಷಂಪ್ರತಿ ಚೈತ್ರಾ ಪೌರ್ಣಿಮೆಯಂದು ಜರುಗುವ ರಥೋತ್ಸವಕ್ಕೆಂದೇ ಕಲಾತ್ಮಕವಾದ ರಥವಿದೆ. ವಿದೇಶಿ ವಿದ್ವಾಂಸರ ಮೆಚ್ಚುಗೆಗೂ ಪಾತ್ರವಾಗಿರುವ ಈ ಬಸದಿಗೆ ಇತ್ತೀಚಿಗೆ ಹೊನಲು ಬೆಳಕಿನ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಬಸದಿಯಲ್ಲಿರುವ ಪತ್ರಾಸು, ದೊಡ್ಡ ದೊಡ್ಡ ಪಾತ್ರೆ ಹಾಗೂ ಹಳೆಯ ಬಸದಿಯಲ್ಲಿರುವ ಓಕುಳಿಹಂಡೆ ಅಪೂರ್ವ ಕಲಾವಸ್ತುಗಳಾಗಿದ್ದು, ಪತ್ತಾಸುಗಳಿಗೆ ಹಾಕುವ ಬೀಗಗಳೂ ವಿಚಿತ್ರವಾಗಿವೆ. ಅದರಲ್ಲೂ ಇಲ್ಲಿಯ ಕೇದಿಗೆ ಶಿವರಾಯರ ಮನೆಯ ರಾಮ–ಲಕ್ಷ್ಮಣ ಹಂಡೆಗಳ ಬಾಯನ್ನು ತಲುಪಲು ಏಣಿ ಬಳಸಬೇಕಾಗುತ್ತದೆ.

ಇತರ ಬಸದಿಗಳು : ಈ ಎರಡು ಪ್ರಮುಖ ಬಸದಿಗಳ ಜೊತೆಗೆ ಶೀತಲನಾಥ, ಅನಂತನಾಥ, ಹಾಗೂ ಧರ್ಮನಾಥರಿರುವ ಪಡುಬಸದಿ; ಅನಂತನಾಥ ತೀರ್ಥಂಕರರಿರುವ ಬೈಕಣತಿಕ್ಕಾರಿ ಅಥವಾ ಬಂಕಿ ಬಸ್ತಿ; ಸುಮತೀಂದ್ರನಾಥ, ಪದ್ಮಪ್ರಭ ಹಾಗೂ ಸುಪಾರ್ಶ್ವನಾಥರಿರುವ ಚೋಳಸೆಟ್ಟಿಬಸದಿ; ಅರನಾಥ, ಮಲ್ಲಿನಾಥ ಹಾಗೂ ಮುನಿಸುವ್ರತರಿರುವ ದೇರಮ್ಮಸೆಟ್ಟಿಬಸದಿ; ಆವೆಮಣ್ಣಿನೊಂದಿಗೆ ವಿಶೇಷ ವಸ್ತುಗಳನ್ನು ಬೆರೆಸಿ ಮಾಡಿರುವ ಚಂದ್ರನಾಥಸ್ವಾಮಿಯ ಬಿಂಬವುಳ್ಳ ಲೆಪ್ಪದ ಬಸದಿ; ಶೀತಲನಾಥ ನೆಲೆಗೊಂಡಿರುವ ಕಲ್ಲುಬಸದಿ; ವರ್ಧಮಾನ ತೀರ್ಥಂಕರರ ಶಿಲ್ಪವಿರುವ ಬರಗೋತ್ತಮ ಶೆಟ್ಟರ ಬಸದಿ ಹಾಗೂ ಆದಿನಾಥ ತೀರ್ಥಂಕರ ಶಿಲ್ಪವಿರುವ ವಿಕ್ರಮಶೆಟ್ಟಿ ಬಸದಿಗಳು ಪರಸ್ಪರ ಹತ್ತಿರದಲ್ಲಿರುವ ಸ್ಮಾರಕಗಳಾಗಿದ್ದು, ಕೆಲವಕ್ಕೆ ಮಾನಸ್ಥಂಭವಿದ್ದು, ಉಳಿದವಕ್ಕೆ ಇಲ್ಲ. ಇಲ್ಲದವು ಮನೆಗಳಂತೆ ತೋರಿ ಮನೆಗಳ ನಡುವೆ ಮುಳುಗಿ ಹೋಗಿ ಪಕ್ಕನೆ ನೋಡಿದರೆ ಬಸದಿಗಳೆನಿಸುವುದಿಲ್ಲ. ಕೆಲವು ಎರಡು ಅಂತಸ್ತಿನ ಶಿಲಾಮಯ ರಚನೆಗಳಾಗಿದ್ದು, ಕೆಲವಕ್ಕೆ ತಳಕೋಣೆಗಳಿದ್ದರೆ, ಕೆಲವಕ್ಕೆ ಚೌವ್ವೀಸ್ ತೀರ್ಥಂಕರರಿರುವ ಉಪಗರ್ಭಗೃಹಗಳಿವೆ. ಕೆಲವೆಡೆ ಮೂಲಬಿಂಬಗಳ ಪ್ರಭಾವಳಿಯಲ್ಲಿ ಉಳಿದ ತೀರ್ಥಂಕರರ ಕಿರುಕೆತ್ತನೆಗಳಿವೆ. ವರ್ಧಮಾನ ತೀರ್ಥಂಕರ ಶಿಲ್ಪವಿರುವ ಬೆಟಕೇರಿ ಬಸದಿ, ಚಂದ್ರನಾಥಸ್ವಾಮಿಯ ಬಡಗ ಬಸದಿ; ಮಲ್ಲಿನಾಥಸ್ವಾಮಿಯಿರುವ ಕೆರೆ ಬಸದಿ; ನೇಮಿನಾಥ ತೀರ್ಥಂಕರರ ಶಿಲ್ಪವಿರುವ ಕೋಟಿಬಸದಿ; ಶಾಂತಿನಾಥ ತೀರ್ಥಂಕರ ಶಿಲ್ಪವಿರುವ ಹಿರೇಬಸದಿ; ಜೈನಮಠದಲ್ಲಿರುವ ಮಠದ ಬಸದಿ; ಹಾಗೂ ಮುನಿಸುವ್ರತನಿರುವ ಪಾಠಶಾಲೆ ಬಸದಿಗಳು ಉಲ್ಲೇಖಾರ್ಹವಾಗಿವೆ. ಹಿರೇಬಸದಿಯಲ್ಲಿ ಪದ್ಮಾವತಿ ಹಾಗೂ ಸರಸ್ವತಿಯ ಮೃಣ್ಮಯ ಮೂರ್ತಿಗಳು ಆರಾಧಿಸಲ್ಪಡುತ್ತಿದ್ದು, ಶ್ರಾವಣ ಶುಕ್ರವಾರಗಳಂದು ವಿಶೇಷ ಪೂಜೆಗಳಿರುತ್ತವೆ. ಇಲ್ಲಿ ಜ್ವಾಲಾಮಾಲಿನಿ ಯಕ್ಷಿಯೂ ಪೂಜಿಸಲ್ಪಡುತ್ತಾಳೆ.

ಊರಿಂದ ಎರಡು ಕಿ.ಮೀ ಅಂತರದ ಕೋಡುಂಗಲ್ಲು ಪರಿಸರದಲ್ಲಿ ಬಂಡೆಯೊಂದರ ಮೇಲೆ ಎಂಟು ಕಂಬಗಳ ಮೇಲೆ ನಿಂತಿರುವ ಶಿಲಾಮಂಟಪವೊಂದಿದ್ದು, ಅದಕ್ಕೆ ನ್ಯಾಯಬಸದಿ ಎಂದು ಕರೆಯಲಾಗುತ್ತಿದ್ದು, ಸನಿಹದಲ್ಲೇ ಇರುವ ನಾಲ್ಕು ಕಂಬದ ಚಿಕ್ಕಮಂಟಪಕ್ಕೆ ನಾಯಿ ಬಸದಿ ಎಂದು ಕರೆಯುತ್ತಾರೆ. ನಿಷ್ಠಾವಂತ ನಾಯಿಗಾಗಿ ನಿರ್ಮಿಸಿದ ಸ್ಮಾರಕ ಅದೆಂದು ಹೇಳಲಾಗುತ್ತದೆ. ಆದರೆ ಆ ಸ್ಮಾರಕವು ೧೬೩೭ರಲ್ಲಿ ಸಮಾಧಿಮರಣ ಹೊಂದಿದ ಚಂದ್ರಕೀರ್ತಿ ದೇವರಿಗಾಗಿ ಅವರ ಶಿಷ್ಯ ಪೊಂತುಶೆಟ್ಟಿ ಭಕ್ತಿಯಿಂದ ಕಟ್ಟಿಸಿದ ನಿಷಿಧಿ ಮಂಟಪವೆಂದು ಅಲ್ಲೇ ಇರುವ ಶಾಸನವನ್ನಾಧರಿಸಿ ಲೋಕನಾಥ ಶಾಸ್ತ್ರಿಗಳು ಬಹಳ ಹಿಂದೆಯೇ ದಾಖಲಿಸಿದ್ದಾರೆ.

ನಿಷಿಧಿ ಸ್ಮಾರಕಗಳು : ಊರಿಂದ ಪೂರ್ವಕ್ಕೆ ನಾರಾವಿ ರಸ್ತೆಯ ಬೆಟ್ಟೇರಿ ಪರಿಸರದಲ್ಲಿ ಜೈನಮಠದ ಹಿಂದಿನ ಸ್ವಾಮಿಗಳ ಸಮಾಧಿಗಳಿರುವ ಪ್ರದೇಶಕ್ಕೆ ಮುಡಿಂಜೆಯಾ ಎಂದೂ ಕರೆಯಲಾಗುತ್ತದೆ. ರಸ್ತೆಯ ಮಗ್ಗುಲಲ್ಲಿರುವ ಇವು ಸುಮಾರು ಐದರಿಂದ ೨೦ ಅಡಿಯವರೆವಿಗೂ ಎತ್ತರದ, ಹಂತಹಂತವಾಗಿ ಕಿರಿದಾಗುತ್ತ ಮೇಲೆ ಸಾಗುವ ಅಪರೂಪದ ರಚನೆಗಳಾಗಿವೆ. ಅವುಗಳಲ್ಲಿ ೧೮ ನಿಷಿಧಿಗಳು

ಜೈನಮಠದ ಪೂರ್ವಭಟ್ಟಾರಕರುಗಳದಾದರೆ ಉಳಿದೆರಡು ಅಂಬಸೆಟ್ಟಿ ಹಾಗೂ ಆದುಸೆಟ್ಟಿ ಎಂಬ ವರ್ತಕರ ನಿಷಿಧಿಗಳಾಗಿವೆ. ಹಂತ ಹಂತವಾಗಿ ಕಿರಿದಾಗುತ್ತ ಮೇಲೆ ಸಾಗುವ ಈ ರಚನೆಗಳು ನೇಪಾಳ, ಚೀನಾ, ಟಿಬೆಟ್‌ಗಳ ಪಗೋಡಾಗಳನ್ನು ಹೋಲುತ್ತವೆಂದು ಫರ್ಗ್ಯುಸನ್ ಅಭಿಪ್ರಾಯಪಡುತ್ತಾರೆ. ಅಲ್ಲೇ ಇರುವ ನಾಲ್ಕಾರು ನಿಷಿಧಿಶಾಸನಗಳು ಬಹಳ ತ್ರುಟಿತವಾಗಿದ್ದರೂ, ಅವುಗಳಲ್ಲೊಂದು ಮಳವೆಸೆಟ್ಟಿಗಾಗಿ ಕಾಂತಣ್ಣಸೆಟ್ಟಿ ಕಟ್ಟಿಸಿದ ಮುಡಿಂಜಾದ ಬಗ್ಗೆ ಉಲ್ಲೇಖಿಸುತ್ತದೆ.

ಜೈನಮಠ: ಸುಮಾರು ೧೨ನೆಯ ಶತಮಾನದಷ್ಟು ಪ್ರಾಚೀನವಾದ ಈ ಮಠವು ಶ್ರವಣಬೆಳಗೊಳದ ಚಾರುಕೀರ್ತಿ ಭಟ್ಟಾರಕರ ಪರಂಪರೆಗೆ ಸೇರಿದ್ದು ಅವರೇ ಈ ಮಠದ ಸ್ಥಾಪಕರೆಂಬ ಐತಿಹ್ಯವಿದೆ. ಮಠದ ಎದುರಿಗೆ ಜೈನ ಸಂಸ್ಕೃತ ಪಾಠಶಾಲೆ ಇದ್ದು, ಒಳಗೆ 'ಪಾಠಶಾಲಾ ಬಸದಿ' ಯ ಸನ್ನಿಧಿ ಇದೆ. ಇಲ್ಲಿರುವ ವೀರ ವಾಣಿವಿಲಾಸ ಜೈನಸಿದ್ಧಾಂತ ಭವನವು, ಸ್ಥಳೀಯರಾದ ಪಂಡಿತ ಲೋಕನಾಥಶಾಸ್ತ್ರಿಗಳ ಪ್ರಯತ್ನದ ಫಲವಾಗಿದ್ದು, ಪ್ರಾಚೀನ ಓಲೆಗರಿ ಜೈನಹಸ್ತಪ್ರತಿಗಳ ಸಂರಕ್ಷಣಾಕಾರ್ಯವನ್ನೂ ಅವರಿಲ್ಲಿ ಆರಂಭಿಸಿದರು. ರಮಾಮಣಿ ಜೈನ ಸಂಶೋಧನ ಸಂಸ್ಥೆ' ಯು ಈಗ ಅಲ್ಲಿ ಕಾರ್ಯನಿರ್ವಹಿಸುತ್ತಿದೆ.

ದೇವಾಲಯಗಳು : 'ಮೂಡಬಿದ್ರೆಯಲ್ಲಿ ೧೮ ದೇವಾಲಯಗಳು' ಎಂಬ ನುಡಿ ಪ್ರಸಿದ್ಧವಾಗಿದ್ದರೂ, ಬಸದಿಗಳ ಹಾಗೆ ದೇವಾಲಯಗಳನ್ನು ಖಚಿತವಾಗಿ ಗುರುತಿಸಲಾಗಿಲ್ಲವೆಂದು ತಿಳಿದುಬರುತ್ತದೆ. ಊರಲ್ಲಿರುವ ಗೌರಿದೇವಾಲಯವು ಪ್ರಾಚೀನ ಗುಡಿಯಾಗಿದ್ದು, ಅವಳನ್ನು ಸುಮಾರು ೧೪–೧೫ನೆಯ ಶತಮಾನದ ಶಾಸನಗಳಲ್ಲಿ 'ದುರ್ಗಾದೇವಿ', 'ಬಿದಿರೆಯದೇವಿ' ಎಂದೇ ಉಲ್ಲೇಖಿಸಲಾಗಿದ್ದು, ಅವಳ ಪೂಜಾವಿಧಿಗಳಿಗೆಂದು ಭೂದಾನ ನೀಡಿದ ಅಂಶವನ್ನು ನಾಲ್ಕು ಶಾಸನಗಳು ಒಳಗೊಂಡಿವೆ. ಗಜಪೃಷ್ಠಾಕಾರದ ತಳವಿನ್ಯಾಸವನ್ನು ಹೊಂದಿರುವ ಈ ಗುಡಿಯಲ್ಲಿರುವ ಮಹಿಷಾಸುರ ಮರ್ದಿನಿಯ ಶಿಲ್ಪವು ಪುರಾತನವಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನತಮ ದೇವಿಮಂದಿರ ಇದೆಂದು ಪುಂಡಿಕ್ಕಾಯ್ ಗಣಪಯ್ಯಭಟ್ ಅಭಿಪ್ರಾಯಪಡುತ್ತಾರೆ. ಆದರೆ ಈ ಶಿಲ್ಪವು ಸುಮಾರು ೧೦ನೆಯ ಶತಮಾನಕ್ಕೆ ಸೇರಿದ್ದೆಂದು ಪಿ.ಗುರುರಾಜಭಟ್ ದಾಖಲಿಸಿದ್ದಾರೆ. ಊರಲ್ಲಿರುವ ವೆಂಕಟರಮಣನ ದೇವಾಲಯವು ಗೌಡಸಾರಸ್ವತ ಬ್ರಾಹ್ಮಣರ ಆರಾಧನೆಗೆ ಒಳಪಟ್ಟಿದ್ದು, ಅದನ್ನು ಜೀರ್ಣೋದ್ಧಾರ ಮಾಡಲಾಗಿದೆ. ಅಲ್ಲದೇ ಊರಲ್ಲಿ ಚಂದ್ರಶೇಖರ ಹಾಗೂ ಮಹಾಮಾಯೆ ದೇವಾಲಯಗಳಿವೆ. ಅಲ್ಲದೆ ಹಿಂದೆ ಇಲ್ಲೊಂದು ವೀರಶೈವ ಮಠವಿದ್ದುದಾಗಿ ತಿಳಿದು ಬರುತ್ತದೆ. ಇತ್ತೀಚೆಗೆ ಇಲ್ಲಿನ ಅಂಕಸಾಲೆ ಎಂಬಲ್ಲಿ ಪುರಾತನವಾದ ಶಿವಾಲಯ, ಬ್ರಹ್ಮಸ್ಥಾನ ಹಾಗೂ ನಾಗಬನಗಳ ಅವಶೇಷಗಳು ಬೆಳಕಿಗೆ ಬಂದಿವೆ. ಇಲ್ಲಿನ ಆಲಂಗಾರಿನ ಮಹಾಲಿಂಗೇಶ್ವರ ದೇವಾಲಯ ಇನ್ನೊಂದು ಪ್ರಮುಖ ದೇವಾಲಯವಾಗಿದೆ. ಊರ ಕೋಟೆಬಾಗಿಲು ಪ್ರದೇಶದಲ್ಲಿರುವ ಚಮನ್ ಷಾ ವಲಿಯುಲ್ಲಾ ದರ್ಗಾದಲ್ಲಿ ವಾರ್ಷಿಕ ಉರುಸು ಜರುಗುತ್ತದೆ. ಆಲಂಗಾರುವಿನಲ್ಲಿ ಮೌಂಟ್‌ರೋಸರಿ ಟ್ಯೂಬರ್‌ಕಿಲೋಸಿಸ್ ಸ್ಯಾನಿಟೋರಿಯಂ' ಎಂಬ ಆರೋಗ್ಯ ಸಂಸ್ಥೆಯನ್ನು ಕ್ರೈಸ್ತರು ಸ್ಥಾಪಿಸಿದ್ದು, ಅದು ಕಾರ್ಯನಿರ್ವಹಿಸುತ್ತಿದ್ದು, ಶುಕ್ರವಾರದಂದು ಇಲ್ಲಿ ವಾರದ ಸಂತೆಯಾಗುತ್ತದೆ. ಜಿಲ್ಲೆಯ ಪ್ರಸಿದ್ಧ ಸಂತೆಗಳಲ್ಲಿ ಇದೂ ಒಂದಾಗಿದೆ. ಮೂಡಬಿದ್ರೆಯಲ್ಲಿ ಪೊಲೀಸ್‌ವನ, ಗಾಂಧಿ ಶತಮಾನೋತ್ಸವ ಉದ್ಯಾನ, ರೋಟರಿ ವನಗಳ ಜೊತೆಗೆ ಮಹಾವೀರ ಕಾಲೇಜು ಪರಿಸರದಲ್ಲಿ ಏಳೂವರೆ ಎಕರೆ ಪ್ರದೇಶದಲ್ಲಿ ವಿಶ್ರಾಂತಿವನವೂ ರೂಪುಗೊಂಡಿದ್ದು, ವಿಹಾರಾರ್ಥಿಗಳನ್ನು ಆಕರ್ಷಿಸುತ್ತಿವೆ. **ಕೋಡ್ಯಡ್ಕ:** ಮೂಡಬಿದ್ರೆಗೆ ಸಮೀಪದಲ್ಲಿರುವ ಈ ಗ್ರಾಮದಲ್ಲಿ ಹೊರನಾಡಿ(ಚಿಕ್ಕಮಂಗಳೂರು ಜಿಲ್ಲೆ)ನ ಅನ್ನಪೂರ್ಣೇಶ್ವರಿ ದೇವಾಲಯದ ಮಾದರಿಯಲ್ಲೇ, ಸುಮಾರು ೭೦೦೦ ಅಡಿ ವಿಸ್ತೀರ್ಣವುಳ್ಳ ಅನ್ನಪೂರ್ಣೇಶ್ವರಿಯ ಭವ್ಯ ದೇವಾಲಯವನ್ನು ಸ್ಥಳೀಯರಾದ ಜಯರಾಮ ಹೆಗಡೆಯವರು ತಮ್ಮ ಜಮೀನಿನಲ್ಲಿ ನಿರ್ಮಿಸಿದ್ದು, ಆಕರ್ಷಕವಾಗಿದೆ. **ಪದ್ರಾಡ್ ಕಾವಲ್ :** ಮೂಡಬಿದ್ರೆಗೆ ನಾಲ್ಕಾರು ಕಿ.ಮೀ ಅಂತರದಲ್ಲಿರುವ ತಾಕೋಟೆ ಕೈಕಂಬಕ್ಕೆ ಅನತಿ ದೂರದಲ್ಲಿರುವ ಸುಂದರವಾದ ತಾಣ. ಅಲ್ಲಿ ಫಲ್ಗುಣಿ ನದಿಯು ವಿಸ್ತಾರವಾದ ಪಾತ್ರದಲ್ಲಿ ಹರಿಯುತ್ತ, ಹಲವು ಶಾಖೋಪಶಾಖೆಗಳಲ್ಲಿ ಹರಿಯುತ್ತದೆ. ಫಲ್ಗುಣಿಗೆ ಅಲ್ಲಿ ೧೨ ತೋಳುಗಳೆಂದು ಹೇಳಲಾಗುವ ನಿಸರ್ಗಧಾಮ, ತುಳುವಿನಲ್ಲಿ ಅದಕ್ಕೆ 'ಪದ್ರಾಡ್ ಕಾವಲ್' ಎಂದು ಕರೆಯುತ್ತಾರೆ. ಅಲ್ಲೇ ಹೊಳೆಯ ಮಧ್ಯದಲ್ಲೊಂದು ಮಹಾಲಿಂಗೇಶ್ವರ ದೇವಾಲಯವಿದ್ದು, ಮೀನುಗಳು ಯಥೇಚ್ಛವಾಗಿ ಲಭಿಸುತ್ತವೆ. ಅಲ್ಲದೇ ಪಂಚಲಿಂಗ ಹಾಗೂ ಗೋಮುಖತೀರ್ಥ ತಾಣಗಳೂ ಇಲ್ಲಿವೆ. **ಕೊಣಂಜೆಕಲ್ಲು :** ಮೂಡಬಿದ್ರೆಯಿಂದ ಐದಾರು ಕಿ.ಮೀ. ಅಂತರದ **ಪಡುಕೊಣಂಜೆ (೧,೨೯೯)** ಕಂದಾಯ ಗ್ರಾಮದ ಸಮೀಪದ ಕೊಣಂಜೆಬೆಟ್ಟದ ಮೇಲಿರುವ ಎರಡು ಭಾರಿ ಕೋಡುಗಲ್ಲುಗಳನ್ನು ವೃಷಭಾದ್ರಿ ಪರ್ವತವೆಂದೂ ಕರೆಯುವ ವಾಡಿಕೆ ಇದೆ. ಅಲ್ಲೊಂದು ಗುಹಾಲಯವಿದ್ದು, ಬಯಲಲ್ಲಿ ತಿಳಿನೀರ ಸರೋವರವಿದೆ. ಗುಹೆಯಲ್ಲಿ ಭದ್ರಕಾಳಿಯು ಶಿವಲಿಂಗ ರೂಪದಲ್ಲಿ ನೆಲೆಗೊಂಡಿದ್ದು, ಬಳಿಯಲ್ಲೇ ಸಿದ್ಧಾಶ್ರಮವಿದೆ.

**ಮೂಲ್ಕಿ (೧೬,೩೪೯)** : ತಾಲೂಕು ಹಾಗೂ ಜಿಲ್ಲಾ ಕೇಂದ್ರವಾದ ಮಂಗಳೂರಿನಿಂದ ೨೯ ಕಿ.ಮೀ. ಉತ್ತರಕ್ಕೆ ಮೂಲ್ಕಿ ನದಿ ದಂಡೆಯ ಮೇಲಿರುವ ಹೋಬಳಿ ಕೇಂದ್ರವಾಗಿದ್ದು, ರಾಷ್ಟ್ರೀಯ ಹೆದ್ದಾರಿ ೧೭ ಈ ಊರ ಬದಿಯಲ್ಲಿ ಹಾದುಹೋಗುತ್ತದೆ. ಇಂದು ಪಟ್ಟಣಪಂಚಾಯತ್ ವ್ಯಾಪ್ತಿಗೊಳಪಟ್ಟಿರುವ ಇದು ಹಿಂದೆ ಒಂಭತ್ತು ಮಾಗಣೆಗಳ ಮೇಲೆ ಆಡಳಿತ ನಡೆಸುತ್ತಿದ್ದ ಸಾವಂತರೆಂಬ ಜೈನ ಅರಸುಮನೆತನದ ಆಡಳಿತಕೇಂದ್ರವಾಗಿದ್ದು, ಅದಕ್ಕೂ ಮೊದಲು ಮೂಲ್ಕಿಯಿಂದ ಐದು ಕಿ.ಮೀ. ಪೂರ್ವಕ್ಕಿರುವ ಸೀಮಂತೂರು ಅವರ ರಾಜಧಾನಿಯಾಗಿತ್ತು. ಸಿಮಂತೂರಿನ ಜನಾರ್ದನ ಸಾವಂತರಸರ ಕುಲದೈವವಾಗಿತ್ತು. ಮಿಗಿಲಾಗಿ ಮೂಲ್ಕಿಯು ಒಂದು ಬಂದರಾಗಿ ಕೂಡ ವಾಣಿಜ್ಯ ಮಹತ್ವ ಪಡೆದಿತ್ತು. 'ಮೂಲಿಕಾಪುರ' ಎಂಬುದು ಮೂಲ್ಕಿಯ ಮೂಲರೂಪವೆಂದು ಭಾವಿಸಲಾಗಿದ್ದು, ಆಯುರ್ವೇದ ಗಿಡಮೂಲಿಕೆಗಳು ಸಮೃದ್ಧವಾಗಿ ಲಭಿಸುತ್ತಿದ್ದುದರಿಂದ ಆ ಹೆಸರು ಬಂತೆಂಬ ಅಭಿಪ್ರಾಯವಿದೆ. ಬಿದನೂರಿನ ವೆಂಕಟಪ್ಪನಾಯಕನ ಆಳ್ವಿಕೆಯಲ್ಲಿ ನಿರ್ಮಾಣಗೊಂಡಿದ್ದ ಕೋಟೆ (೧೬೦೮) ಹಾಗೂ ಸಾವಂತರ ಅರಮನೆಯ ಅವಶೇಷಗಳನ್ನು ಬಪ್ಪನಾಡಿನ ಕೋಟೆಕೇರಿ(ಈಗಿನ ವಿಜಯಕಾಲೇಜು) ಪ್ರದೇಶದಲ್ಲಿ ಈಗಲೂ ನೋಡಬಹುದಾಗಿದೆ. ಅಲ್ಲೊಂದು ಬಸದಿ ಮತ್ತು ಆನೆಕೆರೆ ಎಂಬ ಜಲತಾಣ ಅವರ ಆಳ್ವಿಕೆಯ ಕುರುಹುಗಳಾಗಿ ಇಂದಿಗೂ ಉಳಿದಿವೆ. ಸಾವಂತರಸರ ಆಶ್ರಯದಲ್ಲಿ ಬಪ್ಪನಾಡಿನ ದುರ್ಗಾಪರಮೇಶ್ವರಿಗೂ ಹೆಚ್ಚಿನ ಆದ್ಯತೆ ಲಭಿಸಿತ್ತು. ಆದರೆ ಅವರು ಪೋರ್ಚುಗೀಸರ ಒತ್ತಡದಿಂದಾಗಿ ಕೋಟೆಕೇರಿಯನ್ನು ತ್ಯಜಿಸಿ ಪಡುಪಣಂಬೂರಿಗೆ ತಮ್ಮ ರಾಜಧಾನಿಯನ್ನು ಕಾಲಾಂತರದಲ್ಲಿ ವರ್ಗಾಯಿಸಿಕೊಂಡರೆಂದು ತಿಳಿದುಬರುತ್ತದೆ. (ನೋಡಿ : ಪಡು ಪಣಂಬೂರು) ಸಾವಂತರಸರ ರಾಜಧಾನಿಗಳಾಗಿದ್ದ ಸೀಮಂತೂರು, ಕೋಟೆಕೇರಿ, ಬಪ್ಪನಾಡು ಹಾಗೂ ಪಡುಪಣಂಬೂರುಗಳು ಇಂದು ಮೂಲ್ಕಿಪಟ್ಟಣದ ಭಾಗವೇ ಆಗಿದ್ದು, ಅಕ್ಕಪಕ್ಕದಲ್ಲೇ ಇವೆ. ಬಪ್ಪನಾಡಿನ ಕೋಟೆಕೇರಿಯಲ್ಲಿರುವ ೧೩೭೮ರ ಶಾಸನದಲ್ಲಿ ದುಗ್ಗಣ ಸಾಮಂತ ಎಂಬ ಅರಸನ ಉಲ್ಲೇಖವಿದ್ದು, ಅದೇ ಸಾವಂತರಸರ ಮೊದಲ ಶಾಸನವೆಂಬ ಅಭಿಪ್ರಾಯವಿದೆ.

ಕೋಟೆಕೇರಿ ಪ್ರದೇಶದಲ್ಲಿ, ಕಿರುಗುಡ್ಡದ ಮೇಲೆ ಮಧ್ಯಮ ಪ್ರಮಾಣದ ಚೈತ್ಯಾಲಯವಿದೆ. ಗರ್ಭಗೃಹದಲ್ಲಿ ಅನಂತನಾಥ ಹಾಗೂ ಚಂದ್ರಪ್ರಭಾ ತೀರ್ಥಂಕರರ ಶಿಲ್ಪಗಳಿವೆ. ಬಸದಿಯ ಮುಂಭಾಗದಲ್ಲಿರುವ ಸುಮಾರು ೩೫ ಅಡಿ ಎತ್ತರದ ಮಾನಸ್ಥಂಭವು ಕಲಾತ್ಮಕವಾಗಿದೆ. ಸಾವಂತರಸರ ಕಾಲದ ನಿರ್ಮಾಣವಿದಾಗಿದ್ದು, ಸನಿಹದಲ್ಲೊಂದು ವೀರಾಂಜನೆಯ ಗುಡಿಯೂ ಇದೆ. ಒಳಲಂಕೆ ಎಂದು ಕರೆಯುವ ಪ್ರದೇಶದಲ್ಲಿರುವ ವೆಂಕಟರಮಣ ದೇವಾಲಯವು ಎತ್ತರದ ಗೋಪುರ ವಿಶಾಲವಾದ ಪ್ರಾಕಾರಗಳನ್ನು ಹೊಂದಿದ್ದು, ಹೊರಗುಡಿಯಲ್ಲಿ ಕ್ಷೇತ್ರಪಾಲದೇವತೆ ಬ್ರಹ್ಮನಿಗೆ ಪೂಜೆ ಸಲ್ಲುತ್ತದೆ. ಜಿಲ್ಲೆಯ ಶ್ರೀಮಂತ ದೇವಾಲಯಗಳಲ್ಲಿ ಒಂದಾದ ಇದು ಗೌಡಸಾರಸ್ವತ ಬ್ರಾಹ್ಮಣರೂ ಸೇರಿದಂತೆ ಸಕಲರ ಗೌರವಾದರಣೆಗೆ ಪಾತ್ರವಾಗಿದೆ. ಬೆಳಿಗ್ಗೆ ಹಾಗೂ ಸಂಜೆ ತೆರೆಯಲ್ಪಡುವ ಈ ದೇವಾಲಯವು ಬೆಳ್ಳಿಮಯವಾಗಿದ್ದು, ಎಲ್ಲಕ್ಕೂ ಬೆಳ್ಳಿಯ ತಗಡನ್ನು ಹೊದಿಸಲಾಗಿದ್ದು, ಇಲ್ಲಿಯ ಉಗ್ರನರಸಿಂಹ, ಬಿಂದುಮಾಧವರನ್ನು ಭಕ್ತರು ಒಳಲಂಕೇಶರೆಂದೇ ಸಂಭೋಧಿಸಿ ಕೊಂಡಾಡುವುದು ರೂಢಿಯಲ್ಲಿದೆ. ಅಲ್ಲದೆ ಕಾಶಿಮಠ ಸಂಸ್ಥಾನದ ಶಾಖಾಮಠವೂ ಇಲ್ಲಿದೆ. ಸುಮಾರು ೧೬ನೆಯ ಶತಮಾನದಲ್ಲಿ ವಿಜಯೇಂದ್ರತೀರ್ಥ ಮಹಾಸ್ವಾಮಿಗಳಿಂದ ಪ್ರತಿಷ್ಠಾಪಿಸಲಾಯಿತೆಂದು ಹೇಳಲಾಗುವ ಉಗ್ರನರಸಿಂಹನ ವಿಗ್ರಹವು ವೆಂಕಟರಮಣದ ದೇವಾಲಯದ ಗರ್ಭಗೃಹದಲ್ಲಿ ಮೂಲಪಟ್ಟದ ದೇವರಾಗಿದ್ದರೂ, ಸಿಂಹಾಸನ ಪೀಠದ ಮೇಲೆ ವೆಂಕಟರಮಣನನ್ನು ಪ್ರತಿಷ್ಠಾಪಿಸಲಾಗಿದೆ. ತಿರುಪತಿ ಕ್ಷೇತ್ರದ ಪ್ರತಿನಿಧಿಯಂತೆ ಪಾತ್ರವಹಿಸುವ ಇವನ ಸನ್ನಿಧಿಯ ಮೂಲಕ ಭಕ್ತರು ತಿರುಪತಿಯ ವೆಂಕಟರಮಣನಿಗೆ ಹರಕೆಗಳನ್ನು ಒಪ್ಪಿಸುತ್ತಾರೆ. ಅದನ್ನು ಕೊಂಡೊಯ್ಯಲೆಂದೇ ತಿರುಪತಿಯಿಂದ ನಿಯುಕ್ತರಾದ ಅಧಿಕಾರಿಗಳು ಒಲಲಂಕೆಗೆ ವರ್ಷಕ್ಕೊಮ್ಮೆ ಆಗಮಿಸುವ ಸಂಪ್ರದಾಯವಿದೆ. ಇಲ್ಲಿ ಕಾಲಭೈರವ, ಅಣ್ಣಪ್ಪರು ನೆಲೆಗೊಂಡಿದ್ದು ಪೂಜಿಸಲ್ಪಡುತ್ತಾರೆ. ಮಧ್ಯಾಹ್ನದ ವೇಳೆ ಬರುವ ಭಕ್ತರಿಗೆ ಪ್ರಸಾದ ಲಭಿಸುತ್ತದೆ. ಈ ದೇವರಿಗೆ ಇರುವ ಬೆಳ್ಳಿಯ ವಸಂತಮಂಟಪ, ಅಮೂಲ್ಯವಾದ ಚಿನ್ನದ ಪಲ್ಲಕ್ಕಿ, ಬೆಳ್ಳಿಯ ಪಲ್ಲಕ್ಕಿ, ಲಾಲಕಿ, ಶೇಷಗರುಡವಾಹನ ಬೊಂಬೆ, ಚವರ ಮುಂತಾದವು ಆಕರ್ಷಕವಾಗಿವೆ. ಚೈತ್ರ ಶುದ್ಧದಲ್ಲಿ ಜರುಗುವ ಈ ದೇವರ ವಾರ್ಷಿಕ ಜಾತ್ರೆ ವೈಭವಯುತವಾಗಿರುತ್ತದೆ. ಅದೇ ರೀತಿ ಮಾರ್ಗಶಿರ ಹುಣ್ಣಿಮೆಯ ಪ್ರತಿಷ್ಠಾಮಹೋತ್ಸವವೂ ವಿಶಿಷ್ಟವಾಗಿದ್ದು, ಅಪಾರ ಸಂಖ್ಯೆಯಲ್ಲಿ ಭಕ್ತರು ದೇವರಿಗೆ ಸೀಯಾಳವನ್ನು ಅರ್ಪಿಸುತ್ತಿದ್ದು, ರಾತ್ರಿ ಸಮಾರಾಧನೆ ಅಂದಿನ ವೈಶಿಷ್ಟ್ಯವಾಗಿದೆ. ಅಲ್ಲಿನ ಪಾಕಶಾಲೆಯಲ್ಲಿ ಬೃಹತ್ತಾದ ರಾಮ–ಲಕ್ಷ್ಮಣ ಎಂಬ ಕಟಾರ (ಹಂಡೆ)ಗಳಿವೆ.

ಈ ದೇವಾಲಯದಲ್ಲಿ ಶರೀರಗೇಣಿಯ ಜೊತೆಗೆ ಜಾನುವಾರುಗಳನ್ನುಳ್ಳವರು ವರ್ಷಕ್ಕೊಮ್ಮೆ ಒಂದೊಂದು ಬಾಲಕ್ಕೆ ಇಷ್ಟೆಂದು ಲೆಕ್ಕ ಹಾಕಿ ದೇವರಿಗೆ 'ಬಾಲವಂತಿಕೆ'ಯನ್ನು ಅರ್ಪಿಸುವುದು ರೂಢಿಯಲ್ಲಿದೆ. ಇದು, ಕರ್ನಾಟಕದ ಪ್ರಾಚೀನ ಶಾಸನಗಳಲ್ಲಿ ಉಲ್ಲೇಖಿತಗೊಂಡಿರುವ 'ಬಾಲವಣ(ನ)' ತೆರಿಗೆಯ ಮುಂದುವರಿಕೆಯೇ ಆಗಿದೆ.

ಬಪ್ಪನಾಡು ಪ್ರದೇಶದಲ್ಲಿರುವ ದುರ್ಗಾಪರಮೇಶ್ವರಿ ದೇವಾಲಯದಲ್ಲಿ ದೇವಿಯು ಪಂಚದುರ್ಗಾಸ್ವರೂಪಿಣಿಯಾಗಿ (ಮೂಲ, ಅಗ್ನಿ,ಜಲ ವನ ಹಾಗೂ ಅಗ್ರದುರ್ಗಾ) ಲಿಂಗರೂಪದಲ್ಲಿ ಆರಾಧಿಸಲ್ಪಡುತ್ತಿದ್ದು, ಒಂದೇ ಪೀಠದ ಮೇಲೆ ಐದು ಲಿಂಗಗಳಿವೆ. ಈ ಗುಡಿಯನ್ನು ಬಪ್ಪಬ್ಯಾರಿ ಎಂಬ ಮುಸ್ಲಿಂ ಬ್ಯಾರಿ ಸ್ಥಾಪಿಸಿದನೆಂಬ ಐತಿಹ್ಯ ಸ್ಥಳೀಯವಾಗಿ ರೂಢಿಯಲ್ಲಿದ್ದು, ಈಗಲೂ ಮೂಲ್ಕಿಯಲ್ಲಿರುವ ಬಪ್ಪಬ್ಯಾರಿಯ ವಂಶಜರು ಈ ದೇವಿಗೆ ಉತ್ಸವ ಕಾಲದಲ್ಲಿ ನಡೆದುಕೊಳ್ಳುತ್ತಾರೆಂದು ತಿಳಿದುಬರುತ್ತದೆ. ಆದರೆ ಈ ಬಪ್ಪನು ಮೂಲತಃ ಜೈನನಿದ್ದು, ಕಾಲಾಂತರದಲ್ಲಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡಿರಬೇಕೆಂದು ಪಿ. ಗುರುರಾಜಭಟ್ ಅಭಿಪ್ರಾಯಪಡುತ್ತಾರೆ. ಇಲ್ಲಿನ ಶಾಸನವೊಂದರಲ್ಲಿ ಹಂಜಮಾನ ಮುಸ್ಲಿಂ ವರ್ತಕ ಸಂಘದ ಉಲ್ಲೇಖವಿರುವ ಹಿನ್ನೆಲೆಯಲ್ಲಿ ಈ ದೇವಾಲಯಕ್ಕೆ ಸಂಬಂಧಿಸಿದಂತೆ ಮುಸ್ಲಿಮರ ಪಾತ್ರವಿದ್ದಿರಬಹುದೆಂದು ಕೆ.ಜಿ. ವಸಂತಮಾಧವ ಸೂಚಿಸಿದ್ದಾರೆ. ಇಲ್ಲಿ ಮೀನಮಾಸದ ಶುದ್ಧಚತುರ್ದಶಿಯಿಂದ ಒಂಭತ್ತು ದಿನ ನಡೆಯುವ ಜಾತ್ರೆಯು ವೈಭವದಿಂದ ಕೂಡಿದ್ದು, ಆರು ಅಡಿ ಎತ್ತರದ ಬೆಳ್ಳಿಯ ಗರುಡನನ್ನು ಧ್ವಜವಾಗಿ ಸ್ತಂಭಕ್ಕೇರಿಸುವುದೊಂದು ವಿಶೇಷವೇ. ಎಂಟನೆಯ ದಿನ ಮಹಾರಥೋತ್ಸವ ನಡೆದು ಕೊನೆಯ ದಿನ ಕುದುರಿನ ಚಂದ್ರಪುಷ್ಕರಣಿಯಲ್ಲಿ ದೇವಿಯ ಅವಭೃತ ನೆರವೇರಿಸಿ ಹಿಂತಿರುಗುವಾಗ ಬಪ್ಪನಾಡು ಹಾಗೂ ಕಾರ್ನಾಡಿನ ಮುಖಂಡರ ನಡುವೆ ರೋಮಾಂಚನಕಾರಿಯಾದ 'ಸೂಟೆದಾರ' ನಡೆದು ಧ್ವಜಾರೋಹಣವಾಗುತ್ತದೆಂದು ತಿಳಿದುಬರುತ್ತದೆ. ಈ ದೇವಿಯ ರಥೋತ್ಸವದಲ್ಲಿ ಮೊಗವೀರರ ಪಾತ್ರ ಹಿರಿದಾಗಿದ್ದು, ಇಲ್ಲಿನ ಬ್ರಹ್ಮೋತ್ಸವ ರಥವು ಭವ್ಯವೂ ಕಲಾತ್ಮಕವೂ ಆಗಿದ್ದು, ಇನ್ನೂ ನಾಲ್ಕು ರಥಗಳು ಅಲ್ಲಿವೆ. ಬಪ್ಪನಾಡಿನ ದುರ್ಗಾಪರಮೇಶ್ವರಿಯಷ್ಟೇ ಅವಳ ಜಾತ್ರೆ ಸಂದರ್ಭದಲ್ಲಿ ಕೊರಗ ಸಮಾಜದವರು ನಿರಂತವಾಗಿ ಡೋಲು ಬಡಿಯುತ್ತಾ ದೇವಿಯ ಸೇವೆ ಮಾಡುವುದು ರೂಢಿಯಲ್ಲಿವೆ. ಗುಡಿಯಲ್ಲಿ ಡೋಲು, ಭೇರಿಗಳಿದ್ದು, ಭಕ್ತರು ಕಾಣಿಕೆ ಅರ್ಪಿಸಿ, ಐದು ಬಾರಿ ಡೋಲು ಬಡಿದು ದೇವಿಗೆ 'ಡೋಲುಸೇವೆ' ಸಲ್ಲಿಸುವುದು ಈಗಲೂ ರೂಢಿಯಲ್ಲಿದೆ.

ಮೂಲ್ಕಿ ಸೀಮೆಯ ಉಲುಪಾಡಿಗುತ್ತಿನ ಕಾಂತಬಾರೆ ಬೂದೆಬಾರೆ ಎಂಬ ಕಾರಣಿಪುರುಷರು ಜನ ಮೆಚ್ಚುವಂತಹ ಮಹಾತ್ಕಾರ್ಯಗಳನ್ನು ಮಾಡಿ ಮೂಲ್ಕಿ ಸೀಮೆಯಲ್ಲಿದ್ದರು. ಆಗ ಕೋಟಿಚೆನ್ನಯರ ಕಿವಿಗೆ ಅವರ ಕೀರ್ತಿ ಮುಟ್ಟಿ ಮೂಲ್ಕಿ ಸೀಮೆಗೆ ಬಂದ ಕೋಟಿ ಚೆನ್ನಯರು, ಬಾರೆ ಅವಳಿಸೋದರರೊಂದಿಗೆ ಕಾಳಗಕ್ಕೆ ಇಳಿದರು. ಹೆಜಮಾಡಿಯ ಬಸ್ತಿಪಡು ಎಂಬಲ್ಲಿ ಏಳು ದಿನ ಅಹೋರಾತ್ರಿ ಕದನ ಜರುಗಿತು. ಕೊನೆಗೆ ದೇವಿ ಪ್ರತ್ಯಕ್ಷಳಾಗಿ ಸಮಬಲರಾಗಿದ್ದ ಅವರನ್ನು ಯುದ್ಧದಿಂದ ಮುಕ್ತಗೊಳಿಸಿ ಮೂಲ್ಕಿ ಸೀಮೆಯಲ್ಲಿ ಕಾಂತಬಾರೆ ಬೂದಬಾರೆಯರದೇ ಕಾರುಬಾರು ನಡೆಯಲಿ, ಉಳಿದೆಡೆ ನೀವು ಕೀರ್ತಿಶಾಲಿಗಳಾಗಿರಿ ಎಂದು ಕೋಟಿಚೆನ್ನಯರನ್ನು ಹರಸಿ ಬೀಳ್ಕೊಟ್ಟಳೆಂಬ ಸ್ಥಳೀಯ ಐತಿಹ್ಯ ಈ ಭಾಗದಲ್ಲಿ ಜನಜನಿತವಾಗಿದೆ. ಈ ಕಾರಣದಿಂದಾಗಿಯೇ ಮೂಲ್ಕಿ ಸೀಮೆಯಲ್ಲಿ ಕೋಟಿ ಚನ್ನಯ್ಯರಿಗೆ ಗರಡಿಗಳು ನಿರ್ಮಾಣವಾಗಲಿಲ್ಲವೆಂದೂ ಹೇಳಲಾಗುತ್ತದೆ.

**ವಿಟ್ಲ (೧೫,೬೫೦)** : ತಾಲೂಕು ಕೇಂದ್ರ ಬಂಟ್ವಾಳದಿಂದ ಆಗ್ನೇಯಕ್ಕಾದಂತೆ ೧೯ ಕಿ.ಮೀ. ದೂರದಲ್ಲಿರುವ ವಿಟ್ಲ ಒಂದು ಹೋಬಳಿ ಕೇಂದ್ರ ರಾಜ್ಯ ಹೆದ್ದಾರಿ ಸಂಖ್ಯೆ ೮೮ರ ಮೇಲಿರುವ ಪ್ರಮುಖ ಚಾರಿತ್ರಿಕ ಸ್ಥಳ. 'ಡೊಂಬ ಹೆಗ್ಗಡೆ' 'ವಿಟ್ಲದ ಅರಸರು' ಎಂದೂ ಕರೆಯಲ್ಪಡುವ ಸಾಮಂತ ಅರಸು ಮನೆತನವೊಂದು ೧೯ ಮಾಗಣೆಗಳನ್ನೊಳಗೊಂಡ ವಿಟ್ಲ ೨೦೦೦ ಸೀಮೆಯನ್ನು ಸುಮಾರು ೧೫ನೇ ಶತಮಾನದಿಂದ ೨೦ನೆಯ ಶತಮಾನದ ಪೂರ್ವಾರ್ಧ ಭಾಗದವರೆಗೂ ವಿಜಯನಗರ, ಕೆಳದಿ ಹಾಗೂ ಬ್ರಿಟಿಷ್ ಪರಮಾಧಿಕಾರದಡಿ ಆಳಿದ ಸಂದರ್ಭದಲ್ಲಿ ಅವರ ರಾಜಧಾನಿಯಾಗಿ ಮೆರೆದು ಅನೇಕ ಏಳು–ಬೀಳುಗಳನ್ನುಂಡಿರುವ ಪಟ್ಟಣವಿದು. ಪುರಾಣ ಕಾಲದ ಏಕಚಕ್ರನಗರ ಇದೆಂದು ಹೇಳಲಾಗುತ್ತಿದ್ದು, ಪಾಂಡವರು ಇಲ್ಲಿ ಸ್ವಲ್ಪ ಕಾಲ ತಂಗಿದ್ದರೆಂಬ ಅಭಿಪ್ರಾಯವೂ ಇದೆ. ವಿಟ್ಲ ಪರಿಸರದಲ್ಲಿ ಹಬ್ಬಿರುವ ಗಿರಿಶ್ರೇಣಿಗಳಲ್ಲಿ ಬಹಳ ಪ್ರಸಿದ್ಧವಾದುದು ಕಳುಜಮಲೆ. ಅಲ್ಲಿನ ಗುಹೆಯೊಂದರಲ್ಲಿ ಬಕಾಸುರನು ವಾಸಿಸುತ್ತಿದ್ದು, ಬಕಾಸರ ವಧೆಯಾದದ್ದು ಇಲ್ಲೇ ಎಂದು ಸೂಚಿಸುತ್ತಾ ಹಲವಾರು ಬಂಡೆಗಳನ್ನು ತೋರಿಸಿ ಬಕಾಸುರ ವಧಾ ಪೂರಕ ಘಟನೆಗಳನ್ನು ತಳಕು ಹಾಕಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಗ್ರಾಮದಲ್ಲಿರುವ ಇಂದಿನ ಜೋಗಿಮಠವೂ ಸೇರಿದಂತೆ ಕಾಡುಮಠ, ಚರಂತಿಮಠ, ಕಾಳಿಮಠ ಎಂಬಿತ್ಯಾದಿ ಅಷ್ಟಮಠಗಳು ಹಿಂದೆ ಇದ್ದುದರಿಂದ 'ಅಷ್ಟಾಲಯಪುರ' ಎಂಬ ಹೆಸರು ಬಂದು ಮುಂದೆ ಅದೇ ವಿಟ್ಲ ಆಯಿತೆಂಬ ಮೌಖಿಕ ಪರಂಪರೆ ಇಲ್ಲಿದೆ. ವಿಟ್ಲದರಸಲ್ಲೊಬ್ಬರು ಹಿಂದೆ ವ್ಯಾಧಿ ನಿವಾರಣೆಗಾಗಿ ಭೂಯಿಷ್ಟಿಕಾಯಾಗವನ್ನು ಮಾಡಿದ್ದರಿಂದ 'ಇಷ್ಟಿಕಾಪುರ' ಎಂಬ ಹೆಸರು ಬಂದು ಮುಂದೆ ಅದೇ ವಿಟ್ಲ ಆಯಿತೆಂಬ ಅಭಿಪ್ರಾಯವೂ ಇದೆ. ತುಳುವಿನಲ್ಲಿ ಇಟ್ಟೇಲ್ ಎಂದೂ ಕರೆಯುತ್ತಾರೆ. ಸುಮಾರು ೧೪೩೬ರ ಶಾಸನದಲ್ಲಿ ಊರಿನ ಹೆಸರು 'ಇಷ್ಟಕಾಪುರ' ಎಂದೇ ಉಲ್ಲೇಖಿತವಾಗಿದ್ದರೂ ಅನಂತರದ ಶಾಸನಗಳಲ್ಲಿ ವಿಟ್ಟಲ ರೂಪವು ಲಭಿಸುತ್ತದೆ. ವಿಟ್ಲದ ಅರಸರ ೧೭೨೭ ಹಾಗೂ ೧೭೩೪ರ ಶಾಸನಗಳಲ್ಲಿ 'ಪಾರ್ಥಂಪಾಡಿ' ಉಲ್ಲೇಖವಿದೆಯಾದರೂ ಅದು ನಿರ್ದಿಷ್ಟವಾಗಿ ಏನನ್ನು ನಿರ್ದೇಶಿಸುತ್ತದೆಂಬುದರ ಬಗ್ಗೆ ಇನ್ನೂ ಜಿಜ್ಞಾಸೆ ಇದೆ. ಆದರೆ ಅದು ವಿಟ್ಲದ ಅರಮನೆಯ ಚಾವಡಿಗೆ ಇದ್ದ ಹೆಸರು ಎಂದೂ ಪಾ.ವಿಷ್ಣುಭಟ್ಟರು ಅಭಿಪ್ರಾಯಪಡುತ್ತಾರೆ.

ವಿಟ್ಲದ ಹೆಗ್ಡೆ ಅರಸರು, ಸುಬ್ಬರಾಯನೆಂಬ ಅಧಿಕಾರಿಯ ನೆರವಿನೊಂದಿಗೆ ೧೮೩೭ರ ಡಿಸೆಂಬರ್‌ನಲ್ಲೇ ಬ್ರಿಟಿಷರ ವಿರುದ್ಧ ಮೊದಲ ಬಂಡಾಯ ಹೂಡಿ ಕಡಬ ತಾಲೂಕು ಕಚೇರಿಯನ್ನು ಲೂಟಿ ಮಾಡಿ ಬಂಟ್ವಾಳವನ್ನು ಸೂರೆ ಮಾಡಿ ಪುತ್ತೂರನ್ನು ಕೇಂದ್ರವಾಗಿಟ್ಟುಕೊಂಡು ಸ್ವಲ್ಪ ಕಾಲ ಸ್ವತಂತ್ರ ಆಡಳಿತ ನಡೆಸಿದರು. ಆದರೆ, ೧೮೦೦ರ ಜುಲೈ ವೇಳೆಗೆ ವಿಟ್ಲ ಹೆಗ್ಡೆಯು ಸೋತುದರಿಂದ ಅವರ ಯತ್ನ ವಿಫಲವಾಯಿತು.

ಊರಲ್ಲಿರುವ ಪಂಚಲಿಂಗೇಶ್ವರ ದೇವಾಲಯವು ಸುಮಾರು ೧೦–೧೧ನೆಯ ಶತಮಾನದಷ್ಟು ಪುರಾತನದ್ದಾಗಿದೆ. ಮುರಕಲ್ಲಿನಿಂದ ನಿರ್ಮಿಸಲ್ಪಟ್ಟಿರುವ ಈ ಬೃಹತ್ ದೇವಾಲಯವು ಗಜಪೃಷ್ಠಾಕಾರದಲ್ಲಿದ್ದು, ಜಿಲ್ಲೆಯಲ್ಲಿರುವ ಆ ಬಗೆಯ ದೇವಾಲಯಗಳಲ್ಲೇ ಅತ್ಯಂತ ದೊಡ್ಡದೆಂದು ಪುಂಡಿಕ್ಕಾಯ್ ಗಣಪಯ್ಯಭಟ್ ಅಭಿಪ್ರಾಯಪಡುತ್ತಾರೆ. ಆದರೆ ಈ ದೇವಾಲಯದ ಮೊದಲ ಉಲ್ಲೇಖ ೧೪೩೬ರ ಶಾಸನದಲ್ಲಿ ಕಂಡುಬರುತ್ತದೆ. ಗಜಪೃಷ್ಠಾಕಾರದ ತಳವಿನ್ಯಾಸವನ್ನು ಹೊಂದಿರುವ ಈ ಗುಡಿಯು ಆಕರ್ಷಕವಾಗಿದ್ದು, ಹಂತಹಂತವಾಗಿ ನಿರ್ಮಿಸಿರುವ ಮೂರಂತಸ್ತಿನ ಮೇಲ್ಛಾವಣಿಯಿಂದಾಗಿ ವೀಕ್ಷಕರಿಗೆ ಮುದ ನೀಡುತ್ತದೆ. ಇಳಿಜಾರಾದ ಛಾವಣಿಗೆ ತಾಮ್ರದ ತಗಡನ್ನು ಹೊದಿಸಿದ್ದಾರೆ. ಗರ್ಭಗೃಹದಲ್ಲಿ ಏಕಪಾಣಿಪೀಠದ ಮೇಲೆ ಐದು ಪ್ರಾಕೃತಿಕ ಶಿಲೆಗಳನ್ನು ಪಂಚಮುಖಿ ಶಿವನ ಐದು ಮುಖಗಳಂತೆ ಪ್ರತಿಷ್ಠಾಪಿಸಲಾಗಿದೆ. ಅಲ್ಲದೇ ಮಹಾಗಣಪತಿ, ಮಹಿಷ ಮರ್ದಿನಿ, ಆಂಜನೆಯ, ಕುಂತೀಶ್ವರ ಮುಂತಾದ ಮೂರ್ತಿಗಳೂ ಇಲ್ಲಿವೆ. ಇಲ್ಲಿನ ಶಿವಲಿಂಗಗಳನ್ನು ಪಾಂಡವರು ಕಾಶಿಯಿಂದ ತರಿಸಿ ಪ್ರತಿಷ್ಠಾಪಿಸಿದರೆಂದು ಹೇಳಲಾಗುತ್ತದೆ. ಅದರಂತೆ ಶಿವಲಿಂಗವನ್ನು ತರಲು ಕಾಡಿಗೆ ಹೋದ ಹನುಮಂತ–ಭೀಮರಲ್ಲಿ ಹನುಮಂತನು ಮುಂದಾಗಿ ತಂದ ಶಿವಲಿಂಗಗಳನ್ನು ಪ್ರತಿಷ್ಠಾಪಿಸಿ ಪೂಜೆ ನಡೆದಿದ್ದಾಗ ಶಿವಲಿಂಗಗಳೊಂದಿಗೆ ಧಾವಿಸಿ ಬಂದ ಭೀಮನು, ಆ ವೇಳೆಗಾಗಲೇ ಪ್ರತಿಷ್ಠಾಪಿತಗೊಂಡಿದ್ದ ಶಿವಲಿಂಗಗಳನ್ನು ಕಂಡು ಸಿಟ್ಟಾಗಿ ಅವುಗಳನ್ನು ಗದೆಯಿಂದ ಮೀಟಿ ತೆಗೆದೊಗೆದು ಅದೇ ಪೀಠದ ಮೇಲೆ ತಾನು ಕಾಶಿಯಿಂದ ತಂದಿದ್ದ ಶಿವಲಿಂಗಗಳನ್ನು ಪಡುಮುಖವಾಗಿ ಪ್ರತಿಷ್ಠಾಪಿಸಿ ಎಡೆಯಾಗಿದ್ದ ನೈವೇದ್ಯವನ್ನೇ ಪುನರ್ ಅರ್ಪಿಸಿದನೆಂಬ ಸ್ಥಳೀಯ ಐತಿಹ್ಯವಿದೆ. ಅದರಿಂದಾಗಿ ಈ ದೇವರಿಗೆ ಅರ್ಪಿಸುವ ನೈವೇದ್ಯವನ್ನು 'ತಂಗುಳನ್ನದ ನೈವೇದ್ಯ' ಎಂದು ಹೇಳುವ ವಾಡಿಕೆ ಈಗಲೂ ಇದೆ. ಮಕರಸಂಕ್ರಮಣದಂದು ಆರಂಭಗೊಂಡು ಒಂಭತ್ತು ದಿನ ನಡೆಯುವ ಈ ದೇವರ ವಾರ್ಷಿಕ ಜಾತ್ರೆಯಲ್ಲಿ ರಥೋತ್ಸವ, ಅವಭೃತೋತ್ಸವಗಳು ಹೆಚ್ಚು ಸಂಭ್ರಮದಿಂದ ಕೂಡಿರುತ್ತವೆ. ಈ ಜಾತ್ರೆಗೆ ಪೂರಕವಾಗಿ ಉಳ್ಳಾಳ್ತಿಯ ನಗ–ಸೊತ್ತುಗಳನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ಅಲಂಕೃತ ಬಸವನನ್ನು ಮುಂದಿಟ್ಟುಕೊಂಡು ಕೇಪುವಿನಿಂದ ಬರುವ ಭಂಡಾರ ಉಲ್ಲೇಖಾರ್ಹವಾಗಿದೆ. ಅಲ್ಲದೇ ಜಾತ್ರೆಯ ದಿನಗಳಲ್ಲಿ ಅರಸರ ವಂಶಸ್ಥರು ಜರೀಪೇಟಾ ಧರಿಸಿ, ರಾಜಠೀವಿಯಲ್ಲಿ ಡೋಲಿಯಲ್ಲಿ ಕುಳಿತು ಪರಿವಾರದೊಂದಿಗೆ ದೇವಾಲಯಕ್ಕೆ ಬರುವ ಸಂಪ್ರದಾಯವೂ ಇದೆ.

ಇಲ್ಲಿಯ ಅನಂತೇಶ್ವರ ದೇವಾಲಯವು ಚಿತ್ರಾಪುರ ಸಾರಸ್ವತ ಬ್ರಾಹ್ಮಣರ ಮೂಲ ದೇವಾಲಯವೆಂಬ ಕೀರ್ತಿಗೆ ಭಾಜನಕ್ಕೆ ಪಾತ್ರವಾಗಿದೆ. ಅದರ ಗರ್ಭಗೃಹದಲ್ಲಿರುವ ಬೆಳ್ಳಿಯ ನಾಗಶಿಲ್ಪವನ್ನು ಸಾರಸ್ವತ ಬ್ರಾಹ್ಮಣರೊಬ್ಬರು ಸುಬ್ರಹ್ಮಣ್ಯ ಕ್ಷೇತ್ರದಿಂದ ತಂದು, ವಿಟ್ಲದ ಸಮೀಪದ ಒಕ್ಕೆತ್ತೂರು ಬಳಿಯ ವನಭೋಜನವೆಂಬ ಸ್ಥಳದಲ್ಲಿ ಮೊದಲಿಗೆ ಸ್ಥಾಪಿಸಿ, ಆನಂತರ ಅದನ್ನು ವಿಟ್ಲಕ್ಕೆ ತಂದು, ಅಲ್ಲೊಂದು ದೇವಾಲಯ (ಇಂದಿನ ಅನಂತೇಶ್ವರ) ವನ್ನು ಸುಮಾರು ೧೪೬೦ರಲ್ಲಿ ನಿರ್ಮಿಸಿ, ಅದನ್ನು ಪ್ರತಿಷ್ಠಾಪಿಸಿದರೆಂದು ತಿಳಿದುಬರುತ್ತದೆ. ಶಿರಸಿ, ಗೋಕರ್ಣ, ಹೊನ್ನಾವರ, ಶಿರಾಲಿ, ನೀಲೇಶ್ವರ (ಕೇರಳ) ಮುಂತಾದೆಡೆಗಳಲ್ಲಿರುವ ಸಾರಸ್ವತ ಬ್ರಾಹ್ಮಣರು ಈ ದೇವರಿಗೆ ನಡೆದುಕೊಳ್ಳುತ್ತಾರೆ. ಇಲ್ಲಿ ಜರುಗುವ ಷಷ್ಠಿ ಮಹೋತ್ಸವವು ಸಾರಸ್ವತ ಬ್ರಾಹ್ಮಣರಿಗೆ ಅತ್ಯಂತ ಪ್ರಮುಖ ಉತ್ಸವವಾಗಿದೆ.

ಗ್ರಾಮಕ್ಕೆ ಒಂದು ಕಿ.ಮೀ. ಅಂತರದಲ್ಲಿರುವ ಜೋಗಿಮಠವು ಏಕಾಂತ ಸ್ಥಳದಲ್ಲಿದ್ದು, ಪ್ರಶಾಂತವಾಗಿದೆ. ಕದ್ರಿಯಲ್ಲಿರುವ ಜೋಗಿಮಠದಂತೆ ನಾಥಪಂಥಕ್ಕೆ ಸೇರಿದ ಈ ಮಠವು ವಿಟ್ಲದ ಅರಸರ ಪೋಷಣೆಗೊಳಪಟ್ಟಿತ್ತು. ವಿಶಾಲವಾಗಿರುವ ಈ ಮಠದಲ್ಲಿ ಕಾಳಿ, ಕಾಲಭೈರವ, ಮಂಜುನಾಥೇಶ್ವರಲಿಂಗ, ಮುಂತಾದವುಗಳ ಜೊತೆಗೆ ಪರಶುರಾಮಧುನಿ, ಮುಖವಾಡ, ತ್ರಿಶೂಲ, ಖಡ್ಗ, ತೂಗುಮಂಚ ಮುಂತಾದವುಗಳಿವೆ. ಅಲ್ಲದೇ ಹಿಂದಿದ್ದ ಸನ್ಯಾಸಿಗಳ ಸಮಾಧಿಗಳೂ ಇಲ್ಲಿವೆ.

ವಿಟ್ಲದ ಇನ್ನೊಂದು ವಿಶೇಷ ಅಲ್ಲಿರುವ ವಿಟ್ಲದರಸರ ಅರಮನೆ. ಭತ್ತದ ಗದ್ದೆಗಳ ನಡುವೆ ನಿಂತಿರುವ ಹಳೆಗಾಲದ ವಿಶಾಲವಾದ ಮನೆಯೇ ಅವರ ಅರಮನೆ. ಅವರ ಪೂರ್ವಿಕರಿದ್ದ ಅರಮನೆಯನ್ನು ಟಿಪ್ಪು ಸುಟ್ಟನೆಂಬ ಅಭಿಪ್ರಾಯವಿದ್ದು, ಮಣ್ಣಿನಕೋಟೆ, ಅರಮನೆ ಅವಶೇಷಗಳನ್ನು ನೋಡಬಹುದಾಗಿದೆ. ರಾಜರ ನಿವಾಸಕ್ಕೆ ಸಂಬಂಧಿಸಿದಂತೆ ಇರುವ ಅರಮನೆ, ಅರಂತಾಡೆ ಹಾಗೂ ಬೀಡು ಎಂಬ ಮೂರು ಭಾಗಗಳನ್ನು ಇಲ್ಲಿ ಕಾಣಬಹುದಾಗಿದೆ. ವಿಟ್ಲದ ಪಂಚಲಿಂಗೇಶ್ವರ ನಾಮವು ಅವರ ರಾಜಮುದ್ರಿಕೆಯನ್ನು ಅಲಂಕರಿಸಿದ್ದು,

ಕೇಪುವಿನ ಉಳ್ಳಾಳ್ತಿ ದೇವಿಯ ಆರಾಧಕರೂ ಅವರಾಗಿದ್ದರು. ಅಲ್ಲದೇ ವಿಟ್ಲದರಸರ ಅರಮನೆಯೊಂದು ಕೇಪುವಿನಲ್ಲಿತ್ತೆಂದು ತಿಳಿದುಬರುತ್ತದೆ. ಕೇಪುವಿನ ಕಜಂಬು ಜಾತ್ರೆ–ಹರಕೆಗಳು ಬಹಳ ಪ್ರಸಿದ್ಧವಾಗಿದ್ದು, ಧನು ಸಂಕ್ರಮಣದಿಂದ ಮೊದಲುಗೊಂಡು ಐದು ದಿನ ನಡೆಯುತ್ತವೆ. ಈ ಜಾತ್ರೆಯಲ್ಲಿ ಮಕ್ಕಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ. ಅದರಲ್ಲೂ ಮಕ್ಕಳ ಮೊದಲ ತಲೆಗೂದಲನ್ನು ಹರಕೆಯ ರೂಪದಲ್ಲಿ ದೇವಿಗೆ ಅರ್ಪಿಸುವ ಕ್ರಿಯೆಗೆ ಕಜಂಬು (ಮುಡಿ) ಎಂದು ಹೇಳಲಾಗುತ್ತದೆ. ವಿಟ್ಲದಲ್ಲಿ ಕಲ್ಕುಡಭೂತವೂ ಸೇರಿದಂತೆ ಹಲವಾರು ಭೂತ(ದೈವ)ಗಳನ್ನು ಆರಾಧಿಸುವ ದೈವಸ್ಥಾನಗಳಿವೆ.

ಊರಿಗೆ ಅನತಿ ದೂರದಲ್ಲಿರುವ ಸೆಂಟ್ರಲ್ ಪ್ಲಾಂಟೇಷನ್ ಕ್ರಾಪ್ಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಸಿಪಿಸಿಆರ್‌ಐ) ೧೯೫೬ರಲ್ಲಿ ಸ್ಥಾಪನೆಗೊಂಡಾಗ ಅಡಕೆಗೆ ಸಂಬಂಧಿಸಿದಂತಹ ಸಂಶೋಧನೆಗಳಿಗೆ ಮಾತ್ರ ಸೀಮಿತವಾಗಿತ್ತು. ಕ್ರಮೇಣ ಕೋಕೋ, ಕರಿಮೆಣಸು, ಗೋಡಂಬಿಗಳಿಗೆ ಸಂಬಂಧಿಸಿದಂತೆ ಸಂಶೋಧನೆಯನ್ನು ನಡೆಸಲಾಗುತ್ತಿದೆ. ಈ ಕೇಂದ್ರವು ವೈವಿಧ್ಯಮಯವೂ ಬೋಧಪ್ರದವೂ ಆದ ಸಸ್ಯ ಜಗತ್ತಿನಿಂದಾಗಿ ಸಸ್ಯಕಾಶಿಯಂತೆ ಕಂಗೊಳಿಸುತ್ತಿದ್ದು, ವೀಕ್ಷಕರ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ.

ವಿಟ್ಲದ ಹತ್ತಿರವಿರುವ **ಕಡಂಬು** ಎಂಬಲ್ಲಿ ಕಲ್ಲುರ್ಟಿಯ ಸ್ಥಾನವಿದ್ದು, ಅಲ್ಲಿ ನಡೆಯುವ ಕುಕ್ಕುಟಯಜ್ಞ ಬಹಳ ಪ್ರಸಿದ್ಧವಾಗಿದೆ. ಅದೇ ರೀತಿ ಬಂಟ್ವಾಳ ತಾಲೂಕಿನ ಸಜಿಪ ಮುನ್ನೂರು ಗ್ರಾಮದ ಪಣೋಲಿಬೈಲಿನಲ್ಲಿರುವ ಕಲ್ಲುರ್ಟಿ ದೇವಸ್ಥಾನದಲ್ಲೂ ಪ್ರತೀ ಆದಿತ್ಯ, ಮಂಗಳ ಹಾಗೂ ಶುಕ್ರವಾರಗಳಂದು ದೈವಕ್ಕೆ 'ಅಗಲುಸೇವೆ'ಯ ಹೆಸರಿನಲ್ಲಿ ಕುಕ್ಕುಟಯಜ್ಞ ನಡೆಯುತ್ತದೆ. **ಕನ್ಯಾನ (೭೫೫೮)** : ತಾಲೂಕು ಕೇಂದ್ರ ಬಂಟ್ವಾಳದಿಂದ ದಕ್ಷಿಣಕ್ಕೆ ಸುಮಾರು ೨೫ ಕಿ.ಮೀ. ದೂರದಲ್ಲಿರುವ ಇದು ವಿಟ್ಲದ ಸಮೀಪದ ಗ್ರಾಮವಾಗಿದ್ದು, ಪಶ್ಚಿಮ ಬಂಗಾಳದವರಾದ ಭಟ್ಟಾಚಾರ್ಯರು ೧೯೬೪ರಲ್ಲಿ ಸ್ಥಾಪಿಸಿದ ಭಾರತ ಸೇವಾಶ್ರಮದಿಂದಾಗಿ ಉಲ್ಲೇಖಾರ್ಹವಾಗಿದೆ. ವಿದ್ಯಾರ್ಥಿ–ವಿದ್ಯಾರ್ಥಿನಿಯರು, ಅವಿವಾಹಿತ ಹೆಂಗಸರು ವೃದ್ಧ–ವೃದ್ಧೆಯರು ಅಂಗವಿಕಲರು, ಬುದ್ಧಿಮಾಂದ್ಯರೇ, ಮುಂತಾದ ಅನಾಥರ ಬದುಕಿಗೊಂದು ಬೆಳಕಾಗಿರುವ ಇದು ೧೯೮೯ರಲ್ಲಿ ಬೆಳ್ಳಿ ಹಬ್ಬವನ್ನು ಆಚರಿಸಿಕೊಂಡಿದೆ. **ಕನ್ಯಾನ** ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿರುವ ಶಿರಂಕಲ್ಲು, ನೆಲ್ಲಿಕಟ್ಟೆ, ಬಂಡಿತಡ್ಕ, ಕಣಿಯೂರು, ಕೇಪಳಗುಡ್ಡೆ ಹಾಗೂ ಬೈರಿಕಟ್ಟೆ ಮುಖ್ಯ ಮಾರ್ಗಗಳಲ್ಲಿ ಮುಸ್ಲಿಮರು ಮಸೀದಿ ಕಟ್ಟಿಸಿಕೊಂಡಿದ್ದು, ಒಳಗೆ ಪಳ್ಳಿ, ದರ್ಗಾ, ಮದ್ರಸಾಗಳೂ ಇವೆ.

**ವೇ(ಏ)ಣೂರು(೨,೩೨೧)** ; ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ಸ್ವಲ್ಪ ವಾಯವ್ಯಕ್ಕಾದಂತೆ ೧೯ ಕಿ.ಮೀ. ದೂರದಲ್ಲಿ ಫಲ್ಗುಣಿ ನದಿ ತೀರದ ಮೇಲಿರುವ ಹೋಬಳಿ ಕೇಂದ್ರ. ಪ್ರಮುಖ ಜೈನ ನೆಲೆ. ಮಿಗಿಲಾಗಿ ಸ್ಥಳೀಯ ಅಜಲ ಅರಸು ಮನೆತನದ ರಾಜಧಾನಿ ಪಟ್ಟಣವಾಗಿ ಸುಮಾರು ೧೭೮೬ರವರೆಗೆ ಮೆರೆದಿರುವ ಐತಿಹಾಸಿಕ ಸ್ಥಳ. ಅವರ ಆಳ್ವಿಕೆಗೆ ೧೩ ಮಾಗಣೆಗಳು ಒಳಪಟ್ಟಿದ್ದವು. ಸುಮಾರು ೧೨–೧೮ನೇ ಶತಮಾನದವರೆಗಿನ ಸಾಮಂತರಾಜರಾಗಿ ಆಳ್ವಿಕೆ ನಡೆಸಿದ ಇವರು ಜೈನ ಮತಾವಲಂಬಿಗಳಾಗಿದ್ದರು. ಪ್ರಾಚೀನ ಶಾಸನಗಳಲ್ಲಿ 'ಏಣೂರು' 'ಯೇನೂರು' ಎಂದೆಲ್ಲಾ ಉಲ್ಲೇಖಿತಗೊಂಡಿರುವ ವೇಣೂರು, ಹಿಂದೆ ೭೦೦ ಜೈನ ಶ್ರಾವಕರಿದ್ದುದರಿಂದ ಏಳ್ನೂರು ಎನಿಸಿಕೊಂಡು ಅದೇ ವೇಣೂರಾಯಿತೆಂದೂ ಹೇಳಲಾಗುತ್ತದೆ. ಎಣ್ಣೂರು (ಎಂಟು ಊರುಗಳ ಗುಂಪು) ಎಂಬುದೇ ವೇಣೂರಾಯಿತೆಂಬ ಅಭಿಪ್ರಾಯವೂ ಇದೆ. ವೇಣೂರು ಚಾರಿತ್ರಿಕ ಸ್ಥಳವಾಗಿ, ಪ್ರಮುಖ ಜೈನಕ್ಷೇತ್ರವಾಗಿ ವಿಶೇಷ ಮಹತ್ವ ಪಡೆದಿದೆ. ಮೂಡುಬಿದ್ರಿ, ಕಾರ್ಕಳಗಳನ್ನು ಸಂದರ್ಶಿಸಿದ ಪ್ರವಾಸಿಗರು ವೇಣೂರನ್ನೂ ವೀಕ್ಷಿಸಿ, ಧರ್ಮಸ್ಥಳದತ್ತ ಪಯಣಿಸುವುದು ವಾಡಿಕೆಯಾಗಿದೆ. 'ವೇಣೂರಿಗೆ ಎಂಟು ಬಸದಿ' ಎಂಬ ಮಾತು ರೂಢಿಯಲ್ಲಿದ್ದರೂ ಅಕ್ಕಂಗಳ ಬಸದಿ, ಬಿನ್ನಾಣಿ ಬಸದಿ, ಶಾಂತಿನಾಥ ಬಸದಿ, ಆದಿನಾಥ ಬಸದಿ, ಪಾರ್ಶ್ವನಾಥ ಬಸದಿ, ಚೌವ್ವೀಸ್ ತೀರ್ಥಂಕರರ ಬಸದಿ ಎಂಬ ಆರು ಬಸದಿಗಳು ಮಾತ್ರವಿದ್ದು, ಉಳಿದೆರಡು ಶಾಂತಿನಾಥ ಬಸದಿಯ ಮೇಲಂತಸ್ತಿನಲ್ಲಿರುವ ಮೇಗಿನ ನೆಲೆಯ ವರ್ಧಮಾನಸ್ವಾಮಿ ಹಾಗೂ ಚಂದ್ರಪ್ರಭಾ ತೀರ್ಥಂಕರರ ಬಸದಿಗಳಾಗಿವೆ.

ವೇಣೂರಿನಲ್ಲಿರುವ ಹತ್ತು ಶಾಸನಗಳಲ್ಲಿ ಗೊಮ್ಮಟಮೂರ್ತಿಯ ಹಿಂಬದಿಯಲ್ಲಿರುವ ೧೧೩೮ರ ಶಾಸನದಿಂದ ವೇಳವಾಳಿ ಕಲ್ಲನ್ನು ಸೇವ್ಯಗೆಲ್ಲರಸರು ನಿಲ್ಲಿಸಿದ ಅಂಶ ಗೊತ್ತಾಗುತ್ತದೆ. ಊರಿನ ಮೇಲುಪೇಟೆ (ಮಹಾವೀರನಗರ)ಯಲ್ಲಿ ಬಸದಿಗಳ ಸಮುದಾಯವಿದೆ. ಅಲ್ಲೇ ಎದ್ದುಕಾಣುವ ಭವ್ಯವೂ ಆಕರ್ಷಕವೂ ಆದ ೩೫ ಅಡಿ ಎತ್ತರದ ಏಕಶಿಲಾ ಭುಜಬಲಿ ಜಿನ (ಗೊಮ್ಮಟ) ಮೂರ್ತಿಯನ್ನು ಬೆಳಗೊಳದ ಚಾರುಕೀರ್ತಿ ಭಟ್ಟಾರಕರ ಆಶಯದಂತೆ ಪಾಂಡ್ಯ ದೇವರಸನ ಸೋದರನೂ ರಾಣಿ ಪಾಂಡ್ಯಕ್ಕಳ ಮಗನೂ ಚಾಮುಂಡ ವಂಶಜನೂ ಆಗಿದ್ದ ಪುಂಜಳಿಕೆಯ ಅಜಿಲ ರಾಜ ನಾಲ್ವಡಿ ವೀರತಿಮ್ಮರಾಜನು ಕೆತ್ತಿಸಿ ೧೬೦೪ರ ಮಾರ್ಚ್ ಒಂದರಂದು ಪ್ರತಿಷ್ಠಾಪಿಸಿದ ಸಂಗತಿ ಅಲ್ಲೇ ಇರುವ ಶಾಸನಗಳಿಂದ ಸ್ಪಷ್ಟವಾಗುತ್ತದೆ. ರಾಜ್ಯದ ಕೆಲವೇ ಬಾಹುಬಲಿ ಮೂರ್ತಿಗಳಲ್ಲಿ ಒಂದಾದ ಈ ಗೊಮ್ಮಟಮೂರ್ತಿಯ

ಮೊಗದಲ್ಲಿ ಕಂಡು ಬರುವ ಮಂದಹಾಸದಿಂದಾಗಿ 'ನಗುವ ಗೊಮ್ಮಟ'ನೆಂದೇ ಇವನು ಪ್ರಸಿದ್ಧನಾಗಿದ್ದಾನೆ. ಆದರೆ ಈ ಮೂರ್ತಿಯ ಪ್ರತಿಷ್ಠಾಪನೆಯ ಹಿಂದಿರುವ ಘಟನೆ ಉಲ್ಲೇಖಾರ್ಹವಾಗಿದೆ. ವೇಣೂರಿನ ಬಾಹುಬಲಿಮೂರ್ತಿಯ ಪ್ರತಿಷ್ಠಾಪನೆಗೆ ನೆರೆಯ ಕಾರ್ಕಳದ ಅರಸ ಮುಮ್ಮಡಿ ಭೈರವರಾಯನು ಅಡ್ಡಿಯುಂಟು ಮಾಡಿ ನಾರಾವಿ ಕಡೆಯಿಂದ ಅಜಿಲ ತಿಮ್ಮಣ್ಣ ಅರಸನ ಮೇಲೆ ಯುದ್ಧಕ್ಕೆ ಬಂದನು. ಆಗ ಅಜಿಲರಸನು ಬಾಹುಬಲಿ ಮೂರ್ತಿಯನ್ನು ಫಲ್ಗುಣಿ ನದಿಯ ಮರಳುದಂಡೆಯಲ್ಲಿ ಹುದುಗಿಸಿ, ಶತ್ರುಧಾಳಿಯನ್ನು ಹಿಮ್ಮೆಟ್ಟಿಸಿದ ನಂತರ ಬಾಹುಬಲಿ ಮೂರ್ತಿಯನ್ನು ಮರಳು ರಾಶಿಯಿಂದ ಮೇಲೆತ್ತಿ ಪ್ರತಿಷ್ಠಾಪಿಸಿದನೆಂದು ತಿಳಿದುಬರುತ್ತದೆ.

ಈ ಗೊಮ್ಮಟಮೂರ್ತಿಯು ಪ್ರತಿಷ್ಠಾಪನೆಗೊಂಡ ಸಮಯದಲ್ಲೇ ನಾಲ್ವಡಿ ವೀರ ತಿಮ್ಮಣ್ಣ ಅಜಿಲನ ಮಡದಿಯರಾದ ಪಾಂಡ್ಯಕ್ಕದೇವಿ (ವರ್ಧಮಾನಕ್ಕ) ಹಾಗೂ ಮಲ್ಲಿದೇವಿಯರು ಗೊಮ್ಮಟಮೂರ್ತಿಯ ಎಡಭಾಗದ ಚಂದ್ರನಾಥ ಬಸದಿಯನ್ನೂ ಪಾರ್ಶ್ವದೇವಿ ಬಿನ್ನಾಣಿಯು ಗೊಮ್ಮಟಮೂರ್ತಿಯ ಬಲಭಾಗದಲ್ಲಿ ಶಾಂತಿನಾಥ ಬಸದಿಯನ್ನೂ ೧೬೦೪ರಲ್ಲಿ ನಿರ್ಮಿಸಿ ಅವುಗಳ ದೈನಂದಿನ ಪೂಜಾವಿಧಿಗೆಂದು ಭೂದಾನ ನೀಡಿದ ಅಂಶವನ್ನು ಅಲ್ಲೇ ಇರುವ ಶಾಸನಗಳು ನಿವೇದಿಸುತ್ತವೆ. ಅಲ್ಲದೇ ಅವುಗಳಲ್ಲೊಂದು ಶಾಸನ ಈ ಧರ್ಮವನ್ನು ಅಳುಪಿದವರು ಉಜಂತ (ಅಜಂತಾ, ಔರಂಗಾಬಾದ್ ಜಿಲ್ಲೆ. ಮಹಾರಾಷ್ಟ್ರ?) ಗಿರಿಯಲ್ಲಿ ಸಾವಿರ ಜಿನಬಿಂಬಗಳನ್ನು ಒಡೆದ ಪಾಪಕ್ಕೆ ತುತ್ತಾಗುವರೆಂಬ ಶಾಪಾಶಯವನ್ನು ವಿಧಿಸುತ್ತದೆ. ಪ್ರಾಕಾರದ ಒಳಭಾಗದ ಎಡ–ಬಲ ಬದಿಗಳಲ್ಲಿರುವ ಈ ಕಿರುಬಸದಿಗಳನ್ನು ಇಂದು ಅಕ್ಕಂಗಳ ಬಸದಿ ಹಾಗೂ ಬಿನ್ನಾಣಿ ಬಸದಿ ಎಂದು ಕರೆಯಲಾಗುತ್ತಿದ್ದು, ಒಳಗೆ ಕ್ರಮವಾಗಿ ಬಿಳಿಶಿಲೆಯ ಚಂದ್ರಪ್ರಭಾ ತೀರ್ಥಂಕರ ಹಾಗೂ ಪಂಚಲೋಹದ ಶಾಂತಿನಾಥ ತೀರ್ಥಂಕರರ ಆಕರ್ಷಕ ಬಿಂಬಗಳಿವೆ.

ಪಾರ್ಶನಾಥ ಬಸದಿಯಿಂದ ಪೂರ್ವಕ್ಕೆ, ಗುರುವಾಯನಕೆರೆ ಮಾರ್ಗದಲ್ಲಿ, ಸುಮಾರು ೧೦೦ ಮೀ. ಅಂತರದಲ್ಲಿರುವ "ಕಲ್ಲು ಬಸದಿಯ ವಠಾರ" ವೇಣೂರಿನ ಇನ್ನೊಂದು ಪ್ರಮುಖ ಜೈನ ದೇಗುಲ ಸಂಕೀರ್ಣವಾಗಿದೆ. ಕಲ್ಲುಬಸದಿ, ಮೇಗಿನ ಬಸದಿ, ದೊಡ್ಡಬಸದಿ ಎಂದೆಲ್ಲ ಕರೆಯಲ್ಪಟ್ಟಿರುವ ಇಲ್ಲಿನ ಶಾಂತಿನಾಥ ಬಸದಿಯು ವೇಣೂರಿನ ಬಸದಿಗಳ ಸಮುಚ್ಚಾಯಕ್ಕೆ ಕಳಶಪ್ರಾಯವಾಗಿವೆ. ಮೂರು ಅಂತಸ್ತಿನಿಂದ ಕೂಡಿದ ಅದ್ಭುತ ರಚನೆಯನ್ನು ಹೊಂದಿರುವ ಈ ಚೈತ್ಯಾಲಯದ ಗರ್ಭಗೃಹದಲ್ಲಿ ಶಾಂತಿನಾಥ ತೀರ್ಥಂಕರನ ಆಳೆತ್ತರದ ಕರಿಶಿಲೆಯ ಸುಂದರ ಶಿಲ್ಪವಿದೆ. ವಿಗ್ರಹದ ಎಡಬಲಗಳಲ್ಲಿ ಅವನ ಯಕ್ಷಯಕ್ಷಿಯರಾದ ಗರುಡ ಹಾಗೂ ಮಹಾಮಾನಸಿಯರನ್ನು ಕೆತ್ತಲಾಗಿದ್ದು, ಪ್ರಭಾವಳಿಯಲ್ಲಿ ಅಷ್ಟಮಹಾಪ್ರಾತಿಹಾರ್ಯಗಳನ್ನು ಅಂದವಾಗಿ ಬಿಡಿಸಿದ್ದಾರೆ. ಈ ಬಸದಿಯ ಎರಡನೆಯ ಅಂತಸ್ತಿನಲ್ಲಿ ಮಹಾವೀರ ಹಾಗೂ ಮೂರನೆಯ ಅಂತಸ್ತಿನಲ್ಲಿ ಚಂದ್ರಪ್ರಭಾ ತೀರ್ಥಂಕರರ ಶಿಲ್ಪಗಳಿವೆ. ಬಸದಿಯ ಎದುರಿಗಿರುವ ಮಾನಸ್ಥಂಭವು ಶಿಲ್ಪಿಯ ಕಲಾನೈಪುಣ್ಯತೆಗೆ ಕೈಗನ್ನಡಿಯಂತಿದೆ. ಸ್ತಂಭದ ನಾಲ್ಕು ಮುಖಗಳ ಮೇಲೆ ತಲಾ ಆರರಂತೆ ಒಟ್ಟು ೨೪ ತೀರ್ಥಂಕರರ ಕಿರು ಉಬ್ಬುಕೆತ್ತನೆಗಳಿವೆ. ಮೇಲ್ತುದಿಯಲ್ಲಿರುವ ಮಂಟಪದಲ್ಲಿ ತೀರ್ಥಕರಕ ಕಿರು ಕೆತ್ತನೆಗಳಿವೆ. ಶಾಂತಿನಾಥ ಬಸದಿಯ ಎಡಭಾಗದಲ್ಲಿರುವ ಆದಿನಾಥ ಬಸದಿಯು ಗಾತ್ರದಲ್ಲಿ ಚಿಕ್ಕದಾದರೂ ಒಳಗಿರುವ ಪದ್ಮಾಸೀನ ತೀರ್ಥಂಕರಮೂರ್ತಿಯು ದೊಡ್ಡದಿದ್ದು ಆಕರ್ಷಕವಾಗಿದೆ. ಮೂಲ (ಶಾಂತಿನಾಥ) ಬಸದಿಯ ಬಲ ಭಾಗದಲ್ಲಿರುವ ಚೌವ್ವಿಸ್ ತೀರ್ಥಂಕರರ ಬಸದಿಯಲ್ಲಿ ಎಲ್ಲಾ ೨೪ ತೀರ್ಥಂಕರರನ್ನು ಒಂದೇ ಪೀಠದ ಮೇಲೆ ಸಾಲಾಗಿ ಪ್ರತಿಷ್ಠಾಪಿಸಲಾಗಿದ್ದು, ಕಪ್ಪು ಶಿಲೆಯ ಈ ಶಿಲ್ಪಗಳು ಮನೋಜ್ಞವಾಗಿವೆ. ಅಲ್ಲೇ ಎಡಬಲದಲ್ಲಿ ಸರಸ್ವತಿ ಹಾಗೂ ಪದ್ಮಾವತಿಯರ ಶಿಲ್ಪಗಳೂ ಇವೆ. ಶಾಂತೇಶ್ವರ ಬಸದಿಯ ಮುಂದಣ ಮಂಟಪದ ಬಲಭಾಗದಲ್ಲಿರುವ ೧೪೪೯ರ ಶಾಸನದಿಂದ ಮಹಾಮಾಂಡಲೀಕ ಸೋಮನಾಥ ಪೆನ್ನಣ್ಣವೊಡೆಯರು ಪುಂಜಳಿಕೆ ರಾಜ್ಯವನ್ನು ಆಳುತ್ತಿದ್ದಾಗ, ರಾಜಮಾತೆ ಕಾಮಾದೇವಿಯು ಶಾಂತಿನಾಥ ಸ್ವಾಮಿಯ ಚೈತ್ಯಾಲಯದಲ್ಲಿ ತಪೋಧನರ ಆಹಾರ ದಾನಕ್ಕೆಂದು ಭೂದಾನ ನೀಡಿದ ಅಂಶ ಸ್ಪಷ್ಟವಾಗುತ್ತದೆ. ಅದೇ ಮಂಟಪದೊಳಗಿರುವ ೧೫೩೭ರ ಇನ್ನೊಂದು ಶಾಸನದಿಂದ ಹೊನ್ನಮದೇವಿಯ ಮಗನಾದ ಮಾಂಡಲೀಕ ಪಾಂಡ್ಯದೇವರಸ ಅಜಿಲನು, ಆಲೂರು ರಾಜ್ಯವನ್ನಾಳುತ್ತಿದ್ದಾಗ ಬಿಂನ್ನಾಣಿ ವಂಶಕ್ಕೆ ಸೇರಿದ ಆದ್ಯದೇವರಸರು ಯೇನೂರ ಶಾಂತೀಶ್ವರ ಚೈತ್ಯಾಲಯದಲ್ಲಿ ಚತುರ್ವಿಂಶತಿ ತೀರ್ಥಂಕರರ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿ ಅವುಗಳ ಅಮೃತಪಡಿಗೆಂದು ಕರ್ತೋಡಿ ಬಯಲಲ್ಲಿ ೭೫ ಗದ್ಯಾಣದ ಗದ್ದೆಯನ್ನು ಖರೀದಿಸಿ, ದಾನ ಬಿಟ್ಟ ಅಂಶ ವೇದ್ಯವಾಗುತ್ತದೆ. ತೀರ್ಥಂಕರ ಬಸದಿಯ ಪೂರ್ವಗೋಡೆ ಬಳಿಯಿರುವ ೧೬೨೨ರ ಶಾಸನದಿಂದ ಲಲಿತಕೀರ್ತಿ ಭಟ್ಟಾರಕರ ಶಿಷ್ಯೆಯಾದ ಮಧುರಕ್ಕದೇವಿಯು ಪುಂಜಳಿಕೆ ರಾಜ್ಯವನ್ನಾಳುತ್ತಿದ್ದಾಗ ಊರ ಸಮಸ್ತರೂ ರಾಮನಾಥ ಅರಸರ ಮುಂದಾಳತ್ವದಲ್ಲಿ ಏಕಾಸ್ಥರಾಗಿ ಶಾಂತೇಶ್ವರ ಸ್ವಾಮಿಯ ಪಂಚಾಮೃತದಭಿಷೇಕ, ವರ್ಧಮಾನ ಸ್ವಾಮಿಯ ನಿರ್ವಾಣಕಲ್ಯಾಣದ ಪೂಜೆ, ಪಂಚಪರಮೇಷ್ಠ ಅಮೃತಪಡಿ ಸೇವೆ ಹಾಗೂ ಬಲಭಾಗದ ತೀರ್ಥಂಕರ ಬಸ್ತಿಯಲ್ಲಿ ತಿಂಗಳಲ್ಲೊಂದು ಶುಕ್ರವಾರ ತಪೋಧನರಿಗೆ ಆಹಾರ ದಾನದ ಸೇವೆಗಳನ್ನು ನಿರಾತಂಕವಾಗಿ ನೆರವೇರಿಸುವ ಸಲುವಾಗಿ ಅರಸರಿಗೆ ೧೦೦ ಗದ್ಯಾಣ ಕೊಟ್ಟು ದೇವಸ್ಯ ಕ್ಷೇತ್ರವಾಗಿ ಭೂಮಿಯನ್ನು ದಾನ ಬಿಟ್ಟ ಅಂಶ ಗೊತ್ತಾಗುತ್ತದೆ.

ಅಜಲರಸನ ಪಟ್ಟದದೇವರಾದ ಮಹಾಲಿಂಗೇಶ್ವರ ದೇವಾಲಯವು ಇಲ್ಲಿಯ ಇನ್ನೊಂದು ಪ್ರಮುಖ ರಚನೆಯಾಗಿದ್ದು, ಇತ್ತೀಚಿನ ವರ್ಷಗಳಲ್ಲಿ ಜೀರ್ಣೋದ್ಧಾರಗೊಂಡಿದೆ. ಈ ದೇವಾಲಯದ ನೆಲಹಾಸಿನಲ್ಲಿ ಸೇರಿ ಹೋಗಿರುವ ಸುಮಾರು ೯೬೭ರ ಶಿಲಾಶಾಸನದ ತೇದಿಭಾಗವಷ್ಟೇ ಇದ್ದು, ಉಳಿದ ಭಾಗ ಹಾಳಾಗಿರುವುದರಿಂದ ಶಾಸನದ ಉದ್ದೇಶ ಗೊತ್ತಾಗುವುದಿಲ್ಲ. ಅದೇ ದೇವಾಲಯದ ಮುಂದಣ ನಂದಿಕಂಬದ ಮೇಲಿರುವ ಶಾಸನದಿಂದ ಅದನ್ನು ಬೀರಸೆಟ್ಟಿ ಮಾಡಿಸಿದ ಅಂಶ ವೇದ್ಯವಾಗುತ್ತದೆ. ಈ ದೇವಾಲಯದ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಗಣಪತಿ ಶಿಲ್ಪವಿದೆ. ಪ್ರಾಕಾರದಲ್ಲಿ ಜನಾರ್ದನನ ಸನ್ನಿಧಾನವೂ ಇದೆ. ಅಲ್ಲದೇ ಸುಬ್ರಹ್ಮಣ್ಯ, ಶಾಸ್ತಾರ, ನಾಗಬ್ರಹ್ಮ, ಕೊಡಮಣಿತ್ತಾಯ, ಕಲ್ಕುಡ, ಕಲ್ಲುರ್ತಿ ಮುಂತಾದ ದೈವಗಳ ಸ್ಥಾನವು ಇಲ್ಲಿದೆ. ಮೋಕ್ಷ ಸಂಕ್ರಮಣದಂದು ಆರಂಭಗೊಂಡು ನಡೆಯುವ ಒಂಭತ್ತು ದಿನಗಳ ಜಾತ್ರೆಗೆ ಅಳದಂಗಡಿಯ ಅಜಿಲರಸು ಕುಟುಂಬದವರೂ ಬರುತ್ತಾರೆ.

ವೇಣೂರಿನಲ್ಲಿದ್ದ ಅಜಿಲರ ಅರಮನೆ ಏಳು ಅಂತಸ್ತಿನ ರಚನೆಯಾಗಿತ್ತೆಂದು ಹೇಳುವ ವಾಡಿಕೆ ಇದೆಯಾದರೂ ಅದರ ಸ್ವರೂಪ ಯಾರಿಗೂ ತಿಳಿಯದು. ಪ್ರಾಯಶಃ ಮುಳಿಹುಲ್ಲನ್ನು ಹೊದಿಸಿ ಅದನ್ನು ಕಟ್ಟಿದ್ದು, ಆಗಾಗ ಬೆಂಕಿಗೆ ತುತ್ತಾಗುತ್ತಿತ್ತೆಂಬ ಅಭಿಪ್ರಾಯವಿದ್ದು, ಶತ್ರುಗಳ ಧಾಳಿಗೆ ಅದು ನಾಶವಾಯಿತೆಂದು ಹೇಳಲಾಗುತ್ತದೆ. ಆದರೆ ವೇಣೂರಿನಲ್ಲಿಂದು ಪುರಾತನ ಅರಮನೆಯ ಅವಶೇಷಗಳನ್ನು ನೋಡಬಹುದಾಗಿದೆ. ಮುಂದೆ, ಅಜಿಲರಸರು ೧೭೮೬ರ ನಂತರ ತಮ್ಮ ರಾಜಧಾನಿಯನ್ನು ವೇಣೂರಿನಿಂದ ಅಳದಂಗಡಿಗೆ ಸ್ಥಳಾಂತರಿಸಿಕೊಂಡರೆಂದು ತಿಳಿದುಬರುತ್ತದೆ.

**ಶಿಶಿಲ (೨,೦೭೦) :** ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ಪೂರ್ವಕ್ಕಾದಂತೆ ೬೮ ಕಿ.ಮೀ ದೂರದಲ್ಲಿ ಹರಿಯುವ ಕಪಿಲ ಹೊಳೆಯಂಚಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಸುತ್ತಲೂ ಉನ್ನತೋನ್ನತ ಶಿಖರಗಳಿಂದ ಆವರಿಸಲ್ಪಟ್ಟಿದ್ದು ಅವುಗಳ ತಪ್ಪಲಲ್ಲೆಂಬಂತೆ ನೆಲೆಗೊಂಡಿರುವ ಪ್ರಶಾಂತವೂ ರಮಣೀಯವೂ ಆದ ಕ್ಷೇತ್ರ. 'ಶಿಶಿಲ'ಗ್ರಾಮನಾಮವು 'ಶ್ರೀಶೈಲ'ದ ಅಪಭ್ರಂಶ ರೂಪವಾಗಿದೆ. ನದಿಯ ದಕ್ಷಿಣ ದಂಡೆಯ ಮೇಲಿರುವ ಪುರಾತನವೂ ಭವ್ಯವೂ ಆದ ಶಿಶಿಲೇಶ್ವರ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಪ್ರಾಂಗಣದಲ್ಲಿ ವಿನಾಯಕ ಹಾಗೂ ದುರ್ಗಾ ಗುಡಿಗಳಿವೆ. ಮುಂದಿರುವ ಹೊಳೆಯಲ್ಲಿ ಯಥೇಚ್ಛವಾಗಿ ಪೆರುವೇಲು (ಮಹಾಶೀರ್ಷ) ಜಾತಿಯ ಮೀನುಗಳಿರುವುದರಿಂದ ಮತ್ಸ್ಯತೀರ್ಥವೆಂದೂ ಖ್ಯಾತಿಪಡೆದಿದೆ. ಊರ ಸಮೀಪದಲ್ಲಿರುವ ಕುಮಾರಗುಡ್ಡೆಯು ಸ್ವಯಂಭು ಶಿಶಿಲೇಶ್ವರನ ಮೂಲಸ್ಥಾನವಾಗಿದ್ದು, ಆ ದೇವರ ಪ್ರತಿಷ್ಠಾಪನೆಗೆ ಸಂಬಂಧಿಸಿದಂತೆ ಹಲವಾರು ಐತಿಹ್ಯಗಳಿವೆ ಈಗಲೂ ವಾರ್ಷಿಕ ಜಾತ್ರೆಯಲ್ಲಿ ಈ ದೇವರಿಗೆ ಮೇದರಕುಟುಂಬದವರು ನಡೆದುಕೊಳ್ಳುವ 'ಬೋಳು ವಿಧಿ' ಆಚರಣೆ ಹಾಗೂ ಅಪ್ಪಂಗಾಯಿ ಆಟ ವಿಶಿಷ್ಟವಾಗಿದೆಯೆಂದು ತಿಳಿದುಬರುತ್ತದೆ. ಅಲ್ಲದೇ ಇಲ್ಲಿ ಅನೇಕ ಭೂತಸ್ಥಾನಗಳಿವೆ. ಈ ಪರ್ವತ ಶ್ರೇಣಿಯು ಕದಂಬರ ಕಾಲದ ಶ್ರೀಪರ್ವತ (ತ್ರಿಪರ್ವತ)ವಾಗಿದ್ದು, ತ್ರಿಪರ್ವತನಗರಿಯೇ ಶಿಶಿಲ ಎಂಬ ಆಭಿಪ್ರಾಯವನ್ನು ಕ.ಪು.ಸೀತಾರಾಮ ಕೇದಿಲರಾಯರು ಬಹಳ ಹಿಂದೆಯೇ ವ್ಯಕ್ತಪಡಿಸಿದ್ದಾರೆ. ಆದರೆ ಇದು ವಿದ್ವಾಂಸರಿಂದ ಅಂಗೀಕರಿಸಲ್ಪಟ್ಟಿಲ್ಲ. ಸುಮಾರು ೧೪ನೆಯ ಶತಮಾನದಲ್ಲಿ ಪಟ್ಟಿಪೊಂಬುಚ್ಚಪುರದರಸ ಲೋಕನಾಥದೇವನೆಂಬುವನು ಶಿಶಿಲದಲ್ಲಿ ಅರಮನೆ ಕಟ್ಟಿಕೊಂಡು ವಾಸವಾಗಿದ್ದು, ನಂತರದಲ್ಲಿ ತನ್ನ ರಾಜಧಾನಿಯನ್ನು ಕಾರ್ಕಳಕ್ಕೆ ವರ್ಗಾಯಿಸಿಕೊಂಡನೆಂದೂ ಹೇಳಲಾಗುತ್ತದೆ. ನಂತರ ಕಾರ್ಕಳದರಸರ ಸಂಬಂಧಿಗಳಿಂದ ಮೂಲರಸರು ಬಯ(ಬೈ)ಲಂಗಡಿ ಹಾಗೂ ಶಿಶಿಲಗಳನ್ನು ರಾಜಧಾನಿ ಮಾಡಿಕೊಂಡು ತಲಾ ಆರಾರು ಮಾಗಣೆಗಳನ್ನು ಆಳಿದರೆಂದೂ ಅಭಿಪ್ರಾಯವಿದೆ. ಇದಕ್ಕೆ ಪೂರಕವಾಗಿ ಸುಮಾರು ೧೫೩೮ರ ಹಿರಿಯಂಗಡಿಯ ಶಾಸನವೊಂದರಲ್ಲಿ ಚೌಟರು, ಅಜಿಲರ ಜೊತೆಗೆ ಸಿಸಿಲದರಸರ ಉಲ್ಲೇಖವೂ ಇದೆ. ಕೆಳದಿಯ ಒಂದನೆಯ ವೆಂಕಟಪ್ಪನಾಯಕನು ಶಿಥಿಲಗೊಂಡಿದ್ದ ಶಿಶಿಲದ ಕೋಟೆಯನ್ನು ೧೬೦೮ರಲ್ಲಿ ಪುನರ್ನಿರ್ಮಾಣ ಮಾಡಿದನೆಂದು 'ಕೆಳದಿನೃಪವಿಜಯ' ದಾಖಲಿಸಿದೆ. ಸುಮಾರು ೧೬೪೨ರ ಒಡಂಬಡಿಕೆ ಪತ್ರ ಹಾಗೂ ೧೮೦೫ರ ಬ್ರಿಟಿಷ್ ದಾಖಲೆಗಳಿಂದ ಶಿಶಿಲವು ಹೋಬಳಿ ಕೇಂದ್ರವಾಗಿದ್ದ ಅಂಶ ವೇದ್ಯವಾಗುತ್ತದೆ. ಆದರೆ ಕ್ರಮೇಣ ಬ್ರಿಟೀಷ್ ಆಡಳಿತದಡಿ ಕೊಕ್ಕಡವು ಮಾಗಣೆ ಕೇಂದ್ರವಾಗಿ ಮಹತ್ವ ಪಡೆಯುವುದರೊಂದಿಗೆ ಶಿಶಿಲದ ಮಹತ್ವ ಕುಗ್ಗಿತು. ಕಪಿಲಾ ತೀರದ ಕೋಟೆ ಬಾಗಿಲು ಪ್ರದೇಶದಲ್ಲಿ ಕೋಟೆ, ಕಂದಕ, ಅರಮನೆ, ಬಸದಿ, ಬಾವಿ ಕಲ್ಯಾಣ ಮುಂತಾದವುಗಳ ಅವಶೇಷಗಳನ್ನು ಈಗಲೂ ನೋಡಬಹುದಾಗಿದೆ. ಶಿಶಿಲದ ಸರ್ಕಾರಿ ಶಾಲೆಯೂ ಒಂದು ಚಿತ್ರಾಗಾರವೇ ಆಗಿದೆ. **ಶಿಬಾಜೆ (೨,೨೩೦) :** ಶಿಶಿಲದ ನೆರೆಯ ಗ್ರಾಮವಾಗಿದ್ದು, ಅಲ್ಲಿರುವ ವನದುರ್ಗೆ ದೇವಾಲಯವು 'ಮೊಂಟೆತಡ್ಕ' ಎಂದೇ ಖ್ಯಾತಿ ಪಡೆದಿದೆ. ಈ ದೇವಿಗೆ ಸಂಬಂಧಿಸಿದಂತೆ ಇರುವ ಮೊಂಟೆ (ಬೊಂಕ)ಯ ಹರಕೆಯು ದನಗಳ ಹಿತದೃಷ್ಟಿಯಿಂದ ರೈತರು ಸಲ್ಲಿಸುವ ಹರಕೆಯಾಗಿದ್ದು, ವಿಶಿಷ್ಟವಾಗಿದೆ. ದನಕರುಗಳ ಕೊರಳಿಗೆ ಕಟ್ಟಲ್ಪಡುವ ಬಿದಿರಿನ ಈ ಮೊಂಟೆಗಳು ಹೊರಡಿಸುವ ನಾದದಿಂದಾಗಿ ದೇವಾಲಯವಿರುವ ಪರಿಸರಕ್ಕೆ ಮೊಂಟಡ್ಕ ಎಂಬ ಹೆಸರು ಬಂದಿದೆ. **ಕೊಕ್ಕಡ (೪,೫೯೬) :** ತಾಲೂಕು ಕೇಂದ್ರ ಬೆಳ್ತಂಗಡಿಯಿಂದ

ಸುಮಾರು ೧೮ ಕಿ.ಮೀ. ದೂರದಲ್ಲಿ ರಾಷ್ಟ್ರೀಯ ಹೆದ್ದಾರಿ ೪೮ ರಿಂದ ಸ್ವಲ್ಪ ಒಳಕ್ಕಾದಂತೆ ಧರ್ಮಸ್ಥಳಕ್ಕೆ ಹೋಗುವ ಮಾರ್ಗದಲ್ಲಿ ಇರುವ ಸ್ಥಳ. ಶಿಶಿಲದಿಂದ ೧೨ ಕಿ.ಮೀ. ನೈಋತ್ಯಕ್ಕೆ ಇರುವ ಹೋಬಳಿ ಕೇಂದ್ರ ಅಲ್ಲಿರುವ ಸರೋವರ, ವೈದ್ಯನಾಥೇಶ್ವರ, ಗಜಪೃಷ್ಠಾಕಾರದ ತಳವಿನ್ಯಾಸವನ್ನು ಹೊಂದಿರುವ ನೀಲಕಂಠೇಶ್ವರ, ಹಾಗೂ ವಿಷ್ಣು ದೇವಾಲಯಗಳಿಂದಾಗಿ ಪ್ರಸಿದ್ಧವಾಗಿದೆ. ಸೌತಡ್ಕದಲ್ಲಿರುವ ಎರಡು ಅಡಿ ಎತ್ತರದ ಬಯಲು ಗಣಪತಿ ಶಿಲ್ಪವು ವಿಶಿಷ್ಟವಾಗಿದ್ದು, ಸುಮಾರು ೧೨ನೆಯ ಶತಮಾನದ್ದೆಂಬ ಅಭಿಪ್ರಾಯವಿದೆ. ಬದಿಯಲ್ಲೇ ಕಿರುಗಾತ್ರದ ವೀರಭದ್ರ ಹಾಗೂ ವಿಷ್ಣುಮೂರ್ತಿಗಳೂ ಇವೆ. ಅಲ್ಲದೇ ಸಂತ ಜಾನ್ ಬ್ಯಾಪ್ಟಿಸ್ಟ್ ಚರ್ಚು ಹಾಗೂ ಬದ್ರಿಯಾ ಜುಮ್ಮಾ ಮಸೀದಿಗಳೂ ಕೊಕ್ಕಡದಲ್ಲಿವೆ.

**ಸವಣಾಲು :** ತಾಲೂಕು ಕೇಂದ್ರ ಬೆಳ್ತಂಗಡಿಯಿಂದ ಎಂಟು ಕಿ.ಮೀ. ಉತ್ತರದಲ್ಲಿರುವ ಪ್ರಾಚೀನ ಸ್ಥಳ. ಶ್ರವಣ ಪದದ ಅಪಭ್ರಂಶವೇ ಸವಣ ಆಗಿದ್ದು, ಸವಣಾಲು ನಾಮನಿಷ್ಪತ್ತಿಗೆ ಅದೇ ಮೂಲವಾಗಿದೆ. ಈ ಗ್ರಾಮಕ್ಕೆ ಅನತಿ ದೂರದ ಗುಡ್ಡದ ಮೇಲಿರುವ ಸವಣಾಲು ತೀರ್ಥವನ್ನು ತಲುಪುವ ಮಾರ್ಗಮಧ್ಯೆ ಫಲ್ಗುಣಿ ನದಿ ಹರಿದಿದೆ. ಅದನ್ನು ದಾಟಲು ತೂಗುಸೇತುವೆಯೂ ಇದೆ. ನದಿಯಾಚೆ ಗುಡ್ಡವೊಂದರ ಮೇಲಿರುವ ಗುಹೆಯೊಂದರಲ್ಲಿ ಜಲವು ಉಕ್ಕಿ ಹರಿಯುತ್ತದೆ. ಗುಹಾತೀರ್ಥದ ಕೆಳಗಿರುವ ಬಂಡೆಯೊಂದರ ಮೇಲೆ ಯಕ್ಷ ಬ್ರಹ್ಮನನ್ನು ಕೊರೆಯಲಾಗಿದೆ. ಗುಹಾತೀರ್ಥದ ಮೇಲ್ಭಾಗದಲ್ಲಿ ಕಲ್ಲುಚಪ್ಪಡಿಗಳನ್ನು ಹಾಸಿರುವ ನೆಲಗಟ್ಟಿನ ಮೇಲೆ ಆದಿನಾಥ ತೀರ್ಥಂಕರನ ಶಿಲಾಮೂರ್ತಿ ಇದೆ. ಎದುರಲ್ಲೇ ಶ್ರವಣಪಾದಗಟ್ಟಿ ಇದೆ. ಸವಣಾಲು ಗ್ರಾಮದಲ್ಲಿ ಹೊಲಗದ್ದೆಗಳ ನಡುವೆ ಏಕಾಂತ ಸ್ಥಳದಲ್ಲಿ ಆದಿನಾಥ ತೀರ್ಥಂಕರನ ಪುಟ್ಟದಾದೊಂದು ಬಸದಿಯಿದೆ. ಗರ್ಭಗೃಹದಲ್ಲಿರುವ ಪಂಚಲೋಹದ ಆದಿನಾಥ ತೀರ್ಥಂಕರ ಬಿಂಬದ ಪ್ರಭಾವಳಿಯಲ್ಲಿ ಉಳಿದೆಲ್ಲ ತೀರ್ಥಂಕರರ ಜೊತೆಗೆ ಚಕ್ರೇಶ್ವರಿ–ಗೋಮುಖ ಯಕ್ಷ–ಯಕ್ಷಿಯರ ಕಿರುಬಿಂಬಗಳಿವೆ. ಬಸದಿಯ ವಠಾರದಲ್ಲಿ ಪದ್ಮಾವತಿ ಯಕ್ಷಿಯ ಪ್ರತ್ಯೇಕ ಸನ್ನಿಧಿ ಇದೆ. ಅಲ್ಲದೆ ಕಲ್ಲುರ್ಟಿ, ಲಿಂಗಣ ಪಂಜುರ್ಲಿ ದೈವಸ್ಥಾನಗಳೂ ಇದ್ದು ಪ್ರದಕ್ಷಿಣಾ ಪಥದಲ್ಲಿ ಕ್ಷೇತ್ರಪಾಲ ಬ್ರಹ್ಮ ಹಾಗೂ ಅಷ್ಟದಿಕ್ಪಾಲಕರಿದ್ದಾರೆ.

**ಸಸಿಹಿತ್ಲು :** ಜಿಲ್ಲಾ ಕೇಂದ್ರ ಮಂಗಳೂರಿನಿಂದ ೨೬ ಕಿ.ಮೀ. ಉತ್ತರಕ್ಕಿದ್ದು, ಅಲ್ಲಿರುವ ಬೀಚಿನಿಂದಾಗಿ ಪ್ರಸಿದ್ಧವಾಗಿದೆ. ಪ್ರಕೃತಿ ಸಿರಿಯಿಂದ ತುಂಬಿ ತುಳುಕುವ ಮುಂಡ ದ್ವೀಪವು, ಪಶ್ಚಿಮಕ್ಕೆ ಅರಬ್ಬೀಸಮುದ್ರ, ಪೂರ್ವಕ್ಕೆ ಶಾಂಭವಿ ಹಾಗೂ ನದಿಗಳಿಂದ ಆವೃತವಾಗಿದ್ದು, ಅಲ್ಲಿಗೆ ಭೇಟಿ ನೀಡುವ ಪ್ರವಾಸಿಗರಿಗೆ ಮುದ ನೀಡುತ್ತದೆ.

**ಸುರತ್ಕಲ್ :** ಮಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಗೊಳಪಟ್ಟಿರುವ ಪ್ರಮುಖ ಶೈಕ್ಷಣಿಕ ಕೇಂದ್ರವಾಗಿದ್ದು, ಮಂಗಳೂರಿನಿಂದ ಉತ್ತುಕ್ಕೆ ರಾಷ್ಟ್ರೀಯ ಹೆದ್ದಾರಿ ೧೭ರ ಮೇಲೆ ೧೮ ಕಿ.ಮೀ. ದೂರದಲ್ಲಿದೆ. ನವಮಂಗಳೂರು ಬಂದರು ನಿರ್ಮಾಣಗೊಂಡ ನಂತರವಂತೂ ಇದು ಕೈಗಾರಿಕಾ ಕೇಂದ್ರವಾಗಿ ವಾಣಿಜ್ಯ ಕೇಂದ್ರವಾಗಿ ಅಭಿವೃದ್ಧಿ ಹೊಂದಿದೆ. ಸಮುದ್ರ ತೀರದಲ್ಲಿ ಸುರತ್ಕಲ್ ಬೀಚಿನ ಸಮೀಪ, ಗುಡ್ಡದ ಮೇಲೆ ಅತ್ಯಂತ ರಮ್ಯ ಪರಿಸರದಲ್ಲಿ ಪುರಾತನ ಸದಾಶಿವ ದೇವಾಲಯವಿದೆ. ಗಜಪೃಷ್ಠಾಕಾರದ ತಳವಿನ್ಯಾಸವನ್ನು ಹೊಂದಿರುವ ಈ ಗುಡಿಯ ಗರ್ಭಗೃಹದಲ್ಲಿ ಖರಾಸುರ ಪ್ರತಿಷ್ಠಿತವೆಂದು ಹೇಳಲಾಗುವ ಸದಾಶಿವಲಿಂಗವಿದೆ. ಅಲ್ಲದೆ, ಬಲಮುರಿ ಸೊಂಡಿಲಿನ ದ್ವಿಬಾಹು ಗಣಪತಿಯ ಶಿಲ್ಪವಿಲ್ಲಿದೆ. ದೇವಾಲಯದ ಹಿಂಬದಿಯಿಂದ ಕಾಣುವ ಸಮುದ್ರ ಸಿರಿ, ಸೂರ್ಯಾಸ್ತದ ಐಸಿರಿ ಅವರ್ಣನೀಯ ಆನಂದವನ್ನುಂಟು ಮಾಡುತ್ತದೆ. ಈ ದೇವರ ವಾರ್ಷಿಕ ಜಾತ್ರೆಯು ಡಿಸೆಂಬರ್ ತಿಂಗಳಲ್ಲಿ ಜರುಗುತ್ತದೆ. ಸುರತ್ಕಲ್ ಪಟ್ಟಣವು ದೇವಾಲಯ ನಗರಿಯೂ ಆಗಿದ್ದು, ಪೇಟೆಯಲ್ಲಿ ಮಹಮ್ಮಾಯಿಯವರ ಮೂರು ದೇವಾಲಯ, ವೀರಭದ್ರ ದುರ್ಗಾಪರಮೇಶ್ವರಿ ಹಾಗೂ ವೆಂಕಟರಮಣ ದೇವಾಲಯಗಳಿವೆ. ಪುರಾತನ ಮಾರಿಯಮ್ಮ ದೇವಾಲಯವು ಸಾಕಷ್ಟು ಹಳೆಯ ದೇವಾಲಯ, ವೀರಭದ್ರ ದುರ್ಗಾಪರಮೇಶ್ವರಿ ಗುಡಿಯಲ್ಲಿ ಮಾಘಶುದ್ಧ ಪಾಡ್ಯದಿಂದ ಐದು ದಿನಗಳ ರಥೋತ್ಸವ ಜರುಗುತ್ತದೆ. ಸುರತ್ಕಲ್‌ನಲ್ಲಿರುವ ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜು (೧೯೬೦) ಸುಮಾರು ೩೦ ಎಕರೆ ಪ್ರದೇಶದಲ್ಲಿ ಹಬ್ಬಿರುವ ಭವ್ಯ ತಾಂತ್ರಿಕ ಶಿಕ್ಷಣ ಕೇಂದ್ರವಾಗಿದ್ದು, ಅದರ ಸ್ಥಾಪನೆಗೆ ಶ್ರೀನಿವಾಸ ಮಲ್ಯ ಕಾರಣಪುರುಷರಾಗಿದ್ದಾರೆ. **ಸುರತ್ಕಲ್ ಬೀಚು :** ಸುರತ್ಕಲ್‌ಗೆ ಸೇರಿದ ಈ ಬೀಚು, ಕರಾವಳಿಯ ಸ್ವಚ್ಛಂದ ಬೀಚುಗಳಲ್ಲಿ ಅಗ್ರಸ್ಥಾನ ಪಡೆದಿದೆ. ಬೀಚಿನ ಸಮೀಪವೇ ಗುಡ್ಡದ ಮೇಲಿರುವ ಪುರಾತನ ಸದಾಶಿವ ದೇವಾಲಯ ಹಾಗೂ ದೀಪಸ್ತಂಭಗಳು ಇಲ್ಲಿನ ವಿಶೇಷ ಆಕರ್ಷಣೆಯಾಗಿದೆ. ಪಣಂಬೂರಿನಿಂದ ಸುರತ್ಕಲ್‌ವರೆಗೆ ಮಲಗಿರುವ ನಿಡಿದಾದ ಬೀಚು ಪ್ರವಾಸಿಗರಿಗೆ ಮುದ ನೀಡುವ ತಾಣವಾಗಿದೆ. **ಕೃಷ್ಣಾಪುರ ಮಠ :** ಸುರತ್ಕಲ್‌ಗೆ ಸುಮಾರು ಮೂರು ಕಿ.ಮೀ. ದೂರದಲ್ಲಿರುವ ಕಾಟಿಪಳ್ಳ ಕೃಷ್ಣಾಪುರದಲ್ಲಿ ಉಡುಪಿಯ ಅಷ್ಟಮಠಪರಂಪರೆಗೆ ಸೇರಿದ ಕೃಷ್ಣಾಪುರ ಶಾಖಾ ಮಠವಿದೆ. ಪುರಾತನವಾದ ಈ ಮಠವು ವಿಶಾಲವಾಗಿದ್ದು ಸುಂದರವಾಗಿದೆ.

**ಸುಳ್ಯ (೧೮,೨೮೨) :** ಜಿಲ್ಲಾ ಕೇಂದ್ರ ಮಂಗಳೂರಿನಿಂದ ಆಗ್ನೇಯಕ್ಕಾದಂತೆ ೮೦ ಕಿ.ಮೀ. ದೂರದಲ್ಲಿರುವ ತಾಲೂಕು ಕೇಂದ್ರ ೧೪ ಗ್ರಾಮಗಳನ್ನೊಳಗೊಂಡ (ಮಾಗಣೆ) ಅಮರಸುಳ್ಯ ನಾಡೆಂದೇ ಹಿಂದೆ ಪ್ರಸಿದ್ಧವಾಗಿದ್ದ ಇದನ್ನು, ಪುತ್ತೂರು ತಾಲೂಕಿನಿಂದ ೧೯೬೬ರಲ್ಲಿ ಪ್ರತ್ಯೇಕಿಸಿ 'ಸುಳ್ಯ' ತಾಲೂಕನ್ನು ರೂಪಿಸಲಾಯಿತು. ಮಡಿಕೇರಿ–ಮಂಗಳೂರು ಮಾರ್ಗದಲ್ಲಿರುವ ಇದು ೧೮೩೭ರ 'ಅಮರಸುಳ್ಯ' ದಂಗೆಯಿಂದಾಗಿ ಇತಿಹಾಸ ಪ್ರಸಿದ್ಧವಾಗಿದೆ ಸುಳ್ಯಕ್ಕೆ 'ಸೂಳ್ಯ', ಸೂಳೆಯ, ಸೂಳಿಯ ಎಂಬ ರೂಪುಗಳೂ ಇವೆ. ರಾಜೇಂದ್ರನಾಮೆ ಗ್ರಂಥದಲ್ಲಿ 'ಅಮರಸುಳ್ಯ' ಎಂದೇ ಇದು ದಾಖಲಾಗಿದೆ. ಕೆಳದಿಯ ಅರಸ ಶಿವಪ್ಪನಾಯಕನು ಈ ಸುತ್ತಿನ ಕೆಲವು ಗ್ರಾಮಗಳನ್ನು ಕೊಡಗಿನ ದೊರೆ ಮುದ್ದುರಾಜನ ಮಗನಿಗೆ ಹಾಲುಬೆಣ್ಣೆ ಒದಗಿಸಲೆಂದೇ ಅಮೃತಮಾಗಣೆಯಾಗಿ ಕೊಟ್ಟಿದ್ದನೆಂದು ತಿಳಿದುಬರುತ್ತಿದ್ದು, ಮುಂದೆ ಇದೇ ಅಮೃತ ಪದವೇ ಅಮರವಾಗಿ ರೂಪಾಂತರಗೊಂಡಿರಬಹುದೆಂಬ ಅಭಿಪ್ರಾಯವೂ ಇದೆ. ಮಹಾತ್ಮಗಾಂಧೀಜಿಯವರ ೧೯೩೪ರ ಹರಿಜನ ಪ್ರವಾಸ ಸಂದರ್ಭದಲ್ಲಿ, ಸುಳ್ಯದಲ್ಲಿ ಸಭೆಯನ್ನು ಹಳೆಗೇಟು ಬಳಿ ಏರ್ಪಡಿಸಲಾಗಿತ್ತು. ಆಗ ಅವರ ಭಾಷಣವನ್ನು ರಾಮಪ್ಪ ಮಾಸ್ತರ್ ಕನ್ನಡಕ್ಕೆ ತರ್ಜುಮೆ ಮಾಡಿದರೆಂದು ತಿಳಿದುಬರುತ್ತದೆ. ಭಾರತ–ಶ್ರೀಲಂಕಾಗಳ ನಡುವೆ ೧೯೬೪ರಲ್ಲಿ ಏರ್ಪಟ್ಟ ಕರಾರಿನಂತೆ ಸುಳ್ಯ ಹಾಗೂ ಪುತ್ತೂರು ತಾಲೂಕುಗಳಲ್ಲಿ ಸುಮಾರು ೧೩,೦೦೦ಕ್ಕೂ ಅಧಿಕ ಹೆಕ್ಟೇರ್ ಪ್ರದೇಶದಲ್ಲಿ ಕಾಡನ್ನು ಕಡಿದು, ಶ್ರೀಲಂಕಾದಲ್ಲಿ ಪೌರತ್ವ ಸಿಗದೆ ಹಿಂದಿರುಗಿ ಬಂದ ತಮಿಳು ನಿರಾಶ್ರಿತರಿಗೆ ಪುನರ್ವಸತಿ ಒದಗಿಸಲಾಯಿತು. ತತ್ಪರಿಣಾಮವಾಗಿ ಈ ಭಾಗದಲ್ಲಿ ರಬ್ಬರ್ ಕೃಷಿಯು ಅಭಿವೃದ್ಧಿಗೊಂಡು ತಮಿಳರು ನೆಲೆಸುವಂತಾಯಿತು.

ಸುಳ್ಯದಲ್ಲಿ ಹಿಂದೆ ಬಲ್ಲಾಳರ ಬೀಡು ಇತ್ತೆಂದು ತಿಳಿದುಬರುತ್ತದೆ. ಸುಮಾರು ಐದುನೂರು ವರ್ಷಗಳಷ್ಟು ಪ್ರಾಚೀನವೆನ್ನಬಹುದಾದ ಇಲ್ಲಿಯ ಚನ್ನಕೇಶವ ದೇವಾಲಯವು ಪಶ್ಚಿಮಾಭಿಮುಖನಾಗಿದ್ದು, ಗರ್ಭಗೃಹದಲ್ಲಿ ಚನ್ನಕೇಶವನ ಸುಂದರವಾದ ಪಂಚಲೋಹದ ಮೂರ್ತಿ ಇದೆ. ಇಲ್ಲಿರುವ ಅಶ್ವಾರೂಢ ಸವಾರನ ಲೋಹದ ಮೂರ್ತಿ, ಚೆನ್ನಿಗ ಎಂಬ ಭೂತದ್ದೆಂದು ಹೇಳುವ ಸಂಪ್ರದಾಯವಿದೆ. ಈ ದೇವರ ರಥೋತ್ಸವವು ಪ್ರತಿ ವರ್ಷ ಜನವರಿಯಲ್ಲಿ ನಡೆಯುತ್ತದೆ. ಇಲ್ಲಿಗೆ ಸಮೀಪದಲ್ಲಿರುವ ಕಾರ್ಯತೋಡಿ ವಿಷ್ಣು ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹದಲ್ಲಿ ವಿಷ್ಣುಮೂರ್ತಿಯಿದೆ. ಕಳೆದ ಶತಮಾನದ ಆರಂಭದಲ್ಲಿ ನಿರ್ಮಾಣಗೊಂಡ ಮೊಗರ್ಪಣೆಯ ಮೊಹಿಯುದ್ದೀನ್ ಮಸೀದಿ ಹಾಗೂ ಕೆಲಸಿಕಟ್ಟೆ(ಗಾಂಧಿನಗರ) ಬಳಿ ಇರುವ ಮೇಲಿನ ಮಸೀದಿ ಹಾಗೂ ಕ್ರೈಸ್ತ ಇಗರ್ಜಿಗಳು ಉಲ್ಲೇಖಾರ್ಹವಾಗಿವೆ. ಪೈಚಾರ್‌ನಲ್ಲಿ ಖಾಸಗಿ ಒಡೆತನಕ್ಕೆ ಸೇರಿದ ಗೇರುಬೀಜ ಸಂಸ್ಕರಣ ಕಾರ್ಖಾನೆಯೊಂದಿದೆ **ಐವರ್ನಾಡು (೪,೮೦೪):** ತಾಲೂಕು ಕೇಂದ್ರ ಸುಳ್ಯದಿಂದ ಸುಮಾರು ಏಳು ಕಿ.ಮೀ. ಉತ್ತರಕ್ಕಿರುವ ಈ ಗ್ರಾಮದ ದೇರಾಜೆಯಲ್ಲಿರುವ ಪಂಚಲಿಂಗೇಶ್ವರ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಪುರಾತನವಾದ ಈ ದೇವಾಲಯವನ್ನು ೧೯೭೨ರಲ್ಲಿ ಪುನರ್ ಜೀರ್ಣೋದ್ಧಾರ ಮಾಡಲಾಗಿದೆ. ದೇವಾಲಯದ ಪ್ರಧಾನ ಗರ್ಭಗೃಹದಲ್ಲಿ ಒಂದೇ ಪೀಠದ ಮೇಲೆ ಪಂಚಾಚಾರ್ಯರಾದ ಸದ್ಯೋಜಾತ, ವಾಮದೇವ, ಅಘೋರ, ಈಶಾನ ಹಾಗೂ ತತ್ಪುರುಷರನ್ನು ಪ್ರತಿನಿಧಿಸುವ ಸ್ವಯಂಭುಲಿಂಗಗಳಿವೆ. ಇವನ್ನು ಪಾಂಡವರೇ ಪ್ರತಿಷ್ಠಾಪಿಸಿದ್ದೆಂಬ ಐತಿಹ್ಯವೂ ಇದೆ. ಅಲ್ಲದೇ ಈ ಊರ ಬಳಿಯಿರುವ ರಬ್ಬರ್ ಸಂಸ್ಕರಣ ಘಟಕದಿಂದಾಗಿ ಉಲ್ಲೇಖಾರ್ಹವಾಗಿದೆ. **ಜಾಲ್ಸೂರು (೬,೩೬೮) :** ತಾಲೂಕು ಕೇಂದ್ರ ಸುಳ್ಯದಿಂದ ಸುಮಾರು ಎಂಟು ಕಿ.ಮೀ. ಉತ್ತರಕ್ಕಿರುವ ಸ್ಥಳ. ಜಾಲ್ಸೂರು ಗ್ರಾಮದ ವ್ಯಾಪ್ತಿಯ ಕುಕ್ಕಂದೂರು ಬಯಲಿನ ಏಳು ವಿವಿಧ ತಾಣಗಳಲ್ಲಿ ಉಳ್ಳಾಕುಳು (ಕಿನ್ನಿಮಾಣಿ–ಪೂಮಾಣಿಗಳೆಂಬ) ಸೋದರ ದೈವಗಳು ಮಿತ್ತೂರು ನಾಯರ್ ಭೂತ; ಹಾಗೂ ಪುರುಷರಾಯ, ಉದ್ರಾಂಡಿ, ಅಜ್ಜಂತಾಯಾದಿ ದೈವಗಳಿಗೆಲ್ಲ ಸೇರಿ ನಡೆಯುವ ವಾರ್ಷಿಕ ಉತ್ಸವದಲ್ಲಿ ಈ ದೈವಗಳಿಗೆಂದೇ ಬಂಡಿ (ರಥ)ಯನ್ನು ಎಳೆಯಲಾಗುತ್ತದೆ. ಈ ಜಾತ್ರೆ ಸಂದರ್ಭದಲ್ಲಿ ನಡೆಯುವ ತೆಂಗಿನಕಾಯಿ ಕುಟ್ಟುವ ಕ್ರೀಡೆಯು ವಿಶಿಷ್ಟವಾಗಿರುತ್ತದೆ. **ಕಲ್ಲುಗುಂಡಿ :** ತಾಲೂಕು ಕೇಂದ್ರ ಸುಳ್ಯದಿಂದ ಆಗ್ನೇಯಕ್ಕೆ ಸುಮಾರು ೨೫ ಕಿ.ಮೀ. ದೂರದ ಸಂಪಾಜೆ ಘಟ್ಟದ ತಪ್ಪಲಲ್ಲಿ ಸಂಪಾಜೆ ಕಂದಾಯ ಗ್ರಾಮ (೫,೩೦೪)ದ ವ್ಯಾಪ್ತಿಯಲ್ಲಿರುವ ಸ್ಥಳ. ಕಲ್ಲುಗುಂಡಿಯ ವಿಷ್ಣುಮೂರ್ತಿ ದೈವಕ್ಕೆ ನಡೆಯುವ ಒತ್ತೆಕೋಲ(ಮಹಾಗೆಂಡ : ಅಗ್ನಿಕೊಂಡ ಹಾಯುವ ಸೇವೆ)ಯು ವಿಶಿಷ್ಟವಾಗಿರುತ್ತದೆ. ಅಲ್ಲದೇ ಕಲ್ಲುಗುಂಡಿಯಲ್ಲಿರುವ ಸವೇರಪುರ ಚರ್ಚು ಕೂಡ ಆಕರ್ಷಕವಾಗಿದೆ.

**ಸೋಮೇಶ್ವರ (೨೦,೯೭):** ಉಳ್ಳಾಲದಿಂದ ಎರಡು ಕಿ.ಮೀ. ಅಂತರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಅಳುಪ ನಾಲ್ವಡಿ ಕುಲಶೇಖರನ ಕಾಲಕ್ಕೆ ಸೇರಿದ ೧೧೯೫ರ ಶಾಸನ ಇಲ್ಲಿಯ ಪ್ರಾಚೀನ ದಾಖಲೆಯಾಗಿದೆ. ಇಲ್ಲಿಯ ಸೋಮೇಶ್ವರ ದೇವಾಲಯವು ಅಳುಪರ ಕಾಲದಲ್ಲಿ ನಿರ್ಮಾಣಗೊಂಡಿದ್ದು ಮುಂದೆ ಚೌಟರಸರು ತಾವು ಉಳ್ಳಾಲವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಾಗ ಅದನ್ನು ಅಭಿವೃದ್ಧಿ ಪಡಿಸಿರಬಹುದೆಂಬ ಅಭಿಪ್ರಾಯವಿದೆ. ದೇವಾಲಯವೂ ಸೇರಿದಂತೆ ಕರಾವಳಿಯ ರಕ್ಷಣೆಗೆಂದು ರಾಣಿ ಅಬ್ಬಕ್ಕದೇವಿಯು ಇಲ್ಲೊಂದು ಕೋಟೆ ಕಟ್ಟಿಸಿ, ದೇವರಿಗೆ ಆಭರಣಗಳನ್ನು ದಾನ ಕೊಟ್ಟಿದ್ದು, ಅವಳೇ ಕಟ್ಟಿಸಿದ್ದೆಂದು ಹೇಳಲಾಗುವ ಜೈನ–ಬಸದಿ (ಆದಿನಾಥ

ಪಾರ್ಶ್ವನಾಥನಿರುವ)ಯೊಂದು ಈಗಲೂ ದರ್ಗಾ ಸಮೀಪದಲ್ಲಿ ಶಿಥಿಲಾವಸ್ಥೆಯಲ್ಲಿದೆ. ಉಳ್ಳಾಲದ ಸಮೀಪದ 'ಒಂಭತ್ತು ಕೆರೆ' ಎಂಬ ಸ್ಥಳದಲ್ಲಿ ಚೌಟರಸರ ಅರಮನೆ ಇತ್ತೆಂದು ಹೇಳಲಾಗುತ್ತದೆ. ಇಲ್ಲಿಯ ಸೋಮೇಶ್ವರ ದೇವಾಲಯವನ್ನು ಇಮ್ಮಡಿ ದೇವರಾಯನ ರಾಜಗುರು ಕ್ರಿಯಾಶಕ್ತಿಯು ೧೪೪೩ರಲ್ಲಿ ಜೀರ್ಣೋದ್ಧಾರ ಮಾಡಿಸಿದ ಅಂಶ ಅಲ್ಲೇ ಇರುವ ಶಾಸನದಿಂದ ವೇದ್ಯವಾಗುತ್ತದೆ. ಉನ್ನತವಾದ ಏಕಶಿಲಾ ಪರ್ವತದ ಮೇಲಿರುವ ಸೋಮೇಶ್ವರ ದೇವಾಲಯವು ಸು. ೧೦ನೇ ಶತಮಾನದಷ್ಟು ಪುರಾತನವಾದುದು. ಹದಿನಾರನೆಯ ಶತಮಾನದ ಅಂತ್ಯಾವಧಿಯಲ್ಲಿ ಭೇಟಿ ನೀಡಿದ್ದ ಪಿಟ್ರೊಡೆಲ್ಲಾವೆಲ್ಲಿ ಕೂಡ ಸೋಮೇಶ್ವರ ದೇವಾಲಯವು ಅಂದವಾಗಿದ್ದ ಅಂಶವನ್ನು ದಾಖಲಿಸಿದ್ದಾನೆ. ಸೋಮೇಶ್ವರ ದೇವಾಲಯದ ಗರ್ಭಗೃಹದಲ್ಲಿ ಶಿವಲಿಂಗವಿದೆ. ಮಹಾದ್ವಾರದ ಎದುರಿಗಿರುವ ಬಲಿಪೀಠವು ಆಕರ್ಷಕವಾಗಿದೆ. ಇಲ್ಲಿರುವ ಸಪ್ತಮಾತೃಕಾಶಿಲ್ಪ ವಿಶಿಷ್ಟವಾಗಿದೆ. ಗಣಪತಿ ಗುಡಿ ಚಿಕ್ಕದಾದರೂ ಚೊಕ್ಕವಾಗಿದೆ. ಪಾರ್ಥಸಾರಥಿ, ಜನಾರ್ದನ ಮುಂತಾದ ಗುಡಿಗಳೂ ಇಲ್ಲಿವೆ. ಅಲ್ಲದೆ ಸೋಮನಾಥ ದೇವಾಲಯದ ಉತ್ತರಕ್ಕೆ ಎತ್ತರದ ಗುಡ್ಡದ ಮೇಲೆ ಕೋಟಿ ಮಹಾವಿಷ್ಣು ದೇವಾಲಯವಿದೆ. ಈ ಗುಡಿಯ ಗರ್ಭಗೃಹವು ಗಜಪೃಷ್ಠಾಕಾರದ ತಳವಿನ್ಯಾಸವನ್ನು ಹೊಂದಿದೆ. ಗರ್ಭಗೃಹದಲ್ಲಿರುವ ನಾಲ್ಕು ಅಡಿ ಎತ್ತರದ ವಿಷ್ಣುಮೂರ್ತಿಯು ಚಿತ್ತಾಕರ್ಷಕವಾಗಿದೆ. ತುಳುನಾಡಿನ ಪ್ರಸಿದ್ಧ ನೀಲೇಶ್ವರ ತಂತ್ರಿಗಳ ಆಡಳಿತಕ್ಕೆ ಇದು ಒಳಪಟ್ಟಿದೆ. ಇತ್ತೀಚೆಗೆ ಪುನರ್ ನಿರ್ಮಾಣಗೊಂಡು ಸುಂದರ ವಿಹಾರ ತಾಣವಾಗಿ ಮಾರ್ಪಟ್ಟಿದೆ. ಮಿಗಿಲಾಗಿ ಕಲ್ಲುರ್ಟಿ, ಕುಟ್ಟಿಚಾಡು, ರಕ್ತೇಶ್ವರಿ, ಗುಳಿಗರು ದೈವಸ್ಥಾನಗಳೂ ಇಲ್ಲಿವೆ. ಇಲ್ಲಿರುವ ರುದ್ರಪಾದ ಬಂಡೆಯ ಮೇಲಿನಿಂದ ಕಾಣುವ ಸೂರ್ಯೋದಯ–ಸೂರ್ಯಾಸ್ತಮಗಳು ಅವರ್ಣನೀಯವಾಗಿರುತ್ತವೆ.

**ಹಳೆಯಂಗಡಿ (೩,೯೧೨) :** ಜಿಲ್ಲಾ ಕೇಂದ್ರ ಮಂಗಳೂರಿನಿಂದ ೨೫ ಕಿ.ಮೀ. ಉತ್ತರಕ್ಕೆ, ಸುರತ್ಕಲ್–ಮೂಲ್ಕಿ ನಡುವೆ ಇರುವ ಚಾರಿತ್ರಿಕ ಮಹತ್ವದ ಸ್ಥಳ. ಇದು ಹಿಂದೊಂದು ಪ್ರಮುಖ ಜೈನಕೇಂದ್ರವಾಗಿತ್ತು. ಅದರ ಕುರುಹಾಗಿ ಈಗಲೂ ಜೈನಬಸದಿಗಳು ಇಲ್ಲಿವೆ. ವಿಶ್ವಕರ್ಮರ ಕಾಳಿಕಾಂಬ ದೇವಾಲಯವಿದೆ. ಅಲ್ಲದೇ ಈ ಊರು ನಶ್ಯಕ್ಕೂ ಪ್ರಸಿದ್ಧವಾಗಿದೆ.

***